ಮಾನಸದರ್ಪಣ

ಅಥವಾ

ಮನಃಶಾಸ್ತ್ರದ ಮೂಲಪಾಠಗಳು

ಪ್ರೊ. ಎಸ್. ಎ. ಹನುಮಂತರಾವ್, ಎಂ.ಎ.
ಪ್ರೊ. ಬಿ. ಎಚ್. ಶ್ರೀಧರ, ಎಂ.ಎ.

ಮಾರಾಟಗಾರರು:
ಸಾಹಿತ್ಯಭಂಡಾರ, ಹುಬ್ಬಳ್ಳಿ

ಮಾನಸದರ್ಪಣ

ಅಥವಾ

ಮನಃಶಾಸ್ತ್ರದ ಮೂಲಪಾಠಗಳು

ಪ್ರೊ. ಎನ್. ಎ. ಹನುಮಂತರಾವ್, ಎಂ.ಎ.

ಪ್ರೊ. ಬಿ. ಎಚ್. ಶ್ರೀಧರ, ಎಂ.ಎ.

ಮಾರಾಟಗಾರರು:

ಸಾಹಿತ್ಯಭಂಡಾರ, ಹುಬ್ಬಳ್ಳಿ

ಮೊದಲನೆಯ ಆವೃತ್ತಿ

ಬೆಲೆ : ಮೂರು ರೂಪಾಯಿ

ಪ್ರಕಾಶಕರು :
ಎಸ್. ಎ. ಹನುಮಂತರಾವ್ ಮತ್ತು ಬಿ. ಎಚ್. ಶ್ರೀಧರ,
ಕೆನರಾ ಕಾಲೇಜು, ಕುಮಟಾ.

ಮುದ್ರಣ :
ಉತ್ತರ ಕನ್ನಡ ಜಿಲ್ಲಾ ಸಹಕಾರಿ ಮುದ್ರಣ ಸಂಘ, ನಿಯಮಿತ
ಕುಮಟಾ.

ಅರ್ಪಣೆ

ಸುಪ್ರಸಿದ್ಧ ಮನಃಶಾಸ್ತ್ರಜ್ಞರಾದ

ದಿವಂಗತ ಡಾ| ಎಂ. ವಿ ಗೋಪಾಲಸ್ವಾಮಿ

ಅವರಿಗೆ—

ನಾಲ್ಕು ಮಾತು

ಮನನಶಕ್ತಿಯುಳ್ಳ 'ಮನಸ್' ಇರುವುದರಿಂದಲೇ ನಾವೆಲ್ಲ ಮನುಷ್ಯರು. ಅಂಥ ಮನಸ್ಸೆಂಬ ಕನ್ನಡಿಯ ಮೇಲೆ ಪ್ರತಿಬಿಂಬಿಸಿದ್ದೇ ನಮಗೆ ಗೊತ್ತಾಗುವ ಪ್ರಪಂಚ. ಪ್ರಪಂಚವನ್ನು ನಾವು ಅರಿಯುವ ಕಾರ್ಯವು ವೈಜ್ಞಾನಿಕವೋ ಅಲ್ಲವೋ ಎಂಬುದನ್ನರಿಯಲು ಅಂಥ ಅರಿವಿಗೆ ಏಕಮೇವ ಸಾಧನವಾದ ಮನಸ್ಸಿನ ಸ್ವರೂಪವನ್ನು ಮೊದಲು ತಿಳಿದುಕೊಳ್ಳಬೇಕಾಗುವುದು ಸಹಜ. ಮನಸ್ಸಾದರೋ ಕೈಗೆ ಸಿಕ್ಕದ್ದು, ಕಣ್ಣಿಗೆ ಕಾಣದ್ದು; ಅಂಥ ಮಾಯಾಮೃಗವದು. ಆದರೆದನ್ನು ಬೆನ್ನಟ್ಟಿ ಹೋಗದೆ ಗತ್ಯಂತರವಿಲ್ಲ. ಅದರ ಮಾರೀಚತನವನ್ನು ಬಯಲಿಗೆಳೆಯದೆ ಮುಕ್ತಿಯಿಲ್ಲ. ಆದುದರಿಂದ ವಿಜ್ಞಾನಿಗಳನೇಕರು ಅದರ ಬೆನ್ನುಹತ್ತಿ ಹೋಗಿ ದಶರಥನ ಶಬ್ದವೇಧಿಯಂತಹ ಶರಗಳ ರೂಪದ ಪ್ರಯೋಗಾಸ್ತ್ರಗಳನ್ನು ಅದರ ಮೇಲೆ ಬಿಟ್ಟಿದ್ದಾರೆ. ಸಿಗ್ಮಂಡ್ ಫ್ರಾಯ್ಡನಂಥವರು ಮನಸ್ಸಿಗೆ ಜ್ಞಾತಪ್ರಜ್ಞೆ, ಅವಪ್ರಜ್ಞೆ ಮತ್ತು ಅಜ್ಞಾತಪ್ರಜ್ಞೆ ಎಂಬ ಮೂರು ಭಾಗಗಳಿವೆಯೆಂದು ಹೇಳಿದ್ದುಂಟು. ಪ್ರಸ್ತುತ ಪುಸ್ತಕವು ಹೆಚ್ಚಾಗಿ ಜ್ಞಾತಪ್ರಜ್ಞೆ–ಅವಪ್ರಜ್ಞೆ ಎಂಬ ಭಾಗಗಳಿಗೆ ಸಂಬಂಧಿಸಿದ ಅಂಶಗಳನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿದೆ. ಅಜ್ಞಾತಪ್ರಜ್ಞೆ ಅವನವನಿಗೆ ಸಾಮಾನ್ಯವಾಗಿ ಯಾವಾಗಲೂ ಅಜ್ಞಾತವೇ. ಅದರದೇ ಎಂದು ಮನಸ್ಸಿನ ಯಾವ ಕಾರ್ಯಜಾಲವನ್ನೂ ನಿರ್ದಿಷ್ಟವಾಗಿ ಹಾಗೂ ಕೊನೆಯದಾಗಿ ಹೇಳುವುದು ಕಷ್ಟ. ಮಾನಸಶಾಸ್ತ್ರವಿನ್ನೂ ಬಾಲ್ಯಾವಸ್ಥೆಯಲ್ಲಿದೆ ಎನ್ನುವುದು ರೂಢಿ. ಬಹುಶಃ ಮಾನವನ ಆತ್ಮಜ್ಞಾನವು ಬಾಲ್ಯಾವಸ್ಥೆಯಲ್ಲಿರುವ ತನಕ ಮನಃಶಾಸ್ತ್ರವೂ ಬಾಲ್ಯಾವಸ್ಥೆಯಲ್ಲೇ ಇರುವುದು ಸಹಜವೆಂದು ತೋರುತ್ತದೆ. ಇನ್ನು ಮಾನವನ ಮನಸ್ಸಿನ ಜ್ಞಾನವು ಬಾಲ್ಯಾವಸ್ಥೆಯಲ್ಲಿರುವ ತನಕ ಅವನು ಮಾಡಿಕೊಂಬ ಪ್ರಪಂಚಜ್ಞಾನವೂ ಬಾಲ್ಯಾವಸ್ಥೆಯಲ್ಲಿಯೇ ಇರಬೇಕಾಯಿತಲ್ಲವೆ?

ಆದರೆ ಯತ್ನಶೀಲವು ಮಾನವನಿಗೆ ಸ್ವಾಭಾವಿಕ. ಅದಕ್ಕನುಸಾರವಾಗಿ ಪ್ರಯೋಗವಿಜ್ಞಾನಕ್ರಮವನ್ನು ಹಿಡಿದು ಅನೇಕ ಪಾಶ್ಚಾತ್ಯ ಹಾಗೂ ಕೆಲ

ಪೌರಸ್ತ್ಯ ವಿದ್ವಾಂಸರು ಈ ವರೆಗೆ ಮನಸ್ಸಿನ ಲಕ್ಷಣಗಳನ್ನು ನಿಷ್ಕೃಷ್ಟವಾಗಿ ಕಂಡು ಹಿಡಿದು ಅದರ ಕಾರ್ಯ ವೈವಿಧ್ಯದ ನಿಯಮಗಳನ್ನು ನಿರ್ಧರಿಸಲು ಹೆಣಗಿದ್ದಾರೆ. ಈ ಪ್ರಯೋಗವಿಜ್ಞಾನದಲ್ಲಿ ಅವರಿಗೆ ಈ ವರೆಗೆ ಮನಸ್ಸು ಕೇವಲ ಕೃತ್ಯ ಸ್ವರೂಪದ್ದೆಂದೂ ಅದು ಶರೀರಾಧಿಷ್ಠಿತವೆಂದೂ ಕಂಡುಬಂದಿದೆ. ಸಾಂಗೋಪಾಂಗವಾದ ಶರೀರವೆಲ್ಲಿದೆಯೋ ಅಲ್ಲಿ ಸಮುಷ್ಟಿತಿಯು ಮನಸ್ಸಿದೆ; ಅಂಥ ಶರೀರವಿಲ್ಲದಲ್ಲಿ ಸಮುಷ್ಟಿತಿಯು, ಸಹಜವಾದ ಮನಸ್ಸಿಲ್ಲ. ಆದುದರಿಂದ ಶರೀರ ಶಾಸ್ತ್ರವನ್ನವಲಂಬಿಸಿಯೇ ಪ್ರಸ್ತುತ ಗ್ರಂಥವು ಮನಸ್ಸಿನ ಬಿಡಿ ಬಿಡಿ ಅಂಗ – ಪ್ರತ್ಯಂಗಗಳ ಕಾರ್ಯಗಳನ್ನು ವಿವೇಚಿಸುತ್ತ ಹೋಗಿದೆ. ಸ್ಥೂಲದಿಂದ ಸೂಕ್ಷ್ಮಕ್ಕೆ, ಮೂರ್ತದಿಂದ ಅಮೂರ್ತಕ್ಕೆ ಸಾಗುವ ಅರಿವಿನ ಬಗೆಯೇ ಪ್ರಯೋಗವಿಜ್ಞಾನದ ನೀತಿಯಲ್ಲವೇ? ಶರೀರಾವಯವಗಳ ಪರಸ್ಪರ ಕೃತ್ಯ- ಪ್ರತಿಕೃತ್ಯಗಳ ಹಾಗೂ ಆವರಣಜನ್ಯ ಘಟನೆಗಳ ಮತ್ತು ಅವುಗಳ ಪರಸ್ಪರ ಪ್ರೇರಣಾನುಕ್ರಿಯೆಗಳ, ಕ್ರಿಯೆ-ಪ್ರತಿಕ್ರಿಯೆಗಳ ಕಾರ್ಯ-ಕಾರಣ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ನರಮಂಡಲ, ಅಂತರವಯವ, ಮಿದುಳು ಮುಂತಾದವುಗಳ ಮಾನಸಚೈತನಿಕ ಅಥವಾ ಚಲನಾತ್ಮಕ ಪ್ರಕ್ರಿಯೆಗಳ ಸ್ಥೂಲಾವಲೋಕನವನ್ನು ಇಲ್ಲಿ ಸಾಮಾನ್ಯನಿಗಾಗಿ ಮಾಡಿ ಕೊಡಲು ಯತ್ನಿಸಲಾಗಿದೆ. ಇಲ್ಲಿ ಕೊಟ್ಟ ಪ್ರಯೋಗಪ್ರಮಾಣಗಳೆಲ್ಲವೂ ಅನ್ಯಕೃತವಾದುದರಿಂದ ಆಯಾ ಗ್ರಂಥಕರ್ತರ ಗ್ರಂಥಋಣವನ್ನು ಕೊನೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಹೊಸಗನ್ನಡದಲ್ಲಿ ಇಂಥ ಶಾಸ್ತ್ರವಾಙ್ಮಯ ವಿರಳ. ಸ್ವತಂತ್ರಭಾರತದ ಸ್ವಾಯತ್ತ ಪ್ರಾಂತ ಅಥವಾ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷಾ ಮಾಧ್ಯಮದ ಮೂಲಕ ಜ್ಞಾನಪ್ರಸಾರ ಆರಂಭವಾಗಿದೆ. ಈ ಸಂದರ್ಭದಲ್ಲಿ ವಿಸ್ತಾರವಾದ ಮತ್ತು ವಿವಿಧ ಪ್ರಸಿದ್ಧ ಪ್ರಸ್ಥಾನಗಳುಳ್ಳ ಮನಃಶಾಸ್ತ್ರದ ಆಂಗ್ಲ ಗ್ರಂಥಗಳಿಂದ ಮನಃಶಾಸ್ತ್ರದ ಪ್ರಾಥಮಿಕ ಪರಿಚಯವನ್ನು ಮಾಡಿಕೊಡಲೆದ್ದರೂ ಎದುರಾಗುವ ಕಷ್ಟಗಳು ಬಹಳ. ಈ ಶಾಸ್ತ್ರವೇ ಕನ್ನಡಕ್ಕೆ ಹೊಸತಾದುದರಿಂದ ಶುದ್ಧ ಪಾರಿಭಾಷಿಕ ಪದಗಳಷ್ಟೇ ಅಲ್ಲದೆ, ಇಂಗ್ಲೀಷಿನಲ್ಲಿ ಸಾಮಾನ್ಯವಾದ ಎಷ್ಟೋ ಅರ್ಥಭೇದ ಪ್ರಕಾಶಕ ಪದಗಳು ಕೂಡ ಅನುವಾದ ಮಾಡಿದಾಗ ಹೊಸವಾಗಿ ಕಾಣಬಹುದು. ಹೀಗಿದ್ದರೂ ಆದಷ್ಟುಮಟ್ಟಿಗೆ ಕನ್ನಡ

ಸಾಹಿತ್ಯದಲ್ಲಿ ಆಗಲೇ ಬಳಕೆಯಲ್ಲಿರುವ ಸುಲಭ ಪದಗಳ ಬಳಕೆಯನ್ನು ಸಾಕಷ್ಟು ಮಾಡಿ, ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ದೇಶ್ಯ ಹಾಗೂ ತತ್ಸಮ ಗಳ ನೆರವಿನಿಂದ ಹೊಸಪದ-ಪದಸಂಹತಿಗಳನ್ನು ನಿರ್ಮಿಸಿಕೊಳ್ಳಲಾಗಿದೆ. ಅರ್ಥಶುದ್ಧಿಯ ದೃಷ್ಟಿಯಿಂದ ಕೆಲ ಬಳಕೆಯ ಪದಗಳನ್ನು ಬಿಟ್ಟು ಬಿಡುವ ಸ್ವಾತಂತ್ರ್ಯವನ್ನೂ ವಹಿಸಲಾಗಿದೆ. ಜೊತೆಗೆ, ಬಳಕೆಯ ಪದಗಳಿದ್ದರೂ ಅವು ಗಳನ್ನು ನಿರ್ದಿಷ್ಟಾರ್ಥದಲ್ಲಷ್ಟೇ ಬಳಸುವ ವೈಜ್ಞಾನಿಕತೆಯನ್ನು ಉದ್ದಕ್ಕೂ ಪಾಲಿಸಿಕೊಂಡು ಬರಲಾಗಿದೆ. ಕೊನೆಯಲ್ಲಿ ಕೊಟ್ಟಿರುವ ಪದಾರ್ಥಕೋಶವು ಈ ಅಂಶಗಳನ್ನು ಒಡಮೂಡಿಸುವ ಸೂತ್ರದ ಪ್ರಕಾರ ನಿರ್ಮಿಸಲ್ಪಟ್ಟಿದೆ. ಅದ ರಲ್ಲಿಯ ಪ್ರತಿಯೊಂದು ಪದ ಅಥವಾ ಪದಸಂಹತಿಯು ಪುಸ್ತಕದಲ್ಲಿ ಎಷ್ಟು ಸಲ ಪ್ರಯುಕ್ತವಾಗಿದ್ದರೂ ಅದರ ಅರ್ಥ-ಅರ್ಥಾಂಶಗಳು ಒಂದೇ ಬಗೆಯ ವಾಗಿರುವಂತೆ ನೋಡಿಕೊಳ್ಳಲಾಗಿದೆ. ವಿದ್ವಾಂಸರಾರಿಗಾದರೂ ಉಚಿತತರ ಪದ-ಪದಸಂಹತಿಗಳು ಹೊಳೆದರೆ ಅವನ್ನು ನಮಗೆ ಬರೆದು ತಿಳಿಸಿ ಉಪಕರಿಸ ಬೇಕು. ಎರಡನೆಯ ಮುದ್ರಣದಲ್ಲಿ ನಾವು ಅಂಥ ಗ್ರಾಹ್ಯ ಸೂಚನೆಗಳನ್ನು ಬಳಸಿಕೊಳ್ಳಲು ಅನುಕೂಲವಾದೀತು.

ಪುಸ್ತಕದಲ್ಲಿ ಕೊಟ್ಟ ಪ್ರಯೋಗ-ಪ್ರಮಾಣಗಳನ್ನುಳಿದರೆ, ಅವುಗಳನ್ನಾ ಧರಿಸಿ ನಿಗಮನಿಸಿದ ವಿಚಾರಗಳೆಲ್ಲವೂ ನಮ್ಮವು. ಅಥವಾ ನಮಗೆ ಸಮ್ಮತವಾ ದಂಥವು. ಅಂಥ ನಿರ್ಣಯಗಳಲ್ಲಿ ಸ್ಖಾಲಿತ್ಯಾಂಶಗಳೆಲ್ಲಾದರೂ ಉಳಿದದ್ದು ವಿದ್ವಾಂಸರಿಗೆ ಕಂಡುಬಂದರೆ ಅವನ್ನು ಬರೆದು ಕಳಿಸಿ ಉಪಕರಿಸಬೇಕೆಂದು ನಮ್ಮ ನಮ್ರ ಪ್ರಾರ್ಥನೆ. ಅದರಿಂದ ಗ್ರಾಹ್ಯಸಂದರ್ಭಗಳಲ್ಲಿ ತಿದ್ದುಪಡಿ ಮಾಡಲು ಸಹಾಯವಾದೀತು.

ಶುದ್ಧ ಭಾರತೀಯ ವಾಙ್ಮಯದಲ್ಲಿ ಮನಃಶಾಸ್ತ್ರವೆಂಬ ಪ್ರತ್ಯೇಕವಾದ ಶಾಸ್ತ್ರಪರಂಪರೆ ಬೆಳೆದುಬಂದಿಲ್ಲವಾದರೂ ತತ್ವಜ್ಞಾನ, ಶರೀರಶಾಸ್ತ್ರ, ಆಯು ರ್ವೇದ ಚಿಕಿತ್ಸಾಶಾಸ್ತ್ರ ಮುಂತಾದವುಗಳ ಅಂಗವಾಗಿ ಅಲ್ಲಲ್ಲಿ ಆತ್ಮ, ಮನಸ್ಸು, ಬುದ್ಧಿ ಇತ್ಯಾದಿ ಪದಾರ್ಥಗಳನ್ನು ಕೆಲಮಟ್ಟಿಗೆ ವಿವೇಚಿಸಿ ಹೇಳಿದ್ದುಂಟು. ಆಯುರ್ವೇದೀಯ ದೃಷ್ಟಿಯಿಂದ ವಿವೃತವಾದ ಮನೋವಿಜ್ಞಾನದ ಮುಖ್ಯ ಅಂಶಗಳನ್ನು ಸಾಕಷ್ಟು ಸಂಕ್ಷಿಪ್ತವಾಗಿ ಅನುಬಂಧಿಸಲಾಗಿದೆ. ಆದರೆ ಹೊಸ-ಹಳ ಮನಃಶಾಸ್ತ್ರಗಳ ಬೋಧಗಳನ್ನು ಹೋಲಿಸಿ ಒರೆಗೆ ಹಚ್ಚುವ ಹೊಣೆಯನ್ನು

ನಾವು ಹೊತ್ತುಕೊಳ್ಳದೆ, ಅದನ್ನು ವಿಮರ್ಶ ಚತುರರಾದ ಓದುಗರಿಗೇ ಬಿಟ್ಟು ಬಿಟ್ಟಿದ್ದೇವೆ.

ಸಾಮಾನ್ಯ ಮನಃಶಾಸ್ತ್ರದ ಸ್ಥೂಲ ಪರಿಚಯವನ್ನು ಮಾಡಿಕೊಡುವ ಉದ್ದೇಶದಿಂದ ಬರೆಯಲಾದ ಈ ಪುಸ್ತಕವು ಕನ್ನಡ ನಾಡಿನ ಸಾಹಿತ್ಯ ವಿಮರ್ಶಕರಿಂದ, ಮನಃಶಾಸ್ತ್ರಜ್ಞರಿಂದ ಹಾಗೂ ವಿಚಾರಪರರಾದ ಸಾಮಾನ್ಯ ಓದುಗರಿಂದ ಸ್ವಾಗತಿಸಲ್ಪಟ್ಟೀತೆಂದು ಹಾರಯಿಸಿ, ಈ ಎಲ್ಲರ ಸಹಾನುಭೂತಿಯನ್ನೂ ಹೃತ್ಪೂರ್ವಕವಾಗಿ ಹಾರಯಿಸುತ್ತೇವೆ. ಗ್ರಂಥಕ್ಕೆ ಅಗತ್ಯವಾದ ನಕ್ಷೆಗಳನ್ನು (ಚಿತ್ರಗಳನ್ನು) ಬರೆದುಕೊಟ್ಟ ಶ್ರೀ ಆರ್. ಎಸ್. ಶೇಟಿಯ Sr.B.Sc. ಇವರನ್ನು ಇಲ್ಲಿ ಸ್ಮರಿಸದೆ ಇರಲಾರೆವು.

— ಗ್ರಂಥಕರ್ತರು

ಅನುಕ್ರಮಣಿಕೆ

ಮಾನಸದರ್ಪಣ

ಅಧ್ಯಾಯ ಒಂದು

ಪೀಠಿಕೆ

ಮನಃಶಾಸ್ತ್ರದ ಪ್ರಯೋಜನ: 'ಮಾನವನ ಬಂಧಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣ' ಎಂಬ ಗೀತಾವಾಕ್ಯವು ಭಾರತೀಯನಿಗೆ ಅಪರಿಚಿತವಲ್ಲ. ಭಾರತೀಯ ತತ್ವಜ್ಞಾನದ ಆಧುನಿಕ ಅಭ್ಯಾಸಿಗಳು ಅದರ ವಿಷಯವನ್ನು ಮನಃಶಾಸ್ತ್ರ, ಅತಿಭೌತಶಾಸ್ತ್ರ, ಸೃಷ್ಟಿಕ್ರಮ ವಿವರಣದ ಶಾಸ್ತ್ರ ಮತ್ತು ಮರಣೋತ್ತರ ಜೀವನದ ಶಾಸ್ತ್ರ ಎಂದು ಸಾಮಾನ್ಯವಾಗಿ ನಾಲ್ಕುವಿಭಾಗಗಳನ್ನು ಮಾಡುವುದುಂಟು. ಇದರಿಂದ ಭಾರತದ ಹಿಂದಿನ ವಿಚಾರಜೀವಿಗಳು ಮನಸ್ಸಿನ ಕಾರಭಾರಗಳಿಗೆ ಸ್ಥಾನವಿತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಪ್ರತಿ ಒಬ್ಬನಿಗೂ ತನಗೆ ಒಂದು ದೇಹ ಮತ್ತು ಒಂದು ಮನಸ್ಸು ಇವೆ ಎಂಬುದು ಗೊತ್ತು; ತನ್ನ ಜಾಗೃತ ಜೀವನವಾದರೂ ಮನಸ್ಸಿನ ಕಾರ್ಯಗಳ ಮೂಲಕ ನಡೆಯುತ್ತದೆ ಎಂಬುದರ ಅರಿವು ಉಂಟು. ಆದರಿಂದು ಭಾರತವು ಪಾಶ್ಚಾತ್ಯ ನಾಗರಿಕತೆಯ ಸಂಪರ್ಕವನ್ನು ಪಡೆದು ಶಿಕ್ಷಣಕ್ಷೇತ್ರದಲ್ಲಿ ಮನಃಶಾಸ್ತ್ರಕ್ಕೆ ವಿಶಿಷ್ಟ ಸ್ಥಾನವನ್ನು ಕೊಟ್ಟಿದೆ.

ಮನಃಶಾಸ್ತ್ರವನ್ನು ಕಲಿಯದೆ ಮನುಷ್ಯ ಬದುಕಲಾರನೆ? ಎಂದು ಯಾರಾದರೂ ಕೇಳಬಹುದು. ಯಾವ ಶಾಸ್ತ್ರವನ್ನೂ ಕಲಿಯದೆ ಎಷ್ಟೋ ಜನ ಎಷ್ಟೋ ಕಾಲ ಬದುಕಿರಬಹುದು. ಆದರೆ ಅನುಭವದಿಂದ ಪಾಠ ಕಲಿತು ಪ್ರಗತಿ ಹೊಂದಬೇಕೆಂಬ ಯಾವನೂ ಶಾಸ್ತ್ರಜ್ಞಾನವನ್ನು ಉಪೇಕ್ಷಿಸಲಾರ. ಶಾಸ್ತ್ರವು ಅನುಭವದ ವೈಜ್ಞಾನಿಕವಾದ ಸಂಗ್ರಹ. ಎಲ್ಲ ಶಾಸ್ತ್ರಗಳಲ್ಲೂ ವಿಚಾರದ ಪಾತ್ರ ಪ್ರಮುಖವಾಗಿದೆ. ಅಂಥ ವಿಚಾರದ ಸಾಧನವೆಂದರೆ ಮನಸ್ಸು. ಮನಃಶಾಸ್ತ್ರ ಹೇಳುವುದು ಮನಸ್ಸಿನ ಕಾರ್ಯಜಾಲವನ್ನು. ಹೀಗಿರುವಾಗ ಮನಃಶಾಸ್ತ್ರದ ಪ್ರಾಧಾನ್ಯ ಎಷ್ಟೆಂಬುದನ್ನು ಹೊಸದಾಗಿ ಹೇಳಬೇಕೆ?

ಶರೀರಶಾಸ್ತ್ರ, ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರಗಳನ್ನು ಶುದ್ಧ ವೈಜ್ಞಾನಿಕ ಶಾಸ್ತ್ರಗಳೆನ್ನುತ್ತಾರೆ. ಏಕೆಂದರೆ ಅವು ಪ್ರತ್ಯಕ್ಷವಾದ ಪ್ರಯೋಗ ವಿಜ್ಞಾನದ ಸಂಶೋಧನಮಾರ್ಗವನ್ನು ಚಾಚೂ ತಪ್ಪದೆ ಹಿಡಿದಿವೆ. ಆದುದರಿಂದ ಈ ವಿಜ್ಞಾನಯುಗದಲ್ಲಿ ಮನಃಶಾಸ್ತ್ರವಾದರೂ ಪ್ರಯೋಗ-ವಿಜ್ಞಾನದ ಪ್ರತ್ಯಕ್ಷವನ್ನೇ ಪರಮಪ್ರಮಾಣವೆಂದು ಗ್ರಹಿಸಿ ಮುನ್ನಡೆಯಲಾರಂಭಿಸಿತು. ಎರಡನೆಯ ಜಾಗತಿಕ ಮಹಾಯುದ್ಧದ ಅವಧಿಯಲ್ಲಿ ಅಂದಿನ ವರೆಗೆ ಗೊತ್ತಿದ್ದ ಮನಃಶಾಸ್ತ್ರಜ್ಞಾನವನ್ನು ಬಳಸಿ ಅನೇಕ ಸೈನಿಕ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳಲು ಅನುಕೂಲವಾಯಿತು. ಸೈನ್ಯಕ್ಕೆ ಜನರನ್ನು ಸೇರಿಸಿಕೊಳ್ಳುವಾಗ ಆಯಾ ವ್ಯಕ್ತಿಯ ಶಕ್ತಿ-ಆಸಕ್ತಿಗಳನ್ನು ಅರಿತುಕೊಳ್ಳಲು ಅದು ನೆರವಾಯಿತು. ರಣರಂಗದ ವಿವಿಧ ಕಾರ್ಯಗಳ ದಕ್ಷ ನಿರ್ವಹಣೆಗೆ ಎಂಥ ಶಕ್ತಿಸಂಪನ್ನತೆ-ಆಸಕ್ತಿಮತ್ತೆಗಳು ಬೇಕು ಎಂಬುದನ್ನು ವಿಶ್ಲೇಷಿಸಿ ನಿರ್ಣಯಕ್ಕೆ ಬರಲು ಅದರಿಂದ ಸಾಧ್ಯವಾಯಿತು. ಯುಕ್ತ ಕಾರ್ಯದಲ್ಲಿ ಯುಕ್ತನನ್ನು ನಿಯಮಿಸು ವುದರಲ್ಲೂ ಹಾಗೆ ನಿಯಮಿಸಲ್ಪಟ್ಟವನಿಗೆ ಯುಕ್ತ ತರಬೇತನ್ನು ಕೊಡುವ ಕ್ರಮವನ್ನು ನಿರ್ಣಯಿಸುವುದರಲ್ಲೂ ಮನಃಶಾಸ್ತ್ರ ಅಪಾರ ಸಹಾಯ ಮಾಡಿತು; ವ್ಯಕ್ತಿಯ ಭಾವಸ್ಥೈರ್ಯ-ಕಷ್ಟಸಹಿಷ್ಣುತೆಗಳನ್ನು ಅಳೆಯಲು ಶಕ್ಯವಾಯಿತು. ಅದೇ ಮೇರೆಗೆ ಶಾಂತಿಕಾಲದಲ್ಲಾದರೂ ವ್ಯಕ್ತಿಯ ಬಲಾಬಲ ವಿವೇಕವನ್ನರಿತು ತಕ್ಕ ಕಾರ್ಯಕ್ಷೇತ್ರದಲ್ಲಿ ಅವನಿಗೆ ಪ್ರವೇಶ ಕೊಟ್ಟರೆ ಕಾರ್ಯದಕ್ಷತೆ ಹೆಚ್ಚುವುದೆಂಬುದು ಹೆಚ್ಚುಹೆಚ್ಚಾಗಿ ಅನುಭವಕ್ಕೆ ಬರತೊಡಗಿತು.

ಉದ್ಯಮ, ಆಡಳಿತ, ಶಾಂತ್ಯರ್ಥವಾದ ಜಾಗತಿಕ ಸಂಘಟನೆ ಮುಂತಾದ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಅದರಲ್ಲಿ ದುಡಿಯುವ ಮನುಷ್ಯರ ಕೌಶಲ ಹಾಗೂ ಸಂಕಲ್ಪಶಕ್ತಿಗಳೇ ಆಯಾ ಕ್ಷೇತ್ರದ ಸಿದ್ಧಿಗೆ ಮುಖ್ಯ ಕಾರಣ ಗಳೆಂಬುದು ಸುಸ್ಪಷ್ಟ. ಆದುದರಿಂದ ನಮ್ಮ ಜೀವನದ ವಿವಿಧ ರಂಗಗಳಲ್ಲಿ ದಕ್ಷವಾದ ಕಾರ್ಯನಿರ್ವಾಹ ಸಿದ್ಧಿಸಬೇಕಾದರೆ ಮಾನವನ ಮನೋದೈಹಿಕ ವರ್ತನಾವೈವಿಧ್ಯವನ್ನು ವಿವೇಚಿಸುವ ಪ್ರಾಯೋಗಿಕ ಮನಃಶಾಸ್ತ್ರದ ಅಭ್ಯಾಸ-ಅನ್ವಯಗಳು ಅತ್ಯವಶ್ಯಕ ಎಂಬುದಿಂದು ನಿರ್ವಿವಾದವಾದ ಸಂಗತಿಯಾಗಿದೆ.

ಮನಃಶಾಸ್ತ್ರದ ಲಕ್ಷಣ ಮತ್ತು ಗುರಿ: ಐತಿಹಾಸಿಕ ಕ್ರಮದಿಂದ ನಾವೀಗ ಮನಃಶಾಸ್ತ್ರದ ಬೇರೆ ಬೇರೆ ಲಕ್ಷಣಗಳನ್ನು ಅವಲೋಕಿಸೋಣ.

ಮೊದಲನೆಯದಾಗಿ, ಮನಃಶಾಸ್ತ್ರವೆಂದರೆ ಆತ್ಮವಿಜ್ಞಾನ ಎಂದು ಹೇಳುವ ಪ್ರಾಚೀನತಮ ಲಕ್ಷಣ ನಮಗೆದುರಾಗುತ್ತದೆ. ಆತ್ಮವೆಂಬ ಪದಕ್ಕೊಂದು ಧಾರ್ಮಿಕ ಬಣ್ಣವಿರುವುದರಿಂದ ಅದನ್ನು ಸ್ವೀಕರಿಸುವುದು ವೈಜ್ಞಾನಿಕವಾಗಲಾರದು. ಅಲ್ಲದೆ ಆತ್ಮಪದದ ಅರ್ಥ ಅಸ್ಪಷ್ಟ. ಅದು ಎಲ್ಲಿದೆ ಎಂಬುದಾಗಲಿ, ಅದರ ಸತ್ಯಸ್ವರೂಪ ಎಂಥದೆಂಬುದಾಗಲಿ ತಿಳಿಯದು.

ಮನಃಶಾಸ್ತ್ರವೆಂದರೆ ಮನೋವಿಜ್ಞಾನ ಎಂಬುದು ಎರಡನೆಯ ಲಕ್ಷಣ. ಮನಸ್ಸು ಎಂಬ ಪದಕ್ಕೆ ವಿಶಿಷ್ಟವಾದ ಧಾರ್ಮಿಕ ಅಥವಾ ದೈವವಿಜ್ಞಾನದ ಬಣ್ಣ ಹತ್ತಿಕೊಂಡಿಲ್ಲವಾದರೂ ಈ ಲಕ್ಷಣ ಅಷ್ಟೇನೂ ಸಮರ್ಪಕವೆನಿಸಲಿಲ್ಲ. ಏಕೆಂದರೆ ಈ ಲಕ್ಷಣದ ಪ್ರಕಾರ ಮನಃಶಾಸ್ತ್ರವೆಂಬುದು ಒಂದು ಯಾಂತ್ರಿಕ ಸ್ವರೂಪವುಳ್ಳ ಶಾಸ್ತ್ರ ಎಂದು ಧ್ವನಿತವಾಗುತ್ತದೆ. ಮನಸ್ಸು ಎಂಬ ಒಂದು ದೃಶ್ಯ-ಸ್ಪೃಶ್ಯ ವಸ್ತು ಎಲ್ಲಿಯೂ ಇಲ್ಲ. ಅದು ಬರಿ ಒಂದು ಕೃತ್ಯ (Function) ಅಷ್ಟೇ. ಮನಃಶಾಸ್ತ್ರದ ವಿಷಯವು ಕಾರ್ಯಜಾಲವಲ್ಲದೆ ವಸ್ತುಜಾಲವಲ್ಲ. ಮಿದುಳು ಬೇರೆ, ಮನಸ್ಸು ಬೇರೆ. ದೃಶ್ಯ-ಸ್ಪೃಶ್ಯವಾದ ಮಿದುಳು ಮನಃಕೃತ್ಯದ ಶಾರೀರಿಕ ಸಾಧನ.

ಮೂರನೆಯದಾಗಿ, ಮನಃಶಾಸ್ತ್ರವು ಮಾನಸಿಕ ಜೀವನದ ವಿಜ್ಞಾನ ಎಂಬ ಲಕ್ಷಣ ಹುಟ್ಟಿತು. ಇದು ಮೊದಲಿನೆರಡು ಲಕ್ಷಣಗಳಿಗಿಂತ ಹೆಚ್ಚು ತೃಪ್ತಿಕರ ಎಂಬುದೇನೋ ನಿಜ. ಏಕೆಂದರೆ, "ಮಾನಸಿಕ ಜೀವನ" ಎಂಬ ಪದದಲ್ಲಿ ಕಾರ್ಯ ಹಾಗೂ ವರ್ತನೆಗಳ ಕಲ್ಪನೆಗಳು ಅಡಕವಾಗುತ್ತವೆ; ಅವು ಮನಃಶಾಸ್ತ್ರದಲ್ಲಿ ಮುಖ್ಯವಾದಂಥವು. ಆದರೆ ಈ ಲಕ್ಷಣವು ಬಹಳ ಮೊಟಕಾಯಿತೆಂಬ ಟೀಕೆಗೆ ಎಡೆಯುಂಟಾಯಿತು. ಲಕ್ಷಣದಲ್ಲಿ ಮಾನಸಿಕಜೀವನದಲ್ಲಿ ಏನಾದರೊಂದು ಕುರುಹು ಸೂಚಿತವಾಗಬೇಕಾದುದು ಅಗತ್ಯ.

ಅದೊಂದು ಪ್ರಜ್ಞಾವಿಜ್ಞಾನವೆಂಬುದು ನಾಲ್ಕನೆಯ ಲಕ್ಷಣ. ಮನಃಶಾಸ್ತ್ರವು ಮಾನವ್ಯ ಪ್ರಜ್ಞೆಯ ಎಲ್ಲ ಮುಖಗಳನ್ನೂ ಪರಿಶೀಲಿಸುತ್ತದೆ. ಸಾಮಾನ್ಯ ಮನುಷ್ಯನು ತನಗೇನಾಗುವುದೆಂದು ತಿಳಿದುಕೊಳ್ಳುವನೋ ಅವೆಲ್ಲವೂ ಮನಃಶಾಸ್ತ್ರದ ಕಕ್ಷೆಯಲ್ಲಿ ಬರುತ್ತವೆ. ಆದರೆ ಈ ಲಕ್ಷಣ ಸಾಕಷ್ಟು ವ್ಯಾಪಕವಾಗಿಲ್ಲ, ಅವ್ಯಾಪ್ತಿದೋಷದಿಂದ ಕೂಡಿದೆ. ಏಕೆಂದರೆ, ಇದರಲ್ಲಿ ನಮ್ಮ ಬಾಳಿನ ಅಜ್ಞಾತಪ್ರಜ್ಞೆಯ ಅಂಶಗಳು ಗೃಹೀತವಾಗಿಲ್ಲ; ನಮ್ಮ ಮೂಡಿ ಮುಳುಗುವ

ಕನಸುಗಳನ್ನೂ ನಮ್ಮ ವರ್ತನೆಯ ಹಿನ್ನೆಲೆಯಲ್ಲಿಯ ಪರೋಕ್ಷ ಪ್ರಚೋದನೆಗಳನ್ನೂ ಮನೋವಿಶ್ಲೇಷಕನು ಗಣ್ಯವೆಂದು ಗ್ರಹಿಸುತ್ತಾನೆ.

ಮಾನವವ್ಯಕ್ತಿಯ ಜ್ಞಾತಪ್ರಜ್ಞೆ-ಅವಪ್ರಜ್ಞೆಗಳ ಕಾರ್ಯಗಳ ವಿಜ್ಞಾನವನ್ನು ಮನಃಶಾಸ್ತ್ರವೆಂಬುದು ಐದನೆಯ ಲಕ್ಷಣ. ಫ್ರಾಯ್ಡ್ ಮಹಾಶಯನ ಉಕ್ತಲಕ್ಷಣ ಅತ್ಯಂತ ಸಮರ್ಪಕ ಲಕ್ಷಣಗಳಲ್ಲೊಂದೆನ್ನಬಹುದು. ಅದು ಮಾನಸಿಕ ಜೀವನದ ಎಲ್ಲ ಅಂಶಗಳನ್ನೂ ಒಳಗೊಳ್ಳುತ್ತದೆ. ಆದರೆ ಅದಕ್ಕೂ ಅವ್ಯಾಪ್ತಿದೋಷ ಅಂಟಿಕೊಂಡಿದೆ. ಏಕೆಂದರೆ, ಅದು ಪ್ರಾಣಿ-ಮನಃಶಾಸ್ತ್ರವನ್ನೂ ನಮ್ಮ ಸಾಮಾಜಿಕ ಕಾರ್ಯಜಾಲವನ್ನೂ ತನ್ನ ಕಕ್ಷೆಯಿಂದ ಹೊರಗೆ ಅಟ್ಟಿದೆ.

ಕೊನೆಯದಾಗಿ, ಅದೊಂದು ವರ್ತನಾವಿಜ್ಞಾನ ಎಂಬ ಲಕ್ಷಣ ಇಂದು ರೂಢಿಗೆ ಬಂದಿದೆ. ಈ ಲಕ್ಷಣದಲ್ಲಿ ಪ್ರಾಣಿಮನಃಶಾಸ್ತ್ರವು ಅಳವಟ್ಟಿದೆ. ಪ್ರಾಣಿಗಳಿಗೆ ಪ್ರಜ್ಞೆ ಇದೆಯೋ ಇಲ್ಲವೋ ಎಂಬ ಪ್ರಶ್ನೆ ಬೇರೆ. ಅವುಗಳ ವರ್ತನೆಯಂತೂ ಪ್ರತ್ಯಕ್ಷಸಿದ್ಧ. ಪ್ರಾಣಿಮನಃಶಾಸ್ತ್ರಕಾರರೂ ವರ್ತನಾವಾದಿಗಳೆಂಬ ಮನಃಶಾಸ್ತ್ರಪ್ರಸ್ಥಾನದವರೂ ಈ ಲಕ್ಷಣವನ್ನು ಸೂಚಿಸಿದವರು. ಪ್ರಜ್ಞಾವತ್ತೆಯು ಕೇವಲ ಖಾಸಗಿಯ ವಿಷಯವಾದುದರಿಂದ ಮನಃಶಾಸ್ತ್ರವನ್ನು ಶುದ್ಧ ವಿಜ್ಞಾನವನ್ನಾಗಿ ಮಾಡುವ ಲವಲವಿಕೆಯುಳ್ಳ ವರ್ತನಾವಾದಿಯು ಪ್ರಜ್ಞೆಯನ್ನು ಹೊರಗಿಟ್ಟು, ಇಂಥ ಪರತಃಪ್ರಮಾಣದಿಂದ ಸಿದ್ಧವಾದ ವಾಸ್ತವ ಲಕ್ಷಣವನ್ನು ಎದುರಿಟ್ಟಿದ್ದಾನೆ. ವರ್ತನಾವಾದದ ಸಂಸ್ಥಾಪಕನಾದ ಜೆ. ಬಿ. ವಾಟ್ಸನ್ ಮಹೋದಯನು ಮನಃಶಾಸ್ತ್ರದ ಕರ್ತವ್ಯವನ್ನು ಹೀಗೆ ವಿವರಿಸಿದ್ದಾನೆ:

“ವೈಜ್ಞಾನಿಕರೆಲ್ಲರಿಗೂ ಆಸಕ್ತಿ ಹುಟ್ಟಿಸತಕ್ಕ ಮನಃಶಾಸ್ತ್ರವು ಮನುಷ್ಯರೂ ಪ್ರಾಣಿಗಳೂ ತಮ್ಮ ಆವರಣದೊಡನೆ ಹೊಂದಿಕೊಂಬ ಪ್ರತ್ಯಕ್ಷ ಸಂಗತಿಯನ್ನು ತನ್ನ ಬೀಜವನ್ನಾಗಿ ಆಯ್ದುಕೊಳ್ಳುತ್ತದೆ. ಇಂಥ ಹೊಂದಿಕೆಗಳು ಸಾಕಷ್ಟು ಇರಬಹುದು. ಇಲ್ಲವೆ ಒಂದು ಪಿಂಡದ ಕೇವಲ ಅಸ್ತಿತ್ವಕ್ಕೆ ಆವಶ್ಯಕವೆನಿಸುವಷ್ಟು ಕನಿಷ್ಠಾವಧಿಕವಾಗಿಯೂ ಇರಬಹುದು. ಎರಡನೆಯದಾಗಿ ಕೆಲ ಪ್ರೇರಣೆಗಳು ಪಿಂಡಗಳನ್ನು ಅನುಕ್ರಿಯೆಯೆಸಗುವಂತೆ ಮಾಡುತ್ತವೆ. ಪೂರ್ಣಾವಸ್ಥೆಯನ್ನು ಮುಟ್ಟಿದ ಮನಃಶಾಸ್ತ್ರಪದ್ಧತಿಯಲ್ಲಿ ಪ್ರೇರಣೆಯನ್ನು ಕೊಟ್ಟಾಗ ಅನುಕ್ರಿಯೆ

ಯನ್ನೂ ಅನುಕ್ರಿಯೆಯನ್ನು ಕೊಟ್ಟಾಗ ಪ್ರೇರಣೆಯನ್ನೂ ಊಹಿಸಬಹುದು."

ಜೆ. ಬಿ. ವಾಟ್ಸನ್ನನ ಪರತಃಪ್ರಾಮಾಣ್ಯದ ಅತಿದೃಷ್ಟಿಗೆ ವಿರುದ್ಧವಾಗಿ ಜಾರ್ಜ್ ಟಿ. ಲ್ಯಾಡನು ಪ್ರಜ್ಞೆಯ ಘಟನೆಯನ್ನು ಇದ್ದ ಹಾಗೇ ಪದ್ಧತಿ ಪ್ರಕಾರ ವರ್ಣಿಸುವುದೂ ವಿವರಿಸುವುದೂ ಮನಃಶಾಸ್ತ್ರವೆನಿಸುತ್ತದೆ ಎಂದು ಲಕ್ಷಣಿಸಿದ್ದಾನೆ. ಮೆಕ್‌ಡೂಗಲ್ಲನ ಪ್ರಕಾರ ನಮ್ಮನ್ನು ನಾವು ಹೆಚ್ಚು ವಿವೇಕ ದಿಂದ ನಿಯಂತ್ರಿಸಿಕೊಳ್ಳಲು ಮತ್ತು ಹೆಚ್ಚು ಪರಿಣಾಮಕರವಾಗಿ ನಮ್ಮ ಸಹಜೀವಿಗಳ ಮೇಲೆ ಪ್ರಭಾವ ಬೀರಲು ತಕ್ಕ ಹಾಗೆ ಮಾನವನ ಸ್ವಭಾವದ ಜ್ಞಾನವನ್ನು ಹೆಚ್ಚು ನಿಷ್ಕೃಷ್ಟ ಹಾಗೂ ಕ್ರಮಬದ್ಧ ಮಾಡುವುದೇ ಮನಃ ಶಾಸ್ತ್ರದ ಗುರಿ. ಮನುಷ್ಯ ಸ್ವಭಾವದ ಮನೋಮುಖಕ್ಕಷ್ಟೇ ಮನಃಶಾಸ್ತ್ರ ಸ್ಪಷ್ಟವಾಗಿ ಸಂಬಂಧಿಸಿದೆ ಎನ್ನುತ್ತಾನವ— ಅದು ಮಾನವ್ಯ ಮನದ ವೈಧಿಕ ಹಾಗೂ ಪ್ರಯೋಗವೈಜ್ಞಾನಿಕ ಸ್ವರೂಪದ ಶಾಸ್ತ್ರ ಎಂಬುದವನ ಮತ. 'ಒಂದು ನಯವಾದ ಅಭಿರುಚಿ ಇಲ್ಲವೆ ಹೊಂದಿಕೆ ಅಥವಾ ವಿವೇಕದೃಷ್ಟಿಯ ನೋಟ' ಎಂಬ ಅರ್ಥದಲ್ಲಿ 'ಸೈಕಾಲಾಜಿಕಲ್' (ಮನಃಶಾಸ್ತ್ರೀಯ, ಮನೋ ಧಾರ್ಮಿಕ) ಎಂಬ ಪದವನ್ನು ಜನಪ್ರಿಯ ಸಾಹಿತ್ಯದಲ್ಲಿ ಬಳಸುತ್ತಿರುವುದನ್ನು ನೈಟ್‌ಡನ್‌ಲ್ಯಾಪ್ ಎತ್ತಿ ತೋರಿಸಿದ್ದಾನೆ. 'ಸೈಕಾಲಾಜಿಕಲ್ ಮೋಮೆಂಟ್' ಎಂದರೆ ಮೇಲಿನ ಅರ್ಥದ ಪ್ರಕಾರ ಒಂದು ಕಾರ್ಯ ನಡೆಯಲು ಬೇಕಾದ ಅತ್ಯಂತ ಉಚಿತ ಕ್ಷಣ ಎಂದಾಗುತ್ತದೆ.

ಸರ್ವಗ್ರಾಹ್ಯವಾದ ಇಂದಿನ ಲಕ್ಷಣ ಇಂತಿದೆ : ಮನಃಶಾಸ್ತ್ರವೆಂದರೆ ಮಾನವನ ಹಾಗೂ ಪ್ರಾಣಿಯ, ಸಮ-ವಿಷಮಾವಸ್ಥೆಗಳ, ವ್ಯಕ್ತಿಯ ಮತ್ತು ಸಮಾಜದ ವಿಚಾರ ಮತ್ತು ವರ್ತನೆಗಳ ಕ್ರಮವಾದ ಅಭ್ಯಾಸ.

ಬೇರೆ ಬೇರೆ ಕ್ಷೇತ್ರಗಳಲ್ಲಿ ಯಶಸ್ವಿಯಾದ ವಿವಿಧ ವೈಜ್ಞಾನಿಕ ಸಂಶೋಧನ ಕ್ರಮಗಳನ್ನು ಮಾನಸಿಕ ಜೀವನ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಅನ್ವಯಿಸಲು ಆಧುನಿಕ ಮನಃಶಾಸ್ತ್ರ ಪ್ರಯತ್ನಿಸುತ್ತದೆ —ಎನ್ನುತ್ತಾನೆ ಟಿಚ್ನರ್. ಮಾನಸಿಕ ಜೀವನವು ಮಾನವ್ಯ ಕಾರ್ಯಜಾಲದಲ್ಲಿ ಪ್ರಕಟವಾಗು ತ್ತದೆ; ಆದುದರಿಂದ ವ್ಯಕ್ತಿಯ ಚಟುವಟಿಕೆಗಳ ವೈಜ್ಞಾನಿಕ ಅಭ್ಯಾಸವೇ ಮನಃಶಾಸ್ತ್ರ ಎಂಬುದು ಅವನ ಹೇಳಿಕೆ. ಜೀವ ಹೋದ ಮೇಲೆ ಒಬ್ಬನಲ್ಲಿ ಸಂಭವಿಸುವ ಯಾವ ಕಾರ್ಯವೂ ಸಜೀವಕಾರ್ಯವಲ್ಲ; ಅವನ ಹೆಣದಲ್ಲಿ

ಆಗುವುದು ಜಡಕ್ರಿಯೆ. ಆದರೆ ಜೀವವನ್ನಾಧರಿಸಿ ನಡೆವ ಪ್ರತಿಯೊಂದು ಕಾರ್ಯವೂ ಜೈವಿಕ ಅಥವಾ ಚೈತನಿಕವಾದ ಕಾರ್ಯ; ಆದುದರಿಂದ ಮಾತನಾಡುವುದು ಓಡುವುದು ಮಾತ್ರವಲ್ಲದೆ ಕಲಿಯುವುದೂ ಸುಖ-ದುಃಖಗಳನ್ನು ಅನುಭವಿಸುವುದೂ ಚೈತನಿಕ ಕಾರ್ಯಗಳೇ — ಸಚೇತನ ವ್ಯಕ್ತಿಯ ವ್ಯಾಪಾರಗಳೇ. ವ್ಯಕ್ತಿಗಳಲ್ಲಿರುವ ಭೇದ ಮತ್ತು ಸಮಕಾರ್ಯಶೀಲಗಳನ್ನು ಮನಃಶಾಸ್ತ್ರವು ಹುಡುಕಲು ಯತ್ನಿಸುತ್ತದೆ. ಮಾನವರ ಸಾಮಾನ್ಯ ವ್ಯಾಪಾರಗಳಾದ ಕಲಿಯುವುದು, ವಿಚಾರ ಮಾಡುವುದು, ಭಾವಿಸುವುದು, ಚಲಿಸುವುದು ಮುಂತಾದವುಗಳಿಗೆ ಆಧಾರಭೂತವಾದ ಸಾಮಾನ್ಯ ವಿಧಿಗಳನ್ನು (ಉತ್ಸರ್ಗ ನಿಯಮಗಳನ್ನು) ಕಂಡುಹಿಡಿಯಲು ಮನಃಶಾಸ್ತ್ರ ಪ್ರಯತ್ನ ಮಾಡುತ್ತದೆ. ಶವಗಳಲ್ಲಾಗಲಿ, ಮರಣೋತ್ತರ ಜೀವಗಳಲ್ಲಾಗಲಿ ಅದು ಆಸಕ್ತಿವಹಿಸದು; ಶರೀರವುಳ್ಳ, ಬದುಕಿರುವ, ಕ್ರಿಯಾಮಯ ವ್ಯಕ್ತಿಗಳಿಗಷ್ಟೇ ಅದರ ಆಸಕ್ತಿ ಪರಿಮಿತ — ಅರ್ಥಾತ್ ಅದೊಂದು ಸಜೀವ ವ್ಯಕ್ತಿಯ ಕೃತ್ಯರೂಪದ ಮನದ ವರ್ತನೆಗಳ ಮೀಮಾಂಸೆಯಲ್ಲಿ ನಿಷ್ಠವಾದ ಶಾಸ್ತ್ರ. ವರ್ತನೆಗಳನ್ನಿಲ್ಲಿ ಪ್ರಯೋಗ ವೈಜ್ಞಾನಿಕ ಪ್ರತ್ಯಕ್ಷಕ್ಕೆ ಗೋಚರಿಸತಕ್ಕವೆಂದು ಗಣಿಸಿರುವುದು ಗಮನೀಯ; ಅವು ಮನಃಕೃತ್ಯದ ಆವಿರ್ಭಾವಗಳು, ಪ್ರಕಟಸ್ವರೂಪಗಳು.

ಮೇಲಿನ ಮಾತುಗಳಿಂದ ಮನಃಶಾಸ್ತ್ರದ ಗುರಿ ಆತ್ಮಶೋಧವಲ್ಲ — ಮನಃಶೋಧ ಎಂಬುದು ಸ್ಪಷ್ಟವಾಗುತ್ತದೆ. Function ಅಥವಾ ಕೃತ್ಯದ ಸ್ವರೂಪವುಳ್ಳ ಮನಸ್ಸು ಜೀವಂತ ಶರೀರದಲ್ಲಿ ಮನೋದೈಹಿಕ ವರ್ತನೆಗಳ ರೂಪದಲ್ಲಿ ವ್ಯಕ್ತವಾಗುತ್ತದೆಂದು ನಂಬಿ, ಆ ವರ್ತನೆಗಳನ್ನು ಪರಿಶೀಲಿಸಿ, ತನ್ಮೂಲಕ ಒಂದು ಜೀವಂತವ್ಯಕ್ತಿಯ ಕಷ್ಟಸಹಿಷ್ಣುತೆ, ಕಾರ್ಯದಕ್ಷತೆ, ಮೇಧಾವಿತ್ವ, ಕೌಶಲ ಮುಂತಾದ ಗುಣಗಳನ್ನು ವೈಜ್ಞಾನಿಕವಾಗಿ ನಿರ್ಣಯಿಸಿ, ಜೀವನದಲ್ಲಿ ಅನ್ವಯಾನುಕೂಲವನ್ನು ಕಲ್ಪಿಸಿಕೊಡುವುದು ಮನಃಶಾಸ್ತ್ರದ ಮಹೋದ್ದೇಶ. ಇದರಿಂದ ಪ್ರಸ್ತುತ ಶಾಸ್ತ್ರದ ವೈಜ್ಞಾನಿಕತೆಯ ಜೊತೆಗೇ ಅದರ ಸಿದ್ಧಾಂತಗಳ ವ್ಯವಹಾರ್ಯತೆಯೂ ವಿದಿತವಾಗುತ್ತದೆ.

ಮನಃಶಾಸ್ತ್ರದ ಶಾಖೆಗಳು : ೧. ಶಾರೀರಿಕ ಮನಃಶಾಸ್ತ್ರ: ಇದರಲ್ಲಿ ನಮ್ಮ ಮಾನಸಿಕ ಜೀವನಕ್ಕೆ ನಿಕಟವಾಗಿ ಹೊಂದಿಕೊಂಡಿರುವ ಮಿದುಳಿನ ಶರೀರಶಾಸ್ತ್ರ, ನರಮಂಡಲ, ಇಂದ್ರಿಯಗಳು ಮತ್ತು ನಿರ್ನಾಳಗ್ರಂಥಿಗಳು

ಮುಂತಾದ ಶರೀರದ ವಿವಿಧ ಅಂಗಗಳ ಅಭ್ಯಾಸ ಸೇರಿದೆ.

೨. ತಾತ್ವಿಕ ಮನಃಶಾಸ್ತ್ರ: ಮನಸ್ಸು ಮತ್ತು ಆತ್ಮಗಳ ಸ್ವಭಾವ, ಮನಸ್ಸು ಮತ್ತು ಶರೀರಗಳ ಸಂಬಂಧ ಹಾಗೂ ಪ್ರಾಚೀನವಾದ ಸಂಕಲ್ಪ ಸ್ವಾತಂತ್ರ್ಯ ಮತ್ತು ನಿಯತಿವಾದಗಳ ಪ್ರಶ್ನೆ ಮುಂತಾದ ಮೂಲಭೂತ ಸಮಸ್ಯೆಗಳ ವಿವೇಚನೆ ಇದರಲ್ಲಿ ಬರುತ್ತದೆ. ಇಲ್ಲಿ ನಿರೀಕ್ಷಣೆಗೂ ಪ್ರಯೋಗಕ್ಕೂ ಸ್ಥಾನವಿಲ್ಲ. ಉಳಿದ ವಿಜ್ಞಾನಗಳಲ್ಲಿ ಹೇಗೋ ಹಾಗೇ ಇದರಲ್ಲಾದರೂ ಮೌಲಿಕ ಕಲ್ಪನೆಗಳ ಮತ್ತು ಅವುಗಳ ಹಿನ್ನೆಲೆಯಲ್ಲಿರುವ ಗೃಹೀತ ಜ್ಞಾನಗಳ ಸ್ಪಷ್ಟೀಕರಣವೇ ಮುಖ್ಯ.

೩. ಅಭಿಜ್ಞಾ ಮನಃಶಾಸ್ತ್ರ: ಈ ಶಾಖೆಯಲ್ಲಿ ಭಾವನೆ ಮತ್ತು ಬಯಕೆಗಳಿಂದ ಭಿನ್ನವಾದ, ಕೇವಲ ಜ್ಞಾನಕ್ಕೆ ಸಂಬಂಧಿಸಿದ ಇಂದ್ರಿಯಪ್ರತ್ಯಕ್ಷ, ಉನ್ಮುಖತೆ, ಜ್ಞಾನಾರ್ಜನೆ, ಸ್ಮೃತಿ ಮತ್ತು ತರ್ಕ ಮುಂತಾದ ಮಾನಸಿಕ ಕಾರ್ಯಗಳು ಅಡಕವಾಗುತ್ತವೆ.

೪. ಮಾನಸ-ಮಾನಶಾಸ್ತ್ರ: ಮಾನಸ-ಮಾನಶಾಸ್ತ್ರವು ಮಾನಸಿಕ ಗುಣಗಳನ್ನು ಅಳೆಯುತ್ತದೆ. ಇದರಲ್ಲಿ ಹೆಚ್ಚು ಪ್ರವರ್ಧಮಾನಕ್ಕೆ ಬಂದ ವಿಭಾಗ ಎಂದರೆ ಬುದ್ಧಿಪರೀಕ್ಷಣ; ಆದರೆ "ವಿಶಿಷ್ಟ ಶಕ್ತಿಗಳು" ಎನ್ನಿಸಿಕೊಂಡ ಯಾಂತ್ರಿಕ ಶಕ್ತಿ ಅಥವಾ ಸಾಂಗೀತಿಕ ಶಕ್ತಿ ಮುಂತಾದವನ್ನು ಸಾಕಷ್ಟು ಸರಿಯಾಗಿ ಅಳೆಯಲು ಸದ್ಯಃ ಸಾಧ್ಯವಾಗಿದೆ; ಅಲ್ಲದೆ ಮನಃಪ್ರಣಾಲಿಗಳನ್ನು ಮತ್ತು ವ್ಯಕ್ತಿತ್ವದ ಲಕ್ಷಣಗಳನ್ನು ಅಳೆಯುವಲ್ಲಿ ಪ್ರಯೋಗ ಮುಂದುವರಿಯುತ್ತಿದೆ.

೫. ಪ್ರಾಣಿಮನಃಶಾಸ್ತ್ರ: ಪ್ರಾಣಿಗಳ ಮೂಲಪ್ರವೃತ್ತಿ, ಕಲಿಯುವ ವಿಧಾನ ಮತ್ತು ಅವಕ್ಕೆ ಬುದ್ಧಿ ಇವೆ ಎಂದು ಹೇಳಬಹುದಾದ ಅರ್ಥ — ಇವುಗಳಿಗೆ ಸಂಬಂಧಿಸಿದ ಮುಖ್ಯವಾದ ಮಾನಸಶಾಸ್ತ್ರೀಯ ಸಮಸ್ಯೆಗಳ ವಿವೇಚನೆ ಇಲ್ಲಿದೆ. ಪ್ರಾಣಿಗಳ ಮೇಲೆ ಮಾಡಿದ ಪ್ರಯೋಗಗಳಿಂದ ಮಿದುಳು ಮತ್ತು ನರಮಂಡಲಗಳ ಕೃತ್ಯಗಳ ಜ್ಞಾನವು ನಮಗೆ ಹೆಚ್ಚಾಗಿ ಲಭಿಸಿದೆ.

೬. ಸಾಮಾಜಿಕ ಮನಃಶಾಸ್ತ್ರ: ಮನಃಶಾಸ್ತ್ರದ ಶಾಖೆಯಲ್ಲಿ ವ್ಯಕ್ತಿಗಳ ವಿಚಾರ ಮತ್ತು ವರ್ತನೆಗಳ ಮೇಲೆ ಅವರು ಇತರರೊಡನೆ ಇಟ್ಟುಕೊಂಡ ಸಂಬಂಧಗಳ ಹಾಗೂ ಅವರು ಸೇರಿರುವ ವಿವಿಧ ಸಾಮಾಜಿಕ ಗುಂಪುಗಳ

ರಚನೆ, ಸಂಸ್ಥೆಗಳು, ಸಂಪ್ರದಾಯ ಮತ್ತು ಉತ್ಕ್ರಿಯಾತ್ಮಕ ಶಕ್ತಿಗಳ ಪ್ರಭಾವ ಹೇಗೆ ಬೀಳುತ್ತದೆ ಎಂಬುದರ ಪ್ರತಿಪಾದನೆ ಇಲ್ಲಿದೆ.

೭. ಉತ್ಕ್ರಿಯಾಮನಃಶಾಸ್ತ್ರ: ಇದು ಮೂಲಪ್ರವೃತ್ತಿ, ಭಾವನೆ ಮತ್ತು ಇತರ, ಜ್ಞಾತ-ಅಜ್ಞಾತ ಪ್ರಜ್ಞೆಗಳ ಉತ್ಕ್ರಿಯಾತ್ಮಕ ಶಕ್ತಿಗಳು ಹೇಗೆ ನಮ್ಮನ್ನು ಕಾರ್ಯದಲ್ಲಿ ಪ್ರವರ್ತಿಸುತ್ತವೆ ಎಂಬುದನ್ನು ಚರ್ಚಿಸುತ್ತದೆ.

ಇನ್ನೊಂದು ವಿಧದಿಂದ ಮನಃಶಾಸ್ತ್ರವನ್ನು ವಿಭಜಿಸುವುದೂ ಉಂಟು. ಆ ಪ್ರಕಾರ ಮನಃಶಾಸ್ತ್ರದಲ್ಲಿ ಶುದ್ಧ ಮತ್ತು ಅನ್ವಿತ ಎಂದು ಎರಡು ಬಗೆ. ಮನಃ ಶಾಸ್ತ್ರೀಯ ಜ್ಞಾನವನ್ನು ಹೆಚ್ಚಿಸಿಕೊಂಬುದು ಶುದ್ಧ ಮನಃಶಾಸ್ತ್ರದ ಕೆಲಸ. ಮನೋರೋಗಗಳು ಬಾರದಂತೆ ಮುಂಜಾಗ್ರತೆ ವಹಿಸುವ ಮತ್ತು ಅವನ್ನು ಗುಣಪಡಿಸುವ ಹಾಗೂ ಶಿಕ್ಷಣ, ಉದ್ಯಮ, ಮಕ್ಕಳ ಸಾಕಣೆ, ಉದ್ಯೋಗದ ಆಯ್ಕೆ ಮುಂತಾದ ವ್ಯಾವಹಾರಿಕ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಗಳಲ್ಲಿ ಮನಃಶಾಸ್ತ್ರದ ಜ್ಞಾನವನ್ನು ಅನ್ವಯಿಸುವುದು ಅನ್ವಿತ ಮನಃಶಾಸ್ತ್ರಜ್ಞನ ಕೆಲಸ. ಮನಃಶಾಸ್ತ್ರಕ್ಕೆ ಮೊದಲು ಸ್ವತಂತ್ರ ಜ್ಞಾನಶಾಖೆ ಎಂಬ ಮನ್ನಣೆ ದೊರೆತ ೧೯ನೆಯ ಶತಮಾನದಲ್ಲಿ ಶುದ್ಧ ಮನಃಶಾಸ್ತ್ರವೇ ಗಣ್ಯವಾಗಿತ್ತು— ಅದರಲ್ಲೂ ಮನಃಶಾಸ್ತ್ರಜ್ಞರ ಲಕ್ಷ್ಯ ತಾತ್ವಿಕ ಮನಃಶಾಸ್ತ್ರ ಮತ್ತು ಅಭಿಜ್ಞಾ ಮನಃಶಾಸ್ತ್ರಗಳ ಮೇಲೆಯೇ. ಆದರೆ ಇಂದು ಪ್ರಾಧಾನ್ಯ ಕೊಡುವುದರಲ್ಲಿ ದೃಷ್ಟಿ ಬದಲಾಗಿದೆ. ಅನ್ವಿತಮನಃಶಾಸ್ತ್ರವು ತಕ್ಕ ಪ್ರಾಧಾನ್ಯವನ್ನು ಪಡೆದಿದೆ; ತಾತ್ವಿಕ ಮನಃಶಾಸ್ತ್ರ ಮತ್ತು ಅಭಿಜ್ಞಾಮನಃಶಾಸ್ತ್ರಗಳ ಪ್ರಾಮುಖ್ಯಕ್ಕೆ ಸಾಕಷ್ಟು ಮನ್ನಣೆ ದೊರೆತಿದ್ದರೂ ಇತರ ಶಾಖೆಗಳ— ಅದರಲ್ಲೂ ಉತ್ಕ್ರಿಯಾತ್ಮಕ, ಸಾಮಾಜಿಕ ಮನಃಶಾಸ್ತ್ರ ಹಾಗೂ ಮಾನಸ-ಮಾಪಶಾಸ್ತ್ರಗಳ— ತೀವ್ರಗತಿಯ ಬೆಳವಣಿಗೆಯಿಂದ ಕೆಲಮಟ್ಟಿಗೆ ಅವುಗಳ ಪ್ರಾಮುಖ್ಯವು ಮಸುಕಾಗಿದೆ. ಈ ವ್ಯತ್ಯಾಸದ ದೆಸೆಯಿಂದ ತಂತ್ರದಲ್ಲಿ ಹೆಚ್ಚಿನ ಪ್ರಗತಿಯಾಗಿದೆ. ಸ್ಥೂಲವಾಗಿ ಹೇಳುವುದಾದರೆ, ಕಳೆದ ೬೦-೭೦ ವರ್ಷಗಳಲ್ಲಿ ಅಂತರ್‌ನಿರೀಕ್ಷಣೆ ಮತ್ತು ಕಥನಕ್ರಮಗಳಿಂದ ಮನಃಶಾಸ್ತ್ರವು ನಿಯಂತ್ರಿತ ನಿರೀಕ್ಷಣೆ ಮತ್ತು ಪ್ರಯೋಗಗಳೆಡೆಗೆ ಮುಂದುವರಿದಿದೆ.

ಮತ್ತೂ ಒಂದು ವಿಧವಾಗಿ ಮನಃಶಾಸ್ತ್ರದ ಶಾಖೆಗಳನ್ನು ವಿಸ್ತರಿಸಿ ವಿಭಜಿಸುವುದೂ ಉಂಟು. ಅದರ ಪ್ರಕಾರ ಸಾಮಾನ್ಯಮನಃಶಾಸ್ತ್ರ, ತುಲನಾತ್ಮಕ

ಮನಃಶಾಸ್ತ್ರ, ವಿಷಮ ಮನಃಶಾಸ್ತ್ರ, ಶೈಕ್ಷಣಿಕ ಮನಃಶಾಸ್ತ್ರ, ಔದ್ಯಮಿಕ ಮನಃಶಾಸ್ತ್ರ, ಔದ್ಯೋಗಿಕ ಸಲಹೆಯ ಮನಃಶಾಸ್ತ್ರ ಎಂಬವನ್ನು ಹಿಂದೆ ಹೇಳಿದ ಪಟ್ಟಿಗೆ ಸೇರಿಸಬೇಕಾಗುತ್ತದೆ.

೧. ಸಾಮಾನ್ಯ ಮನಃಶಾಸ್ತ್ರಕ್ಕೆ ಪ್ರಸ್ಥಾನ ಭೇದವಿಲ್ಲ. ವಿವಿಧ ಪ್ರಸ್ಥಾನ ಹಾಗೂ ಶಾಖೆಗಳ ಸಂಶೋಧನೆಯ ಫಲಿತಾಂಶಗಳನ್ನು ಬಳಸಿಕೊಂಡು ಸಮಸ್ಥಿತಿಯ ಮಾನವನ ಮಾನಸಿಕ ಜೀವನದ ಬಗೆಯನ್ನದು ವಿವರಿಸುತ್ತದೆ. ಬಾಲಮನಃಶಾಸ್ತ್ರ, ಗೆಸ್ಟಾಲ್ಟ್‌ಪ್ರಸ್ಥಾನ ಅಥವಾ ವರ್ತನಾವಾದ ಮುಂತಾದ ಯಾವ ವಿಭಾಗಗಳಿಂದ ಬೇಕಾದರೂ ಆವಶ್ಯಕ ಸಿದ್ಧಾಂತಗಳನ್ನು ಅದು ಸ್ವೀಕರಿಸುತ್ತದೆ; ಮತ್ತು ಮನಃಶಾಸ್ತ್ರದ ಅಡಿಗಲ್ಲೆನಿಸುವ ಮೂಲಭೂತ ತತ್ವಗಳು ಅದರ ವಿಷಯವೆನಿಸಿವೆ.

೨. ಬಾಲಮನಃಶಾಸ್ತ್ರ, ಹಿಂದೆ ಹೇಳಿದ ಪ್ರಾಣಿಮನಃಶಾಸ್ತ್ರ ಮತ್ತು ಆದಿಮಾನವ–ಮನಃಶಾಸ್ತ್ರ ಎಂಬಿವು ತುಲನಾತ್ಮಕ ಮನಃಶಾಸ್ತ್ರದ ಮೂರು ಉಪಶಾಖೆಗಳು. ಭಾಷಾಶಾಸ್ತ್ರ ಮತ್ತು ಶರೀರರಚನಾ ಶಾಸ್ತ್ರಗಳು ತುಲನಾತ್ಮಕ ಮನಃಶಾಸ್ತ್ರವನ್ನು ಯಶಸ್ವಿಯಾಗಿ ಬಳಸಿಕೊಂಡಿವೆ. ಮಕ್ಕಳ, ಪ್ರಾಣಿಗಳ ಹಾಗೂ ಪ್ರೌಢರ ವರ್ತನೆಗಳ ತುಲನೆಯಿಂದ ಮಾನವಮನದ ಕಾರ್ಯವೈವಿಧ್ಯದ ಮೇಲೆ ಬಹಳಮಟ್ಟಿಗೆ ಬೆಳಕು ಬೀಳುವಂತಾಗಿದೆ. ಪ್ರೌಢ ನಾಗರಿಕ ಜನತೆಯ ವರ್ತನೆಯನ್ನು ಆದಿಮಾನವರ ವರ್ತನೆಯೊಡನೆ ಹೋಲಿಸಬಹುದು. ಸಂಸ್ಕೃತಿ–ಪ್ರಗತಿಗಳ ವಿವಿಧ ಮಟ್ಟಗಳಲ್ಲಿ ಬೇರೆ ಬೇರೆ ಕುಲದವರ ಪುರಾಣ, ನಂಬಿಗೆ ಹಾಗೂ ರಾಷ್ಟ್ರೀಯ ಕತೆಗಳನ್ನು ಜೋಡಿಸಿ ನೋಡಬಹುದು.

೩. ವಿಷಮಮನಃಶಾಸ್ತ್ರದಲ್ಲಿ ಮಾನಸಿಕ ಆರೋಗ್ಯ, ಮಾನಸಚಿಕಿತ್ಸೆ ಮತ್ತು ಮನೋರೋಗನಿದಾನ ಎಂಬ ಮೂರು ಒಳವಿಭಾಗಗಳಿವೆ. ಮಾನಸಿಕ ಆರೋಗ್ಯ ಶಾಸ್ತ್ರವು ಮನೋರೋಗ ಬರದಂತೆ ಮುಂಜಾಗ್ರತೆ ವಹಿಸುವ ಮತ್ತು ಮಾನಸಿಕ ಆರೋಗ್ಯವನ್ನು ಕಾಯ್ದುಕೊಂಬ ಬಗೆಯನ್ನು ಹೇಳುತ್ತದೆ. ಮಾನಸಿಕ ಹಾಗೂ ನರಮಂಡಲದ ರೋಗಗಳನ್ನು ಗುಣಪಡಿಸುವ ಬಗೆಯನ್ನು ಮಾನಸ-ಚಿಕಿತ್ಸಾ ಶಾಸ್ತ್ರ ವಿವರಿಸುತ್ತದೆ. ಅದರ ಗುಣಪಡಿಸುವ ಪದ್ಧತಿಯಲ್ಲಿ ಔಷಧೋಪಚಾರವಿಲ್ಲ; ಮನಃಶಾಸ್ತ್ರೀಯ ವಿಧಾನಗಳಿವೆ. ಮನೋವಶೀಕರಣ, ಸೂಚನೆ, ಸ್ವಯಂಸೂಚನೆ ಮತ್ತು ಮನೋವಿಶ್ಲೇಷಣಗಳು ಅಂಥ ಕೆಲವು ವಿಧಾನಗಳು.

ರೋಗನಿದಾನಶಾಸ್ತ್ರದ ಕೆಲಸವು ಶಾರೀರಿಕ ರೋಗದ ಪದ್ಧತಿಪ್ರಕಾರವಾದ ಶೋಧನೆ. ಮನೋರೋಗನಿದಾನಕ್ಕೂ ಮಾನಸಚಿಕಿತ್ಸೆಗೂ ಇರುವ ಸಂಬಂಧವೆಂಬುದು ರೋಗನಿದಾನಕ್ಕೂ ಔಷಧೋಪಚಾರಕ್ಕೂ ಇರುವ ಸಂಬಂಧಕ್ಕೆಣೆಯಾದುದು. ಮನೋರೋಗನಿದಾನವು ಮನುಷ್ಯನ ಮನಸ್ಸಿನ ಹಾಗೂ ನರಗಳ ವಿಷಮಾವಸ್ಥೆಗಳನ್ನು ಪದ್ಧತಿಪ್ರಕಾರ ಶೋಧ ಮಾಡುತ್ತದೆ. ಮನೋರೋಗವನ್ನು ಗುಣಪಡಿಸಲು ಹೋಗುವ ಮೊದಲು ಅಂಥ ರೋಗಗಳ ವಿವಿಧ ಪ್ರಕಾರಗಳನ್ನೂ ಅವುಗಳ ಪ್ರಕಟಚಿಹ್ನಗಳನ್ನೂ ನಾವು ಅರಿತುಕೊಳ್ಳಬೇಕಾಗುತ್ತದೆ.

೪. ಶೈಕ್ಷಣಿಕಮನಃಶಾಸ್ತ್ರವು ಮನಃಶಾಸ್ತ್ರೀಯ ಶೋಧಗಳನ್ನು ಶಿಕ್ಷಣತಂತ್ರಕ್ಕೆ ಹಾಗೂ ಮಕ್ಕಳ ಸಮಸ್ಯೆಗಳಿಗೆ ಅನ್ವಯಿಸಲು ಹವಣಿಸುತ್ತದೆ. ಕಲಿಯುವ ಹಾಗೂ ಉನ್ಮುಖವಾಗುವ ಪ್ರಕ್ರಿಯೆಗಳ ಮನಃಶಾಸ್ತ್ರೀಯ ವಿಶ್ಲೇಷಣವು ಶಿಕ್ಷಣತಜ್ಞರಿಗೆ ಬಹಳ ಉಪಕಾರ ಮಾಡಿದೆ. ಬುದ್ಧಿಮಾಪನವಂತೂ ಶಿಕ್ಷಕರಿಗೆ ದೊಡ್ಡ ವರವಾಗಿಬಿಟ್ಟಿದೆ.

೫. ಔದ್ಯಮಿಕಮನಃಶಾಸ್ತ್ರದಲ್ಲಿ ಉನ್ಮುಖತೆಯ ಪ್ರಕ್ರಿಯೆ ಯಾವ ಸ್ವರೂಪದ್ದೆಂಬುದರ ಜ್ಞಾನ ಬಹಳ ಉಪಯುಕ್ತವಾಗಿದೆ. ಜನರ ಮನಸ್ಸನ್ನು ಆಕರ್ಷಿಸಿ ಹಿಡಿಯುವ ವಿವಿಧ ರೀತಿಗಳ ಶೋಧ ಅದರಿಂದಾಗಿದೆ. ಜಾಹೀರಾತಿನ ಕ್ರಮಗಳಲ್ಲಿ ಅದರಿಂದ ಸುಧಾರಣೆ ಮಾಡಲು ಸಾಧ್ಯವಾಗಿದೆ. ಸುಸ್ತಾಗುವ ಬಗೆಯ ಅಭ್ಯಾಸದಿಂದ ಒಂದು ಕೆಲಸದಲ್ಲಿ ಅನವಶ್ಯಕ ಚಲನವಲನಗಳನ್ನು ಕಡಿಮೆ ಮಾಡಲು ಅನುಕೂಲವೊದಗಿದೆ. ಕೆಲಸಗಾರರನ್ನು ಸುಖ-ಸಂತೃಪ್ತಿಗಳಲ್ಲಿಡುವ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಸ್ಪರ್ಧಾಲುತ್ವವನ್ನು ಬಳಸುವ ಸಮಸ್ಯೆಗಳನ್ನು ಮನಃಶಾಸ್ತ್ರೀಯವಾಗಿ ವಿವೇಚಿಸಿ ಬಹಳ ಪ್ರಯೋಜನವನ್ನು ಪಡೆಯಲಾಗುತ್ತಿದೆ.

೬. ಔದ್ಯೋಗಿಕ ಸಲಹೆಯ ಮನಃಶಾಸ್ತ್ರದ ಕೆಲಸ ಇಬ್ಬಗೆಯದು: ಒಂದ ಉದ್ಯೋಗದಲ್ಲಿ ಜಯಸಂಪಾದಿಸಲು ಬೇಕಾಗುವ ಸಾಧನಗಳನ್ನು ವಿಶ್ಲೇಷಿಸವುದು ಹಾಗೂ ಒಂದು ಕೆಲಸಕ್ಕೆ ಯಾರು ಅರ್ಹರೆಂಬುದನ್ನು ವಿವಿಧ ಪರೀಕ್ಷೆಗ ಮೂಲಕ ಕಂಡುಹಿಡಿಯುವುದು. ಔದ್ಯೋಗಿಕ ಅನರ್ಹರನ್ನು ತೆಗೆದುಹಾಕುವುದೆ ಈ ಶಾಸ್ತ್ರದ ಗುರಿ. ಮಾನವ್ಯ ಶಕ್ತಿಗಳ ಹಾಗೂ ಮನೋಧರ್ಮದ ಪರಿಚ

ಮಾನಸಶಾಸ್ತ್ರೀಯ ಅಭ್ಯಾಸಗಳಿಂದ ನಮಗಾಗುತ್ತದೆ. ಮೊದಲಿಗಿಂತ ಈಗ ಉಮೇದುವಾರರ ನಡುವಣ ವೈಯಕ್ತಿಕ ವ್ಯತ್ಯಾಸಗಳನ್ನು ಹೆಚ್ಚು ಸಮರ್ಪಕ ವಾಗಿ ಅಳೆಯಲು ಸಾಧ್ಯವಾಗಿದೆ. ಬೇರೆ ಬೇರೆ ಬಗೆಯ ಕೆಲಸಗಳಲ್ಲಿ ಯಶಸ್ಸನ್ನು ಸಂಪಾದಿಸಲು ಬೇಕಾದ ಲಕ್ಷಣಗಳನ್ನು ಅಳೆಯುವ ಪರೀಕ್ಷಾಕ್ರಮಗಳೂ ಈಗ ಬಹಳವಾಗಿವೆ.

ಮನಃಶಾಸ್ತ್ರದ ಕ್ರಮಗಳು: ೧. ಅಂತರ್ನಿರೀಕ್ಷಣೆ: ಅಂತರ್ನಿರೀಕ್ಷಣೆ ಎಂದರೆ ತನ್ನ ಮನಸ್ಸಿನ ಅವಸ್ಥೆಗಳ ಒಳನೋಟ. ಅದೊಂದು ಆತ್ಮನಿರೀಕ್ಷಣೆ. ಅದರ ಪ್ರಕಾರ ನೇರವಾಗಿ ತನ್ನ ಸ್ಮೃತಿಯ ನೆರವಿನಿಂದ ಒಬ್ಬ ತನ್ನ ಮಾನಸಿಕ ಅವಸ್ಥೆಗಳನ್ನು ನಿರೀಕ್ಷಿಸುತ್ತಾನೆ. ಒಂದು ಕೆಲಸ ಮಾಡಿದ ಬಳಿಕ ಆ ಕೆಲಸ ಮಾಡುತ್ತಿದ್ದಾಗ ತನ್ನ ಮನಸ್ಸಿನಲ್ಲಿ ಏನು ನಡೆಯಿತೆಂಬುದನ್ನು ಯೋಜ್ಯನು (Subject) ನೆನಪುಮಾಡಿಕೊಳ್ಳಲು ಯತ್ನಿಸುತ್ತಾನೆ. ಜಾಗರೂಕತೆಯಿಂದ ಕ್ರಮಬದ್ಧವಾಗಿ ಅಂತರ್ನಿರೀಕ್ಷಣೆ ಮಾಡಿಕೊಳ್ಳುವುದರಿಂದ ನಮ್ಮ ಜ್ಞಾತ-ಪ್ರಜ್ಞಾಜೀವನದ ಬಗ್ಗೆ ಉಪಯುಕ್ತವಾದ ಬಹಳ ಸಂಗತಿಗಳನ್ನು ತಿಳಿದುಕೊಳ್ಳ ಬಹುದು.

ಅಂತರ್ನಿರೀಕ್ಷಣೆಯ ಪ್ರಕ್ರಿಯೆಯ ವಿಕಾಸದಲ್ಲಿ ಸ್ಟೌಟನು ಮೂರು ಅವಸ್ಥೆಗಳನ್ನು ಉಲ್ಲೇಖಿಸುತ್ತಾನೆ:

೧. ಪರತಃಪ್ರಾಮಾಣ್ಯದೃಷ್ಟಿಯಿಂದ ಸ್ವತಃಪ್ರಾಮಾಣ್ಯದೃಷ್ಟಿಗೆ ಮುಟ್ಟುವ ನಡುವಿನ ಅವಸ್ಥೆ ಮೊದಲನೆಯದು. ಇಲ್ಲಿ ಬೇರೆ ಯಾವುದೋ ಒಂದನ್ನು ಮೊದಲು ನೋಡುತ್ತಿದ್ದವನು ತಾನು ಅದನ್ನು ನೋಡುತ್ತಿದ್ದೇನೆ ಎಂಬುದನ್ನು ನೋಡಲಾರಂಭಿಸುತ್ತಾನೆ. ಒಂದು ವಸ್ತುವಿನ ಧ್ಯಾನದಲ್ಲಿರುವುದರ ಬದಲು ಅವನೀಗ ತನ್ನ ಮನಸ್ಸು ಅದನ್ನು ನೋಡುತ್ತಿದೆ ಎಂಬುದನ್ನು ತಿಳಿಯತೊಡ ಗುತ್ತಾನೆ. ಅವನ ಉನ್ಮುಖತೆ ಈಗ ವಸ್ತುವಿನ ನಿರೀಕ್ಷಣೆ ಮತ್ತು ಮಾನಸಿಕ ಅವಸ್ಥೆಗಳ ನಿರೀಕ್ಷಣೆ ಎಂದು ಎರಡು ವಿಧವಾಗಿ ವಿಭಾಗವಾಗುತ್ತದೆ; ಅವನ ಆತ್ಮಪ್ರಜ್ಞೆಯು ಮೆಲ್ಲಮೆಲ್ಲನೆ ಎಚ್ಚರಹೊಂದುತ್ತದೆ. ಇದು ಅವನ ಪ್ರಕಟ ಆತ್ಮಪ್ರಜ್ಞೆಯ ಮೂಲ ಅವಸ್ಥೆ.

೨. ಚಿಂತನಾವಸ್ಥೆ: ಇಲ್ಲಿ ಯೋಜ್ಯನು ತನ್ನ ಮಾನಸಿಕ ಅವಸ್ಥೆಗಳನ್ನು ನಿರೀಕ್ಷಿಸುವುದಲ್ಲದೆ ಅವುಗಳ ಸ್ವಭಾವ ಮತ್ತು ಸತ್ಯತೆಗಳ ಬಗ್ಗೆ ಪ್ರಶ್ನಿಸಲು

ಆರಂಭಿಸುತ್ತಾನೆ; ತನ್ನ ಮನಸ್ಸಿನ ಕಾರ್ಯಗಳ ಬಗ್ಗೆ ಹೆಚ್ಚು ಆಸ್ಥೆಯನ್ನು ತಾಳಿ, ತಾನು ನಿಜವಾಗಿಯೂ ಆ ವಸ್ತುವನ್ನು ನೋಡುತ್ತಿದ್ದೇನೆಯೇ ಅಥವಾ ಕನಸು ಕಾಣುತ್ತಿದ್ದೇನೆಯೇ? ಎಂಬಂಥ ಪ್ರಶ್ನೆಗಳನ್ನು ತನಗೆ ತಾನೇ ಹಾಕಿಕೊಳ್ಳುತ್ತಾನೆ.

೩. ವೈಜ್ಞಾನಿಕ ಅವಸ್ಥೆ: ಇಲ್ಲಿ ಯೋಜ್ಯನು ನಿರೀಕ್ಷಣೆಯನ್ನು ಸಂಪೂರ್ಣ ವೈಜ್ಞಾನಿಕ ಕ್ರಮವನ್ನಾಗಿ ಬಳಸಿಕೊಳ್ಳುತ್ತಾನೆ; ತನ್ನ ಮನಸ್ಸನ್ನು ನಿರೀಕ್ಷಿಸುವುದರ ಮೂಲಕ ಅದರ ಸಾಮಾನ್ಯ ನಿಯಮಗಳನ್ನು ನಿರ್ಣಯಿಸುತ್ತಾನೆ. “ನಾನು ಏಕಕಾಲದಲ್ಲಿ ಎರಡು ವಸ್ತುಗಳ ಬಗ್ಗೆ ಉನ್ಮುಖನಾಗಬಲ್ಲೆನೆ?” ಎಂಬಂಥ ಪ್ರಶ್ನೆಗಳನ್ನು ಅವನು ಇಲ್ಲಿ ತನಗೆ ತಾನೇ ಹಾಕಿಕೊಳ್ಳುತ್ತಾನೆ.

ಅಂತರ್ನಿರೀಕ್ಷಣೆಯಲ್ಲಿರುವ ದೋಷಗಳು: ಮನಃಶಾಸ್ತ್ರದ ಬೆಳವಣಿಗೆಯ ಪ್ರಥಮಾವಸ್ಥೆಯಲ್ಲಿ ಅಂತರ್ನಿರೀಕ್ಷಣೆ ಮನಸ್ಸಿನ ಬಗ್ಗೆ ತಿಳಿವಳಿಕೆ ಕೊಡುವ ಅತಿ ಮುಖ್ಯವಾದ ಸಾಧನವಾಗಿತ್ತು. ಆದರೆ ಕ್ರಮೇಣ ಅನುಭವದಿಂದ ಅಲ್ಲಿರುವ ದೋಷಗಳು ವ್ಯಕ್ತವಾಗುತ್ತ ಬಂದವು. ಮನುಷ್ಯಸ್ವಭಾವದ ಕುತೂಹಲಜನಕವಾದ ಅನೇಕ ಮುಖ್ಯ ಅನುಭವಗಳನ್ನು ನಮಗೆ ಬೇಕಾದಾಗ ಬರಿಸಿಕೊಂಡು ವಿರಾಮವಾಗಿ ಅವನ್ನು ಅಭ್ಯಾಸ ಮಾಡಲು ಸಾಧ್ಯವಾಗಲಾರದು. ಏಕೆಂದರೆ, ಅಂಥ ಒಂದು ಅನುಭವವನ್ನು ಪಡೆಯುತ್ತಿರುವಾಗ ಅದು ನಮ್ಮನ್ನು ತನ್ಮಯಗೊಳಿಸುವುದರಿಂದ ನಮಗೆ ಅಂತರ್ನಿರೀಕ್ಷಣೆಯ ಅವಕಾಶವೇ ಇರುವುದಿಲ್ಲ. ಉದಾಹರಣೆಗಾಗಿ, ನಾವು ನಮ್ಮ ಸ್ನೇಹಿತನ ಅಥವಾ ಸಂಬಂಧಿಕನ ಸಾವಿನ ಸನ್ನಿವೇಶದ ಭಾವನೆಯನ್ನು ಈಗ ಬರಿಸಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ, ಆ ಪ್ರೇರಣೆಯು ಈಗ ಇಲ್ಲ. ಆ ಸನ್ನಿವೇಶವು ವಾಸ್ತವಿಕವಾಗಿ ಒದಗಿದ್ದಾಗ, ನಾವು ದುಃಖದ ಆವೇಗದಲ್ಲಿ ತಲ್ಲೀನರಾಗಿದ್ದುದರಿಂದ ಇನ್ನಾವುದನ್ನೂ ವಿಚಾರ ಮಾಡಲಿಕ್ಕೆ ಆಗಲಿಲ್ಲ.

ಅಂತರ್ನಿರೀಕ್ಷಣೆಯ ಅಭ್ಯಾಸವು ಸ್ವಲ್ಪಮಟ್ಟಿಗೆ ಅಸ್ವಾಭಾವಿಕವಾದುದರಿಂದ ಅದನ್ನು ಸುಲಭವಾಗಿ ಕಲಿಯುವುದಕ್ಕಾಗುವುದಿಲ್ಲ. ನುರಿತ ಅಂತರ್ನಿರೀಕ್ಷಕನಾಗಬೇಕಾದರೆ ಸಾಕಷ್ಟು ತಾಳ್ಮೆ ಮತ್ತು ಅಭ್ಯಾಸ ಬೇಕಾಗುತ್ತದೆ. ಮನುಷ್ಯನ ಮನಸ್ಸಿನ ಸ್ವಾಭಾವಿಕ ಪ್ರವೃತ್ತಿಯು ಒಂದು ಕೆಲಸದಿಂದ ಮತ್ತೊಂದಕ್ಕೆ ಮುಂದುವರಿಯುವುದೇ ಹೊರತು ಹಿಂದಕ್ಕೆ ತಿರುಗುವುದಲ್ಲ. ಆದುದರಿಂ

ಅಂತರ್ನಿರೀಕ್ಷಕನು ಉದ್ದೇಶಪೂರ್ವಕವಾಗಿ ತನ್ನ ಮನಸ್ಸಿನ ಗತವಸ್ತುಗಳನ್ನು ಪುನಃ ಪ್ರತ್ಯಕ್ಷ ಮಾಡಿಕೊಳ್ಳುವುದನ್ನು ಕಲಿಯಬೇಕು. ಇದು ಬಹಳ ಕಠಿನ. ಆದುದರಿಂದ ಅಂತರ್ನಿರೀಕ್ಷಣೆ ಬಹಳ ಜನರಿಗೆ ಅಸಾಧ್ಯವಾಗಿದೆ.

ಆಗಲೇ ಹೇಳಿರುವಂತೆ ಉನ್ಮುಖತೆಯು ಅಂತರ್ನಿರೀಕ್ಷಣೆಯಲ್ಲಿ ವಿಭಾಗವಾಗುತ್ತದೆ. ಅದರಿಂದ ಉನ್ಮುಖತೆಯ ಓಲಾಟ ಪ್ರಾರಂಭವಾಗುತ್ತದೆ. ಈ ಓಲಾಟ ಬಹಳ ಜನರಿಗೆ ಅಸಹನೀಯವಾಗುತ್ತದೆ; ಆ ಮೂಲಕ ತಪ್ಪು ಹೆಚ್ಚುತ್ತದೆ. ಆದರೆ ಅಭ್ಯಾಸಬಲದಿಂದ ಅಂಥ ತಪ್ಪುಗಳನ್ನು ಕಡಿಮೆ ಮಾಡಿಕೊಳ್ಳುತ್ತ ಹೋಗಬಹುದು. ಅಂತರ್ನಿರೀಕ್ಷಣೆಯ ಅನುಭವಗಳ ವಿನಿಮಯದಲ್ಲಿ ಭಾಷೆಗೆ ಸಂಬಂಧಿಸಿದ ತೊಂದರೆಗಳು ಉದ್ಭವಿಸುತ್ತವೆ. ಅತಿ ಸೂಕ್ಷ್ಮ ಮತ್ತು ಕ್ಷಣಿಕವಾದ ಭಾವನೆ ಮತ್ತು ಭಾವನಾಂಶಗಳು ನಿಷ್ಕೃಷ್ಟಾರ್ಥವುಳ್ಳ ಪದಗಳಿಗೆ ಎಟಕುವುದಿಲ್ಲ. ಎಷ್ಟೋ ವೇಳೆ ಒಂದೇ ಪದವನ್ನು ಇಬ್ಬರು, ಭಿನ್ನಭಾವ–ನಾಂಶಗಳನ್ನು ಹೇಳಲು ಬಳಸಬಹುದು. ಇದರಿಂದಲೂ ಅಂತರ್ನಿರೀಕ್ಷಣೆಯನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವ ಸಂಭವವಿದೆ. ನಮ್ಮ ಸಂವೇದನೆಗಳನ್ನು ಮತ್ತು ಇತರ ಅಭಿಜ್ಞಾ ಪ್ರಕ್ರಿಯೆಗಳನ್ನು ಬಹಳ ಸುಲಭವಾಗಿ ಅಂತರ್ ನಿರೀಕ್ಷಣೆಗೆ ಒಳಪಡಿಸಬಹುದು. ಆದರೆ ನಮ್ಮ ಭಾವನೆಗಳನ್ನು ಮತ್ತು ಪ್ರಚೋದನೆಗಳನ್ನು ಹಾಗೆ ನಿರೀಕ್ಷಿಸುವುದು ಸುಲಭವಲ್ಲ. ನಾವು ಒಂದು ಬಲಿಷ್ಠ ಭಾವನೆಯ ಅಂಕೆಗೆ ಒಳಗಾದಾಗ (ಉದಾ : ಕ್ರೋಧ ಅಥವಾ ಭಯದಲ್ಲಿ ಇದ್ದಾಗ) ನಮಗೆ ನಮ್ಮ ಅನುಭವವನ್ನು ಪರಿಶೀಲಿಸಿ ವರದಿ ಮಾಡಲು ಸಾಧ್ಯವಾಗದು. ಅಷ್ಟೇ ಏಕೆ, ಸೌಮ್ಯ ಭಾವನೆಗಳನ್ನು ನಾವು ಅನುಭವಿಸುತ್ತ ಇರುವಾಗ ಕೂಡ ಅವನ್ನು ಚೆನ್ನಾಗಿ ನಿರೀಕ್ಷಿಸಲು ಶಕ್ಯವಾಗದು. ಏಕೆಂದರೆ, ಒಂದು ಭಾವನೆಯನ್ನು ಪರೀಕ್ಷಿಸಿ ನೋಡಲು ತೊಡಗುವ ಕಾರ್ಯವೇ ಆ ಭಾವನೆಯನ್ನು ಬದಲಾಯಿಸುತ್ತದೆ. ಹೀಗೆ ಭಾವನೆಯ ಅಂತರ್ನಿರೀಕ್ಷಣೆ ಎಂದು ಹೇಳಲಾಗುವ ಕ್ರಮವು ವಸ್ತುತಃ ಪ್ರಾಜ್ನಿರೀಕ್ಷಣೆ. ಇನ್ನು ನಮ್ಮ ಪ್ರಚೋದನೆಗಳನ್ನು ಎತ್ತಿಕೊಂಡರೆ, ಅವನ್ನು ನಿಷ್ಪಕ್ಷಪಾತವಾಗಿ ಪರೀಕ್ಷಿಸುವುದಂತೂ ಮತ್ತಷ್ಟು ಕಷ್ಟ. ಏಕೆಂದರೆ, ಕೆಲವು ಪ್ರಚೋದನೆಗಳು ಅವಪ್ರಜ್ಞೆಯಿಂದ ಬಂದಿರುತ್ತವೆ; ಅವುಗಳ ಪರೀಕ್ಷೆ ಸಂಪೂರ್ಣವಾಗಿ ಅಸಾಧ್ಯ. ಅದೂ ಅಲ್ಲದೆ ಅಭಿಜ್ಞೆಯಲ್ಲಿ ಸಹ ಅಂತರ್ನಿರೀಕ್ಷಣೆಯಿಂದ ಲಭಿಸುವ ಮೂಲ

ಜ್ಞಾನವು ಅಷ್ಟೇನೂ ಸರಿ ಎಂದು ಹೇಳಲು ಬರುವುದಿಲ್ಲ. ಸೂಜಿ ಚುಚ್ಚಿದ್ದರಿಂದಾದ ನೋವಿಗಿಂತ ಸುಟ್ಟಗಾಯದ ಉರಿ ಹೆಚ್ಚೆಂದು ನೀವು ಹೇಳಬಹುದು; ಅಥವಾ ಗುಲಾಬಿಯ ದೃಶ್ಯಪ್ರತಿಮೆಯು ನಮಗೆ ತಿಳಿಯುವ ಅದರ ವಾಸನಾ ಪ್ರತಿಮೆಗಿಂತ ಸ್ಪಷ್ಟತರ ಎಂದು ಹೇಳಲು ಸಾಧ್ಯವಾಗಬಹುದು: ಆದರೆ ಈ ಸಂವೇದನೆಗಳ ಅಥವಾ ಪ್ರತಿಮೆಗಳ ತೀವ್ರತೆಯನ್ನು ಅಂಕೆಸಂಖ್ಯೆಗಳ ಮೂಲಕ ಹೇಳಲು ಬರದು; ಅಥವಾ ಒಂದು ಮತ್ತೊಂದಕ್ಕಿಂತ ಇಂತಿಷ್ಟು ಸಲ ಹೆಚ್ಚು ಪ್ರಖರ ಎಂದು ತಿಳಿಸಲು ಸಾಧ್ಯವಿಲ್ಲ. ಕೊನೆಯದಾಗಿ ಅಂತರ್ನಿರೀಕ್ಷಣೆಯಿಂದ ಲಭ್ಯವಾಗುವ ಮೂಲಜ್ಞಾನವು ನಿರೀಕ್ಷಕನಿಗೆ ಖಾಸಗಿಯದಾದುದರಿಂದ ಅದು ಅಗ್ರಾಹ್ಯ ಎಂಬುದು ಅಂತರ್ನಿರೀಕ್ಷಣೆಯ ಮೇಲೆ ಎತ್ತಿದ ಅತ್ಯಂತ ದೊಡ್ಡ ಆಕ್ಷೇಪ. ಒಂದು ಸಂವೇದನೆ ಅಥವಾ ಪ್ರತಿಮೆಯನ್ನು ಸರಿಯಾಗಿ ಅಳೆಯಲಾರೆವೆಂಬುದಷ್ಟೇ ಅಲ್ಲದೆ, ನಮಗೆ ನಮ್ಮವನ್ನು ಬಿಟ್ಟು ಇನ್ನೊಬ್ಬರ ಸಂವೇದನೆ–ಪ್ರತಿಮೆಗಳನ್ನು ಎಂದಿಗೂ ಅಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಜೆ. ಬಿ. ವಾಟ್ಸನ್ನನೇ ಮೊದಲಾದ ವರ್ತನಾವಾದಿಗಳು ಮನಃಶಾಸ್ತ್ರದಲ್ಲಿ ಅಂತರ್ನಿರೀಕ್ಷಣೆಯನ್ನು ಬಳಸಲೇಬಾರದೆನ್ನುತ್ತಾರೆ. ಅವರಪ್ರಕಾರ ಒಂದು ಶಾಸ್ತ್ರದ ಮುಖ್ಯ ಕೆಲಸವೆಂದರೆ ಸಂಗತಿಗಳನ್ನು ತೂಗಿ, ಅಳೆದು ನೋಡುವುದು; ಸ್ವತಃಪ್ರಾಮಾಣ್ಯ ಮಾತ್ರ ಉಳ್ಳ ಅಂತರ್ನಿರೀಕ್ಷಣೆಯ ಜ್ಞಾನವು ವಿಜ್ಞಾನರೂಪದ ಮನಃಶಾಸ್ತ್ರದಲ್ಲಿ ಪ್ರಮಾಣವೆನಿಸದು. ಅಂತರ್ನಿರೀಕ್ಷಣೆಯಲ್ಲಿ ಯುಕ್ತನಾದ ಮನುಷ್ಯನು ತಿಳಿದೋ ತಿಳಿಯದೆಯೋ ತಪ್ಪು ವರದಿ ಮಾಡುವ ಸಂಭವವುಂಟು. ಅದರಲ್ಲಿ ವಿಜ್ಞಾನಿಯು ಅವನು ಹೇಳಿದ್ದನ್ನು ಕೇಳಬೇಕಲ್ಲದೆ ಮತ್ತೇನನ್ನೂ ಮಾಡಲಾರ; ವಿಜ್ಞಾನಿ ಇದಕ್ಕೆ ಒಪ್ಪನು.

ಅಂತರ್ನಿರೀಕ್ಷಣೆಯ ಗುಣಗಳು: ಬಹಿರ್ನಿರೀಕ್ಷಣೆ ಸರ್ವಶಾಸ್ತ್ರಗಳಿಗೂ ಸಾಧಾರಣ. ಆದರೆ ಮನಃಶಾಸ್ತ್ರವು ಅದರ ಜೊತೆಗೆ ಅಂತರ್ನಿರೀಕ್ಷಣೆಯನ್ನು ಹೆಚ್ಚಾಗಿ ಬಳಸುವುದು ವಿಶೇಷ. ಅಂತರ್ನಿರೀಕ್ಷಣೆಯು ನಮ್ಮ ಮನಸ್ಸಿ ಕಾರ್ಯಗಳ ಪರಿಚಯವನ್ನು ಸ್ವಲ್ಪವೂ ಮಾಡಿಕೊಡುವುದಿಲ್ಲ ಎಂಬುದು ಸುಳ್ಳು ಸಾಕಷ್ಟು ಎಚ್ಚರಿಕೆ ತೆಗೆದುಕೊಂಡು ಅಂತರ್ನಿರೀಕ್ಷಣೆಯಿಂದ ದೊರಕು ಸಂಗತಿಗಳನ್ನು ಬಳಸಿಕೊಂಡರೆ ತಪ್ಪೇನಿದೆ? ಸಾಧ್ಯವಾದಷ್ಟುಮಟ್ಟಿ ಅಂತರ್ನಿರೀಕ್ಷಣೆಯಿಂದ ಲಭಿಸುವ ಜ್ಞಾನವು ಬಹಿರ್ನಿರೀಕ್ಷಣೆಯಿಂದ ಸಿದ್ಧವಾ

ಬೇಕು. ನಾವು ಅದರಿಂದ ಬಹಳ ಸಹಾಯವನ್ನು ಅಪೇಕ್ಷಿಸಬಾರದು; ಅಲ್ಲದೆ ಅಂಥ ಜ್ಞಾನವನ್ನು ನಾವು ಅಂತರ್ನಿರೀಕ್ಷಣೆಯ ತಂತ್ರದಲ್ಲಿ ತಕ್ಕಮಟ್ಟಿಗೆ ಪಳಗಿದವರಿಂದಲೇ ಸ್ವೀಕರಿಸಬೇಕು.

ಮನಃಶಾಸ್ತ್ರದಂತೆಯೇ ಔಷಧಶಾಸ್ತ್ರವಾದರೂ ಅಂತರ್ನಿರೀಕ್ಷಣೆಯಿಂದ ಲಬ್ಧವಾದ ಮೂಲ ಜ್ಞಾನವನ್ನು ಅನೇಕ ವೇಳೆ ಬಳಸಿಕೊಳ್ಳುತ್ತದೆ. ಈ ಅನುಕೂಲ ಪಶುವೈದ್ಯನಿಗೆ ಇಲ್ಲ. ಅವನು ತನ್ನ ರೋಗಿಯನ್ನು ಕುರಿತು "ನಿನಗೆ ಎಲ್ಲಿ ನೋಯುತ್ತದೆ ಅಥವಾ ನಿನಗೆ ಕಾಹಿಲೆ ಆಗಿದೆಯೇ"? ಎಂದು ಪ್ರಶ್ನಿಸಿ ಉತ್ತರ ಪಡೆಯಲಾರ. ಆದರೆ ಅಂಥ ನೋವು ಎಷ್ಟರಮಟ್ಟಿಗೆ ಇದೆ ಎಂಬುದನ್ನು ರೋಗಿಯು ಲೆಕ್ಕಾಚಾರದಂತೆ ಹೇಳಲಾರನಾದರೂ ಅವನಿಗೆ ಹೇಳಲಿಕ್ಕೆ ಶಕ್ಯವಾದಷ್ಟನ್ನಾದರೂ ಕೇಳಿ ಪ್ರಯೋಜನ ಪಡೆಯುವ ಅನುಕೂಲ ವೈದ್ಯನಿಗಿದೆ. ವೈದ್ಯನೇನೋ ರೋಗಿ ಹೇಳುವ ರೋಗಚಿಹ್ನಗಳ ಮೇಲೆಯೇ ಅವಲಂಬಿಸುವುದಿಲ್ಲ; ಆದರೆ ಬಹಿರ್ನಿರೀಕ್ಷಣೆಯ ತಂತ್ರಗಳಿಂದ ಲಬ್ಧವಾದ ಜ್ಞಾನಕ್ಕೆ ಪೂರಕವಾಗಿ ಅವನು ವಿವೇಕದಿಂದ ಅದನ್ನು ಬಳಸಿಕೊಳ್ಳಬಹುದು. ಅಂತರ್ನಿರೀಕ್ಷಣೆಯ ಮಹತ್ತರವಾದ ಉಪಯೋಗವು ಕಂಡುಬರುವುದು ಪ್ರತಿ-ಕ್ರಿಯಾಕಾಲವನ್ನು ಅಳೆಯುವ ಪ್ರಯೋಗದಲ್ಲಿ. ಈ ಪ್ರಯೋಗದಲ್ಲಿ ಸದ್ದು ಮಾಡಿದಾಗ ಅಥವಾ ಬೆಳಕು ತೋರಿಸಿದಾಗ ಕೀಲಿಯೊತ್ತುವಂಥ ಅನುಕ್ರಿಯೆಯನ್ನು ತೋರಿಸಲು ಯೋಜ್ಯನಿಗೆ ಹೇಳಲಾಗುವುದು. ಸಂಜ್ಞೆಮಾಡಿದ ಕೂಡಲೇ ವಿದ್ಯುತ್ತಿನ ಒಂದು ಆವರ್ತ ಮುಗಿಯುವುದು ಮತ್ತು ಆ ಆವರ್ತವು ನಡುವೆ ಯೋಜ್ಯನ ಪ್ರತಿಕ್ರಿಯೆಯಿಂದ ಭಂಗವಾಗುತ್ತದೆ. ಆಗ ಸೆಕುಂದಿನ ಸಹಸ್ರತಮಾಂಶದ ಮಾನದಲ್ಲಿ ಆವರ್ತದ ನಡುವಿಟ್ಟ ಕಾಲಮಾಪಕಯಂತ್ರವು ಪ್ರೇರಣೆ ಹಾಗೂ ಅನುಕ್ರಿಯೆಗಳ ನಡುವೆ ಕಳೆದ ವೇಳೆಯನ್ನು ಅಳೆದು ತೋರಿಸುತ್ತದೆ.

ನಾವು ಈ ಪ್ರಯೋಗದ ಕೆಲಸವು ವರ್ತನೆಯನ್ನು ಅಳೆಯುವುದಷ್ಟೇ ಎಂದೂ ಅಂತರ್ನಿರೀಕ್ಷಣೆಯಿಂದ ಲಭಿಸುವ ಮೂಲಜ್ಞಾನವು ಅನವಶ್ಯಕವೆಂದೂ ಭಾವಿಸಬಹುದು. ಆದರೆ ಹೀಗೆ ತಿಳಿಯುವುದು ತಪ್ಪಾಗುತ್ತದೆ. ಏಕೆಂದರೆ, ಪ್ರತಿಯೊಬ್ಬ ಯೋಜ್ಯನ ಪ್ರತಿಕ್ರಿಯಾಕಾಲವೂ ಕೆಲ ನಿಶ್ಚಿತ ಪರಿಮಿತಿಗಳೊಳಗೆ ಬದಲಾಗುತ್ತದೆ; ಮತ್ತು ಈ ಬದಲಾವಣೆಯು ಹಿಂದಿನ ಮುಖ್ಯ ಕಾರಣಗಳಲ್ಲಿ

ಒಂದಾದ—ಯೋಜ್ಯನು ಸಂಜ್ಞೆಗಾಗಿ ಕಾದಿರುವಾಗ ಅದಕ್ಕೆ ಉನ್ಮುಖ ನಾಗುವ ದಿಶೆಯನ್ನು—ಹೊರಗೆಡಹುತ್ತದೆ. ಅವನು ಮಾಡಲಿರುವ ಅನು ಕ್ರಿಯೆಯ ಮೇಲೆಯೇ ಅವನು ಉನ್ಮುಖನಾಗಿದ್ದರೆ ಅವನ ಪ್ರತಿಕ್ರಿಯೆ ಸಾಮಾನ್ಯವಾಗಿ ಬೇಗನೆ ಉಂಟಾಗುತ್ತದೆ; ಹಾಗಲ್ಲದೆ ಅವನು ಪ್ರೇರಣೆಗೇ ಉನ್ಮುಖನಾಗಿದ್ದರೆ ಅವನ ಪ್ರತಿಕ್ರಿಯೆ ತಡವಾಗಿ ಉಂಟಾಗುತ್ತದೆ.

ಈ ವಿಷಯವನ್ನು ವಿಸ್ತರಿಸಿ ಹೇಳುವುದು ಅನವಶ್ಯಕ. ಏಕೆಂದರೆ, ಅಂತರ್ ನಿರೀಕ್ಷಾವಾದಿಗಳಿಗೂ ವರ್ತನಾವಾದಿಗಳಿಗೂ ಇದ್ದ ವಿರೋಧವು ಇಂದು ಅಡಗಿ ಹೋಗಿದೆ. ಶುದ್ಧ ಅಂತರ್ನಿರೀಕ್ಷಣಾ ದೃಷ್ಟಿಯನ್ನು ಇಂದು ಬಿಟ್ಟುಕೊಡಲಾಗಿದೆ. ಹಾಗೆಯೇ ಅತಿವರ್ತನಾವಾದವನ್ನು ಇಂದು ಬಹಳ ಜನ ಅನುಸರಿಸುವುದಿಲ್ಲ. ಅಂತರ್ನಿರೀಕ್ಷಣೆ ಮತ್ತು ವರ್ತನಾಭ್ಯಾಸಗಳೆರಡರಲ್ಲೂ ಅದರದರ ಗುಣಗಳೂ ಇವೆ, ದೋಷಗಳೂ ಇವೆ. ಆದುದರಿಂದ ವೈಜ್ಞಾನಿಕವಾದ ಮನಃಶಾಸ್ತ್ರವು ಸಂದರ್ಭದ ಔಚಿತ್ಯವನ್ನು ಅರಿತು ಒಂದರ ದೋಷವನ್ನು ಇನ್ನೊಂದು ಪರಿ ಹರಿಸುವಂತೆ ಎರಡನ್ನೂ ಬಳಸಿಕೊಳ್ಳುತ್ತದೆ.

ಬಹಿರ್ನಿರೀಕ್ಷಣೆ : ಅಂತರ್ನಿರೀಕ್ಷಣೆಯ ಮೇಲೆ ಎದ್ದ ದಾಳಿಯ ಫಲ ವಾಗಿ ಮನಃಶಾಸ್ತ್ರದ ಇನ್ನೊಂದು ಕ್ರಮವೆನಿಸಿದ ಬಹಿರ್ನಿರೀಕ್ಷಣೆಯ ಪ್ರಾಧಾನ್ಯ ಹೆಚ್ಚಾಯಿತು. ಬಹಿರ್ನಿರೀಕ್ಷಣೆಯಲ್ಲಿ ನಮ್ಮ ಉನ್ಮುಖತೆಯು ಯೋಜ್ಯನ ಪ್ರಜ್ಞಾವಸ್ಥೆಗಳ ಮೇಲೆ ಕೇಂದ್ರೀಕೃತವಾಗದೆ ಅವನ ಸನ್ನೆ, ವರ್ತನೆ, ಸಾಮಾಜಿಕ ಹೊಂದಿಕೆ ಮತ್ತು ಶಾರೀರಿಕ ಬದಲಾವಣೆಗಳ ಮೇಲೆಯೇ ಕೇಂದ್ರೀಕೃತವಾಗುತ್ತದೆ. ನಾವು ಬೇರೆ ಬೇರೆ ಸನ್ನಿವೇಶಗಳಲ್ಲಿ ಸಿಕ್ಕಿದ ಬೇರೆ ಬೇರೆ ಮನುಷ್ಯರ ವರ್ತನೆಯನ್ನು ನಿರೀಕ್ಷಿಸಬಹುದು. ಇಲ್ಲವೇ ಬೇರೆ ಬೇರೆ ಯವರನ್ನು ಒಂದೇ ತರದ ಸನ್ನಿವೇಶದಲ್ಲಿ ತಂದೊಡ್ಡಿ ಅವರಲ್ಲಿ ಪ್ರತಿ ಯೊಬ್ಬನೂ ಹೇಗೆ ಬೇರೆ ಬೇರೆ ರೀತಿಯ ಪ್ರತಿಕ್ರಿಯೆಯನ್ನು ತೋರಿಸುತ್ತಾನೆ ಎಂಬುದನ್ನು ನೋಡಬಹುದು. ಅಂತರ್ನಿರೀಕ್ಷಣೆಯಲ್ಲಿ ಯೋಜ್ಯನ ಅಂತಃ ಕರಣಕ್ಕೆ ಪ್ರಾಧಾನ್ಯವಿದ್ದರೆ ಬಹಿರ್ನಿರೀಕ್ಷಣೆಯಲ್ಲಿ ಆ ಪ್ರಾಧಾನ್ಯವು ಯೋಜ್ಯನಿಗೆ ಬಂದಿದೆ. ಅಂದರೆ ಮೊದಲಿನದರಲ್ಲಿ ಒಬ್ಬನು ತನ್ನನ್ನು ತಾನೇ ನೋಡಿಕೊಳ್ಳುವುದಕ್ಕೆ ಬೆಲೆ; ಎರಡನೆಯದರಲ್ಲಿ ಅವನನ್ನು ನಾವು ನಿರೀಕ್ಷಿಸು ವುದಕ್ಕೇ ಬೆಲೆ. ಮೊದಲನೆಯದರಲ್ಲಿ ನಿರೀಕ್ಷ್ಯ-ನಿರೀಕ್ಷಕ ಧರ್ಮಗಳು ಒಬ್ಬನಲ್ಲೇ

ಇದ್ದರೆ, ಎರಡನೆಯದರಲ್ಲಿ ಆ ಇಬ್ಬಗೆಯ ಧರ್ಮಗಳೂ ಬೇರೆಬೇರೆ ವ್ಯಕ್ತಿಗಳಲ್ಲಿ ಇರುತ್ತವೆ. ಇತರ ಅನೇಕ ವಿಜ್ಞಾನಗಳಲ್ಲಿ ಈ ಒಂದೇ ಕ್ರಮವನ್ನು ಬಳಸುತ್ತಿರುವುದರಿಂದ ಮನಃಶಾಸ್ತ್ರವನ್ನು ವಿಜ್ಞಾನವನ್ನಾಗಿ ಮಾಡಲು ನಡೆದ ಚಳವಳಿಯೊಡನೆ ಈ ಬಹಿರ್ನಿರೀಕ್ಷಣೆಯ ಅಭ್ಯಾಸದ ಪ್ರಗತಿ ಕೂಡಿಕೊಂಡಿತು.

ಪ್ರಾಣಿಗಳ ಮತ್ತು ಮಕ್ಕಳ ಮನಃಶಾಸ್ತ್ರದಲ್ಲಿ ಬಹಳಮಟ್ಟಿಗೆ ಯಶಸ್ವಿಯಾಗಿ ಬಹಿರ್ನಿರೀಕ್ಷಣಾಕ್ರಮವನ್ನು ಬಳಸಲಾಗಿದೆ. ಪ್ರಾಣಿಮನಃಶಾಸ್ತ್ರದಲ್ಲಂತೂ ಪ್ರಾಣಿಗಳಿಗೆ ಮಾತನಾಡಲು ಬರದೆ ಇರುವುದರಿಂದ ಅಂತರ್ನಿರೀಕ್ಷಣೆ ಅಲ್ಲಿ ಸಾಧ್ಯವೇ ಇಲ್ಲ. ಮಕ್ಕಳೇನೋ ಕೆಲಮಟ್ಟದ ಅಂತರ್ನಿರೀಕ್ಷಣೆಯನ್ನು ಮಾಡಬಲ್ಲವೆಂಬುದು ನಿಜ. ಆದರೆ ಅದು ಸುಸಂಬದ್ಧವೂ ಅಲ್ಲ, ಅವಲಂಬನೀಯವೂ ಅಲ್ಲ. ಇಂಥ ಸಂದರ್ಭಗಳಲ್ಲಿ ಮನಃಶಾಸ್ತ್ರಜ್ಞನಿಗೆ ಯೋಜ್ಯರ ವರ್ತನೆಯ ಸರಿಯಾದ, ಸೂಕ್ಷ್ಮವಾದ ನಿರೀಕ್ಷಣೆಯನ್ನು ಹಿಡಿಯದೆ ಗತ್ಯಂತರವಿಲ್ಲ. ಮಕ್ಕಳನ್ನು ಒಂದು ವಿಶಿಷ್ಟ ರೀತಿಯ ವಿಶಾಲವಾದ ಗಾಜಿನ ಪೆಟ್ಟಿಗೆಯಲ್ಲಿ ಇರಿಸಿದಾಗ ಅವರು ನಮಗೆ ಕಾಣುತ್ತಾರೆ; ಆದರೆ ಅವರಿಗೆ ನಾವು ಕಾಣಿಸುವುದಿಲ್ಲ. ಇಂಥ ವ್ಯವಸ್ಥೆ ಮಾಡಿ ಮನಃಶಾಸ್ತ್ರಜ್ಞರು ಕ್ಲಪ್ತಾವಧಿಗಳಲ್ಲಿ ಮಕ್ಕಳ ಚಟುವಟಿಕೆಗಳ ವಿವರಗಳನ್ನು ನಿರೀಕ್ಷಿಸಿ ದಾಖಲೆ ಮಾಡಿದ್ದಾರೆ. ಇಲಿ–ಬೆಕ್ಕುಗಳಂಥ ಪ್ರಾಣಿಗಳನ್ನು ಗಲಿಬಿಲಿ ಪೆಟ್ಟಿಗೆ ಮತ್ತು ಒಗಟಿನ ಪೆಟ್ಟಿಗೆಗಳಲ್ಲಿ(Mazes and Puzzle-boxes) ಇಟ್ಟು ಅವುಗಳ ವರ್ತನೆಯನ್ನು ಸರಿಯಾಗಿ ಎಚ್ಚರಿಕೆಯಿಂದ ಅಭ್ಯಾಸ ಮಾಡಲಾಗಿದೆ. ಮಕ್ಕಳಿಗೆ ಹಾಗೂ ಪ್ರಾಣಿಗಳಿಗೆ ಅನ್ವಯಿಸಲಾದ ಅಂಥ ಬಹಿರ್ನಿರೀಕ್ಷಣಕ್ರಮಗಳಿಂದ ಮನಃಶಾಸ್ತ್ರಕ್ಕೆ ಅತ್ಯಂತ ಮುಖ್ಯವೆನಿಸುವ ಅನೇಕ ಶೋಧಗಳನ್ನು ಮಾಡಲಾಗಿದೆ. ಅಂಥ ಶೋಧಗಳಲ್ಲಿ ಪಾವಲಫ್ ಕಂಡುಹಿಡಿದ ಉಪಾಹಿತಕ್ಷೇಪಕ್ರಿಯೆ ಮತ್ತು ಥಾರನ್‌ಡೈಕ್ ಕಂಡುಹಿಡಿದ “ಮರಳಿ ಯತ್ನವ ಮಾಡಿ” ಕಲಿಯುವ ಬಗೆಗಳು ಮುಖ್ಯವೆನಿಸಿವೆ.

ಬಹಿರ್ನಿರೀಕ್ಷಣೆಯ ಕ್ಷೇತ್ರದಲ್ಲಿ ಇನ್ನೊಂದು ಲಾಭಕರವಾದ ಅಭ್ಯಾಸಾವಕಾಶವಿದೆ. ನಾವು ಹೆದರಿಕೆ, ಸಿಟ್ಟು ಮತ್ತು ಕಡುಕೋಪಗಳ ಅವಸ್ಥೆಗಳಲ್ಲಿ ಇದ್ದಾಗ ನಮ್ಮ ಶರೀರದಲ್ಲಿ ಉಂಟಾಗುವ ಬದಲಾವಣೆಗಳ ಬಹಿರ್ನಿರೀಕ್ಷಣೆ ಅತ್ಯಂತ ಉಪಯುಕ್ತವಾದುದು. ಇಂಥ ಘಟನೆಗಳ ವಿಸ್ತಾರವಾದ ಅಭ್ಯಾಸ

ವನ್ನು ಡಬ್ಲ್ಯು. ಬಿ. ಕ್ಯಾನನ್ ಮಾಡಿದ್ದಾನೆ. ಅದರಿಂದ ಈಗ ತೀವ್ರವಾದ ಭಾವನೋದ್ರೇಕದ ಅವಸ್ಥೆಗಳು ನಮ್ಮ ಜೀರ್ಣದ, ರಕ್ತಚಲನೆಯ ಮತ್ತು ಶ್ವಾಸೋಚ್ಛ್ವಾಸದ ಕೋಶಗಳಮೇಲೆ ಪರಿಣಾಮವಾಗುತ್ತದೆ ಎಂಬುದು ತಿಳಿದುಬಂದಿದೆ. ಈ ಅವಸ್ಥೆಗಳಲ್ಲಿ ನಮ್ಮ ಶರೀರದಲ್ಲಿ ಇರುವ ನಿರ್ನಾಳ ಗ್ರಂಥಿಗಳು ಚುರುಕಾಗಿ ರಸೋತ್ಪಾದನೆಗೆ ಆರಂಭಿಸುತ್ತವೆ. ಸೂಕ್ಷ್ಮ ಯಂತ್ರೋಪಕರಣಗಳ ಸಹಾಯದಿಂದ ಇಂಥ ಕೆಲ ಬದಲಾವಣೆಗಳನ್ನು ಸರಿಯಾಗಿ ಅಳೆಯಲು ಶಕ್ಯವಾಗಿದೆ.

ಅಂಥ ಯಂತ್ರೋಪಕರಣಗಳಲ್ಲಿ ಸೈಕೋಗ್ಯಾಲ್ವನೋಮೀಟರ್ ಅಥವಾ ನಮ್ಮ ಚರ್ಮದ ಮೇಲೆ ಹರಿಯುವ ವಿದ್ಯುಚ್ಛಕ್ತಿಯ ವ್ಯತ್ಯಾಸಗಳನ್ನು ವರದಿ ಮಾಡುವ ಉಪಕರಣ ಒಂದು; ಶ್ವಾಸೋಚ್ಛ್ವಾಸದ ಬದಲಾವಣೆಗಳನ್ನು ಬೆರಳು, ಹಸ್ತ ಅಥವಾ ಇತರ ಶರೀರಾವಯವಗಳ ಗಾತ್ರವು ರಕ್ತದ ಪೂರೈಕೆಯಿಂದ ಬದಲಾಯಿಸುವುದನ್ನು ಅನುಕ್ರಮವಾಗಿ ವರದಿ ಮಾಡುವ ನ್ಯೂಮೋಗ್ರಾಫ್ ಮತ್ತು ಪ್ಲಿಥಿಸ್‌ಮೋಗ್ರಾಫ್ ಎಂಬ ಯಂತ್ರಗಳು ಮುಖ್ಯವಾಗಿವೆ.

ಪ್ರಯೋಗ: ಒಂದು ಪ್ರಯೋಗದ ಸಾರವಿರುವುದು ಒಂದು ಘಟನೆಯು ಸಂಭವಿಸುವ ಸನ್ನಿವೇಶವನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಅನಂತರ ಕ್ರಮಬದ್ಧವಾಗಿ ಸನ್ನಿವೇಶವನ್ನು ಬದಲಾಯಿಸುತ್ತ ಹೋಗಿ, ಫಲಿತಾಂಶಗಳನ್ನು ಸಂಗ್ರಹಿಸುವುದರಲ್ಲಿ. ಪ್ರಯೋಗದಲ್ಲಿ ಘಟನೆಗಳನ್ನು ಇದ್ದ ಹಾಗೆಯೇ ಗ್ರಹಿಸಿದರೆ ಸಾಲದು. ನಾವು ಅವುಗಳ ಒಳಗೆ ಕೈಹಾಕಿ ನಮಗೆ ಬೇಕಾದ ಹಾಗೆ ಅವನ್ನು ವ್ಯವಸ್ಥೆಗೊಳಿಸಿ, ಏನಾಗುತ್ತದೆ ಎಂಬುದನ್ನು ನೋಡುತ್ತೇವೆ. ಒಂದೆ ಮಾತಿನಲ್ಲಿ ಹೇಳುವುದಾದರೆ ಪ್ರಯೋಗವೆಂದರೆ ನಾವು ನಿಸರ್ಗವನ್ನು ಪ್ರಶ್ನಿಸುವುದು.

ನಾವು ಪರೀಕ್ಷೆಗೂ ಪ್ರಯೋಗಕ್ಕೂ ಇರುವ ವ್ಯತ್ಯಾಸವನ್ನು ಮನಗಾ[illegible] ಬೇಕು. ಪ್ರಯೋಗದಲ್ಲಿ ನಾವು ಕೆಲವೇ ಜನರನ್ನು ಪ್ರಯೋಗಶಾಲೆಗೆ [illegible] ಮಾಡಿಕೊಂಡು, ಅವರು ನಡೆದುಕೊಳ್ಳುವ ಸನ್ನಿವೇಶವನ್ನು ಉದ್ದೇಶಪೂರ್ವ[illegible] ವಾಗಿ ಬದಲಾಯಿಸುವೆವು. ಪರೀಕ್ಷೆಯಲ್ಲಾದರೋ ನಾವೇ ಸ್ವತಃ ಹೊ[illegible] ಜಗತ್ತಿನಲ್ಲಿ ಹೊಕ್ಕು ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಅನೇಕರನ್ನು [illegible] ಶೀಲಿಸುತ್ತೇವೆ. ವೈಜ್ಞಾನಿಕ ಮಾರ್ಗದ ಉತ್ತಮ ಕ್ರಮವೆನಿಸಿದ ಪ್ರಯೊ[illegible]

ಪದ್ಧತಿಯಿಂದ ಆಗುವ ಲಾಭಗಳು ಇಂತಿವೆ: (೧) ಸಂಗತಿಗಳು ನಿಮ್ಮೆಡೆಗೆ ಬರುತ್ತವೆ; (೨) ನಿಯಂತ್ರಣದಲ್ಲಿ ಇರುವುದರಿಂದ ಈ ಸಂಗತಿಗಳನ್ನು ಪರಾಮರ್ಶಿಸಲು ಬರುತ್ತದೆ; (೩) ಬರುವ ಫಲಿತಾಂಶಗಳು ನಿಷ್ಕೃಷ್ಟವಾಗಿರುತ್ತವೆ ಮತ್ತು ಪರಿಣಾಮತಃ ಲೆಕ್ಕಾಚಾರ ಮಾಡಲು ಬರುತ್ತದೆ.

೧೮೭೯ ರಲ್ಲಿ ವೂಂಟ್ ಮಹಾಶಯನು ಜರ್ಮನಿಯ ಲೀಪ್‌ಸಿಗ್ಗಿನಲ್ಲಿ ಮೊಟ್ಟಮೊದಲನೆಯದಾಗಿ ಮನಃಶಾಸ್ತ್ರೀಯ ಪ್ರಯೋಗಶಾಲೆಯನ್ನು ಸ್ಥಾಪಿಸಿದನು. ಅಂದಿನಿಂದ ಪ್ರಯೋಗದ ಪ್ರಾಮುಖ್ಯವು ಮನಃಶಾಸ್ತ್ರದ ಕ್ಷೇತ್ರದಲ್ಲಿ ಹೆಚ್ಚುತ್ತ ಬಂದಿದೆ.

ಆವಶ್ಯಕವಾದ ಯಂತ್ರಸಾಮಗ್ರಿಗಳಲ್ಲದೆ ಮನಃಶಾಸ್ತ್ರೀಯ ಪ್ರಯೋಗಕ್ಕೆ ಇಬ್ಬರು ಬೇಕು; ಯಾರ ಮೇಲೆ ಪ್ರಯೋಗವನ್ನು ಮಾಡಲಾಗುವುದೋ ಅಂಥ ಯೋಜ್ಯನೆಂಬ ವ್ಯಕ್ತಿ ಮತ್ತು ಸನ್ನಿವೇಶಗಳನ್ನು ಬದಲಾಯಿಸಿ ಯೋಜ್ಯನ ಮೇಲೆ ಆಗುವ ಪರಿಣಾಮವನ್ನು ಗ್ರಹಿಸುವ ಪ್ರಯೋಜಕ. ಒಬ್ಬ ಮನುಷ್ಯನ ಕಾರ್ಯಶಕ್ತಿಯನ್ನು ಕೆಡಿಸಲು ಮಾಡುವ ಗೊಂದಲದ ಪರಿಣಾಮಗಳನ್ನು ಅಭ್ಯಾಸ ಮಾಡುವ ಪ್ರಯತ್ನವು ಆಧುನಿಕ ಮನಃಶಾಸ್ತ್ರೀಯ ಪ್ರಯೋಗಕ್ಕೆ ಒಳ್ಳೆಯ ಉದಾಹರಣೆ. ಯೋಜ್ಯನನ್ನು ಹೊರಗಿನ ಶಬ್ದವನ್ನು ಹೊರಗೇ ಇಡಬಲ್ಲ ಶಬ್ದಾವರೋಧಶಾಲೆಯಲ್ಲಿ (Sound-proof Room) ಕುಳ್ಳಿರಿಸಲಾಗುವುದು. ಅನಂತರ ಬಾಗಿಲು ಬಡಿಯಲು ಅಥವಾ ಚೌಕಮನೆಯ ಕಾಗದದಲ್ಲಿ ಚುಕ್ಕೆಗಳನ್ನು ಇಡಲು ಹೇಳಲಾಗುವುದು. ಮೊದಲು ಯಾವ ಗೊಂದಲವೂ ಇಲ್ಲದೆ ಅವನನ್ನು ಕೆಲಸ ಮಾಡಲು ಬಿಡಲಾಗುವುದು. ಅನಂತರ ಪ್ರಗತಿಯ ಪ್ರಮಾಣವನ್ನು ಗ್ರಹಿಸಲಾಗುವುದು. ತಂಬಟೆ ಬಡಿಯುವುದು, ಮೈಗೆ ಮುಳ್ಳು ಚುಚ್ಚುವುದು ಮುಂತಾದ ತೊಂದರೆಗಳನ್ನು ನಡು ನಡುವೆ ಉಂಟುಮಾಡಿ, ಅವನ ಕಾರ್ಯವೇಗದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ನಿರೀಕ್ಷಿಸುವುದು. ಈ ಫಲಿತಾಂಶಗಳ ತುಲನೆಯಿಂದ ವ್ಯಕ್ತಿಯ ಕಾರ್ಯಶಕ್ತಿಯ ಮೇಲೆ ವಿಘ್ನವು ಉಂಟುಮಾಡುವ ಪರಿಣಾಮಗಳನ್ನು ಪರಿಮಾಣತಃ ಅಥವಾ ಸಂಖ್ಯಾಶಾಸ್ತ್ರೀಯ ರೀತಿಯಲ್ಲಿ ನಿರ್ಣಯಿಸಲಾಗುತ್ತದೆ.

ಅಂತರ್ನಿರೀಕ್ಷಣೆಯನ್ನು ಮನಃಶಾಸ್ತ್ರೀಯ ಪ್ರಯೋಗಗಳಲ್ಲಿ ಇಟ್ಟುಕೊಳ್ಳುವುದು ಅವಶ್ಯಕ. ಏಕೆಂದರೆ, ಕೆಲವು ಘಟನೆಗಳು ನಿಸರ್ಗತಃ ಬಹಿರ್ನಿರೀಕ್ಷಣೆಗೆ

ಯೋಗ್ಯವಾಗಿದ್ದರೂ ಯೋಜ್ಯನ ಪ್ರಜ್ಞೆಗೆ ಮನನ ಮಾಡಿಕೊಳ್ಳದೆ ಅಭ್ಯಾಸ ಮಾಡಲು ಸಾಧ್ಯವಾಗುವುದಿಲ್ಲ. ಅದಕ್ಕೆ ಉತ್ತರಪ್ರತಿಮೆಯು ಉದಾಹರಣೆ. ಯಾವುದಾದರೂ ಒಂದು ವಸ್ತುವನ್ನು ಬಹಳ ಕಾಲ ಗುರಿಯಿಟ್ಟು ನೋಡಿ, ಅನಂತರ ಆ ವಸ್ತುವನ್ನು ಆಚೆಗೆ ಒಯ್ದಾಗ ನಮ್ಮ ತೆರೆದ ಕಣ್ಣಿಗೆ ಅದರ ಪ್ರತಿಮೆ ಭಾಸವಾದರೆ ಅದಕ್ಕೆ ಉತ್ತರಪ್ರತಿಮೆ ಎಂದು ಹೆಸರು. ಬೇರೆ ವಿಜ್ಞಾನಗಳಲ್ಲಿರುವಂತೆ ಪ್ರಯೋಗಗಳ ಬಳಕೆ ಮನಃಶಾಸ್ತ್ರದಲ್ಲಿ ಸುಲಭವಲ್ಲ. ಏಕೆಂದರೆ, ಹೊರಗಿನ ಸನ್ನಿವೇಶವನ್ನು ನಿಯಂತ್ರಿಸಿದರೂ ಪ್ರಯೋಗದ ಒಂದು ಅಂಗವಾದ ಯೋಜ್ಯನ ಮನಸ್ಸನ್ನು ಅಷ್ಟು ಸುಲಭವಾಗಿ ನಿಯಂತ್ರಿಸಲಾಗುವುದಿಲ್ಲ; ಯೋಜ್ಯನ ಸಂಚಾರಿ ಭಾವಗಳು ಪ್ರಯೋಜಕನ ಕಟ್ಟಿಗೆ ಒಳಪಡುವುದಿಲ್ಲ. ಹೀಗಿದ್ದರೂ ಅವು ಯೋಜ್ಯನು ಮಾಡುವ ಪ್ರಯೋಗದಲ್ಲಿ ಬಹಳ ಮಟ್ಟಿಗೆ ಪ್ರಭಾವಿಗಳಾಗುವ ಸಂಭವವಿದೆ.

ಈ ಮೂರು ಕ್ರಮಗಳಲ್ಲದೆ, ಜನನಶಾಸ್ತ್ರೀಯಕ್ರಮ, ಕಥನಕ್ರಮ, ಪ್ರಕರಣೇತಿಹಾಸಕ್ರಮ, ಸಂಖ್ಯಾಶಾಸ್ತ್ರೀಯಕ್ರಮ ಮತ್ತು ಕ್ಷೇತ್ರಾವೇಕ್ಷಣಕ್ರಮ ಮುಂತಾದ ಹಲವು ಮನಃಶಾಸ್ತ್ರೀಯಕ್ರಮಗಳಿವೆ. ಪ್ರಸ್ತುತ ಅವಾಪ್ಯವು ಗಣ್ಯವಲ್ಲವಾದುದರಿಂದ ಅವುಗಳನ್ನಿಲ್ಲಿ ವಿವರಿಸಲಾಗಿಲ್ಲ.

ಅಧ್ಯಾಯ ಎರಡು

ನರಮಂಡಲ

ಮಾನವ ಶರೀರದಲ್ಲಿಯ ನರಮಂಡಲವನ್ನು ವಿಸ್ತಾರವಾದ ಟೆಲಿಫೋನ್ ಪದ್ಧತಿಗೆ ಹೋಲಿಸುವುದುಂಟು. ನರಮಂಡಲದ ಯಾವ ನಕ್ಷೆಯೂ ಅದರ ಜಟಿಲಜಾಲದ ಕಲ್ಪನೆಯನ್ನು ಸಾಕಷ್ಟು ಚೆನ್ನಾಗಿ ಮಾಡಿಕೊಡಲಾರದು. ಈ ಒಂದನೆಯ ನಕ್ಷೆಯು ಮುಖ್ಯವಾದ ನರಪಥಗಳಷ್ಟನ್ನೇ ತೋರಿಸುತ್ತದೆ. ಅದರಲ್ಲಿ ಕೈಕಾಲು-ಮುಂಡಗಳಿಂದ ನರಗಳು ಬೆನ್ನುಹುರಿಯತ್ತ ಹರಿದಂತೆಯೂ ಅಲ್ಲಿಂದ ಮುಂದೆ ನೇರವಾಗಿ ಮಿದುಳಿನತ್ತ ಹೋದಂತೆಯೂ ತೋರುತ್ತದೆ.

ಬೆನ್ನುಹುರಿಯು ನರಗಳೆಂಬ ಸ್ನಾಯುಗಳನ್ನು ಹೊಸೆದು ಮಾಡಿದ ಹಗ್ಗದಂತಿದೆ. ಬೆನ್ನೆಲುಬೆನಿಸಿದ ಮೂಳೆಗಳ ಸಮುದಾಯದ ಮೂಲಕ ಹರಿದು ಅದು ಮೇಲಕ್ಕೆ ಹೋಗುತ್ತದೆ. ಮಿದುಳು-ಬೆನ್ನುಹುರಿಗಳು ಒಟ್ಟಿಗೆ ಟೆಲಿಫೋನಿನ ವಿನಿಮಯಸಾಮಗ್ರಿ ಎನ್ನಬಹುದು. ಅವನ್ನು ಕೇಂದ್ರ ನರಮಂಡಲವೆನ್ನುತ್ತಾರೆ; ಅವುಗಳ ಸುತ್ತುಮುತ್ತಲಿನ ನರಗಳನ್ನು ಪರಿನರಮಂಡಲವೆನ್ನಬಹುದು.

ಕ್ಷೇಪಕ್ರಿಯೆ


ನರಮಂಡಲದ ಕಾರ್ಯವನ್ನು ಕ್ಷೇಪಕ್ರಿಯೆಯಿಂದ ಬಹಳ ಚೆನ್ನಾಗಿ ತಿಳಿದುಕೊಳ್ಳಬಹುದು. ಯಾವುದಾದರೂ ಒಂದು ಪ್ರೇರಣೆ ಬಂದಾಗ ನಮಗೆ ತಿಳಿಯದಂತೆಯೇ ಎಷ್ಟೋ ಸಲ ನಮ್ಮ ಶರೀರದ ಅವಯವಗಳು ಅದಕ್ಕೆ ತಕ್ಕ ಅನುಕ್ರಿಯೆಯನ್ನು ಮಾಡಿಬಿಡುತ್ತವೆ. ಇಂಥ ಅನುಕ್ರಿಯೆಗಳು ಆಕಸ್ಮಿಕವೆಂಬಂತೆ ನಡೆದು ಹೋಗುತ್ತವೆ. ಅವು ನಡೆದುಹೋದ ಮೇಲೆ ಒಂದು ವೇಳೆ ನಾವು ವಿಚಾರ ಮಾಡುತ್ತೇವಲ್ಲದೆ, ಅವು ನಡೆಯುವಾಗ ನಾವು ವಿಚಾರಮಾಡುವುದಿಲ್ಲ. ಅಕಸ್ಮಾತ್ತಾಗಿ ಒಂದು ಮುಳ್ಳು ಚುಚ್ಚಿದರೆ ನಮ್ಮ ಕಾಲು ಸರಕ್ಕನೆ ಹಿಂಜರಿಯುತ್ತದೆ. ಹಾಗೇ ಅನಿರೀಕ್ಷಿತವಾಗಿ ಒಂದು ದೊಡ್ಡ ಸದ್ದಾದರೆ ನಾವು ಬೆಚ್ಚಿ

ಬೀಳುತ್ತೇವೆ. ಅದೇ ರೀತಿಯಲ್ಲಿ ಬಹಳ ಉಜ್ವಲವಾದ ಬೆಳಕನ್ನು ಕಂಡರೆ ನಮ್ಮ ಕಣ್ಣು ಜೋರು ಜೋರಾಗಿ ಮಿಟುಕುತ್ತದೆ; ವಿಲಕ್ಷಣವಾದ ವಾಸನೆ ಯಾವು ದಾದರೊಂದು ಮೂಗಿನ ಒಳಹೊಕ್ಕಾಗ ಅದು ಸೀನಲಾರಂಭಿಸುತ್ತದೆ. ಇವೆಲ್ಲ ಮಾಂಸದ ಕ್ಷೇಪಕ್ರಿಯೆಗಳು. ಗ್ರಂಥಿಗಳು ಕೂಡ ಕ್ಷೇಪಕ್ರಿಯೆ ಎಸಗುತ್ತವೆ. ಆಹಾರದ ವಾಸನೆ ಅಥವಾ ರುಚಿಯು ಪ್ರೇರಣೆ ಬಂದಾಗ ಲಾಲಾಗ್ರಂಥಿಗಳು ರಸೋತ್ಪಾದನೆ ಮಾಡುವುದು ಅನುಭವಸಿದ್ಧ. ಹಾಗೇ ಕಣ್ಣಿಗೆ ಏನಾದರೂ ತೊಂದರೆಯಾದರೆ ಕಣ್ಣೀರು ಬರುವುದು ಎಲ್ಲರಿಗೂ ತಿಳಿದ ವಿಷಯ.

ಈಗ ನಮ್ಮ ಕಾಲಿಗೆ ಒಂದು ಮುಳ್ಳು ಚುಚ್ಚಿತು ಎಂದುಕೊಳ್ಳೋಣ. ಆಗ ಆ ಮುಳ್ಳು ತಾನು ಚುಚ್ಚಿದ ಜಾಗದ ಸುತ್ತುಮುತ್ತಲಿನ ಜ್ಞಾನವಾಹಿ ನರಗಳ ತುದಿಯನ್ನು ಪ್ರೇರಿಸುತ್ತದೆ; ಆ ಮೂಲಕ ಅದು ಒಂದು ಸಂದೇಶ ವನ್ನು ಅರ್ಥಾತ್ ನರಪ್ರವಾಹವನ್ನು ನರಗಳ ಮೂಲಕ ಬೆನ್ನುಹುರಿಗೆ ಕಳಿಸು ತ್ತದೆ. ಅಲ್ಲಿ ಅದನ್ನು ಉಚಿತ ಕ್ರಿಯಾವಾಹಿ ನರಗಳಿಗೆ ಮುಟ್ಟಿಸಲಾಗುತ್ತದೆ. ಆಗ ಕೆಳತನಕ ಹರಿದಿರುವ ಕ್ರಿಯಾವಾಹಿಗಳು ಉಕ್ತಜಾಗದಲ್ಲಿಯ ಮಾಂಸ ಗಳು ಸಂಕೋಚಗೊಳ್ಳುವಂತೆ ಮಾಡುತ್ತವೆ.


ನರ ಮತ್ತು ನರಪ್ರವಾಹ: ನರಗಳು ಅಥವಾ ನರಘಟಕಗಳು ಬಹು ವಿಧವಾಗಿವೆ. ಪರಿನರಮಂಡಲದಲ್ಲಿ ಜ್ಞಾನವಾಹಿ ನರಗಳೆಂದೂ ಕ್ರಿಯಾವಾ ನರಗಳೆಂದೂ ಎರಡು ಬಗೆಯ ನರಗಳಿವೆ. ಜ್ಞಾನವಾಹಿಗಳು ಚೋದನೆಗಳನ್ನು ಇಂದ್ರಿಯಗಳಿಂದ ವಿನಿಮಯಕೇಂದ್ರಕ್ಕೆ ಒಯ್ಯುತ್ತವೆ. ಮತ್ತು ಕ್ರಿಯಾವಾ ಗಳು ಆ ಕೇಂದ್ರದಿಂದ ಅವನ್ನು ಮಾಂಸಖಂಡಗಳಿಗೆ ಒಯ್ಯುತ್ತವೆ. ಎರಡನೆ ಚಿತ್ರದಲ್ಲಿ ಈ ಎರಡು ಬಗೆಯ ನರಪಥಗಳನ್ನೂ ಕಾಣಬಹುದು.

ನರದ ರವೆ (Cell-body) ಮತ್ತು ಅದರ ಬೀಜಗಳು (Nucleus) ಉ ಎಲ್ಲವೂ ಹೊರಡುವ ಮೂಲ ಭಾಗ. ನರದ ಹುರಿಯೇ ನರತಂತು. ಕೆಲ ಅದು ಅನೇಕ ಅಡಿಗಳಷ್ಟು ಉದ್ದವಾಗಿರುತ್ತದೆ. ನರದ ಕುಡಿಗಳು ತೆ ಕುಂಬಳ ಬಳ್ಳಿಯ ದಾಂಗುಡಿಗಳಂತಿವೆ. ಈ ಎರಡು ವಿಧದ ನರಗಳಲ್ಲಿ ನರದ ರವೆಗಳು ಬೇರೆಬೇರೆಯಾಗಿವೆ. ಚಿತ್ರ೩. ಜ್ಞಾನವಾಹಿಗಳ ನರದಕುಡಿ ಸಾಕಷ್ಟು ಬೆಳವಣಿಗೆ ಹೊಂದಿರುವುದಿಲ್ಲ. ನರದ ಹುರಿ ಎಷ್ಟೋ ಶಾಖೋಪಶಾಖೆಯಾಗಿ ಒಡೆದಿರುತ್ತದೆ. ಅಥವಾ ಅದರಿಂದ ಎಷ್ಟೋ




THE NERVOUS SYSTEM


I



SENSORY NERVE



2 MOTOR NERVE



MOTOR NEURON

3

ನರಗಳು ಹೊರಟಿರುತ್ತವೆ. ನರಪುಟವು (Nerve-cell) ಒಂದು ಸಂಪೂರ್ಣ ಘಟಕ. ಅದರಲ್ಲಿ ನರದ ರವೆ, ನರದ ಹುರಿ ಮತ್ತು ನರದ ಕುಡಿಗಳಿವೆ. ಮನುಷ್ಯನ ಶರೀರದಲ್ಲಿ ಸುಮಾರು ೧೦,೦೦೦,೦೦೦,೦೦೦ ನರಗಳಿವೆ ಎಂದು ಅಂದಾಜು ಮಾಡಲಾಗಿದೆ.


ಶರೀರದ ಇತರ ಭಾಗಗಳನ್ನು ವಿನಿಮಯ ಕೇಂದ್ರದೊಡನೆ ಸಂಬಂಧಿಸುವ ಜ್ಞಾನವಾಹಿ-ಕ್ರಿಯಾವಾಹಿ ನರಗಳಲ್ಲದೆ ಸಂಪರ್ಕನರಗಳೆಂಬ ಇನ್ನೊಂದು ಜಾತಿಯ ನರಗಳು ಅಸಂಖ್ಯವಾಗಿವೆ. ಅವು ಕೇಂದ್ರ ನರಮಂಡಲದಲ್ಲಿ ಇವೆ. ಈ ಸಂಪರ್ಕನರಗಳಲ್ಲಿ ಅನೇಕ ಬಗೆಗಳಿವೆ. ನಾಲ್ಕನೆಯ ನಕ್ಷೆಯಲ್ಲಿ ಮೂರು ಬಗೆಗಳನ್ನು ತೋರಿಸಲಾಗಿದೆ. ಸಂಪರ್ಕನರಗಳು ವಿನಿಮಯದ ಅಥವಾ ಒತ್ತು ಗುಂಡಿ-ಹಲಗೆಯ (Switch Board) ಕೆಲಸವನ್ನು ಮಾಡುವ ಕೇಂದ್ರ ನರ-ಮಂಡಲದ ಕೃತ್ಯಕ್ಕೆ ನೆರವಾಗುತ್ತವೆ. ಹೇಗೆಂದರೆ ಅವು ಅಲ್ಲಿ ಒಳಬರುವ ಮತ್ತು ಹೊರಹೊರಡುವ ಚೋದನೆಗಳಲ್ಲಿ ಅನೇಕ ವಿಧದ ಸಂಪರ್ಕವನ್ನುಂಟುಮಾಡಿ ಕೊಡುತ್ತವೆ. ಜ್ಞಾನವಾಹಿಇರಲಿ, ಕ್ರಿಯಾ ವಾಹಿ ಇರಲಿ ಸಂಪರ್ಕವಾಹಿ ಇರಲಿ— ಪ್ರತಿಯೊಂದು ನರವೂ ಒಂದು ಸಾಂಗವಾದ ಪರಿಪೂರ್ಣ ಘಟಕ. ಎರಡು ನರಗಳು ಎಂದೂ ಒಂದರೊಳಗೊಂದು ಪ್ರವೇಶಿಸುವುದಿಲ್ಲ. ಆದರೆ ಒಂದು ನರದ ತುದಿಯು ಇನ್ನೊಂದು ನರದ ಕುಡಿ ಅಥವಾ ರವೆಯೊಡನೆ ಸಂಪರ್ಕಬೆಳೆಸುತ್ತದೆ ಮತ್ತು ನರಪ್ರವಾಹವು ಅವುಗಳ ನಡುವಿನ ವಿಸಂಧಿಯನ್ನು ದಾಟಿ ವಿದ್ಯುದಾವರ್ತದಲ್ಲಿ ಒಂದು ಕಿಡಿಯು ಹಾರುವಂತೆ ಹಾರುತ್ತದೆ.

ನರ ಕಳಿಸುವ ಪ್ರವಾಹದ ನಿಜಸ್ವರೂಪವು ಇನ್ನೂ ಗೊತ್ತಾಗಿಲ್ಲ. ಅದು ಖಂಡಿತವಾಗಿಯೂ ವಿದ್ಯುತ್ತಿನ ಸ್ವಭಾವವುಳ್ಳದ್ದು. ಆದರೆ ಅದು ತಂತಿಗಳ ಮೂಲಕ ಕಳಿಸಲಾಗುವ ಸಾಮಾನ್ಯ ವಿದ್ಯುತ್‌ಪ್ರವಾಹದಿಂದ ಅನೇಕ ರೀತಿಯಲ್ಲಿ ಭಿನ್ನವಾಗಿದೆ. ನರಪ್ರವಾಹವು ವಿದ್ಯುತ್‌ಪ್ರವಾಹಕ್ಕಿಂತ ಬಹಳ ಮಂದ ಗತಿಯಲ್ಲಿ ಸಾಗುತ್ತದೆ ಮತ್ತು ನರದ ಹುರಿಯ ಮೂಲಕ ಹೋಗುವ ಅದರ ಗತಿಯು ಶೀತ ಮತ್ತು ಒತ್ತಡ ಮುಂತಾದವುಗಳಿಂದ ಕುಂಠಿತವಾಗುತ್ತದೆ. ಆದರೆ ವಿದ್ಯುತ್‌ಪ್ರವಾಹದ ಗತಿಗೆ ಇಂಥ ಅಡೆತಡೆಗಳಿಲ್ಲ. ನರಪ್ರವಾಹದಲ್ಲಿ ವಿದ್ಯುದ್‌ರಾಸಾಯನಿಕ ಅಲೆಗಳಿವೆ ಎಂದು ಅನೇಕರು ನಂಬುತ್ತಾರೆ. ಈ ನಂಬಿಕೆಯ ಪ್ರಕಾರ ನರದ ಹುರಿಯಲ್ಲಿ ಒಂದು ಪ್ರೇರಣೆಯು ರಾಸಾಯನಿಕ

ಪರಿವರ್ತನಮಾಲೆಯನ್ನು ಉಂಟುಮಾಡುತ್ತದೆ ಮತ್ತು ಈ ಬದಲಾವಣೆಗಳು ಅನಂತರ ವಿದ್ಯುತ್‌ಪರಿವರ್ತನಗಳನ್ನು ಉಂಟುಮಾಡುತ್ತವೆ. ಆದರೆ ಇದರ ವಿಷಯದಲ್ಲಿ ತಿಳಿಯಬೇಕಾದದ್ದು ಬಹಳವಿದೆ. ಒಂದು ನರಪ್ರವಾಹವೆಂದರೇನು? ಎಂಬುದಕ್ಕೆ ತಕ್ಕ ಉತ್ತರವನ್ನು ಕೊಡಲು ನಾವು ಸಮರ್ಥರಾದಾಗ ಜೀವವಸ್ತುವಿನ ಸ್ವಭಾವದ ಮೂಲಪ್ರಶ್ನೆಯನ್ನು ಬಿಡಿಸಲು ಶಕ್ತರಾಗುತ್ತೇವೆ.


ಕ್ಷೇಪಕ್ರಿಯೆಯ ತಂತ್ರವನ್ನು ಐದನೆಯ ನಕ್ಷೆಯಲ್ಲಿ ಇರುವಂತೆಯೇ ಕೊಡುವುದು ರೂಢಿ. ಅದರಲ್ಲಿ ಜ್ಞಾನವಾಹಿಯ ಚೋದನೆಯು ವಿಸಂಧಿಯನ್ನು ದಾಟಿ, ಕ್ರಿಯಾವಾಹಿಯನ್ನು ಪ್ರಚೋದಿಸುವುದನ್ನು ಕಾಣಬಹುದು. ಆದರೆ ಎರಡು ದೃಷ್ಟಿಯಿಂದ ಇದು ಅತಿಸಂಕ್ಷೇಪದ ದೋಷಕ್ಕೆ ಗುರಿಯಾಗುತ್ತದೆ. ಮೊದಲನೆಯದಾಗಿ, ಕೆಲ ಅತ್ಯಂತ ಸರಳವಾದ ಕ್ಷೇಪಕ್ರಿಯೆಗಳಲ್ಲಿ ಮಾತ್ರ ಜ್ಞಾನವಾಹಿ-ಕ್ರಿಯಾವಾಹಿಗಳು ನೇರವಾಗಿ ಒಂದರೊಡನೊಂದು ಸಂಪರ್ಕ ಇಟ್ಟುಕೊಳ್ಳುತ್ತವೆ; ಸಾಮಾನ್ಯವಾಗಿ ಅವು ಸಂಪರ್ಕನರಗಳಿಂದ ಸಂಬಂಧಿಸಲ್ಪಟ್ಟಿರುತ್ತವೆ. ಎರಡನೆಯದಾಗಿ, ಒಂದು ಅತಿಸರಳವಾದ ಅನುಕ್ರಿಯೆಯಲ್ಲಿಯೂ ಒಂದಕ್ಕಿಂತ ಹೆಚ್ಚು ಸಂಖ್ಯೆಯ ಮತ್ತು ಜಾತಿಯ ನರಗಳ ಕಾರ್ಯವಿರುತ್ತದೆ. ಯಾವ ನರವೂ ಒಂಟಿಯಾಗಿ ಕೆಲಸ ಮಾಡುವುದಿಲ್ಲ; ಕೆಲಸಮಾಡುವುದು ನರಗಳ ಗುಂಪು. ಆದರೆ ಈ ಸಂಗತಿಯು ಚೊಕ್ಕವಾದ ನಕ್ಷೆಯನ್ನು ತಯಾರಿಸಲು ತೊಂದರೆ ಕೊಡುವುದರಿಂದ ಅದನ್ನು ನಕ್ಷೆಯಲ್ಲಿ ಗೌಣಗೊಳಿಸಲಾಗಿದೆ.

ವಿಸಂಧಿಯ ಅವರೋಧ: ನರದ ಮೂಲಕ ಚೋದನೆ ಹರಿಯುವಾಗ ಯಾವಾಗಲೂ ವಿಸಂಧಿಯು ಒಂದು ತರಹದ ಅವರೋಧವನ್ನು, ಅಡ್ಡಿಯನ್ನು ಉಂಟುಮಾಡುತ್ತದೆ. ಆದ್ದರಿಂದ ಬಹುಶಃ ಒಂದು ಜ್ಞಾನವಾಹಿಯ ಚೋದನೆ ಎಂದೂ ಅದನ್ನು ಗೆಲ್ಲಲು ಶಕ್ತವಾಗದು. ಸಾಮಾನ್ಯವಾಗಿ ಅನೇಕ ಜ್ಞಾನವಾಹಿಗಳಿಂದ ಏಕಕಾಲದಲ್ಲಿ ಚೋದನೆಗಳು ಬಂದರೆ ಆಗ ಅವು ವಿಸಂಧಿಯನ್ನು ದಾಟಿ ಕ್ರಿಯಾವಾಹಿಯನ್ನು ಪ್ರಚೋದಿಸಬಲ್ಲವು. ಇದರ ಮುಖ್ಯವಾದ ಫಲಿತಾಂಶವೆಂದರೆ ಒಟ್ಟಿಗೆ ಉಂಟಾಗುವ ಅನೇಕ ಪ್ರೇರಣೆಗಳ ಫಲವು ಅವುಗಳ ಪ್ರತ್ಯೇಕ ಫಲಗಳ ಮೊತ್ತಕ್ಕೆ ಯಾವಾಗಲೂ ಸರಿಗಟ್ಟಬೇಕೆಂದು ಹೇಳಲು ಬರುವುದಿಲ್ಲ.



TYPES OF INTERNUNCIAL NEURONS

4 a and b in cortex, c in cerebellum



5 REFLEX ACTION


ಮಿದುಳಿನ ವಿಕಾಸ

ವನಸ್ಪತಿಯಂತಿರುವ ಒಂದು ತರದ ಕಡಲ ಮೀನಿನಲ್ಲಿ ಅಥವಾ ಲೋಳೆ ಮೀನಿನಲ್ಲಿ ಕಂಡುಬರುವ ನರಮಂಡಲವು ಸರಳವಾದ ಅತ್ಯಂತ ಪ್ರಾಚೀನ ನರಮಂಡಲದ ಒಂದು ಮಾದರಿ. ಅದು ಇಡೀ ದೇಹದಲ್ಲಿ ಹೆಚ್ಚು-ಕಡಿಮೆ ಒಂದೇಸಮನಾಗಿ ಹರಡಿರುತ್ತದೆ. ಈ ಪ್ರಾಣಿಗಳಿಗೆ ಕೇಂದ್ರ ನರಮಂಡಲ ವಿಲ್ಲ. ಇವುಗಳ ಜ್ಞಾನವಾಹಿ-ಕ್ರಿಯಾವಾಹಿ ನರಗಳು ನೇರವಾಗಿ ಕೂಡಿರುತ್ತ ವಲ್ಲದೆ, ಸಂಪರ್ಕನರಗಳಿಂದ ಸಂಬಂಧಿಸಲ್ಪಟ್ಟಿರುವುದಿಲ್ಲ. ಆದುದರಿಂದ ಅವುಗಳ ಪ್ರತಿಕ್ರಿಯೆಗಳು ಕಡಿಮೆ ಮತ್ತು ಅತ್ಯಂತ ಏಕತಾನವುಳ್ಳವು. ಮೇಲ್ಜಾತಿಯ ಪ್ರಾಣಿಗಳಲ್ಲಿ ಕಂಡುಬರುವ ಪ್ರತಿಕ್ರಿಯಾವೈವಿಧ್ಯ ಮತ್ತು ಹೊಂದಿಕೆಯ ರೀತಿಗಳು ಕೇಂದ್ರ ನರಮಂಡಲದ ಜಟಿಲ ರಚನೆಯಿಂದ ಸಂಭವಿ ಸುತ್ತವೆ. ಕೇಂದ್ರ ನರಮಂಡಲವಿಲ್ಲದ ಪ್ರಾಣಿಗಳು ಕೆಲವು ನಿರ್ದಿಷ್ಟ ಯಾಂತ್ರಿಕ ಅನುಕ್ರಿಯೆಗಳನ್ನು ಮಾತ್ರ ಪ್ರೇರಣೆಗಳಿಗೆ ಪ್ರತಿಯಾಗಿ ಮಾಡಬಲ್ಲವು; ಅಲ್ಲದೆ ಅವುಗಳ ಶರೀರದ ವಿವಿಧ ಭಾಗಗಳಲ್ಲಿ ಗಣ್ಯಾಂಶದ ಸ್ವಾಯತ್ತತೆ ಇರುತ್ತದೆ. ಮೇಲೆ ಹೇಳಿದ ಕಡಲ ಮೀನಿನ ತೆವಳುಗಾಲು ಉಚಿತ ಪ್ರೇರಣೆ ಕೊಟ್ಟಾಗ ಅದು ಆ ಪ್ರಾಣಿಯ ಶರೀರದಿಂದ ಬೇರ್ಪಟ್ಟಿದ್ದರೂ ತೆವಳುತ್ತಲೇ ಹೋಗು ವುದು. ಇಲ್ಲಿ ಪ್ರೇರಣೆ ಹಾಗೂ ಅನುಕ್ರಿಯೆಗಳ ಸಂಪರ್ಕವು ನೇರವಾಗಿದೆ ಯಲ್ಲದೆ ದೂರದ ಕೇಂದ್ರವಿನಿಮಯ ಮಂಡಲದ ಮೂಲಕವಲ್ಲ.

ಸಕಶೇರುಕ ಅಥವಾ ಬೆನ್ನೆಲುಬಿರುವ ಪ್ರಾಣಿಗಳಲ್ಲಿ ಮಾತ್ರ ಮಿದುಳು ನರ ಮಂಡಲದ ಕೇಂದ್ರವಾಗಿರುತ್ತದೆ. ಅಕಶೇರುಕಗಳ ಕೇಂದ್ರ ನರಮಂಡಲದಲ್ಲಿ ಆರನೆಯ ನಕ್ಷೆಯಲ್ಲಿ ಕೊಟ್ಟಿರುವಂಥ ನರಜಾಲಗಳ ಸರಪಳಿ ಮಾತ್ರ ಇರು ತ್ತದೆ. ಅತಿ ಸರಳ ಮಾದರಿಯ ಸಕಶೇರುಕಗಳಲ್ಲಿ ಮುಖ್ಯವಾಗಿ ಬೆನ್ನುಹುರಿ ಯಲ್ಲಿಯೇ ನರಜಾಲ ಬೆಳೆದಿರುತ್ತದೆ — ಅದರಲ್ಲೂ ಬೆನ್ನುಹುರಿಯ ತುದಿಯಲ್ಲಿ ಇರುವ ಉಬ್ಬಿನಲ್ಲಿ. ಬೆನ್ನುಹುರಿಯ ಈ ಚಿಕ್ಕ ಮೊಳಕೆಯಿಂದ ಮಾನವನ ಜಟಿಲವಾದ ಮಿದುಳು ವಿಕಾಸಹೊಂದಿತು. ಏಳನೆಯ ನಕ್ಷೆಯಲ್ಲಿ ಬೇರೆಬೇರೆ ಪ್ರಾಣಿಗಳ ಮಿದುಳುಗಳ ಬೆಳವಣಿಗೆಯ ಉತ್ತರೋತ್ತರ ಹಂತಗಳನ್ನು ಕಾಣ ಬಹುದು. ಅತಿ ಕೆಳಜಾತಿಯ ಸಕಶೇರುಕಗಳ ಮಿದುಳಿನಲ್ಲಿ ಮುಖ್ಯವಾಗಿ ಹಿಮ್ಮಿದುಳು, ನಡುಮಿದುಳು, ನೇತ್ರಲಂಬಕಗಳು ಮತ್ತು ಅರೆಹೊರೆದ ಮುಮ್ಮಿ


ದುಳು ಇರುವವು. ಹೆಚ್ಚು ಜಟಿಲವಾದ ಮನೋವ್ಯಾಪಾರಗಳು ಮಾನವನಲ್ಲಿ ಮುಮ್ಮಿದುಳನ್ನೇ ಅವಲಂಬಿಸುತ್ತವೆ. ವಿಕಾಸದ ಮೆಟ್ಟಿಲನ್ನು ಏರುತ್ತ ಮೇಲೆ ಹೋದ ಹಾಗೆ ಮುಮ್ಮಿದುಳಿನ ಗಾತ್ರವು ಹೆಚ್ಚುತ್ತಹೋಗುತ್ತದೆ. ಅದರಿಂದಲೇ ಮನುಷ್ಯನಲ್ಲಿ ಅದು ಹಳಮಿದುಳನ್ನು ಮೀರಿಸುತ್ತದೆ. ಪ್ರಾಣಿಯ ಮತ್ತು ಮನುಷ್ಯನ ಮಿದುಳುಗಳಲ್ಲಿಯ ವ್ಯತ್ಯಾಸವು ಸುವ್ಯಕ್ತ. ಮನುಷ್ಯನ ಮುಮ್ಮಿದುಳಿನ ದೊಡ್ಡಭಾಗವು (ಅದರ ನಿಜವಾದ ಮೇಲ್ಮೈ) ಅದರ ಗಾತ್ರ ಹೆಚ್ಚಾದಹಾಗೆ ಬೆಳೆದು ಬಂದ ಆಳವಾದ ಮಡಿಕೆ ಮತ್ತು ಬಿರುಕುಗಳಲ್ಲಿ ಅಡಗಿರುವುದರಿಂದ ಮೊದಲ ನೋಟಕ್ಕೆ ಅದರ ಗಾತ್ರವು ಇದ್ದುದಕ್ಕೂ ಹೆಚ್ಚು ದೊಡ್ಡದಾಗಿ ಕಾಣಿಸುತ್ತದೆ.

ಹಳಮಿದುಳು: ಮುಮ್ಮಿದುಳು ಗಾತ್ರದಲ್ಲಿ ಹೆಚ್ಚುತ್ತ ಹೋದಹಾಗೆ ತಾನು ಹುಟ್ಟಿ ಬಂದ ಹಳಮಿದುಳಿನ ಅನೇಕ ಕೃತ್ಯಗಳನ್ನು ತನ್ನ ಕೈಗೆ ತೆಗೆದುಕೊಳ್ಳುವ ಪ್ರವೃತ್ತಿಯನ್ನು ತೋರಿಸುತ್ತದೆ. ಇದರ ಉದಾಹರಣೆಯನ್ನು ನೇತ್ರಲಂಬಕಗಳ ಸಾಪೇಕ್ಷ ಗಾತ್ರ ಕಡಿಮೆಯಾಗುವುದರಲ್ಲಿ ಕಾಣಬಹುದು. ಮನುಷ್ಯನ ನಡುಮಿದುಳಿನ ಎದುರಿರುವ ಚಿಕ್ಕ ಪ್ರದೇಶವೇ ಹಳೆಯ ನೇತ್ರಲಂಬಕಗಳ ಅವಶೇಷ. ಅದನ್ನು ಅಡ್ಡಗೆರೆಗಳಿಂದ ತೋರಿಸಲಾಗಿದೆ. ಬೆಳಕಿಗೆ ನಮ್ಮ ಕಣ್ಣಿನಲ್ಲಿ ಉಂಟಾಗುವ ಕ್ಷೇಪಕ್ರಿಯೆಯನ್ನು ಅದು ನಿಯಂತ್ರಿಸುತ್ತದೆ. ನೋಟದ ಇತರ ಕೃತ್ಯಗಳನ್ನು ಮುಮ್ಮಿದುಳು ನಿಯಂತ್ರಿಸುತ್ತದೆ. ಮನುಷ್ಯನಲ್ಲಿ ಸಹ ಹಳಮಿದುಳು ಮೂಲೆಗೆ ಬಿದ್ದಿರುವಾಗ ಗೌಣವೆನಿಸಿದರೂ ಅಂಥ ಅನೇಕ ಗೌಣ ಕರ್ತವ್ಯಗಳನ್ನು ಅದು ಇನ್ನೂ ನೆರವೇರಿಸುತ್ತಿದೆ. ಆ ಕರ್ತವ್ಯಗಳು ನಮ್ಮ ವಿಕಾಸಾವಸ್ಥೆಯ ಮೊದಮೊದಲಿನ ಹಂತದ ಮತ್ತು ಯಾಂತ್ರಿಕವಾದ ಚಟುವಟಿಕೆಗಳಿಗೆ ಸಂಬಂಧಿಸಿವೆ. ನಡುಮಿದುಳು, ಹಿಮ್ಮಿದುಳು, ನರಸೇತು ಮತ್ತು ಭಾವನಾಪೀಠಗಳೇ ಹಳಮಿದುಳಿನ ಮುಖ್ಯ ಭಾಗಗಳು. ನಿಲುವಿನ ಭಂಗಿ, ಮಾಂಸಖಂಡಗಳ ಹೊಂದಿಕೆ ಮತ್ತು ಸಮತೋಲ ಉಳಿಸಿಕೊಳ್ಳುವುದು ನಡುಮಿದುಳಿನ ನಿಯಂತ್ರಣಕ್ಕೆ ಸೇರಿದ್ದು. ಅದರ ಬಲದಿಂದ ನಾವು ಬೀಳದಂತೆ ನೆಟ್ಟಗೆ ನಡೆಯಬಹುದು. ಅದರ ಸಹಾಯದಿಂದಲೇ ನಾವು ಕಲ್ಲು ಎಸೆಯುವುದು, ಚಂಡುಹಿಡಿಯುವುದು, ನೆಲದಿಂದ ಏನನ್ನಾದರೂ ಮೇಲಕ್ಕೆ ಎತ್ತಿಕೊಳ್ಳುವುದು ಮುಂತಾದ ಕಾರ್ಯಗಳನ್ನು ಎಷ್ಟೋ ಸಲ ನಮಗೆ ತಿಳಿಯದಂತೆಯೇ




6

Central Nervous System of
Lower Animals



7 EVOLUTION OF THE BRAIN



MIDDLE SURFACE OF THE RIGHT HEMISPHERE

ಮೊಡುತ್ತೇವೆ; ಅಂಥ ಸಂಪರ್ಭಗಳಲ್ಲಿ ತೂಕ ತಪ್ಪದಂತೆ ಉಳಿಯಲು ಬೇಕಾದ ಮಾಂಸಖಂಡಗಳ ಹೊಂದಿಕೆಗಳನ್ನು ಅದೇ ನೆರವೇರಿಸುತ್ತದೆ.

ಉಸಿರಾಟ, ಎದೆಬಡಿತ ಮತ್ತು ರಕ್ತನಾಳಗಳ ಸಂಕೋಚ ಮುಂತಾದ ಸತತಗತಿಯಿಂದ ತಿಳಿಯದೆ ಮಾಡುವ ಅನೇಕ ಕಾರ್ಯಗಳು ಹಿಮ್ಮಿದುಳಿನ ಕಕ್ಷೆಯಲ್ಲಿ ಸೇರುತ್ತವೆ. ಅನಂತರ ಕೆಳಗಿನ ಪ್ರಾಣಿಗಳಲ್ಲಿ ಭಾವನಾಪೀಠ ವೆಂಬುದು ಇಂದ್ರಿಯಾನುಭವ ಕೇಂದ್ರ; ಆದರೆ ಮನುಷ್ಯನಲ್ಲಿಯೂ ಮೇಲು ಮಟ್ಟದ ಪ್ರಾಣಿಗಳಲ್ಲಿಯೂ ಅದರ ಕಾರ್ಯವನ್ನು ಹೊಸ ಮಿದುಳು ಕಸಿದು ಕೊಂಡಿದೆ. ನೋವು ನುರಿ ಮುಂತಾದ ಸಾಮಾನ್ಯ ಸ್ಥೂಲ ಸಂವೇದನೆಗಳನ್ನು ನಮ್ಮಲ್ಲಿ ಭಾವನಾಪೀಠ ಉಂಟುಮಾಡುತ್ತದೆ; ಆದರೆ ಐಂದ್ರಿಯಿಕ ನಿರ್ಣಯ ಶಕ್ತಿ ಮತ್ತು ಹೆಚ್ಚು ಸಮ್ಮಿಶ್ರ ರೂಪದಲ್ಲಿರುವ ಇಂದ್ರಿಯಾನುಭವಗಳು ಮುಮ್ಮಿದುಳಿಗೇ ಸಾಧ್ಯ. ಭಾವನಾಪೀಠವು ಒಂದು ಟಪ್ಪಾಲುಕಟ್ಟೆಯಂತೆ ವಿವಿಧ ಸಂವೇದನೆಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಮಿದುಳಿನ ಮೇಲ್ಪದಿಯ ಉಚಿತ ಪ್ರದೇಶಗಳಿಗೆ ಕಳಿಸುತ್ತದೆ. ಇಂದ್ರಿಯಗಳಿಗೆ ಸಂಬಂಧಿಸಿದ ನರ-ಚೋದನೆಗಳೆಲ್ಲವೂ ಭಾವನಾಪೀಠದ ಮೂಲಕವೇ ಹೊಸ ಮಿದುಳಿಗೆ ತಲುಪು ತ್ತದೆ. ಇಷ್ಟೇ ಅಲ್ಲದೆ ಪ್ರಾಣಿಗಳಲ್ಲಿಯೂ ಮನುಷ್ಯನಲ್ಲಿಯೂ ಭಾವನಾ ಪೀಠವೇ ವಿವಿಧ ಭಾವನೆಗಳ ಮೂಲಸ್ಥಳ. ಸುತ್ತುಮುತ್ತಲಿನ ಮೂಲ ನರ ಜಾಲಗಳೊಡನೆ ಕೂಡಿದ ಭಾವನಾಪೀಠವೇ ಹಳಮಿದುಳಿನ (ನಡುಮಿದುಳನ್ನು ಉಳಿದು) ಉಚ್ಚ ಕ್ರಿಯಾವಾಹಿ ಕೇಂದ್ರವೆನಿಸುತ್ತದೆ. ನಗುವುದು, ಆಕಳಿಸು ವುದು, ನಡುಗುವುದು ಮುಂತಾದ ಭಾವನಾವ್ಯಂಜಕವಾದ ಅನಿಚ್ಛಾಕೃತ ಭೌತಿಕ ಪ್ರಕ್ರಿಯೆಗಳ ನಿಯಂತ್ರಣ ಅವಕ್ಕೆ ಸೇರಿದ್ದು. ೧೧ನೆಯ ನಕ್ಷೆಯಲ್ಲಿ ಮೂಲ ನರಜಾಲಗಳನ್ನು ಕಾಣಬಹುದು.


ಹಳಮಿದುಳು ಮತ್ತು ಬೆನ್ನು ಹುರಿಗಳನ್ನು ಸೇರಿಸಿ ಒಟ್ಟಿಗೆ ಕೆಳಗಿನ ಕೇಂದ್ರಗಳೆನ್ನುವುದು ರೂಢಿ; ಮೇಲಿನ ಕೇಂದ್ರಗಳು ಮುಮ್ಮಿದುಳಿನಲ್ಲಿವೆ.

ಬೆನ್ನುಹುರಿ ಮತ್ತು ಕ್ಷೇಪಕ್ರಿಯೆ : ಆಗಲೇ ಹೇಳಿದ ಸರಳವಾದ ಎಷ್ಟೋ ಕ್ಷೇಪಕ್ರಿಯೆಗಳನ್ನು ಬೆನ್ನುಹುರಿ ನಿಯಂತ್ರಿಸುತ್ತದೆ. ಹಳಮಿದುಳು ನಿಯಂತ್ರಿ ಸುವ (೧) ಬೆಳಕಿನಿಂದ ಉಂಟಾಗುವ ಕ್ಷೇಪಾನುಕ್ರಿಯೆ ಮತ್ತು (೨) ಲಾಲಾ ರಸೋತ್ಪಾದನೆ ಮುಂತಾದ ತಲೆಯ ಕ್ಷೇಪಕ್ರಿಯೆಗಳು ಮಾತ್ರ ಅಪವಾದಗಳು.

ಮುಮ್ಮಿದುಳಿನ ಸಹಕಾರವನ್ನು ಅಪೇಕ್ಷಿಸದ ಭೌತಿಕ ಪ್ರೇರಣೆಗಳಿಗೆ ತಕ್ಕಂತೆ ಉಂಟಾಗುವ ಜಡಾನುಕ್ರಿಯೆಗಳು ಎಷ್ಟೋ ಇವೆ. ಉದಾಹರಣೆಗಾಗಿ, ಈಗ ನಾವು ಒಂದು ಕಪ್ಪೆಯ ತಲೆಯನ್ನು ಕತ್ತರಿಸಿ ಒಗೆದು ಅದರ ರಕ್ತನಾಳಗಳನ್ನು ರಕ್ತ ಸೋರದಂತೆ ಕಟ್ಟಿ ಮೇಜಿನ ಮೇಲಿಟ್ಟರೆ ಅದು ಕೆಲ ಘಂಟೆಗಳ ಕಾಲ ಸಸ್ಯ ಬದುಕಿದಂತೆ ಬದುಕಿರುತ್ತದೆ. ಅದಕ್ಕೆ ಭಾವನಾಂಶದ ಸಂವೇದನೆ ಶಕ್ಯವಾಗದು; ಸ್ವೇಚ್ಛಾಕೃತ ಚಲನವಲನಗಳನ್ನು ಮಾಡಲಾರದು — ಅಲ್ಲದೆ ಅದಕ್ಕೆ ಯಾವುದೇ ಬಗೆಯ ಪ್ರಜ್ಞೆಯಾಗಲಿ ಅನುಭವವಾಗಲಿ ಇರದು. ಆದರೆ ಒಂದು ಚೂರು ಒತ್ತುಕಾಗದವನ್ನು ಆಮ್ಲದಲ್ಲಿ ಅದ್ದಿ ಅದರ ಬಲಬದಿಯ ಚರ್ಮವನ್ನು ಮೆಲ್ಲಗೆ ಅದರಿಂದ ಮುಟ್ಟಿದರೆ ತಲೆಯಿಲ್ಲದ ಆ ಪ್ರಾಣಿಯು ತನ್ನ ಬಲಗಾಲನ್ನು ಎತ್ತಿ ಮುಟ್ಟಿದ ಭಾಗವನ್ನು ಉಸಿದುಕೊಳ್ಳುತ್ತದೆ. ಅದರ ಬಲಗಾಲನ್ನು ಬಿಗಿಯಾಗಿ ಹಿಡಿದುಕೊಂಡರೆ ಒಂದುಕ್ಷಣದ ನಂತರ ಅದು ತನ್ನ ಎಡಗಾಲನ್ನು ಎಳೆದು ಮೊದಲಿನಷ್ಟೇ ಸರಿಯಾಗಿ ತುರಿಸಿಕೊಳ್ಳುತ್ತದೆ. ನೋಡುವವನಿಗೆ ಅದು ಸ್ವೇಚ್ಛೆಯಿಂದಲೇ ತಿಳಿದು ತುರಿಸಿಕೊಂಡಂತೆ ಕಾಣುತ್ತದೆ. ಆದರೆ ವಾಸ್ತವಿಕವಾಗಿ ಕಪ್ಪೆಗೆ ಯಾವ ಅನುಭವವೂ ಆಗದು. ಅದರ ಕಾರ್ಯವು ಎದೆಬಡಿತದಷ್ಟೇ ಎಚ್ಚರವಿಲ್ಲದೆ, ಉದ್ದೇಶವಿಲ್ಲದೆ ನಡೆದದ್ದು.

ಕ್ಷೇಪಕ್ರಿಯೆಯು ಮುಮ್ಮಿದುಳಿನಿಂದ ಸ್ವತಂತ್ರ ಎಂಬ ಸಂಗತಿಯನ್ನು ಇನ್ನೂ ಸ್ಪಷ್ಟವಾಗಿ ಮನುಷ್ಯರಲ್ಲಿ ಕಾಣಬಹುದು. ಒಬ್ಬನು ಒಮ್ಮೆ ಅಪಘಾತಕ್ಕೆ ತುತ್ತಾಗಿ ಬೆನ್ನುಹುರಿ ಹರಿದುಕೊಂಡಾಗಲೂ ಬದುಕಿದ್ದ ನಿದರ್ಶನವಿದೆ. ಅಂಥ ಸಮಯದಲ್ಲಿ ಬೆನ್ನುಹುರಿ ಹರಿದುಹೋದುದರಿಂದ ಮಿದುಳಿನಿಂದ ಯಾವ ಸಂದೇಶವೂ ಹರಿದ ಸ್ಥಳದ ಕೆಳಗಿನ (ದೇಹದ) ಯಾವ ಭಾಗಗಳಿಗೂ ತಲುಪ ದಾದರೂ, ಅವನ ಕಾಲುಗಳು ಬೆನ್ನುಹುರಿಯಿಂದ ನಿಯಂತ್ರಿತವಾದ ಸರಳ ಕ್ಷೇಪಕ್ರಿಯೆಗಳನ್ನು ಕೆಲಕಾಲ ಮಾಡಬಲ್ಲುದು. ಒಂದು ಸೂಜಿಯನ್ನು ಅವನ ಕಾಲಿಗೆ ಚುಚ್ಚಿದರೆ ಅವನ ಕಾಲು ಫಕ್ಕನೆ ಸರಿಯುವುದು. ಅವನ ಅಂಗಾಲಿಗೆ ಒಂದು ಪಕ್ಕದಿಂದ ಕಚಗುಳಿ ಇಟ್ಟರೆ ಸ್ವಸ್ಥಮನುಷ್ಯನಂತೆ ಅವನು ಮುಲು ಒದ್ದಾಡುತ್ತಾನೆ.

ಕ್ಷೇಪಚಾಪ ಮತ್ತು ಪ್ರಜ್ಞೆ : ಮೇಲೆ ಹೇಳಿದ ಮನುಷ್ಯನಿಗೆ ಯಾ ಭಾವನಾಂಶವನ್ನೂ ಗ್ರಹಿಸುವ ಶಕ್ತಿ ಇಲ್ಲದಾಗ ಸೂಜಿ ಚುಚ್ಚಿದ್ದಕ್ಕಾಗ



DOUBLE CONNECTION MADE THROUGH
CENTRAL NEURON

ಕಚಗುಳಿ ಇಟ್ಟಿದ್ದಕ್ಕಾಗಲಿ ಪ್ರತಿಕ್ರಿಯೆಯನ್ನು ಹೇಗೆ ಎಸಗಬಲ್ಲ? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರ ಇಂತಿದೆ :

ಆಹಾರವನ್ನು ಜೀರ್ಣಿಸುವ ಕೆಲಸದಲ್ಲಿ ಮಗ್ನವಾದ ಜಠರ ಮಾಡುವಂಥ ಕ್ಷೇಪಕ್ರಿಯೆಗಳು ಸಂಪೂರ್ಣವಾಗಿ ನಮಗೆ ಎಚ್ಚರವಿಲ್ಲದೆಯೇ ನಡೆಯುತ್ತವೆ. ಸೂಜಿ ಚುಚ್ಚಿದಾಗ ನಾವು ಮುದುಡಿಕೊಳ್ಳುವಂಥ ಕ್ಷೇಪಕ್ರಿಯೆಗಳಲ್ಲಿ ಅವುಗಳ ಪ್ರೇರಣೆಯೊಂದಿಗೆ ಸಂವೇದನೆಯೂ ಕೂಡಿಕೊಂಡಿರಬಹುದು. ಈ ಎರಡನೆಯ ಬಗೆಯ ಕ್ಷೇಪಕ್ರಿಯೆಗಳಲ್ಲಿ ಸಂವೇದನೆಯೇ ಅನುಕ್ರಿಯೆಗೆ ಕಾರಣವೆಂದು ನಾವು ಭಾವಿಸುವ ಸಂಭವವಿದೆ. ಆದರೆ ಅದು ಸರಿಯಲ್ಲ. ಅನುಕ್ರಿಯೆಯ ಅನಂತರ ಸಂವೇದನೆಯು ಉಂಟಾಗುತ್ತದೆ; ಅಲ್ಲದೆ ಅದು ಅನುಕ್ರಿಯೆಯನ್ನು ಉಂಟುಮಾಡುವುದರಲ್ಲಿ ಯಾವ ಪಾತ್ರವನ್ನೂ ವಹಿಸುವುದಿಲ್ಲ. ಅನುಕ್ರಿಯೆಗೆ ಅನುಗತವಾಗಿ ಸಂವೇದನೆ ಉಂಟಾಗುವ ಪ್ರಕರಣಗಳಲ್ಲಿ ಸಂಪರ್ಕನರಗಳ ಮೂಲಕ ಜ್ಞಾನವಾಹಿ ಮತ್ತು ಕ್ರಿಯಾವಾಹಿಗಳು ಬೆನ್ನುಹುರಿಯಲ್ಲಿ ಇತರ ಶಾಖೆಗಳೊಡನೆ ಮಿದುಳಿನ ಸಂಪರ್ಕವನ್ನು ಪಡೆಯುತ್ತವೆ. ಈ ಪ್ರಕಾರ ಜ್ಞಾನವಾಹಿ ನರವು ಕೇಂದ್ರ ನರದ ಮೂಲಕ ಇಬ್ಬಗೆಯ ಸಂಪರ್ಕವನ್ನು ಕಲ್ಪಿಸುತ್ತದೆ: ಒಂದನೆಯದು ಕ್ಷೇಪಾನುಕ್ರಿಯೆನ್ನು ಉಂಟುಮಾಡುವ ಕ್ರಿಯಾವಾಹಿಯೊಡನೆ; ಎರಡನೆಯದು ಸಂವೇದನೆಯನ್ನು ಉಂಟುಮಾಡುವ ಮಿದುಳಿನೊಡನೆ. ಎಂಟನೆಯ ನಕ್ಷೆಯು ಈ ಸಂಗತಿಯ ಸ್ಥೂಲಜ್ಞಾನವನ್ನು ಮಾಡಿಕೊಡುತ್ತದೆ.

ಹೀಗೆ ಸಂವೇಪನೆ ಎಂಬುದು ಒಂದು ಗೌಣ ಫಲಿತಾಂಶ. ಮಿದುಳಿನೊಡನೆ ಸಂಪರ್ಕವನ್ನು ನಿಲ್ಲಿಸಿ,ಸಂವೇದನೆ ಆಗದಂತೆ ಮಾಡಿದಾಗಲೂ ಕ್ಷೇಪಾನುಕ್ರಿಯೆ ನಡೆವೇ ನಡೆಯುತ್ತದೆ. ಸೂಜಿ ಚುಚ್ಚಿದಾಗ ನಾವು ಕೈಕಾಲು ಸರಿಸಿಕೊಳ್ಳುವುದು ಅಥವಾ ಕಚಗುಳಿ ಇಟ್ಟಾಗ ಒದ್ದಾಡುವುದು ತನ್ನಷ್ಟಕ್ಕೇ ನಡೆಯುತ್ತದೆಯಲ್ಲದೆ, ನಮಗೆ ಆ ಸಂವೇದನೆ ಬೇಡವಾದ್ದರಿಂದ ಅಲ್ಲ ಎಂಬುದನ್ನು ನಂಬುವುದು ಕಷ್ಟ; ಆದರೆ ಸತ್ಯವೇನೋ ಹಾಗೇ ಇದೆ.

ಕ್ಷೇಪಕ್ರಿಯೆಯಲ್ಲಿ ಮಿದುಳಿನ ಪಾತ್ರ: ಮಿದುಳನ್ನು ಕಿತ್ತೊಗೆದಾಗಲೂ ಅದರ ಸಂಬಂಧ ಇತರ ಭಾಗಗಳೊಡನೆ ಇಲ್ಲದಂತೆ ಮಾಡಿದಾಗಲೂ ಕ್ಷೇಪಕ್ರಿಯೆ ನಡೆಯಬಲ್ಲುದೆಂಬುದೀಗ ತಿಳಿದುಬಂದುದರಿಂದ ಕ್ಷೇಪಕ್ರಿಯೆ ಮಿದುಳಿನಿಂದ

ಸ್ವತಂತ್ರ ಎನ್ನಬಹುದು. ಹೀಗಿದ್ದರೂ ಮಿದುಳೂ ಬೆನ್ನುಹುರಿಯೂ ಸಮಸ್ಥಿತಿಯ ಸಂಬಂಧದಲ್ಲಿರುವಾಗ ಮಿದುಳು ಕ್ಷೇಪಕ್ರಿಯೆಯ ಮೇಲೆ ಕೆಲ ಮಟ್ಟಿಗೆ ಪರೋಕ್ಷವಾಗಿ ಪ್ರಭಾವ ಬೀರುತ್ತದೆ. ಮಿದುಳಿನ ಸಂಪರ್ಕವಿದ್ದಾಗ ಕ್ಷೇಪಕ್ರಿಯೆಯನ್ನು ಜೋರಾಗಿ ಇಲ್ಲವೆ ಮೆಲ್ಲಗೆ ಮಾಡಬಹುದು. ಅದರ ಈ ತೀವ್ರತೆಯು ಬಹುಮಟ್ಟಿಗೆ ಪ್ರೇರಣೆಯನ್ನೇ ಅವಲಂಬಿಸಿರುವುದಾದರೂ ಮಿದುಳಿನ ಚಾಲನೆಗೊಳಗಾದ ಬೆನ್ನುಹುರಿಯ ಸಾಮಾನ್ಯ ಅವಸ್ಥೆಯನ್ನೂ ಅಂಶತಃ ಅವಲಂಬಿಸುತ್ತದೆ. ಸಮಸ್ಥಿತಿಯಲ್ಲಿದ್ದಾಗ ನಾವು ಲಕ್ಷ್ಯಕ್ಕೆ ತಾರದಿರಬಹುದಾದ ಸ್ಪರ್ಶಕ್ಕೆ, ಗಾಬರಿಯ ಸ್ಥಿತಿಯಲ್ಲಿರುವಾಗ ತೀವ್ರಾನುಕ್ರಿಯೆಯನ್ನು ತೋರಿಸಬಹುದು. ಒಂದೇ ಬಗೆಯ ಪ್ರೇರಣೆಯಾದರೂ ಯಾವಾಗಲೂ ಒಂದೇ ಬಗೆಯ ಅನುಕ್ರಿಯೆಯನ್ನು ಉಂಟುಮಾಡಲಾರದು ಎಂಬ ಮಾತನ್ನಿಲ್ಲಿ ನೆನೆದುಕೊಳ್ಳಬೇಕು. ಸಮಸ್ಥಿತಿಯಲ್ಲಿರುವ ಮಿದುಳುಳ್ಳ ಎಲ್ಲ ಪ್ರಾಣಿಗಳಲ್ಲೂ ಇದು ಸರಳವಾದ ಕ್ಷೇಪಕ್ರಿಯೆಯ ಮಟ್ಟದಲ್ಲೂ ನಡೆಯುತ್ತದೆ.

ಇದೂ ಅಲ್ಲದೆ, ನಾವು ಕೆಲವೊಮ್ಮೆ ಸ್ವೇಚ್ಛಾಕೃತವಾಗಿ ಶೀನುವಾಗ ಇಲ್ಲವೆ ವೈದ್ಯನೊಬ್ಬನು ನಮಗೆ ಸೂಜಿ ಚುಚ್ಚಿದಾಗ ಪ್ರಯತ್ನಪಟ್ಟು ಸುಮ್ಮನೆ ಕುಳಿತುಕೊಂಡಿರುವಾಗ ಪರಿಮಿತ ಪರಿಮಾಣದಲ್ಲಿ ಮಿದುಳಿನ ನಿಯಂತ್ರಣವಿರುವುದು ಸ್ಪಷ್ಟ. ಕೆಲವು ಪ್ರಕರಣಗಳಲ್ಲಿ ಕ್ರಿಯಾವಾಹಿಗಳಿಂದ ಮೂಲ ಮಾಂಸಖಂಡಗಳಿಗೆ ಸಂದೇಶ ಬಂದಾಗಲೂ ತದ್ವಿರುದ್ಧವಾಗಿ ಇತರ ಮಾಂಸಖಂಡಗಳನ್ನು ಕಾರ್ಯದಲ್ಲಿ ತೊಡಗಿಸುವಷ್ಟರಿಂದಲೇ ಇಂಥ ನಿಯಂತ್ರಣ ಸಾಧ್ಯವಾಗಬಲ್ಲುದು. ಆದರೆ ಬಹುಶಃ ಇದು ಇಡಿ ವಿವರಣೆಯಾಗಲಾರದು. ನರಪ್ರವಾಹದ ಗತಿಯನ್ನು ವಿಸಂಧಿಯ ಪ್ರತಿಭಟನೆಯ ಮೂಲಕ ಮಿದುಳು ನೇರವಾಗಿ ಅಲ್ಲೇ ಇಂಗಿಸಿ ಆಗಬೇಕಾಗಿದ್ದ ಕ್ಷೇಪಕ್ರಿಯೆಯನ್ನು ತಡೆಹಿಡಿಯಬಹುದು. ಈ ಬಗೆಯಿಂದ ಮಿದುಳು ನಿಯಂತ್ರಿಸುವುದರ ತಂತ್ರವಿನ್ನೂ ಪೂರ್ಣವಾಗಿ ತಿಳಿದುಬಂದಿಲ್ಲ.

ಇಲ್ಲಿ ಮೇಲಿನ ಕೇಂದ್ರಗಳ ನೆರವಿಲ್ಲದೆ ಅನಿಚ್ಛಾಕೃತವಾಗಿ, ಹುಟ್ಟುಗುಣವೆನಿಸಿ, ನಡೆಯುವ ಕ್ರಿಯೆಯನ್ನು ಕ್ಷೇಪವೆಂದು ಹೇಳಲಾಗಿದೆ. ಇದೇ ಉಕ್ತ ಪದದ ನಿರ್ದಿಷ್ಟವಾದ ಅರ್ಥ. ವರ್ತನಾವಾದಿಗಳು ಕ್ಷೇಪವೆಂಬ ಪದವನ್ನು ವಿಶಾಲವಾದ ಅರ್ಥದಲ್ಲಿ ಬಳಸುತ್ತಾರೆ. ಅವರ ಪ್ರಕಾರ ಎಲ್ಲ ಮಾನವ್ಯವರ್ತನೆ

ಯನ್ನೂ ಕ್ಷೇಪಸಂಯೋಗಗಳ ರೂಪಕ್ಕೆ ಇಳಿಸಿಬಿಡಬಹುದು.

ಸ್ವಾಯತ್ತ ನರಮಂಡಲ

೯ನೆಯ ನಕ್ಷೆಯಲ್ಲಿ ಸ್ವಾಯತ್ತ ನರಮಂಡಲವನ್ನು ಕಾಣಬಹುದು. ಅದು ಜೀವಶಾಸ್ತ್ರೀಯವಾಗಿ ಹೆಚ್ಚು ಪ್ರಾಚೀನ ಮತ್ತು ಕೇಂದ್ರ ನರಮಂಡಲ ದಿಂದ ಅಂಶತಃ ಸ್ವತಂತ್ರ. ಅದರ ರವೆಗಳು (Cell-bodies) ನರಜಾಲದಲ್ಲಿ ಸಂಗ್ರಹಿಸಲ್ಪಟ್ಟಿವೆ. ಈ ನರಜಾಲಗಳಲ್ಲಿ ಹಲವು, ಬುಡದಲ್ಲಿ ಕೂಡಿಕೊಂಡ ಎರಡು ಸರಪಳಿಗಳಾಗಿ ಬೆನ್ನುಹುರಿಯ ಎರಡೂ ಬದಿಗಳಲ್ಲಿ ಹರಿದಿವೆ. ಸ್ವಾಯತ್ತ ನರಮಂಡಲವು ಅಕಶೇರುಕಗಳ ಪ್ರಾಚೀನ ನರಮಂಡಲಗಳನ್ನು ಬಹುಮಟ್ಟಿಗೆ ಹೋಲುತ್ತದೆ ಅದರ ನರಜಾಲಗಳ ಸರಪಳಿಯಿಂದ ಬೆನ್ನುಹುರಿಯ ಮಧ್ಯಭಾಗವು ನೇರವಾಗಿ ಸಂಬಂಧಿಸಲ್ಪಟ್ಟಿದೆ.


ಸ್ವಾಯತ್ತ ನರಮಂಡಲದ ನರಜಾಲಗಳೆಲ್ಲವೂ ಪರೋಕ್ಷಾಪರೋಕ್ಷ ರೀತಿ ಯಿಂದ ಬೆನ್ನುಹುರಿಯ ಮೂಲಕ ಹಿಮ್ಮಿದುಳು ಹಾಗೂ ಭಾವನಾಪೀಠ ಗಳೊಡನೆ ಸಂಬಂಧಪಡೆದಿವೆ. ಶರೀರದ ಅನಿಚ್ಛಾಕೃತವಾದ ಆಂತರಿಕ ಪ್ರಕ್ರಿಯೆ ಗಳಮೇಲೆ ಬೀಳುವ ಹಮಿದುಳಿನ ಈ ಭಾಗಗಳ ಪ್ರಭಾವದಲ್ಲಿ ಮಧ್ಯಸ್ಥಿಕೆ ಮಾಡುವುದೇ ಅವುಗಳ ಕೃತ್ಯ; ಸ್ವಾಯತ್ತಮಂಡಲದ ನರಗಳು ಹೃದಯ ದೊಡನೆಯೂ ಶ್ವಾಸಕೋಶ, ಜಠರ, ಕರುಳು ಮತ್ತು ದೇಹದೊಳಗಿನ ಇತರ ಅವಯವಗಳೊಡನೆಯೂ ಸಂಪರ್ಕಹೊಂದಿವೆ; ಮತ್ತು ನಾಳಗ್ರಂಥಿಗಳಾದ ಅಶ್ರುಗ್ರಂಥಿ, ಲಾಲಾಗ್ರಂಥಿ, ಸ್ವೇದಗ್ರಂಥಿ ಹಾಗೂ ಕೆಲ ನಿರ್ನಾಳಗ್ರಂಥಿ ಗಳೊಡನೆ—ವಿಶೇಷತಃ ತೋಜೋಗ್ರಂಥಿಗಳೊಡನೆ (Adrenals) - ಅವು ಕೂಡಿ ಕೊಂಡಿವೆ. ಭಾವನೆಗಳಿಂದಲೂ, ಕಷ್ಟಕರವಾದ ಪ್ರಯತ್ನದಿಂದಲೂ ಹವೆಯ ಬದಲಾವಣೆ ಮುಂತಾದ ಆವರಣ ಪರಿಸ್ಥಿತಿಗಳಿಂದಲೂ ಉಂಟಾದ ಈ ಅವಯವಗಳ ಕಾರ್ಯಪರಿವರ್ತನೆಗಳೆಲ್ಲವೂ ಸ್ವಾಯತ್ತ ನರಮಂಡಲದ ಮೂಲಕ ಕಳಿಸಲಾಗುವ ಚೋದನೆಗಳನ್ನೇ ಅವಲಂಬಿಸುತ್ತವೆ.

ಕೃತ್ಯದ ದೃಷ್ಟಿಯಿಂದ ಅನುಕಂಪಕವೆಂದೂ ಉಪಾನುಕಂಪಕವೆಂದೂ ಸ್ವಾಯತ್ತನರಮಂಡಲವನ್ನು ಇಬ್ಬಗೆಯಾಗಿ ವಿಂಗಡಿಸಲಾಗಿದೆ. ಮೊದಲನೆಯದು ಮೇಲುಕೋಷ್ಠದ ಪ್ರದೇಶವನ್ನು ವ್ಯಾಪಿಸಿದರೆ, ಎರಡನೆಯದು ತಲೆಬುರುಡೆಯ ಪ್ರದೇಶದಲ್ಲೂ ಪೃಷ್ಠತ್ರಿಕಾಸ್ಥಿಯ ಪ್ರದೇಶದಲ್ಲೂ ವ್ಯಾಪಿಸಿದೆ. ಅವುಗಳ ಪರಸ್ಪರ

ಸಂಬಂಧವು ತುಂಬ ಜಟಿಲ. ಅದರ ಸ್ಥೂಲವಿನ್ಯಾಸವನ್ನು ೯ನೆಯ ನಕ್ಷೆಯಲ್ಲಿ ಕಾಣಬಹುದು. ಉಕ್ತ ಎರಡು ಮಂಡಲಭಾಗಗಳೂ ಹಿಮ್ಮಿದುಳು ಹಾಗೂ ಭಾವನಾಪೀಠಗಳ ಯಜಮಾನಿಕೆಗೆ ಒಳಪಟ್ಟಿವೆ.

ಅನುಕಂಪಕ ಹಾಗೂ ಉಪಾನುಕಂಪಕ ವಿಭಾಗಗಳ ಕೃತ್ಯಗಳು ವಿರುದ್ಧ ರೀತಿಯವು ಇಲ್ಲವೆ ಪರಸ್ಪರ ಪೂರಕಗಳು. ಅತ್ಯಯ ಪ್ರಸಂಗದಲ್ಲಿ ಅಥವಾ ಭಾವೋದ್ರೇಕ ಉಂಟಾದಾಗ ಆಗಿಂದಾಗ ಶಕ್ತಿಪ್ರಯೋಗ ಮಾಡುವ ಕೃತ್ಯವು ಮೊದಲನೆಯ ಮಂಡಲವಿಭಾಗಕ್ಕೆ ಸೇರಿದ್ದಾದರೆ, ಶರೀರದ ಶಕ್ತಿಯನ್ನು ಉಳಿಸಿಕೊಂಬ, ಸಂಗ್ರಹಿಸಿ ಇಡುವ ಮತ್ತು ತುಂಬಿಕೊಡುವ ಕೃತ್ಯವು ಎರಡನೆಯ ವಿಭಾಗಕ್ಕೆ ಸೇರಿದ್ದು; ಒಂದನೆಯದು ಜೀವರಸದ ವ್ಯಯಕ್ಕೆ ಕಾರಣವಾದರೆ, ಎರಡನೆಯದು ಅದರ ಸಂವರ್ಧನಕ್ಕೆ ಕಾರಣವಾಗಿದೆ. ಹೀಗೆ ಅನುಕಂಪಕ ಮಂಡಲವು ಎದೆಬಡಿತವನ್ನೂ ರಕ್ತದ ಒತ್ತಡವನ್ನೂ ಹೆಚ್ಚಿಸಿ ಜೀರ್ಣಶಕ್ತಿಯನ್ನು ಕುಗ್ಗಿಸುತ್ತದೆ; ಮತ್ತು ಉಪಾನುಕಂಪಕಮಂಡಲವು ತದ್ವಿರುದ್ಧ ಪರಿಣಾಮವನ್ನು ಉಂಟುಮಾಡುತ್ತದೆ.

ಹೊಸ ಮಿದುಳು: ಒಂದು ಪ್ರಾಣಿಯ ತಲೆಯಲ್ಲಿರುವ ಹೊಸ ಮಿದುಳಿನ ಸಂಪರ್ಕವು ಹಳಮಿದುಳಿನೊಡನೆ ಉಳಿಯದಂತೆ ಅದನ್ನೂ ಇದನ್ನೂ ಕೂಡಿಸುವ ನರಗಳನ್ನು ಪರಿಣಾಮಕರವಾಗಿ ತುಂಡರಿಸಿದರೆ, ಆ ಪ್ರಾಣಿಯ ಬೆಳವಣಿಗೆಯ ಮಟ್ಟವು ಬಹಳಮಟ್ಟಿಗೆ ಬದಲಾಗುತ್ತದೆ. ಮುಮ್ಮಿದುಳು ಅಥವಾ ಹೊಸಮಿದುಳನ್ನು ಹಳಮಿದುಳು ಮತ್ತು ಬೆನ್ನುಹುರಿಗಳ ಸಂಬಂಧವನ್ನು ಕಳೆದುಕೊಂಬಂತೆ ಮಾಡಿದಾಗ ಮಂಗವು ಸರಳವಾದ ಕ್ಷೇಪಕ್ರಿಯೆಗಳನ್ನು ಎಸಗಬಲ್ಲುದು. ಅದು ನಡೆಯಲಾರದು, ಅದಕ್ಕೆ ಯಾವ ಸಂವೇದನೆಯೂ ಆಗಲಾರದು; ಅದನ್ನು ಸಾಯದಂತೆ ಉಳಿಸಲು ಮನುಷ್ಯನು ಪದೇ ಪದೇ ಅದರ ಚಾಕರಿಯನ್ನು ಮಾಡಬೇಕಾಗುತ್ತದೆ. ಆದರೆ ಕೆಳವರ್ಗದ ಪ್ರಾಣಿಗಳಲ್ಲಿ ಹಳಮಿದುಳೇ ಆಗಲೂ ಸಂವೇದನೆ ಹಾಗೂ ಚಲನೆಗಳನ್ನು ನಿಯಂತ್ರಿಸುತ್ತದೆ. ಮುಮ್ಮಿದುಳನ್ನು ನಿಷ್ಪ್ರಭಾವಗೊಳಿಸಲಾದ ಕಪ್ಪೆಯು ಮೊದಲ ನೋಟಕ್ಕೆ ಸಮಸ್ಥಿತಿಯಲ್ಲಿರುವಂತೆಯೇ ತೋರುತ್ತದೆ. ಅದು ನಡೆವ, ಹಾರುವ, ಈಜುವ ಮತ್ತು ಋತುಮಾನಕ್ಕೆ ಸರಿಯಾಗಿ ಪ್ರಜೋತ್ಪತ್ತಿ ಮಾಡುವ ಕಾರ್ಯಗಳನ್ನು ಇತರ ಸಾಮಾನ್ಯ ಕಪ್ಪೆಗಳಂತೆಯೇ ಮಾಡುತ್ತಿರುತ್ತದೆ. ಆದರೆ ಸೂಕ್ಷ್ಮವಾಗಿ



SCHEMATIC DIAGRAM OF THE AUTONOMIC NERVOUS SYSTEM

ನೋಡಿದರೆ ಅದು ಹೊರಪ್ರೇರಣೆಗಳಿಗಷ್ಟೇ ಅನುಕ್ರಿಯೆ ಎಸಗಬಲ್ಲುದಲ್ಲದೆ ಸ್ವೇಚ್ಛೆಯಂತೆ ಯಾವ ಕೆಲಸವನ್ನೂ ಮಾಡಲಾರದು ಎಂಬುದು ಗೊತ್ತಾಗುತ್ತದೆ. ಆಹಾರವನ್ನದರೆದುರಿಟ್ಟರೆ ಅದು ತಿನ್ನುತ್ತದೆ; ಆದರೆ ಅದನ್ನು ಎಷ್ಟು ಹೊತ್ತಿನ ವರೆಗೆ ಉಪವಾಸ ಕೆಡಹಿದರೂ ಅದು ಆಹಾರವನ್ನು ಅರಸಲು ತಾನಾಗಿ ಹೋಗದು. ಪ್ರಯೋಜಕನು ತನ್ನನ್ನು ಹೇಗೆ ನಡೆಸಿಕೊಂಡರೂ ಅದು ತಪ್ಪಿಸಿಕೊಂಬ ಇಲ್ಲವೆ ಪ್ರತಿಭಟಿಸುವ ಪ್ರಯತ್ನವನ್ನು ಮಾಡದು. ಅದು ಬರಿ ಒಂದು ಅವಶ ಯಂತ್ರದಂತೆ ಸ್ವೇಚ್ಛಾಕೃತವಾದ ಅಥವಾ ಅಪ್ರತೀಕ್ಷಿತವಾದ ಯಾವ ಚಲನವನ್ನೂ ಮಾಡದೆ ಸುಮ್ಮನೆ ಇದ್ದುಬಿಡುತ್ತದೆ.

ಪಾರಿವಾಳಗಳೇ ಮೊದಲಾದ ಇತರ ಜೀವಿಗಳ ಮೇಲೂ ಇಂಥ ಪ್ರಯೋಗ ಮಾಡಿ ಇದೇ ಫಲಿತಾಂಶವನ್ನು ಕಾಣಲಾಗಿದೆ. ಅಂದರೆ ಮೇಲಿನ ಹಾಗೂ ಕೆಳಗಿನ ಕೇಂದ್ರಗಳ ಕೃತ್ಯಗಳಲ್ಲಿಯ ವ್ಯತ್ಯಾಸವನ್ನು ಚೆನ್ನಾಗಿ ಗೊತ್ತುಮಾಡಲಾಗಿದೆ. ಕೆಳಗಿನ ಕೇಂದ್ರಗಳು ವರ್ತಮಾನ ಪ್ರೇರಣೆಗಳಿಗಷ್ಟೇ ಅನುಕ್ರಿಯೆಯನ್ನು ಮಾಡಿಸುತ್ತವೆ; ಮೇಲಿನ ಕ್ರೇಂದ್ರಗಳು ಸ್ಮೃತಿ ಹಾಗೂ ಪ್ರತೀಕ್ಷೆಗಳಿಂದ ಕಾರ್ಯವನ್ನು ಮಾಡಿಸಬಲ್ಲವು. ವಿಚಾರ ಮಾಡುವಂಥ, ತರ್ಕಿಸುವಂಥ ಮೇಲುಮಟ್ಟದ ಕಾರ್ಯವನ್ನು ಮುಮ್ಮಿದುಳಷ್ಟೇ ಮಾಡಬಲ್ಲುದು.


ಮುಮ್ಮಿದುಳಿನ ರಚನೆ: ಹತ್ತನೆಯ ನಕ್ಷೆ ಮುಮ್ಮಿದುಳಿನ ಉದ್ದ ಕೊಯ್ತವನ್ನು ತೋರಿಸುತ್ತದೆ. ಅದನ್ನು ಬೂದಿ ಬಣ್ಣದ ಹಾಸೊಂದು ಸಂಪೂರ್ಣವಾಗಿ ಸುತ್ತಿಕೊಂಡಿದೆ. ಈ ಹೊರ ಹಾಸೇ ಮಿದುಳುದೊಗಟೆ. ಬೆನ್ನುಹುರಿಯ ಒಳಗಿನ ಬೂದಿ ಪದಾರ್ಥದಂತೆಯೇ ಇದಾದರೂ ಅಸಂಖ್ಯ ನರಗಳಿಂದ ಕೂಡಿದೆ; ಈ ನರಗಳ ಹುರಿಗಳು ಒಳಗಿನ ಬಿಳಿ ಪದಾರ್ಥದೊಳಗೆ ನುಗ್ಗಿ ಸಾಗಿವೆ. ಮಿದುಳುದೊಗಟೆಯು ಅತ್ಯಂತ ಚೆನ್ನಾಗಿ ಬೆಳೆದ ಹಾಗೂ ಅತಿ ಮುಖ್ಯವಾದ ಮಿದುಳುಭಾಗ. ಇಡಿ ಮುಮ್ಮಿದುಳು ಎರಡು ಸಮವಾದ ಗೋಲಾರ್ಧಗಳಾಗಿ ವಿಭಾಗವಾಗಿದೆ. ಅವುಗಳಲ್ಲಿ ಎಡ ಗೋಲಾರ್ಧವು ಶರೀರದ ಬಲಭಾಗವನ್ನೂ ಬಲ ಗೋಲಾರ್ಧವು ಅದರ ಎಡ ಭಾಗವನ್ನೂ ನಿಯಂತ್ರಿಸುತ್ತದೆ. ಗೋಲಾರ್ಧಗಳ ನಡುವಿನ ಪೊದರಿನಲ್ಲಿ (Corpus Callosum) ನರದ ನಂಟೊಂದಿದೆ. ಸ್ವಲ್ಪ ಹೆಚ್ಚುಕಡಿಮೆಯಾಗಿ ಮುಮ್ಮಿದುಳು ಮತ್ತೊಂದು ಬಗೆಯಿಂದ ಮುಂದಲೆ, ನಡುದಲೆ, ಹಿಂದಲೆ ಮತ್ತು ಬದಿವಲೆ ಎಂಬುದಾಗಿ ನಾಲ್ಕು

ಭಾಗಗಳಾಗಿ ವಿಂಗಡವಾಗಿದೆ. ಹನ್ನೊಂದನೆಯ ನಕ್ಷೆಯಲ್ಲಿ ಈ ಲಂಬಕಗಳ ಸ್ಥಾನಗಳನ್ನು ನೋಡಬಹುದು. ಮಿದುಳು ಹಾಗೂ ಬೆನ್ನುಹುರಿಗಳ ಮೈ ಮೇಲೆಲ್ಲ ಮುಮ್ಮಿದುಳು–ಬೆನ್ನುಹುರಿ ರಸ ಅಂಟಿಕೊಂಡಿದೆ. ಈ ರಸವು ಮಿದುಳಿನ ಒಳಪೊಟ್ಟರೆಗಳಲ್ಲಿಯೂ (Ventricles) ತುಂಬಿಕೊಂಡಿರುತ್ತದೆ.

ಹಿಂದೆ ಸ್ಮೃತಿ, ಸಂಕಲ್ಪ, ಕಲ್ಪನಾಶಕ್ತಿ ಮುಂತಾದ ಅಂತಃಶಕ್ತಿಗಳು ಮಿದುಳಿನ ಬೇರೆ ಬೇರೆ ಭಾಗಗಳಲ್ಲಿವೆ ಎಂದು ಭಾವಿಸಲಾಗಿತ್ತು. ಈ ನಂಬಿಗೆಗೆ ಬುಡವಿಲ್ಲ. ಆದರೆ ಕೃತ್ಯದ ಸ್ಥಲನಿಷ್ಕರ್ಷವು ಕೆಲಮಟ್ಟಿಗೆ ಬೇರೆ ಬಗೆಯಿಂದ ಅಲ್ಲಿದೆ ಎಂಬುದೇನೋ ನಿಜ. ಬೇರೆ ಬೇರೆ ಇಂದ್ರಿಯಗಳು ಮಿದುಳಿನ ಬೇರೆ ಬೇರೆ ಭಾಗಗಳಿಗೆ ತಮ್ಮ ಸಂದೇಶಗಳನ್ನು ಕಳಿಸುತ್ತವೆ: ಬೇರೆ ಬೇರೆ ಮಿದುಳು-ಭಾಗಗಳು ಬೇರೆ ಬೇರೆ ಮಾಂಸಖಂಡಗಳನ್ನು ಅಂಕೆಯಲ್ಲಿಟ್ಟುಕೊಂಡಿರುತ್ತವೆ.


ಮುಮ್ಮಿದುಳಿನ ಮೊದಲನೆಯ ವಿಭಾಗವಾದ ಮುಂದಲೆಯಲ್ಲಿ ಕ್ರಿಯಾವಾಹಿ ನರಗಳ ಪ್ರದೇಶವಿದೆ. ಈ ಪ್ರದೇಶದಿಂದಲೇ ದೇಹದ ಎಲ್ಲ ಚಲನವಲನಗಳಿಗೆ ಬೇಕಾದ ಚೋದನೆಗಳು ಹೊರಡುತ್ತವೆ. ಈ ಪ್ರದೇಶದ ಎದುರು ಅದರ ಮೇಲ್ಮಟ್ಟದ ಕ್ರಿಯಾಪ್ರದೇಶವಿದೆ. ಅದು ಹೆಚ್ಚಿನ ನರ–ಸಹಕಾರ ಬೇಕಾದ ಕುಶಲ ಚಲನವಲನಗಳಿಗೆ ಚೋದಕ. ಅದರ ಹಿಂದುಗಡೆ ನಡುದಲೆ ಇದೆ. ಅದರಲ್ಲಿ ಸ್ಪರ್ಶಸಂವೇದನಾ ಪ್ರದೇಶವಿದೆ. ದೇಹದ ವಿವಿಧ ಭಾಗಗಳಿಂದ ಬರುವ ಮಾಂಸಲ ಸಂವೇದನೆ (Muscle Sensation), ಚರ್ಮಸಂವೇದನೆಗಳ (Skin Sensation) ಸಂದೇಶಗಳು ಇಲ್ಲಿ ಬಂದು ಸೇರುತ್ತವೆ. ಮಿದುಳಿನ ಹಿಂಭಾಗದಲ್ಲಿ ಇರುವ ಹಿಂದಲೆ ಚಾಕ್ಷುಷಪ್ರದೇಶ. ಇದಕ್ಕೆ ಬೆಳಕಿನ ಎಲ್ಲ ಸಂವೇದನೆಗಳೂ ಬಂದು ಸೇರುತ್ತವೆ. ನಡುಮಿದುಳಿನ ಅಡಿಯಲ್ಲಿ ಬದಿದಲೆ ಇದೆ. ಇದು ಶ್ರಾವಣಪ್ರದೇಶ. ಇದು ಎಲ್ಲ ತರದ ಶಬ್ದಸಂವೇದನೆಗಳನ್ನೂ ಸ್ವೀಕರಿಸುತ್ತದೆ. ಮುಮ್ಮಿದುಳಿನ ಮಧ್ಯಸ್ಥಳದ ಬಲಗಡೆ ರಸನೇಂದ್ರಿಯ ಹಾಗೂ ಘ್ರಾಣೇಂದ್ರಿಯಗಳ ಸಂವೇದನೆಯ ಕೇಂದ್ರಪ್ರದೇಶಗಳಿವೆ.

ಸಂಪರ್ಕಪ್ರದೇಶ: ನಮ್ಮ ಮಿದುಳಿನಲ್ಲಿರುವ ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯಗಳ ಕೇಂದ್ರಪ್ರದೇಶಗಳು ಪ್ರಾಣಿಗಳ ಉಕ್ತ ಅವಯವಗಳನ್ನು ಹೋಲುತ್ತವೆ — ಗಾತ್ರದಲ್ಲಿ ಮಾತ್ರ ಪರಸ್ಪರ ವ್ಯತ್ಯಾಸವಿದೆ. ಮನುಷ್ಯ ಮಿದುಳಿನಲ್ಲಿ ಘ್ರಾಣಪ್ರದೇಶವು ಅತಿಚಿಕ್ಕದಾಗಿದ್ದರೆ ನಾಯಿಯ ಮಿದುಳಿನಲ್ಲಿ



VERTICAL CROSS-SECTION THROUGH THE HUMAN BRAIN

10



11

ಅದು ಅತಿ ದೊಡ್ಡದಾಗಿದೆ. ಆದರೆ ಇವನ್ನು ಬಿಟ್ಟು ನಾವು ಮುಂದೆಹೋದಾಗ ಮನುಷ್ಯನ ಹಾಗೂ ಪ್ರಾಣಿಯ ಮಿದುಳುಗಳಲ್ಲಿಯ ವ್ಯತ್ಯಾಸವನ್ನು ಸ್ಪಷ್ಟ ವಾಗಿ ಕಾಣುತ್ತೇವೆ. ಒಂದು ಮಂಗ ಅಥವಾ ನಾಯಿಯ ಮಿದುಳಿನಲ್ಲಿ ಕರ್ಮೇಂದ್ರಿಯ ಮತ್ತು ಜ್ಞಾನೇಂದ್ರಿಯಗಳ ಕೇಂದ್ರಪ್ರದೇಶಗಳನ್ನು ಅಳೆದ ನಂತರ ಮತ್ತೆ ಉಳಿಯುವ ಜಾಗ ಅತ್ಯಲ್ಪ. ಮನುಷ್ಯನ ಮಿದುಳಿನಲ್ಲಾದರೋ ಹಾಗೆ ಅಳೆದ ಬಳಿಕ ಬೇಕಾದಷ್ಟು ಜಾಗ ಉಳಿಯುತ್ತದೆ. ಅದರಲ್ಲಿ ಬೇರೆ ಬೇರೆ ಕರ್ಮ ಹಾಗೂ ಜ್ಞಾನೇಂದ್ರಿಯಗಳ ಸ್ಥಳಗಳನ್ನು ವಿಂಗಡಿಸುವ ವಿಸ್ತಾರವಾದ ಸಂಪರ್ಕಪ್ರದೇಶಗಳಿವೆ. ಈ ಪ್ರದೇಶಗಳ ಪೂರ್ಣ ಬೆಳವಣಿಗೆಯೇ ಮನುಷ್ಯನ ಮಿದುಳನ್ನು ಪ್ರಾಣಿಗಳ ಮಿದುಳಿಂದ ಬೇರೆ ಎಂದು ತೋರಿಸುತ್ತದೆ. ಜ್ಞಾನೇಂದ್ರಿಯ ಸ್ಥಳಗಳೇ ಇಂದ್ರಿಯಪ್ರತ್ಯಕ್ಷದ ಸ್ಥಾನಗಳು. ಆದರೆ ಚಾಕ್ಷುಷ ಶ್ರಾವಣಾದಿ ಸಂವೇದನೆಗಳು ಪ್ರತ್ಯೇಕವೂ ವಿಸಂಗತವೂ ಆಗಿ ಮೇಲಿನ ಸ್ಥಳ ಗಳಿಗೆ ತಲುಪದಂತೆ ನೋಡಿಕೊಳ್ಳುವ ಹೊಣೆ ಸಂಪರ್ಕಪ್ರದೇಶಗಳಿಗೆ ಸೇರಿದ್ದು. ಒಂದೊಂದು ಜಾತಿಯ ಸಂವೇದನೆಯಲ್ಲೂ ದೇಶ ಕಾಲ ಸಂದರ್ಭಗಳ ದೃಷ್ಟಿ ಯಿಂದ ಸಾಂಗತ್ಯವಿರಬೇಕು. ಅಲ್ಲದೆ ಒಂದೇ ವಸ್ತುವಿಗೆ ಸಂಬಂಧಿಸಿದಂತೆ ಬೇರೆ ಬೇರೆ ಕಾಲ ಹಾಗೂ ಸ್ಥಳಗಳಲ್ಲಿ ಬೇರೆ ಬೇರೆ ಸಂವೇದನೆಗಳನ್ನು ಪಡೆಯ ಬಹುದು. ಇವನ್ನು ಆ ವಸ್ತುವಿಗೇ ಅನ್ವಯಿಸಲು ಸಂಪರ್ಕಪ್ರದೇಶಗಳ ಸಹಾಯ ಅಗತ್ಯ. ಒಂದು ಸಂವೇದನೆಯನ್ನು ಇನ್ನೊಂದರೊಡನೆ ಹೊಂದಿಸು ವುದು, ಹಾಗೆ ಅವೆರಡನ್ನೂ ಒಂದು ವಸ್ತುವಿಗೆ ಅನ್ವಯಿಸುವುದು, ಅನ್ವಯಿಸಿ ಅದಕ್ಕೆ ಅರ್ಥ ಮಾಡುವುದು, ಅರ್ಥ ಮಾಡಿದ್ದನ್ನು ನೆನಪಿಟ್ಟುಕೊಳ್ಳುವುದು ಮತ್ತು ಆ ಮೂಲಕ ಅದನ್ನು ತಿಳಿದುಕೊಳ್ಳುವುದು—ಎಂಬೀ ಎಲ್ಲ ಪ್ರಕ್ರಿಯೆ ಗಳೂ ಸಂಪರ್ಕಪ್ರದೇಶಗಳನ್ನು ಅವಲಂಬಿಸಿವೆ.

ಈಗ ಒಂದು ದೃಷ್ಟಾಂತವನ್ನು ಎತ್ತಿಕೊಳ್ಳೋಣ: ನಾವು ಒಳಗೆ ಕುಳಿ ತಾಗ ಹೊರಗಿನಿಂದ ಯಾರದೋ ಸ್ವರ ಕೇಳಿಸುತ್ತದೆ. ಅದನ್ನು ಒಳಗೆ ಕುಳಿತೇ ರಾಮನ ಸ್ವರವೆಂದು ಗುರುತಿಸುತ್ತೇವೆ. ಶರೀರಶಾಸ್ತ್ರದ ಭಾಷೆಯಲ್ಲಿ ಹೇಳ ಬೇಕಾದರೆ, ರಾಮನ ಸ್ವರದ ಅಲೆಗಳು ನಮ್ಮ ಕಿವಿಯನ್ನು ಹೊಕ್ಕು ನಮ್ಮ ಮಿದುಳಿನ ಶ್ರಾವಣಕೇಂದ್ರದ ಒಂದು ಪ್ರೇರಣೆಯನ್ನು ಕೆಲವು ನರಗಳಿಗೆ ಮುಟ್ಟುವಂತೆ ಉಂಟುಮಾಡುತ್ತವೆ. ಶ್ರಾವಣಪ್ರದೇಶದಿಂದ ಹೊರಡುವ

ನರಗಳು ಸಂಪರ್ಕಪ್ರದೇಶಗಳಲ್ಲಿಯ ನರಗಳನ್ನು ಕಾರ್ಯದಲ್ಲಿ ತೊಡಗಿಸಿ ರಾಮನ ಮುಖ, ಅವನ ಹೆಸರಿನ ಶಬ್ದ ಮುಂತಾದವುಗಳ ಪ್ರತಿಮೆ ಅಥವಾ ಕಲ್ಪನೆಗಳನ್ನು ಉಂಟುಮಾಡುತ್ತವೆ. ಸಂಪರ್ಕದ ದೆಸೆಯಿಂದ ಉಂಟಾಗುವ ಪ್ರಾಥಮಿಕ ಸಂವೇದನೆ, ಕಲ್ಪನೆ, ಪ್ರತಿಮೆ ಮತ್ತು ಸ್ಮೃತಿಗಳ ಸಮೂಹವೇ ರಾಮನ ಸ್ವರವನ್ನು ಗುರುತಿಸುವುದು ಎಂಬ ಕಾರ್ಯ.

ಹೀಗೆ ಮಿದುಳಿನ ನರಗಳಲ್ಲಿ ಎರಡು ವಿಧ: ಇಂದ್ರಿಯಗಳ ಮೂಲಕ ನೇರವಾಗಿ ಹೊರಗಿನ ಯಾವುದಾದರೂ ವಸ್ತುವಿನಿಂದ ಪ್ರೇರಣೆ ಪಡೆದು ಸಂವೇದನೆಗಳನ್ನು ಉಂಟುಮಾಡುವುವು ಒಂದು ಬಗೆ; ಪರೋಕ್ಷವಾಗಿ ಇತರ ನರಗಳಿಂದ ಪ್ರೇರಣೆ ಪಡೆದು ಕಲ್ಪನೆ, ಪ್ರತಿಮೆ, ಅಥವಾ ಸ್ಮೃತಿಗಳನ್ನು ಉಂಟುಮಾಡುವ ನರಗಳು ಇನ್ನೊಂದು ಬಗೆ. ಮಿದುಳಿನ ಪ್ರತಿಯೊಂದು ಇಂದ್ರಿಯಪ್ರದೇಶದ ಸುತ್ತಲೂ ಆಯಾ ಇಂದ್ರಿಯಕ್ಕೆ ಸಂಬಂಧಿಸಿದ ಕಲ್ಪನೆ, ಪ್ರತಿಮೆ ಮುಂತಾದವುಗಳಿಗೆ ಸೇರಿದ ಸಂಪರ್ಕಪ್ರದೇಶವಿದೆ; ಅದೇ ರೀತಿಯಲ್ಲಿ ಮಿದುಳಿನ ಕರ್ಮೇಂದ್ರಿಯ ಸ್ಥಳಗಳಿಗೂ ಸಂಪರ್ಕ ಪ್ರದೇಶಗಳಿವೆ. ಇಷ್ಟೇ ಅಲ್ಲದೆ ಮೇಲ್ಮಟ್ಟದ ವಿಚಾರ ಪ್ರಕ್ರಿಯೆಗಳಿಗೆ ಸಂಬಂಧಿಸಿದ ವಿಶಾಲವಾದ ಅವಿಶಿಷ್ಟ ಸಂಪರ್ಕಪ್ರದೇಶಗಳು ಇರುತ್ತವೆ.

ಸಂಪರ್ಕಪ್ರದೇಶಗಳಿಗೆ ಉಂಟಾಗುವ ಅಪಾಯದ ಪರಿಣಾಮಗಳು: ಮಿದುಳಿನ ಚಾಕ್ಷುಷಪ್ರದೇಶವನ್ನು ಬಿಟ್ಟು ಕೇವಲ ಅದಕ್ಕೆ ಸಂಬಂಧಿಸಿದ ಸಂಪರ್ಕಪ್ರದೇಶಕ್ಕೆ ಅಪಾಯ ಉಂಟಾದರೆ ಅಂಥ ರೋಗಿಯ ದೃಷ್ಟಿಶಕ್ತಿಯು ಕೆಡುವುದಿಲ್ಲ. ಆದರೆ ಅವನು ಕಂಡ ವಸ್ತುಗಳು ಅವನಿಗೆ ಬಹಳ ಮಟ್ಟಿಗೆ ಅರ್ಥ ಹೀನವಾಗುತ್ತವೆ. ಅವನು ಒಂದು ಸೀಸದ ಕಡ್ಡಿಯನ್ನು ನೋಡಿದರೆ ಅದು ಅವನಿಗೆ ಕೇವಲ ಒಂದು ಉದ್ದವೂ ಸಪುರವೂ, ಒಂದು ತುದಿಯಲ್ಲಿ ಮೊನೆ ಯುಳ್ಳದ್ದೂ ಆದ ಪದಾರ್ಥವಾಗಿ ಕಾಣಿಸುತ್ತದೆ. ಅವನು ಅದನ್ನು ಸ್ಪಷ್ಟವಾಗಿ ನೋಡುತ್ತಾನೆ. ಆದರೆ ಅದು ಏನೆಂಬ ಕಲ್ಪನೆ ಅಥವಾ ಅದನ್ನು ತೆಗೆದು ಕೊಂಡು ಏನು ಮಾಡಬೇಕು ಎಂಬುದು ಅವನಿಗರಿಯದು. ಕರ್ಮಸಂಪರ್ಕ ಪ್ರದೇಶಗಳಿಗೆ ತೀಕ್ಷ್ಣವಾದ ಅಪಾಯ ಉಂಟಾದರೆ ಮನುಷ್ಯನ ಯೋಜನೆ ಮಾಡುವಮತ್ತು ಹಾಗೆ ಮಾಡಿ ಸುಸಂಗತವಾದ ಕಾರ್ಯವನ್ನು ನೆರವೇರಿಸುವ ಶಕ್ತಿ ಹೊರಟುಹೋಗುತ್ತದೆ. ಒಂದು ಬೀಡಿಯನ್ನು ಕಿಸೆಯಿಂದ ತೆಗೆದು ಹಚ್ಚಿ

ಸೇದುವುದನ್ನು ಕೂಡ ಅವನು ಮಾಡಲಾರನು. ಅವನು ಅದಕ್ಕೆ ಸಂಬಂಧಿಸಿದ ವಿವಿಧ ಕಾರ್ಯಗಳನ್ನು ಮಾಡಬಲ್ಲನು; ಆದರೆ ಸಂಗತವಾಗಿ ಮಾಡಲಾರನು. ಇನ್ನೊಬ್ಬನು ಅವನ ಎದುರು ಬೀಡಿಯನ್ನು ಸೇದಲು ತೊಡಗಿದರೆ ಅದನ್ನು ಸರಿಯಾಗಿ ಅನುಕರಿಸಬಲ್ಲನು. ಆದರೆ ಅವನು ಆ ಕೆಲಸಗಳನ್ನು ಸ್ವಬುದ್ಧಿಯಿಂದಲೇ ಮಾಡಲಾರನು. ಏಕೆಂದರೆ, ಇಷ್ಟಪಟ್ಟ ಪರಿಣಾಮದೊಡನೆ ಆ ಕಾರ್ಯಕ್ಕಿರುವ ಸಂಬಂಧವನ್ನು ಅವನು ಕಂಡುಕೊಳ್ಳಲಾರನು. ಹೀಗೆ ಕರ್ಮ ಹಾಗೂ ಜ್ಞಾನೇಂದ್ರಿಯಗಳ ಪ್ರದೇಶಗಳಿಗೆ ಹೊಡೆತ ಬೀಳದೆ ಕೇವಲ ಸಂಪರ್ಕ ಪ್ರದೇಶಕ್ಕೆ ಹೊಡೆತ ಬೀಳುವುದು ಬಹಳ ಅಪೂರ್ವ.

ನಿರ್ನಾಳ ಗ್ರಂಥಿಗಳು

ಮೇದೋಜೀರಕ ಗ್ರಂಥಿ: ನಿರ್ನಾಳಗ್ರಂಥಿಗಳು ವಿವಿಧ ಗ್ರಂಥಿರಸಗಳನ್ನು ಉಂಟುಮಾಡಿ ನೆತ್ತರಿಗೆ ಅವನ್ನು ಸೇರಿಸುತ್ತವೆ. ಕೆಲವು ಅವಯವಗಳ ಚಟುವಟಿಕೆಯ ಮಟ್ಟವನ್ನು ಇಳಿಸುವ ಅಥವಾ ಏರಿಸುವ ಶಕ್ತಿ ಆ ರಸಗಳಿಗೆ ಇದೆ. ಮೇದೋಜೀರಕ ಗ್ರಂಥಿಯು ಎರಡು ಬಗೆಯ ರಸಗಳನ್ನು ಉತ್ಪತ್ತಿ ಮಾಡುತ್ತದೆ. ಮೊದಲನೆಯದು ಮೇದೋಜೀರಕ ರಸ. ಇದು ಅಂತಃಸ್ರಾವವಲ್ಲ. ಇದು ಗ್ರಂಥಿಯಿಂದ ನೇರವಾಗಿ ನೆತ್ತರಿಗೆ ಹೋಗದೆ ಕರುಳಿಗೆ ಹೋಗುತ್ತದೆ. ಅಲ್ಲಿ ಇದು ಆಹಾರ ಜೀರ್ಣವಾಗುವುದಕ್ಕೆ ನೆರವಾಗುತ್ತದೆ. ಅದು ತನ್ನ ಇನ್ನೊಂದು ರಸವೆನಿಸಿದ ಇನ್‌ಸುಲಿನ್ನನ್ನು ನೆತ್ತರಿಗೆ ಸೇರಿಸುತ್ತದೆ. ರಕ್ತವು ಈ ರಸವನ್ನು ಮಾಂಸಖಂಡಗಳಿಗೆ ಒಯ್ದು ಅವಕ್ಕೆ ಸಕ್ಕರೆಯನ್ನು ಅಗ್ನಿವೃದ್ಧಿಗಾಗಿ ಬಳಸಲು ನೆರವಾಗುತ್ತದೆ. ಮೇದೋಜೀರಕಗ್ರಂಥಿಯು ಈ ರಸವನ್ನು ಪೂರೈಸದಿದ್ದರೆ ಸಿಹಿಮೂತ್ರ ಇಲ್ಲವೆ ಸಕ್ಕರೆರೋಗವು (Diabetes) ಉಂಟಾಗುತ್ತದೆ. ಏಕೆಂದರೆ, ಆಹಾರದಲ್ಲಿಯ ಸಕ್ಕರೆ ಆಗ ಕರಗುವುದಿಲ್ಲ ಮತ್ತು ಅದು ರಕ್ತದಲ್ಲಿ ಸಂಗ್ರಹವಾಗಿ ಕೊನೆಗೆ ಮೂತ್ರಕೋಶದಲ್ಲಿ ಹೊರಬೀಳುತ್ತದೆ. ಇನ್‌ಸುಲಿನ್ನಿನ ಉತ್ಪತ್ತಿಯಲ್ಲಿ ಹೆಚ್ಚುಕಡಿಮೆಯಾಗಿ, ಆ ಮೂಲಕ ವ್ಯಕ್ತಿಯ ರಕ್ತಗತ ಸಕ್ಕರೆಯ ಮಟ್ಟ ವ್ಯತ್ಯಾಸಹೊಂದಿದರೆ, ಅದು ಅವನ ವ್ಯಕ್ತಿತ್ವ ಮತ್ತು ವರ್ತನೆಗಳ ಮೇಲೆ ಪರಿಣಮಿಸುತ್ತದೆ. ಸಾಮಾನ್ಯವಾಗಿ ಇಂಥ ನಿರ್ನಾಳ ಗ್ರಂಥಿಗಳೆಲ್ಲವೂ ನೋಡುವುದಕ್ಕೆ ಅತಿ ಚಿಕ್ಕ ಅವಯವಗಳಾಗಿ ಕಾಣಿಸುತ್ತವೆ.

ಆದರೆ ಈ ಚಿಕ್ಕ ರಸಾಯನ ಕಾರ್ಖಾನೆಗಳು ಶರೀರಶಾಸ್ತ್ರದ ದೃಷ್ಟಿಯಿಂದಲೂ ಚಿಕಿತ್ಸಾಪದ್ಧತಿಯ ದೃಷ್ಟಿಯಿಂದಲೂ ಬಹಳ ಮುಖ್ಯವೆನಿಸಿವೆ.

ಓಜೋಗ್ರಂಥಿ: ಈ ಗ್ರಂಥಿಯು ಕುತ್ತಿಗೆಯ ಬುಡದಲ್ಲಿ ಶ್ವಾಸನಾಳದ ಎದುರು ಇದೆ. ಸಾಮಾನ್ಯವಾಗಿ ಇದು ಒಂದು ಔನ್ಸ್ ತೂಕ ಉಳ್ಳದ್ದಾಗಿರುತ್ತದೆ. ಇದು ಉಬ್ಬಿದರೆ ಹೆಚ್ಚು ಅಪಾಯವಿಲ್ಲ. ಕಾಹಿಲೆಯಿಂದ ಓಜೋಗ್ರಂಥಿ (Thyroid Gland) ನಷ್ಟವಾದರೆ ವ್ಯಕ್ತಿಯು ತನ್ನ ಹಿಂದಿನ ಚುರುಕುತನವನ್ನು ಕಳೆದುಕೊಂಡು, 'ಮೈಕ್ಸಿಡಿಮಾ'(Myxoedema) ಎಂಬ ಜಡಸ್ಥಿತಿಗೆ ಇಳಿಯುತ್ತಾನೆ; ಚರ್ಮ ದಪ್ಪವಾಗುತ್ತದೆ; ಮಾಂಸಖಂಡಗಳೂ ಮಿದುಳೂ ಜಡವಾಗುತ್ತವೆ.ಅವನು ಮಂದಗತಿಯವನೂ ಹೆಡ್ಡನೂ ಮರಗುಳಿಯೂ ಮತ್ತು ಏಕಾಗ್ರತೆ ಇಲ್ಲದವನೂ ಅಥವಾ ಪರಿಣಾಮಕರವಾಗಿ ವಿಚಾರಮಾಡಲು ಮತ್ತು ಕೆಲಸ ಮಾಡಲು ಅಶಕ್ತನೂ ಆಗುತ್ತಾನೆ. ಈ ಗ್ರಂಥಿಯು ಜನ್ಮತಃ ನ್ಯೂನತೆ ಉಳ್ಳದ್ದಾಗಿದ್ದರೆ ಅಥವಾ ಬಾಲ್ಯಾವಸ್ಥೆಯಲ್ಲಿ ನಾಶವಾಗಿದ್ದರೆ ಬೆಳವಣಿಗೆಯು ಕುಂಠಿತವಾಗುಗುತ್ತದೆ ಮತ್ತು ಬುದ್ಧಿಯು ವೃದ್ಧಿಯಾಗುವುದಿಲ್ಲ.ಅದರ ಉಗ್ರಪ್ರಕರಣಗಳಲ್ಲಿ 'ಕ್ರೆಟಿನ್ಸ್'ಹುಡುಗನು ಕುಳ್ಳನೂ ವಿಕೃತಾಕೃತಿಯವನೂ ನಿರ್ವೀರ್ಯನೂ ಆಗುತ್ತಾನೆ – ಮನೋವೃತ್ತಿಯಲ್ಲಿ ಮಾತ್ರ ಸಪ್ಪೆ-ಸಮಾಧಾನ ಸ್ಥಿತಿಯಲ್ಲಿ ಇರುತ್ತಾನೆ. ಕುರಿಯ ಓಜೋರಸವನ್ನು 'ಮೈಕ್ಸಿಡಿಮಾ' ಹಿಡಿದ ಮನುಷ್ಯನಿಗೆ ಚುಚ್ಚುಮದ್ದಿನ ರೂಪದಲ್ಲಿ ಕೊಟ್ಟಾಗ ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾದದ್ದು ಕಂಡುಬಂದಿತು. ಇನ್ನು 'ಕ್ರೆಟಿನ್ಸ್' ರೋಗಿಗಳಿಗೆ ಸಹ ಓಜೋರಸವನ್ನು ಕೊಟ್ಟಾಗ ಅವರ ಬುದ್ಧಿಮತ್ತೆ ಸಮಸ್ಥಿತಿಗೆ ಬಂದದ್ದು ತಿಳಿದುಬಂದಿದೆ. ಆದರೆ ಓಜೋರಸವನ್ನು ಕೊಡುವುದರಿಂದ ಸಮಸ್ಥಿತಿಯ ಮನುಷ್ಯನ ಬುದ್ಧಿಯ ಮಟ್ಟವನ್ನು ಏರಿಸಲಾಗುವುದಿಲ್ಲ.

ಶರೀರದ ಜೀವರಸೀಕರಣ ರೂಪದ ರಾಸಾಯನಿಕ ಕಾರ್ಯದ ವೇಗವನ್ನು ಹೆಚ್ಚಿಸುವುದೇ ಓಜೋರಸದ ಕೆಲಸ. ಈ ರಸ ಕೊರತೆಯಾದಾಗ ದೇಹದಲ್ಲಿಯ ಜೀವರಸೀಕರಣ ಕ್ರಿಯೆ ಮಂದಗತಿಗೆ ಇಳಿಯುತ್ತದೆ — ಅರ್ಥಾತ್ ಆಮ್ಲಜನಕದ ಬಳಕೆ ಕಡಿಮೆಯಾಗುತ್ತದೆ, ಇಂಗಾಲದ ಸಂಗ್ರಹವು ಜಾಸ್ತಿಯಾಗುತ್ತದೆ. ಓಜೋರಸದ ಉತ್ಪತ್ತಿಯು ಹೆಚ್ಚಾದರೆ ಜೀವರಸೀಕರಣ ಕ್ರಿಯೆಯು ಸಮಸ್ಥಿತಿಯ ಮಟ್ಟಕ್ಕಿಂತಲೂ ಹೆಚ್ಚಾಗುತ್ತದೆ. ಓಜೋಗ್ರಂಥಿಯು ಹೆಚ್ಚು

ಹೆಚ್ಚು ಕೆಲಸ ಮಾಡತೊಡಗಿದಾಗ ವ್ಯಕ್ತಿಯು ಶ್ರಾಂತನೂ ನರದ ಬಿಗಿತದಿಂದ ನರಳುವವನೂ ಶೀಘ್ರಕೋಪಿಯೂ ಚಿಂತಾಗ್ರಸ್ತನೂ ಅಸ್ಥಿಮಿತನೂ ಆಗುತ್ತಾನೆ. ಬೆಳವಣಿಗೆಯ ಅವಸ್ಥೆಯಲ್ಲೇ ಇರುವ ಮನುಷ್ಯನ ಬೆಳವಣಿಗೆಯು ತೀವ್ರವಾಗುತ್ತದೆ— ಅಂದರೆ ಎತ್ತರ ಹೆಚ್ಚುತ್ತದೆ ಮತ್ತು ವಾಮನತ್ವಕ್ಕೆ ವಿರುದ್ಧವಾದ ತ್ರಿವಿಕ್ರಮಾವತಾರವನ್ನು ಅವನು ತಾಳುತ್ತಾನೆ. ಆದರೆ ಆತನ ಬುದ್ಧಿಮತ್ತೆಯ ಬೆಳವಣಿಗೆ ಮಾತ್ರ ತೀವ್ರತರವಾಗುವುದಿಲ್ಲ.

ತೇಜೋಗ್ರಂಥಿ: ಈ ಚಿಕ್ಕ ಗ್ರಂಥಿಗಳು ಮೂತ್ರಕೋಶದ ಸಮೀಪದಲ್ಲಿ ಇವೆ. ಇವುಗಳಲ್ಲಿ ಪ್ರತಿಯೊಂದು ಗ್ರಂಥಿಗೂ ಹೊರದೊಗಟೆ ಮತ್ತು ಒಳತಿರುಳು ಎಂಬ ಎರಡು ಭಾಗಗಳಿರುತ್ತವೆ; ಇವುಗಳ ಕೃತ್ಯವೂ ಪ್ರತ್ಯೇಕ, ರಚನೆಯೂ ಬೇರೆ — ಇವುಗಳಲ್ಲಿ ಪ್ರತಿಯೊಂದೂ ಸ್ವತಂತ್ರಗ್ರಂಥಿ. ತೇಜೋಗ್ರಂಥಿಯ (Adrenal Glands) ತೊಗಟೆಯು ತೊಗಟೆ-ರಸವನ್ನೂ ತಿರುಳು ತಿರುಳು-ರಸವನ್ನೂ ಉತ್ಪಾದಿಸುತ್ತವೆ. ತಿರುಳುರಸ (ಅಡ್ರೀನಿನ್) ಒಂದು ಶಕ್ತಿಯುತವಾದ ರಸ; ರಕ್ತದಲ್ಲಿ ಇದರ ಅಲ್ಪಪ್ರಮಾಣವು ಈ ಕೆಳಗಿನ ಪರಿಣಾಮಗಳನ್ನು ಉಂಟುಮಾಡುತ್ತದೆ: ಬಲವಾದ ಹಾಗೂ ವೇಗವಾದ ಎದೆ ಬಡಿತ, ಹೆಚ್ಚಾದ ನೆತ್ತರೊತ್ತಡ, ಚರ್ಮ ಇಲ್ಲವೆ ಅಂತರವಯವಗಳ ಮೂಲಕವಾಗಿ ರಕ್ತವನ್ನು ಕಳುಹಿಸುವ ಬದಲು ಮಾಂಸಖಂಡದ ಮತ್ತು ಮಿದುಳಿನ ಮೂಲಕ ಬಲವಂತವಾಗಿ ಕಳುಹಿಸುವುದು, ಜಠರದ ಮತ್ತು ಕರುಳುಗಳ ಕೆಲಸವು ಥಟ್ಟನೆ ನಿಂತುಹೋಗುವುದು, ಶ್ವಾಸಕೋಶಗಳಲ್ಲಿರುವ ವಾಯುದ್ವಾರವು ಅಗಲವಾಗುವುದು, ಪಿತ್ತಕೋಶದಲ್ಲಿ ಸಂಚಿತವಾದ ಸಕ್ಕರೆಯು ರಕ್ತಕ್ಕೆ ಸೇರುವುದು; ಮಾಂಸಖಂಡಗಳ ಸುಸ್ತು ತಡವಾಗಿ ಆಗುವುದು, ಬೆವರು ಸುಖವಾಗಿ ಬರುವುದು ಮತ್ತು ಕಣ್ಣಿನ ಕನೀನಿಕೆಯು ಅಗಲವಾಗುವುದು. ಈ ಪರಿಣಾಮಗಳು ಸ್ವಾಯತ್ತ ನರಮಂಡಲದ ಅನುಕಂಪಕ ವಿಭಾಗದಿಂದಲೂ ಉಂಟಾಗುತ್ತವೆ. ಆದರೆ ಇವೆರಡರಲ್ಲಿ ಒಂದು ವ್ಯತ್ಯಾಸವಿದೆ. ಅನುಕಂಪಕ ನರಗಳು ಈ ಪರಿಣಾಮಗಳನ್ನು ಬಹುವೇಗವಾಗಿ ಮತ್ತು ಸ್ವಲ್ಪಕಾಲ ಮಾತ್ರ ಉಳಿಯುವಂತೆ ಉಂಟುಮಾಡುತ್ತವೆ; ತಿರುಳುರಸವಾದರೋ ರಕ್ತದಲ್ಲಿ ಸೇರಿದಾಗ ಇದನ್ನು ಹೆಚ್ಚು ಅವಧಿಯ ತನಕ ಉಳಿಯುವಂತೆ ಉಂಟುಮಾಡುತ್ತದೆ. ಹೀಗೆ ತೇಜೋಗ್ರಂಥಿಯ ಒಳತಿರುಳು ಅನುಕಂಪಕ ನರಗಳ ಸಹಕಾರಿ

ಎನಿಸಿದೆ. ಪ್ರಾಣಿಗಳು ಭಾವನೋದ್ರೇಕದಲ್ಲಿ ಇದ್ದಾಗ ಮೇಲೆ ಹೇಳಿದ ಪರಿಣಾಮಗಳೆಲ್ಲವೂ ಉಂಟಾಗಿ ಆ ಮೂಲಕ ಅವು ಅನಿರೀಕ್ಷಿತ ಅತ್ಯಯ ಪ್ರಸಂಗದಲ್ಲಿ ತಮ್ಮ ಆತ್ಮರಕ್ಷಣೆಯ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ಶಕ್ತವಾಗುತ್ತವೆ.

ತೇಜೋಗ್ರಂಥಿಯ ತೊಗಟೆರಸವು ಸೋಡಿಯಂ, ಪೊಟಾಸಿಯಂ ಮತ್ತು ಸಕ್ಕರೆಗಳನ್ನು ನಮ್ಮ ದೇಹ ಬಳಸಿಕೊಳ್ಳುವುದರಲ್ಲಿ ನೆರವಾಗುತ್ತದೆ; ಅಲ್ಲದೆ ಅದು ಮಾಂಸಖಂಡಗಳ ಮತ್ತು ಕಾಮವಿಷಯಿಕ ಕೃತ್ಯಗಳ ಮೇಲೆ ಗಣ್ಯ ಪ್ರಭಾವವನ್ನು ಬೀರುತ್ತದೆ. ಈಗ ಇನ್ನೂ ಸರಿಯಾಗಿ ಗೊತ್ತಾಗದಂತಹ ಬಗೆಯಿಂದ ಅದು ನಮ್ಮ ದೇಹವನ್ನು ಸಜ್ಜಾಗಿಡುತ್ತದೆ. ಜೀವನಕ್ಕೆ ಅದು ಆವಶ್ಯಕ. ತೇಜೋಗ್ರಂಥಿಯ ತೊಗಟೆಯು ಕ್ಷಯಕ್ರಿಮಿಯಿಂದ ಸಂಪೂರ್ಣ ನಷ್ಟವಾದಾಗ "ಅಡಿಸನ್ನನ ರೋಗ" ಉಂಟಾಗುತ್ತದೆ. ಇದೊಂದು ಮರಣಾಂತಿಕ ವ್ಯಾಧಿ. ಈ ರೋಗದ ಚಿಹ್ನಗಳು: ಕ್ರಮೇಣ ಸೊರಗುವುದು, ಸುಸ್ತಾಗುವುದು, ಕಾಮಶಕ್ತಿ ಕಳೆದುಹೋಗುವುದು, ಜೀವರಸೀಕರಣ ಕ್ರಿಯೆ ಮಂದವಾಗುವುದು ಮತ್ತು ಅಂಟುರೋಗಗಳ ಆಕ್ರಮಣವನ್ನು ತಡೆಯುವ ಶಕ್ತಿ ಕಡಿಮೆಯಾಗುವುದು; ಚರ್ಮ ಕಪ್ಪಾಗುತ್ತದೆ, ರೋಗಿ ಚಳಿ ಬಿಸಿಲನ್ನು ತಡೆಯಲಾರ, ಅವನಿಗೆ ನಿದ್ರಾಲೋಪವಾಗುತ್ತದೆ; ಅವನ ವರ್ತನೆಯಲ್ಲಿ ಯುಕ್ತಾಯುಕ್ತ ವಿವೇಕ ಕಡಿಮೆಯಾಗುತ್ತದೆ; ಶೀಘ್ರಕೋಪಿತ್ವ ಹೆಚ್ಚುತ್ತದೆ, ಸಹಕಾರ ಬುದ್ಧಿ ಲೋಪವಾಗುತ್ತದೆ. ತೊಗಟೆ ರಸವನ್ನು ಕೊಟ್ಟರೆ, ಇವುಗಳೆಲ್ಲ ಗುಣಹೊಂದುತ್ತವೆ.

ತೇಜೋಗ್ರಂಥಿಯ ತೊಗಟೆ ಹೆಚ್ಚಾಗಿ ಕಾರ್ಯ ಮಾಡತೊಡಗಿದರೆ ಗಂಡು ಅಥವಾ ಹೆಣ್ಣಿನಲ್ಲಿ ಪುಂಸ್ತ್ವದ ಲಕ್ಷಣಗಳು ಅಧಿಕವಾಗುತ್ತವೆ; ಹೆಣ್ಣಿನಲ್ಲಿ ದೇಹದ ಸ್ಥೂಲರೇಖಾವಿನ್ಯಾಸದ ಉರುಟುತನ ಹೋಗಿ, ಸ್ವರ ಗಂಡಿನಂತೆ ಗಂಭೀರವಾಗಿ, ಗಡ್ಡ ಬೆಳೆಯುತ್ತದೆ.

ಕಾಮಗ್ರಂಥಿಗಳು: ಸ್ತ್ರೀಯರ ಶೋಣಿತಕೋಶ, ಪುರುಷರ ಶುಕ್ಲಕೋಶ ಎಂಬಿವು ಮೂಲ ಕಾಮಗ್ರಂಥಿಗಳು. ಇವು ಪ್ರಜೋತ್ಪಾದಕ ಪುಟಗಳನ್ನು (Cells) ನಿರ್ಮಿಸುವುದಲ್ಲದೆ ಬೆಳವಣಿಗೆ ಹಾಗೂ ವರ್ತನೆಗಳ ಮೇಲೆ ಪರಿಣಾಮ ಮಾಡುವ ರಸಗಳನ್ನೂ ಉತ್ಪಾದಿಸುತ್ತವೆ. ಇಂಥ ರಸಗಳು ಅನೇಕ; ಇವುಗಳಲ್ಲಿ ಕೆಲವು ಸ್ತ್ರೀ ಪುರುಷರಿಗೆ ಸಾಧಾರಣ. ಪುಂರಸದ ಒಂದು

ಸಮತೋಲವು ಪುಂಸ್ತ್ವದ ದಿಶೆಯಲ್ಲಿ ಬೆಳವಣಿಗೆಯನ್ನು ತೆಗೆದುಕೊಂಡು ಹೋದರೆ ಸ್ತ್ರೀರಸದ ಒಂದು ಸಮತೋಲವು ಸ್ತ್ರೀತ್ವದ ದಿಶೆಯಲ್ಲಿ ಅದನ್ನು ಒಯ್ಯುವುದು. ಯೌವನಾರಂಭದಲ್ಲಿ ಸ್ತ್ರೀಪುರುಷರ ಜನನಾವಯವಗಳನ್ನು ಈ ರಸಗಳು ಪೋಷಿಸುವುದಲ್ಲದೆ, ಸ್ತ್ರೀಯರಲ್ಲಿ ಮೊಲೆಯ ಬೆಳವಣಿಗೆ ಹಾಗೂ ಪುರುಷರಲ್ಲಿ ಗಡ್ಡ-ಮೀಸೆಯ ಬೆಳವಣಿಗೆ ಮತ್ತು ಧ್ವನಿಗಾಂಭೀರ್ಯ ಮುಂತಾದ ಲಿಂಗ ಚಿಹ್ನಗಳನ್ನೂ ಹೊರೆಯುತ್ತವೆ. ಕಾಮಗ್ರಂಥಿಗಳ ಅಭಾವದಲ್ಲಿ ವ್ಯಕ್ತಿಯು ಉಭಯ ಲಿಂಗಚಿಹ್ನಗಳಾವುವನ್ನೂ ಪಡೆಯದೆ ನಪುಂಸಕವಾಗಿ ಬೆಳೆಯುತ್ತದೆ. ಹೆಣ್ಣಿನ ರಜಃಕಾಲಚಕ್ರ ಮತ್ತು ಶೋಣಿತಾಣು-ಉತ್ಪತ್ತಿಯ ಕಾಲಚಕ್ರ, ಗರ್ಭಧಾರಣೆ ಹಾಗೂ ಮೊಲೆಹಾಲಿನ ಉತ್ಪತ್ತಿ ಮುಂತಾದ ಆಂತರಿಕ ಪುನರುತ್ಪಾದನ ಪ್ರಕ್ರಿಯೆಗಳು (Reproductive Processes) ಬಹಳ ಮಟ್ಟಿಗೆ ಕಾಮರಸಾಧೀನ. ತಾಯಿಯ ಮಕ್ಕಳ ಸಾಕಣೆಯ ಆಸಕ್ತಿ ಕೂಡ ಕೆಲಮಟ್ಟಿಗೆ ಕಾಮರಸಾವಲಂಬಿ.

ಕಾಮರಸಗಳು ಬಾಲ್ಯದಲ್ಲೇ ಇರುವುವಾದರೂ ಕೌಮಾರ ದಾಟುವ ಕಾಲದಲ್ಲಿ ಅವು ಹೆಚ್ಚಾಗುವುವು; ಅಲ್ಲದೆ, ಅವು ಕಾಮಾಸಕ್ತಿಗೆ ನಿಶ್ಚಿತವಾಗಿಯೂ ಅವಶ್ಯಕ. ಕೆಲವು ವ್ಯಕ್ತಿಗಳು ಅತಿಕಾಮಿಗಳೂ ಮತ್ತೆ ಕೆಲವರು ಅಲ್ಪಕಾಮಿಗಳೂ ಆಗಲು ಅವೇ ಕಾರಣವೆಂದು ಊಹಿಸಲಾಗಿದೆ. ಸಾಕಷ್ಟು ಸಮಸ್ಥಿತಿಯ ಕಾಮಾಸಕ್ತಿಯಿಲ್ಲದವರು ಅವರ ಸಹವಾಸಿಗಳ ಟೀಕೆಗೆ ಗುರಿಯಾಗುತ್ತಾರೆ ಮತ್ತು ಅವರ ಕಾಮವರ್ತನೆ ವಿಲಕ್ಷಣವಾಗಿರುತ್ತದೆ. ಉಳಿದ ಸಮಸ್ಥಿತಿಯ ಕಾಮಗ್ರಂಥಿಕಾರ್ಯವುಳ್ಳ ಮನುಷ್ಯರು ಅವರವರ ಸಾಮಾಜಿಕ ಆವರಣ ಮತ್ತು ಇತರ ಆಸಕ್ತಿಗಳ ಪ್ರಭಾವದಂತೆ ನಡೆದುಕೊಳ್ಳುತ್ತಾರೆ.

ಭ್ರೂಜೋಗ್ರಂಥಿ: ಇದು ನಾಯಕಗ್ರಂಥಿ. ಉಳಿದ ನಿರ್ನಾಳಗ್ರಂಥಿಗಳ ಮೇಲೆ ಇದರ ನಿಯಂತ್ರಣವಿರುತ್ತದೆ. ಇದು ಮಿದುಳಿನ ಕೆಳಭಾಗಕ್ಕೆ ಅಂಟಿಕೊಂಡಿರುವ ಒಂದು ಚಿಕ್ಕಗ್ರಂಥಿ. ಇದರ ಉತ್ತರ ಭಾಗವು ರಕ್ತದ ಒತ್ತಡ, ನೀರಿನ ಜೀವರಸೀಕರಣ ಮುಂತಾದ ದೈಹಿಕ ಪ್ರಕ್ರಿಯೆಗಳನ್ನು ನಿಯಂತ್ರಿಸುತ್ತದೆ. ಇದರ ಪೂರ್ವಭಾಗವು ಓಜೋಗ್ರಂಥಿ, ಕಾಮಗ್ರಂಥಿ ಮತ್ತು ತೇಜೋಗ್ರಂಥಿಯ ತೊಗಟೆಗಳ ರಸೋತ್ಪಾದನ ಕ್ರಿಯೆಗೆ ಪ್ರೇರಕವಾದ ರಸಗಳನ್ನು ಪೂರೈಸುತ್ತದೆ.

ಭ್ರಾಜೋರಸಗಳಿಲ್ಲದೆ ಉಕ್ತ ಇತರ ಗ್ರಂಥಿಗಳು ಬೆಳೆಯಲಾರವು, ಸರಿಯಾಗಿ ಕೆಲಸ ಮಾಡಲಾರವು.

ದೇಹದ ಬೆಳವಣಿಗೆಯ ಮೇಲೆ ಭ್ರಾಜೋಗ್ರಂಥಿಯ (Pituitary Gland) ಪೂರ್ವಭಾಗವು ಬಹಳ ಪ್ರಭಾವ ಬೀರುತ್ತದೆ. ಬಾಲ್ಯದಲ್ಲಿ ಈ ಗ್ರಂಥಿ ಅತಿ ಚುರುಕಾಗಿ ಕೆಲಸ ಮಾಡುತ್ತಿದ್ದರೆ ಎಲುಬುಗಳೂ ಮಾಂಸಖಂಡಗಳೂ ತ್ವರಿತ ಗತಿಯಿಂದ ಬೆಳೆದು ವ್ಯಕ್ತಿಯು ೮–೯ ಅಡಿ ಎತ್ತರದ ಮನುಷ್ಯನಾಗುತ್ತಾನೆ. ಹೀಗೆ ಮೊದಲು ಅತಿಯಾಗಿ ಕೆಲಸ ಮಾಡಿದ ಬಳಿಕ ಇದು ಸುಪ್ತಾಗಿಬಿಡುವುದರಿಂದ ಮನುಷ್ಯನು ಮಾಂಸಖಂಡಗಳ ಶಕ್ತಿಯನ್ನು ಕಳೆದುಕೊಂಡು ಎಳೆತನದಲ್ಲೇ ಸಾಯುತ್ತಾನೆ. ಹಾಗಲ್ಲದೆ, ಇದು ಬೆಳವಣಿಗೆಯ ಕಾಲದಲ್ಲಿ ಸರಿಯಾದ ಪ್ರಮಾಣದ ಕಾರ್ಯ ಮಾಡಿ ಜೀವನದ ಪ್ರೌಢದೆಸೆಯಲ್ಲಿ ಅತಿಯಾಗಿ ಕೆಲಸ ಮಾಡತೊಡಗಿದರೆ ಮನುಷ್ಯನು ಹೆಚ್ಚು ಎತ್ತರವಾಗಿ ಬೆಳೆಯದೆ, ಅವನ ಹಸ್ತ, ಪಾದ, ಮೂಗು, ಕೆಳದವಡೆ ಮುಂತಾದವು ಅಗಲವಾಗಿ ಬೆಳೆಯುತ್ತವೆ. ಬೆಳವಣಿಗೆಯ ಕಾಲದಲ್ಲಿ ಈ ಗ್ರಂಥಿಯ ಪೂರ್ವಭಾಗವು ಕಡಿಮೆ ಪ್ರಮಾಣದಲ್ಲಿ ಕೆಲಸ ಮಾಡಿದರೆ ವ್ಯಕ್ತಿಯು ವಾಮನನಾಗುತ್ತಾನೆ. ಇಂಥ ವಾಮನರಾಯರು ಸಮಪಾರ್ಶ್ವ ಉಳ್ಳವರೂ 'ಕ್ರೆಟಿನ್' ರೋಗಿಗಳಿಗಿಂತ ಭಿನ್ನಸ್ವರೂಪದವರೂ ಎಷ್ಟೋ ವೇಳೆ ಸುಂದರರೂ, ಸಮಸ್ಥಿತಿಯ ಬುದ್ಧಿಮತ್ತೆ ಉಳ್ಳವರೂ ಆಗಿರುತ್ತಾರೆ. ಇಂಥವರಿಗೆ ಬಾಲ್ಯದಲ್ಲಿಯೇ ಭ್ರಾಜೋರಸಗಳನ್ನು ಕೊಟ್ಟರೆ ಈ ದೋಷ ಪರಿಹಾರವಾಗುತ್ತದೆ.

ಅಧ್ಯಾಯ ಮೂರು

ಇಂದ್ರಿಯಗಳು

ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಎಂಬ ಪಂಚೇಂದ್ರಿಯಗಳ ರೂಪ, ಶಬ್ದ, ಗಂಧ, ರಸ, ಸ್ಪರ್ಶ ಎಂಬ ಸಂವೇದನೆಗಳಲ್ಲದೆ ತದ್ಭಿನ್ನವಾಗಿ ಉಷ್ಣಸ್ಪರ್ಶ, ಶೀತಸ್ಪರ್ಶ, ದೈಹಿಕವಾದ ನೋವಿನ ಸಂವೇದನೆ, ಮಾಂಸಲಸ್ಪರ್ಶ ಮತ್ತು ಸಮತೋಲಸಂವೇದನೆ ಎಂಬವು ಇವೆ ಎಂದು ಹಲವರ ಮತ. ಇದು ಹೇಗಿದ್ದರೂ ಪಂಚೇಂದ್ರಿಯಗಳ ಸಂವೇದನೆಗಳಂತೂ ಸುಸ್ಪಷ್ಟ. ಈಗ ಸಂವೇದನಾ ವರ್ಗಗಳಲ್ಲಿ ಇಂದ್ರಿಯಾನುಗುಣವಾಗಿ ಒಂದೊಂದನ್ನೇ ಎತ್ತಿಕೊಳ್ಳೋಣ; ಮತ್ತು ಸಂವೇದನೆಯೊಂದರ ಪ್ರತ್ಯೇಕತೆಯನ್ನು ಪರಾಮರ್ಶಿಸೋಣ.

ಕಣ್ಣಿನ ರಚನೆ

ಮನುಷ್ಯನ ಕಣ್ಣುಗುಡ್ಡೆ ಹೆಚ್ಚುಕಡಿಮೆ ಒಂದು ಗೋಲ. ೧೨(ಅ)ನೆಯ ನಕ್ಷೆಯಲ್ಲಿ ಅದರ ಭಾಗಗಳನ್ನು ಕಾಣಬಹುದು. ಕಣ್ಣಿನ ಕುಳಿಯಲ್ಲಿ ಕಣ್ಣುಗುಡ್ಡೆ ತಿರುಗುವುದನ್ನು ಮೂರು ಜೋಡಿ ಮಾಂಸಖಂಡಗಳು ನಿಯಂತ್ರಿಸುತ್ತವೆ. ಕಣ್ಣುಗುಡ್ಡೆಗೆ ಮೂರು ಪೊರೆಗಳು ಸುತ್ತಿಕೊಂಡಿವೆ. ಹೊರಗಿನ ಗಟ್ಟಿಯಾದ ಒರಟು ಪೊರೆಯೇ 'ಬೆಳ್‌ಪೊರೆ'. ಅದರ ಒಳಗಡೆ ಪ್ರಕಾಶಘ್ನ ಪೊರೆಯೊಂದಿದೆ. ಅದು ಎರಡನೆಯದು. ಅದರ ಬಣ್ಣ ಕಪ್ಪು. ಅದು ಕಣ್ಣಿನ ಒಳಗೆ ಬರುವ ಬೆಳಕಿನ ಕಿರಣಗಳನ್ನು ಒಳಗಡೆ ಪ್ರತಿಬಿಂಬಿಸದಂತೆ ತಡೆಯುತ್ತದೆ. ಮೂರನೆಯದಾದ ಬಲೆಪೊರೆಯು ನಮ್ಮ ನೋಡುವ ಶಕ್ತಿಯ ನಿಜವಾದ ಪೀಠ. ಅದರಲ್ಲಿ ಕಣ್ಣಿನ ಒಳಮೈಯ ತುಂಬ ಹರಡಿರುವ ಪುಟಗಳಿಂದಾದ ಹಲವಾರು ಪದರಗಳಿವೆ. ಈ ಪುಟಗಳನ್ನು ಅವುಗಳ ಆಕೃತಿಸಾದೃಶ್ಯದ ಮೇರೆಗೆ ಹೀರೆಗಳೆಂದೂ (Rods) ಸೌತೆಗಳೆಂದೂ (Cones) ವರ್ಗೀಕರಿಸಿ ಹೆಸರಿಸಬಹುದು.


ಬೆಳ್‌ಪೊರೆಯು ಅಪಾರದರ್ಶಕ. ಆದರೆ ಅದು ಕಣ್ಣಿನ ಮುಂಭಾಗವನ್ನು ಮುಟ್ಟುವಲ್ಲಿ ಸ್ವಲ್ಪ ಉಬ್ಬಿ ಪಾರದರ್ಶಕವಾಗುತ್ತದೆ. ಈ ಪಾರದರ್ಶಕ ಭಾಗವೇ

'ಎದುರುಪೊರೆ'. ಕಣ್ಣಿನಲ್ಲಿ ನಮಗೆ ಕಾಣುವ ಕಪ್ಪುವೃತ್ತವು, ಪ್ರಕಾಶಪ್ಷೆ ಪೊರೆಯ ಒಂದು ಭಾಗ. ಅದಕ್ಕೆ 'ಕಪ್ಪುಪೊರೆ' ಎಂದು ಹೆಸರು. ಅದು ಪಾರದರ್ಶಕವಾದ ಎದುರುಪೊರೆಯ ಮೂಲಕ ಕಾಣಿಸುತ್ತದೆ. ಕಪ್ಪುಪೊರೆಯ ನಡುವೆ ಒಂದು ತೂತಿದೆ. ಅದೇ ಕನೀನಿಕೆ. ಅದು ಒಳಭಾಗಕ್ಕೆ ಬೆಳಕನ್ನು ಬಿಡುತ್ತದೆ. ಸುತ್ತುಮುತ್ತಲಿನ ಬೆಳಕಿನ ಪರಿಸ್ಥಿತಿಯ ತೀವ್ರತೆಗೆ ಅನುಗುಣವಾಗಿ ಕನೀನಿಕೆಯನ್ನು ಹಿಗ್ಗಿಸಬಹುದು ಅಥವಾ ಕುಗ್ಗಿಸಬಹುದು. ಕಪ್ಪುಪೊರೆಯ ಹಿಂಬದಿಯಲ್ಲಿ ಹರಳಿದೆ. ಅದನ್ನು ಕೂಡ ಬೇಕಾದಹಾಗೆ ರೆಪ್ಪೆಯ ಸಹಾಯದಿಂದ ನಿಯಂತ್ರಿಸಿ ಹೊಂದಿಸಬಹುದು. ಈ ಹರಳಿನಿಂದಲೇ ನಾವು ಒಳಬರುವ ಬೆಳಕಿನ ಕಿರಣಗಳು ಬಲೆಪೊರೆಯ ಮಧ್ಯಭಾಗಕ್ಕೆ ಸರಿಯಾಗಿ ಬೀಳುವಂತೆ ಮಾಡಬಲ್ಲೆವು. ಪಾರದರ್ಶಕವೂ ಉಬ್ಬಿದ್ದೂ ಆದ ಎದುರುಪೊರೆಯೂ ಹರಳಿನಂತೆ ಕೆಲಸ ಮಾಡುತ್ತದೆ. ಎದುರುಪೊರೆಗೂ ಕಪ್ಪುಪೊರೆಗೂ ನಡುವೆ ಕಣ್ಣಿನ ಒಳ ಅಂಗಳವಿದೆ. ಅದರಲ್ಲಿ ನೀರಿನಂಥ ದ್ರವ ತುಂಬಿದೆ. ಹರಳಿನ ಹಿಂಭಾಗದಲ್ಲಿ ಕಣ್ಣಿನ ಹೊರ ಅಂಗಳವಿದೆ. ಅದೇ ಕಣ್ಣಿನ ದೊಡ್ಡ ಪೊಟ್ಟರೆ. ಅದರಲ್ಲಿ ಒಂದು ತರದ ತಿಳಿಯಾದ ಸ್ನಿಗ್ಧ ದ್ರವ ತುಂಬಿಕೊಂಡಿದೆ. ಈ ಎರಡು ದ್ರವಗಳೂ ಬೆಳಕಿನ ಕಿರಣಗಳನ್ನು ಬಲೆಪೊರೆಯ ನಡುಗಡೆಗೆ ನಿರ್ದೇಶಿಸುವಲ್ಲಿ ನೆರವಾಗುತ್ತವೆ.

ಹಿಂದೆ ಹೇಳಿದ ಬಲೆಪೊರೆಯಲ್ಲಿಯ ಹೀರೆಗಳೂ, ಸೌತೆಗಳೂ ಅನುಕ್ರಮವಾಗಿ ಬೆಳಕಿಗೂ ನೆರಳಿಗೂ ಗ್ರಾಹಕಗಳಾಗಿವೆ. ಬಲೆಪೊರೆಯ ನಡುವೆ ತುಂಬ ಸೌತೆಗಳಿವೆ. ಈ ಭಾಗದ ಮೂಲಕವೇ ಬಣ್ಣಗಳನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ. ಈ ಪೊರೆಯ ಪರಿಧಿಯು ಬೆಳಕಿಗೆ ಮತ್ತು ನೆರಳಿಗೆ ಹೆಚ್ಚು ಉನ್ಮುಖ. ಇಲ್ಲಿ ಹೀರೆಗಳೇ ಹೆಚ್ಚಾಗಿವೆ. ಈ ಭಾಗದ ಮೇಲೆ ಬಣ್ಣದ ಬೆಳಕು ಬಿದ್ದಾಗ ನಮಗೆ ಕೇವಲ ಬಿಳುಪು-ಕಪ್ಪುಗಳ ಸಂವೇದನೆ ಉಂಟಾಗುತ್ತದೆ.

ಕಣ್ಣಿನ ಸಂವೇದನೆಗಳು

ಬಣ್ಣದ ಬೆರಕೆಯಿಂದ ಆಗುವ ಪರಿಣಾಮ: ವರ್ಣಚಕ್ರದಲ್ಲಿ ಬರಿಗಣ್ಣಿಗೆ ಕಾಣುವ ಏಳು ಬಣ್ಣಗಳೆಂದರೆ— ನೇರಿಳೆ ಬಣ್ಣ, ಮಾಸಲು ನೀಲಿ, ನೀಲಿ, ಹಸಿರು, ಕಿತ್ತಿಳೆ, ಹಳದಿ ಮತ್ತು ಕೆಂಪು. ನೇರಳೆ ಬಣ್ಣಕ್ಕೂ ಮುಂದೆ



STRUCTURE OF THE EYE

12 (ଗ)



12 (ଘ)

ಉನಃ

ಅತಿನೇರಳೆ ಕಿರಣಗಳಿವೆ (Ultra-violet Rays). ಇವುಗಳನ್ನು ಬರಿಯ ಕಣ್ಣು ಕಾಣಲಾರದು. ಇವನ್ನು ಚಿಕಿತ್ಸಾವಿಧಾನದಲ್ಲಿ ಬಳಸುತ್ತಾರೆ. ಅವಕೆಂಪು ಕಿರಣ (Infra-red Rays) ಗಳಾದರೂ ಅದೃಶ್ಯ. ಅವುಗಳನ್ನು ದೂರದಲ್ಲಿ ನಿಂತು ಫೋಟೋ ತೆಗೆಯುವಾಗ ಉಪಯೋಗಿಸುತ್ತಾರೆ. ಒಂದು ಬಗೆಯ ಬೂದಿ ಬಣ್ಣವನ್ನು ತಮ್ಮ ಮಿಶ್ರಸ್ವರೂಪದಲ್ಲಿ ಉಂಟುಮಾಡುವ ಪರಸ್ಪರ ವಿರುದ್ಧವಾದ ಎರಡು ಬಣ್ಣಗಳಿದ್ದರೆ ಅವನ್ನು ಪೂರಕವರ್ಣಗಳೆಂದು ಕರೆಯುತ್ತಾರೆ. ಅಂಥ ಪೂರಕವರ್ಣಗಳ ಜೋಡಿಗಳು ಎರಡು: ಕೆಂಪು ಮತ್ತು ಹಸಿರು; ಹಳದಿ ಮತ್ತು ನೀಲಿ.

ಬಲೆಪೊರೆಯ ಒಂದೇ ಸ್ಥಳದಲ್ಲಿ ಏಕಕಾಲದಲ್ಲಿ ಪೂರಕ ಸಂಬಂಧವಿಲ್ಲದ ಎರಡು ಬಣ್ಣಗಳ ಕಿರಣಗಳನ್ನು ಹಾಯಿಸಿದರೆ, ಉಂಟಾಗುವ ಸಂವೇದನೆಯು ಆ ಎರಡು ಬಣ್ಣಗಳ ಮಿಶ್ರಸ್ವರೂಪದ್ದಾಗಿರುತ್ತದೆ. ಹಳದಿ ಮತ್ತು ಕೆಂಪು ಕಿರಣಗಳನ್ನು ಮೇಲೆ ಹೇಳಿದಂತೆ ಬೆರಸಿದರೆ ಎರಡಕ್ಕೂ ಮಧ್ಯಸ್ವರೂಪದ ಕಿತ್ತಿಳೆಯ ಸಾಕ್ಷಾತ್ಕಾರವಾಗುತ್ತದೆ. ಹಾಗಲ್ಲದೆ, ಅದೇ ರೀತಿಯಲ್ಲಿ ಕೆಂಪು ನೀಲಿ ವರ್ಣಗಳನ್ನು ಸೇರಿಸಿದರೆ, ಒಂದು ವಿಧದ ಮಧ್ಯಸ್ಥ ಬೂದಿಬಣ್ಣದ ಸಂವೇದನೆ ಉಂಟಾಗುತ್ತದೆ. ಅಂಥ ಪ್ರಕರಣಗಳಲ್ಲಿ ಬಲೆಪೊರೆಯು ಮಂದ ಪ್ರಕೃತಿಗೆ ಇಳಿದು ಅವುಗಳಲ್ಲಿ ಯೋಗ್ಯ ಮಿಶ್ರಣವನ್ನು ಮಾಡುವುದಕ್ಕೆ ಶಕ್ತವಾಗದುದರಿಂದಲೇ ಹಾಗೆ ಮಧ್ಯಸ್ಥ ಬೂದಿಬಣ್ಣದ ಸಂವೇದನೆ ಫಲಿಸುತ್ತದೆ. ವರ್ಣಚಕ್ರದ ಎಲ್ಲ ಬಣ್ಣಗಳೂ ಏಕಕಾಲದಲ್ಲಿ ಬಂದು ಸೌತೆಯ ಮೇಲೆ ಬಿದ್ದರೆ ತುಂಬಿದ ಹಗಲಿನಲ್ಲಾದಂತೆ ನಮಗೆ ಶುದ್ಧಪ್ರಕಾಶದ ಅಥವಾ ಬಿಳಿಯ ಬಣ್ಣದ ಸಂವೇದನೆಯಷ್ಟೇ ಆಗುತ್ತದೆ.

ವರ್ಣವ್ಯತ್ಯಾಸದಿಂದ ಆಗುವ ಪರಿಣಾಮಗಳು

ತನ್ನ ಪೂರಕವರ್ಣದ ಪ್ರೇರಣೆ ನಿಜವಾಗಿ ಇಲ್ಲದಿರುವಾಗಲೂ ಅದರ ಸಂವೇದನೆಯನ್ನು ಯಾವುದಾದರೊಂದು ಬಣ್ಣದ ಸಂವೇದನೆಯು ಉಂಟುಮಾಡುವ ಪ್ರವೃತ್ತಿ ಇದೆ. ಉತ್ತರೋತ್ತರ ವ್ಯತ್ಯಾಸ ಮತ್ತು ಯುಗಪದ್ವ್ಯತ್ಯಾಸ ಎಂಬ ಘಟನೆಗಳಿಂದ ಈ ವಿಷಯ ಸ್ಪಷ್ಟ: ೩೦ ಸೆಕುಂದಗಳ ಕಾಲ ನಾವು ನಮ್ಮ ಕಣ್ಣುಗಳನ್ನು ಒಂದು ಬಣ್ಣದ ಕಾಗದದ ಮೇಲೆ ನಿಲ್ಲಿಸಿ, ಅನಂತರ ಅವನ್ನು ಬಿಳಿಯ

ಅಥವಾ ಅನೆಬೂದಿಬಣ್ಣದ ಕಾಗದದತ್ತ ತಿರುಗಿಸಿದರೆ, ನಾವು ಮೊದಲಿನ ಕಾಗದದ ಗಾತ್ರ ಹಾಗೂ ಆಕೃತಿಗಳುಳ್ಳ ಪೂರಕವರ್ಣವನ್ನು ಎರಡನೆಯದರಲ್ಲಿ ನೋಡುತ್ತೇವೆ. ಈ ಗೌಣ ಸಂವೇದನೆಯನ್ನು ನೈಷೇಧಿಕ ಉತ್ತರಪ್ರತಿಮೆ ಎಂದು ಹೇಳುತ್ತಾರೆ (Negative After-image). ಇದು ಉತ್ತರೋತ್ತರ ವ್ಯತ್ಯಾಸದ ಘಟನೆ. ನಾವು ನಮ್ಮ ಕಣ್ಣುಗಳನ್ನು ಒಂದು ಬಣ್ಣದ ಕಾಗದದ ಮೇಲೆ ನಿಲ್ಲಿಸಿದರ. ಸ್ವಲ್ಪಕಾಲದ ಬಳಿಕ ಅದು ತನ್ನ ಪೂರಕವರ್ಣದ ಪ್ರಭಾವಲಯದೊಡನೆ ಮಸುಕಾಗಿ ಕಾಣುತ್ತದೆ. ಒಂದು ವರ್ಣಭಿತ್ತಿಯ ಮೇಲೆ ಅನೆ ಬೂದಿಬಣ್ಣದ ಕಾಗದದ ಚೂರನ್ನು ಇಟ್ಟರೆ ಅದು ಭಿತ್ತಿವರ್ಣದ ಪೂರಕವರ್ಣದೊಡನೆ ಸ್ವಲ್ಪ ಮಿಶ್ರವಾದಂತೆ ತೋರುತ್ತದೆ. ಈ ಎರಡನೆಯ ಪರಿಣಾಮವು ಉತ್ತರೋತ್ತರ ವ್ಯತ್ಯಾಸದ ಘಟನೆಯಷ್ಟು ಎದ್ದು ಕಾಣುವುದಿಲ್ಲ—ಅದರಲ್ಲೂ ಕೆಂಪು ಅಥವಾ ಹಸಿರು ವರ್ಣಭಿತ್ತಿಯನ್ನು ಬಳಸಿದಾಗ. ಆದರೆ ಆ ಕಾಗದವನ್ನೂ ಅದರ ವರ್ಣಭಿತ್ತಿಯನ್ನೂ ಒಂದು ತೆಳುವಾದ ಕಾಗದದಿಂದ ಮುಚ್ಚಿದರೆ ಪ್ರಭಾವಿತ ವರ್ಣವು (Induced Colour) ಇನ್ನಷ್ಟು ನಿಚ್ಚಳವಾಗಿ ತೋರುತ್ತದೆ. ಈ ಎರಡನೆಯ ಎರಡು ಪ್ರಕಾರಗಳೂ ಏಕಕಾಲಿಕ ವ್ಯತ್ಯಾಸದ ಘಟನೆ ಎಂಬ ವರ್ಗಕ್ಕೆ ಸೇರುತ್ತವೆ.

ವರ್ಣವ್ಯತ್ಯಾಸದ ಘಟನೆಯ ಕಾರಣ ಇನ್ನೂ ತಿಳಿದುಬಂದಿಲ್ಲ. ಈ ಬಗ್ಗೆ ಅನೇಕ ಸಿದ್ಧಾಂತಗಳನ್ನೇನೋ ಮುಂದಿಡಲಾಗಿದೆ. ಇವುಗಳಲ್ಲಿ ಹಲವು ಸಿದ್ಧಾಂತಗಳು ಬಲೆಪೊರೆಯಲ್ಲಿ ಆದೇಶ ಪ್ರತಿಕ್ರಿಯೆಗಳು (Compensatory Process) ನಡೆಯುವವೆಂದು ಊಹಿಸುತ್ತವೆ. ಆದರೆ ಬಹುಶಃ ಈ ಘಟನೆಯ ವಿವರಣೆಯನ್ನು ಕಣ್ಣಿನಲ್ಲಿ ಹುಡುಕದೆ, ಮಿದುಳಿನಲ್ಲಿ ಹುಡುಕಬೇಕೆಂದು ತೋರುತ್ತದೆ.

ವರ್ಣಾಂಧತೆ : ಕಣ್ಣಿನ ಬಲೆಪೊರೆಯಲ್ಲಿಯ ಸೌತೆಗಳ ಬೆಳವಣಿಗೆಯಲ್ಲಿಯ ದೋಷಗಳಿಂದ ಕೆಲವರು ಪೂರ್ಣವಾಗಿ ಅಥವಾ ಪಾಕ್ಷಿಕವಾಗಿ ವರ್ಣಾಂಧರಾಗಿರುತ್ತಾರೆ. ಸಂಪೂರ್ಣ ವರ್ಣಾಂಧನಿಗೆ ಈ ಜಗತ್ತು ಕಪ್ಪು, ಬಿಳುಪು ಮತ್ತು ಬೂದಿಬಣ್ಣಗಳಲ್ಲಿ ಮಾತ್ರ ಕಾಣಿಸುತ್ತದೆ. ಇಂಥವರು ಅತಿ ವಿರಳ. ೨೫ರಲ್ಲಿ ಒಬ್ಬ ಗಂಡಸಿಗೂ ೧೦೦೦ದಲ್ಲಿ ಒಬ್ಬ ಹೆಂಗಸಿಗೂ ಕೆಂಪು–ಹಸಿರುಗಳು ಕಾಣಿಸುವುದಿಲ್ಲ. ಕೆಲವರಿಗೆ ಒಂದೇ ಕಣ್ಣಿನಲ್ಲಿ ವರ್ಣಾಂಧತೆ ಇರುತ್ತದೆ.

ಬಲಿಪೊರೆಯ ವಲಯಗಳು: ಸಾಮಾನ್ಯ ವ್ಯಕ್ತಿಯ ಕಣ್ಣು ಕೂಡ ತನ್ನ ಕೆಲ ಸ್ಥಳಗಳಲ್ಲಿ ವರ್ಣಾಂಧವಾಗಿರುತ್ತದೆ. ೧೨(ಬ)ನೆಯ ನಕ್ಷೆಯಲ್ಲಿ ಅದನ್ನು ಮೂರು ವಲಯಗಳನ್ನಾಗಿ ವಿಂಗಡಿಸಿದ್ದನ್ನು ಕಾಣಬಹುದು. ಬೆಳಕಿಗೆ ಒಗ್ಗಿದ ಕಣ್ಣಿನ ಬಲಿಪೊರೆಯ ಮಧ್ಯಪ್ರದೇಶವು (C) ಅತಿ ಸ್ಪಷ್ಟವಾದ ದರ್ಶನಶಕ್ತಿ ಉಳ್ಳದ್ದಾಗಿದೆ. ಅದು ಎಲ್ಲ ಬಣ್ಣಗಳನ್ನೂ ನೋಡಬಲ್ಲುದು. ನಡುವಿನ ವಲಯವು (B) ನೀಲಿ-ಹಳದಿಗಳನ್ನು ಕಾಣಬಹುದಲ್ಲದೆ, ಕೆಂಪು-ಹಸಿರುಗಳನ್ನು ಕಾಣಲಾರದು. ಹೊರವಲಯವು (A) ಸಂಪೂರ್ಣ ವರ್ಣಾಂಧ. ಬಲಿಪೊರೆಯನ್ನು ವಲಯಗಳನ್ನಾಗಿ ವಿಂಗಡಿಸಿದ್ದು ಅದರ ಮೇಲಿನ ಸೌತೆ–ಹೀರೆಗಳ ವಿತರಣಕ್ಕೆ ಸಂಬಂಧಿಸಿದೆ. ಆದರೆ ಬೇರೆ ಕಾರಣಗಳೂ ಅದರಲ್ಲಿ ಸೇರಿರಬಹುದು.

ಕಿವಿಯ ರಚನೆ


೧೩ನೆಯ ನಕ್ಷೆಯಲ್ಲಿ ಕಿವಿಯ ರಚನೆಯನ್ನು ಕೊಡಲಾಗಿದೆ. ಕಿವಿಯ ಹೊರನಾಲಿಯ ಮೂಲಕ ನಾದತರಂಗಗಳು ಹೊಕ್ಕು ಕಿವಿಯ ತಂಬಟೆಯನ್ನು ಬಡಿದು ಕಂಪಿಸುವಂತೆ ಮಾಡುತ್ತವೆ. ಈ ಕಂಪಗಳು ನಡುಗಿವಿಯಲ್ಲಿಯ ಬಡಿಗೆ, ಅಡಿಗಲ್ಲು ಮತ್ತು ಹತ್ತುಗಡೆ ಎಂಬ ಎಲುಬುಗಳ ಮೂಲಕ ಒಳಗಿವಿಯ ದ್ವಾರದಲ್ಲಿರುವ ಅಂಡಾಕೃತಿಯ ಪೊರೆಯನ್ನು ಮುಟ್ಟುತ್ತವೆ (ಮೇಲೆ ಹೇಳಿದ ಮೂರು ಮೂಳೆಗಳು ಬಡಿಗೆ, ಅಡಿಗಲ್ಲು ಮತ್ತು ಹತ್ತುಗಡೆಗಳಂತಿರುವುದರಿಂದ ಅವಕ್ಕೆ ಅವೇ ಹೆಸರುಗಳನ್ನು ಕೊಡಲಾಗಿದೆ). ಒಳಗಿವಿಯಲ್ಲಿ ಒಂದು ದ್ರವವಿದೆ. ಅದರ ಅಂಡಾಕೃತಿಯ ದ್ವಾರದಿಂದ ಮುಂದೆ ನಾದತರಂಗಗಳು ಈ ದ್ರವದ ಮೂಲಕವೇ ಹೋಗುತ್ತವೆ. ಒಳಗಿವಿಯ ಮುಖ್ಯವಾದ ಭಾಗವನ್ನು 'ಸುರುಳಿ ನಾಳ'ವೆನ್ನುತ್ತಾರೆ. ಈ ನಾಳವು ಬಸವನ ಹುಳುವಿನ ಚಿಪ್ಪಿನಂತೆ ತೋರುತ್ತದೆ. ಸುರುಳಿನಾಳದ ಸುರುಳಿಗಳೊಡನೆ ಬಿಗಿಯಾಗಿ ಹರಹಿದ ಮಾಂಸದ ಪೊರೆಯನ್ನು 'ಮೂಲಪೊರೆ' ಎನ್ನುತ್ತಾರೆ. ಅದರಲ್ಲಿ ಹಾರ್ಮೋನಿಯಮ್ಮಿನ ತಂತಿಯಂತೆ ಇರುವ ಅದರ ಸಾವಿರಾರು ಹುರಿಗಳು ಕಂಪಿಸತೊಡಗುತ್ತವೆ; ಸುರುಳಿನಾಳದ ಸುರುಳಿಗಳು ಏರಿದಂತೆಲ್ಲಾ ಚಿಕ್ಕದಾಗುತ್ತ ಹೋಗುತ್ತವೆ. ಮೂಲಪೊರೆಯಾದರೋ ಬುಡದಿಂದ ತುದಿಯತ್ತ ಹಿಗ್ಗುತ್ತ ಹೋಗುತ್ತದೆ. ಏರಿನ ತುದಿಯಲ್ಲಿಯ ಹುರಿಗಳು ಸಡಿಲವೂ ಉದ್ದವೂ ಆಗಿದ್ದರೆ, ಬುಡದಲ್ಲಿಯ ಹುರಿಗಳು

ಚಿಕ್ಕವಾಗಿಯೂ ಬಿಗಿಯಾಗಿಯೂ ಇರುತ್ತವೆ. ಬಹುಶಃ ಈ ಪೊರೆಯ ಬೇರೆ ಬೇರೆ ಭಾಗಗಳು ಬೇರೆ ಬೇರೆ ತರಂಗಮಾನಗಳಿಗೆ ಕಂಪಿಸುವುವೆಂದು ತೋರುತ್ತದೆ. ಅದರಿಂದಲೇ ಬೇರೆ ಬೇರೆ ಸ್ವರೋತ್ಥಾನಗಳ ಸದ್ದುಗಳು ಉಕ್ತಪೊರೆಯ ಬೇರೆಬೇರೆ ಭಾಗಗಳನ್ನು ಕಂಪಸುತ್ತಿರಬೇಕು. ಹೀಗಿರುವುದರಿಂದ ಈ ಪೊರೆಯ ವಿಶಿಷ್ಟ ಭಾಗಗಳಿಗೆ ಅಪಾಯ ಒದಗಿದಾಗ ಕಿವಿಯು ವಿಶಿಷ್ಟ ಸ್ವರೋತ್ಥಾನಗಳಿಗೆ ಕಿವುಡಾಗಿ ವರ್ತಿಸುತ್ತದೆ. ಮೂಲಪೊರೆಯ ಹುರಿಗಳನ್ನು ಚಿಕ್ಕ ನರಗಳಾದ "ರೋಮಪುಟಗಳು" ಮಿದುಳಿಗೆ ಹೋಗುವ ನರದ ಹುರಿಗಳ ತುದಿಗಳನ್ನು ಕೂಡಿಸುತ್ತವೆ. ಮುಮ್ಮಿದುಳಿನ ಭಾಗವಾದ ಬದಿದಲೆಯ ಶ್ರಾವಣ ಕೇಂದ್ರ ಅಥವಾ ಪ್ರದೇಶಕ್ಕೆ ನರಪ್ರವಾಹವೊಂದು ಬಂದು ಮುಟ್ಟುವುದೇ ನಾವು ಕಿವಿಯಿಂದ ಕೇಳುವ ಕಾರ್ಯದ ಕೊನೆಯ ಹಂತ.


ಕಿವುಡಿನ ಕಾರಣಗಳು: ಕಿವಿಯ ತಂಬಟೆಗೆ ಅಪಾಯವಾಗುವುದು, ನಡುಗಿವಿಯ ಎಲುಬುಗಳು ಸೆಟೆದುಕೊಳ್ಳುವುದು, ಅಂಡಾಕೃತಿಯ ದ್ವಾರಕ್ಕೆ, ಸುರುಳಿನಾಳಕ್ಕೆ ಅಥವಾ ಶ್ರಾವಣನರಗಳಿಗೆ ರೋಗ ಬರುವುದು ಅಥವಾ ಅಪಾಯವಾಗುವುದು; ಇಲ್ಲವೆ ಇತರ ಕಾರಣಗಳು ಕಿವುಡನ್ನುಂಟುಮಾಡಬಹುದು. ಹೊರಗಿವಿ ಅಥವಾ ನಡುಗಿವಿಯಲ್ಲಿ ಕಿವುಡಿನ ಕಾರಣ ಅಂಕುರಿಸಿದಾಗ ಆ ದೋಷವನ್ನು ಎಲುಬಿನ ಮೂಲಕ ನಾದತರಂಗಗಳನ್ನು ಅಲ್ಪಾವರ್ತ ಮಾಡಿ ಕಳಿಸುವುದರಿಂದ ಪರಿಹಾರ ಮಾಡಬಹುದು. ಈ ಕಾರ್ಯಕ್ಕೆ ಒಂದು ಉಪಕರಣವನ್ನು ಬಳಸಲಾಗುತ್ತದೆ. ಅದು ನಾದತರಂಗಗಳನ್ನು ವಿಸ್ತರಿಸಿ ಕಿವಿಯ ಹಿಂದಿನ ಭಾಗದ ತಲೆಯೊಡನೆ ಸಂಬಂಧಿಸಲಾಗಿರುವ ಒಂದು ಕಂಪಿಸುವ ಪಪೆಗೆ ಮುಟ್ಟುತ್ತದೆ. ಹೀಗೆ ನಾದತರಂಗಗಳು ತಲೆಬುರುಡೆಯ ಎಲುಬುಗಳ ಮೂಲಕ ಒಳಗಿವಿಗೆ ನೇರವಾಗಿ ಮುಟ್ಟುವಂತೆ ಮಾಡಲಾಗುತ್ತದೆ.

ನಡುಗಿವಿಯನ್ನು ಗಂಟಲೊಡನೆ ಸಂಬಂಧಿಸುವ ನಾಳವನ್ನು "ಕಂಠಕರ್ಣ ನಾಳ" ಎನ್ನುತ್ತಾರೆ. ಈ ಕೊಳವೆಯ ಮೂಲಕ ಗಾಳಿಯು ನಡುಗಿವಿಗೆ ಹೋಗುತ್ತದೆ ಮತ್ತು ಅದು ಕಟ್ಟಿಕೊಂಡರೆ ತಂಬಟೆಯ ಇಬ್ಬದಿಯ ಗಾಳಿಪೊತ್ತಡ ಅಸಮಾನವಾಗುತ್ತದೆ. ಬಿದಿಗೆಯ ಚಂದ್ರನಂತಿರುವ ನಾಲೆಗಳಿಗೂ ಶ್ರಾವಣ ಕ್ರಿಯೆಗೂ ಏನೂ ಸಂಬಂಧವಿಲ್ಲ; ಆದರೆ ಅವುಗಳ ಕಾರ್ಯವು ಸಮತೋಲವನ್ನು ಕಾದುಕೊಳ್ಳುವುದರಲ್ಲಿದೆ.

a)



(b)



(a) STRUCTURE OF THE EAR

(b) SECTION, SHOWING COURSE OF A SOUND WAVE

13

ನಾದತರಂಗಗಳು: ಕೇಳುವುದಾದರೂ ನೋಡುವುದರಂತೆಯೇ ತರಂಗ ಅಥವಾ ಕಂಪಗಳಿಂದ ಪ್ರೇರ್ಯ. ಆದರೆ ಪ್ರಕಾಶ-ತರಂಗಗಳಿಗಿಂತ ನಾದ ತರಂಗಗಳು ಅನೇಕ ಬಗೆಯಿಂದ ಭಿನ್ನವಾಗಿವೆ. ಬೆಳಕು ಆಕಾಶದ ಮೂಲಕ ಹಾಯ್ದು ಹೋಗಬಲ್ಲುದು; ನಾದಕ್ಕೆ ತದಿತರ ಭೌತಿಕ ಮಾಧ್ಯಮ ಅವಶ್ಯಕ. ನಾದ-ಪ್ರಸಾರದ ಸಾಮಾನ್ಯ ಮಾಧ್ಯಮ ಗಾಳಿ; ಆದರೆ ನಾದದಲೆಗಳು ದ್ರವ, ಮೂಳೆ, ಲೋಹ ಮುಂತಾದ ಇತರ ಹಲವು ಮಾಧ್ಯಮಗಳ ಮೂಲಕ ಪ್ರಸರಿಸಬಲ್ಲುದು. ಬೆಳಕಿನಲೆಗಳಿಗಿಂತ ಸದ್ದಿನಲೆಗಳು ಅಗಲವೂ ಮಂದಗಾಮಿಗಳೂ ಆಗಿವೆ. ಬೆಳಕು ಒಂದು ಸೆಕುಂದಿನಲ್ಲಿ ೧,೮೬,೦೦೦ ಮೈಲು ಓಡುತ್ತದೆ, ಅಥವಾ ಘಂಟೆಗೆ ೬೭೦೦ ಲಕ್ಷ ಮೈಲಿನಂತೆ ಚಲಿಸುತ್ತದೆ. ನಾದತರಂಗಗಳು ನಿಯತವಾಗಿರಬಹುದು ಇಲ್ಲವೆ ಅನಿಯತವಾಗಿರಬಹುದು. ಅನಿಯತ ತರಂಗಗಳು ಗದ್ದಲವನ್ನುಂಟುಮಾಡಿದರೆ, ನಿಯತತರಂಗಗಳು ಸಂಗೀತದ ರಾಗ ಅಥವಾ ಧಾಟಿಗಳನ್ನು ಉಂಟುಮಾಡುತ್ತವೆ. ಆದರೆ ಗಲಾಟೆಗೂ ರಾಗಕ್ಕೂ ಸ್ಪಷ್ಟವಾದ ಪ್ರತ್ಯೇಕತೆಯಿಲ್ಲ. ನಮಗೆ ಕೇಳಿಬರುವಂಥವು ನಾದಗಳು; ಅವುಗಳಲ್ಲಿ ಕೆಲವು ಸರಾಗ, ಮತ್ತೆ ಕೆಲವು ಅರಾಗ ಎಂಬ ಗಣ್ಯ ಲಕ್ಷಣಗಳನ್ನು ತಾಳಿರುತ್ತವೆ: ಒಂದು ವರ್ಗ ರಾಗಪ್ರಧಾನ,ಇನ್ನೊಂದು ನೀರಾಗಪ್ರಧಾನ,ಅಷ್ಟೆ. ಒಂದು ಸಂಗೀತರಾಗದ ಸ್ವರೋತ್ಥಾನವು ನಾದತರಂಗದ ಆವೃತ್ತಿಯನ್ನವಲಂಬಿಸಿದೆ. ಒಂದೊಂದು ಸೆಕುಂದಿಗೆ ಅಧಿಕ ಸಂಖ್ಯೆ ಕಂಪಗಳಾದರೆ ಸ್ವರೋತ್ಥಾನ ಎತ್ತರಿಸುತ್ತ ಹೋಗುತ್ತದೆ; ಸ್ವರದ ಸ್ಥಾಯಿಯ ತಾರತ್ವವು ಸೆಕುಂದಿಗಿಂತಿಷ್ಟೆಂಬ ಕಂಪಗಳ ಪುನರಾವೃತ್ತಿಯ ಸಂಖ್ಯೆಯ ಮೇಲೆ ನಿಂತಿದೆ. ಮನುಷ್ಯ-ಕರ್ಣವು ಕೇಳಬಹುದಾದ ಅತಿ ಕೆಳಗಿನ ಸ್ವರೋತ್ಥಾನವು ಸುಮಾರು ಸೆಕುಂದಿಗೆ ಇಪ್ಪತ್ತು ಕಂಪಗಳುಳ್ಳದ್ದು; ಅತಿ ಮೇಲಿನದು ಸುಮಾರು ೨೦,೦೦೦ ಕಂಪಗಳುಳ್ಳದ್ದು. ಸಾಮಾನ್ಯವಾದ ದೊಡ್ಡ ಹಾರ್ಮೋನಿಯಮ್ಮಿನ ಸ್ವರದ ಏರಿಳಿತ ಅಥವಾ ಸ್ವರೋತ್ಥಾನಕ್ಷೇತ್ರವು ಸುಮಾರು ೨೫ರಿಂದ ೪,೦೦೦ದ ವರೆಗಿದೆ.

ಬಾಳಿನ ಮೊದಲ ದಶೆಯಲ್ಲಿ ನಾವು ಉನ್ನತ ಸ್ವರೋತ್ಥಾನಗಳನ್ನು ಇಲ್ಲವೆ ತಾರಸ್ಥಾಯಿಯ ಸ್ವರಗಳನ್ನು ಕೇಳುವ ನಮ್ಮ ಶಕ್ತಿಯ ಪರಮಾವಧಿಯಲ್ಲಿ ಇರುತ್ತೇವೆ. ನಾವು ಸುಮಾರು ೨೫ರ ಮೆಟ್ಟಿಲನ್ನೇರಿದಾಗ ನಮ್ಮ ಆ ಶಕ್ತಿಯು ಕಡಿಮೆಯಾಗಲಾರಂಭಿಸುತ್ತದೆ. ಬಾವಲಿಯ ಕೂಗನ್ನು ೪೦ನ್ನು ಮೀರಿದ

ಯಾವನೂ ಕೇಳಲಾರನೆಂದು ಹೇಳುವುದುಂಟು. ಪ್ರಾಣಿಗಳ ಶ್ರವಣಶಕ್ತಿಯ ಪರಮಾವಧಿಯು ಮನುಷ್ಯರದಕ್ಕಿಂತ ಬಹಳ ಹೆಚ್ಚಿನದಾಗಿದೆ. ಅವು ಕೇಳಬಲ್ಲ ರಾಗಗಳ ಕಂಪ-ಪ್ರಮಾಣವು ಸೆಕುಂದಿಗೆ ೫೦,೦೦೦ದಷ್ಟು.

ಸ್ವರೋತ್ಥಾನವನ್ನು ಬೇರ್ಪಡಿಸಿ ತಿಳಿದುಕೊಳ್ಳುವ ಬಗೆ: ಭಿನ್ನಕಂಪ ಪ್ರಮಾಣದ ರಾಗಗಳನ್ನು ಬೇರ್ಪಡಿಸಿ ತಿಳಿದುಕೊಂಬ ಶಕ್ತಿಯು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಆದರೆ ಅತ್ಯಂತ ತಜ್ಞ ಸಂಗೀತರಸಿಕನಾದರೂ ಮನುಷ್ಯನು ಇದರಲ್ಲಿ ನಾಯಿಯನ್ನು ಸರಿಗಟ್ಟಲಾರ. ಸೆಕುಂದಿಗೆ ೫೦ರಿಂದ ೫೦೦೦ ಕಂಪಗಳವರೆಗಿನ ಕ್ಷೇತ್ರದಲ್ಲಿ ಸ್ವರೋತ್ಥಾನವಿವೇಕವು ಅತ್ಯಂತ ನಿಶ್ಚಿತವಾಗಿರಬಲ್ಲುದು. ವರ್ಣಚಕ್ರದ ಮಧ್ಯದಲ್ಲಿಯ ತರಂಗಮಾನಕ್ಕೆ ಕಣ್ಣು ಅತ್ಯಂತ ಹೆಚ್ಚಿನ ಗ್ರಾಹಕವಾಗಿರುವಂತೆಯೇ ಮಧ್ಯಕ್ಷೇತ್ರದಲ್ಲಿಯ ನಾದತರಂಗಗಳನ್ನು ಕಿವಿಯಾದರೂ ಅತ್ಯಂತ ಸ್ಪಷ್ಟವಾಗಿ ಗ್ರಹಿಸಬಲ್ಲುದು. ಈ ಕ್ಷೇತ್ರಪರಿಮಿತಿಯಲ್ಲಿ ಬಹುಸಂಖ್ಯ ಮಾನವರು ಸೆಕುಂದಿಗೆ ಸುಮಾರು ನೂರರಲ್ಲಿ ಮೂರರಷ್ಟು ಆವೃತ್ತಿ ಪ್ರಮಾಣದ ವ್ಯತ್ಯಾಸಗಳನ್ನು ಪ್ರತ್ಯೇಕಿಸಿ ಗುರುತಿಸಬಲ್ಲರು—ಅಂದರೆ, ಅವರು ಅನುಕ್ರಮವಾಗಿ ಈ ಕೆಳಗಿನ ಕಂಪ-ಪ್ರಮಾಣಗಳುಳ್ಳ ರಾಗದಂಪತಿಗಳಲ್ಲಿ ಒಬ್ಬೊಬ್ಬರನ್ನೂ ಮತ್ತೊಬ್ಬರಿಂದ ಬೇರ್ಮಾಡಿ ತಿಳಿಯಬಲ್ಲರು: ೧೦೦೦ ಮತ್ತು ೧೦೦೩; ೨೦೦೦ ಮತ್ತು ೨೦೦೬; ಇಲ್ಲವೆ ೩೦೦೦ ಮತ್ತು ೩೦೦೯. ೫೦೦೦ಕ್ಕಿಂತ ಹೆಚ್ಚಿನ ಆವೃತ್ತಿಗಳಲ್ಲಿ ಕಿವಿಯ ಗ್ರಹಣಕ್ಕೆ ಶತಪ್ರಮಾಣದ ವ್ಯತ್ಯಾಸವು ಸ್ವಲ್ಪ ಹೆಚ್ಚಾಗಿರಬೇಕಾಗುತ್ತದೆ; ಅತಿ ಕೆಳಮಟ್ಟದ ಶ್ರವ್ಯಾವೃತ್ತಿಗೆ ಅದು ನೂರಕ್ಕೆ ಐದರಷ್ಟು ಹೆಚ್ಚಾಗಿರಬೇಕು.

ನಾದಗಳ ಸಂಯೋಗ ಮತ್ತು ವಿಭಾಗ: ಎರಡು ರಾಗಗಳನ್ನು ಒಟ್ಟಿಗೆ ಎತ್ತಿದಾಗ ಮಧ್ಯಮ ಕಂಪ-ಪ್ರಮಾಣದ ಒಂಟಿರಾಗವೊಂದನ್ನು ಬೇರೆಯಾಗಿ ನಾವು ಕೇಳಲಾರೆವು: ನಮಗೆ ಕೇಳಿಸುವುದೊಂದು ರಾಗಸಂಯೋಗ. ಅದರ ಫಲ ಸಮಶ್ರುತಿಯೋ ಅಪಶ್ರುತಿಯೋ ಎಂಬುದು ಆ ರಾಗಗಳ ಆವೃತ್ತಿ-ಪ್ರಮಾಣಗಳ ನಡುವಿನ ನಿಯತಾಂತರವನ್ನವಲಂಬಿಸುತ್ತದೆ. ಇನ್ನು ಅಂಥ ರಾಗಸಂಯೋಗವು ನಮಗೆ ಚಿರಪರಿಚಿತವಾಗಿರುವುದು ಮತ್ತು ಅದನ್ನು ತಕ್ಕ ಚೌಕಟ್ಟಿನಲ್ಲಿಡುವುದು ಮುಂತಾದ ಕಾರಣಳಗೂ ಇವೆ ಎನ್ನಿ.

ಸಾಮಾನ್ಯವಾಗಿ ಎಷ್ಟೋ ವೇಳೆ ಒಂದೇ ಕಾಲದಲ್ಲಿ ವಿವಿಧ ಶಬ್ದಗಳ ಗೊಂದಲವನ್ನು ನಾವು ಕೇಳುತ್ತೇವೆ. ಹೀಗಾದಾಗ ಬೇರೆ ಬೇರೆ ಶಬ್ದಗಳು ಪ್ರತ್ಯೇಕವಾಗಿ ನಮ್ಮ ಕಿವಿಗಳನ್ನು ಹೊಗುವುದಿಲ್ಲ; ಅವೆಲ್ಲ ಸೇರಿ ಒಂದು ಸಂಮಿಶ್ರ ನಾದ-ಚಲನೆಯಾಗಿ ನಮ್ಮ ಕಿವಿಯನ್ನು ಹೊಕ್ಕು ಅದರ ತಂಬಟೆಯನ್ನು ಮುಟ್ಟುವುವು. ಈ ವಿವಿಧ ಬಗೆಯ ಗಲಭೆಗಳ ಭಿತ್ತಿಯಲ್ಲಿ ನಾವು ಯಾವುದಾದರೂ ಒಂದು ವ್ಯಕ್ತಿಯ ಅಥವಾ ವಾದ್ಯದ ಸ್ವರವನ್ನು ಗುರುತಿಸುತ್ತೇವೆ. ನಮ್ಮ ಈ ಶಬ್ದವಿಭಾಗ-ಶಕ್ತಿಯು ಕಿವಿಯಲ್ಲಿರುವ ಮೂಲ ಪೊರೆಯ ವ್ಯತ್ಯಸ್ತ ಕಂಪನವನ್ನು ಅವಲಂಬಿಸಿದೆ ಎಂದು ಹೇಳಲಾಗುತ್ತದೆ. ಆ ಪೊರೆಯ ಬೇರೆ ಬೇರೆ ಭಾಗಗಳು ಬೇರೆಬೇರೆ ತರಂಗಮಾನಗಳಿಗೆ ಅನುಕ್ರಿಯೆಯೆಸಗಬಲ್ಲವಾದುದರಿಂದ ಸಂಮಿಶ್ರನಾದದ ತರಂಗವು ಅದರ ಬೇರೆಬೇರೆ ಭಾಗಗಳಲ್ಲಿ ಕಂಪವುಂಟುಮಾಡುತ್ತದೆ; ಮತ್ತು ಅದರ ಒಂದೊಂದು ಭಾಗವೂ ಸಂಮಿಶ್ರನಾದ ತರಂಗದ ಮೂಲ ಘಟಕವೊಂದೊಂದಕ್ಕೆಅನುಗುಣವಾಗುತ್ತದೆ ಎಂದು ವಿವರಣೆ ಕೊಡುವುದುಂಟು. ಆದರೆ ಕೆಲ ಮನಃಶಾಸ್ತ್ರಜ್ಞರು ಇದನ್ನು ಸ್ವೀಕರಿಸುವುದಿಲ್ಲ. ಅವರ ಪ್ರಕಾರ ಈ ಸಂಮಿಶ್ರನಾದತರಂಗದ ವಿಭಜನೆಯು ಸಂಪೂರ್ಣವಾಗಿ ಮಿದುಳಿನಲ್ಲೇ ನಡೆಯುತ್ತದೆ.

ಜೋರಾದ ಶಬ್ದ ಮತ್ತು ಧ್ವನಿಗುಣ: ಸ್ವರೋತ್ಥಾನದಲ್ಲಲ್ಲದೆ ಶಬ್ದಗಳು (ಧ್ವನಿ ಇಲ್ಲವೆ ನಾದ) ಜೋರು ಮತ್ತು ಧ್ವನಿಗುಣಗಳಲ್ಲೂ ಭಿನ್ನವಾಗಿರುತ್ತವೆ. ನಾದದ ಜೋರು ಕಂಪದ ವಿಸ್ತಾರವನ್ನಾಧರಿಸುತ್ತದೆ. ಅದರ ಉತ್ಥಾನಕ್ಕೂ ಜೋರಿಗೂ ಇರುವ ಸಂಬಂಧವು ಬಣ್ಣದಲ್ಲಿಯ ವರ್ಣ ಗುಣಕ್ಕೂ ಪ್ರಕಾಶವತ್ತೆಗೂ ಇರುವ ಸಂಬಂಧವನ್ನು ಹೋಲುತ್ತದೆ. ಒಂದೇ ಕಂಪ-ಪ್ರಮಾಣದ ಎರಡು ನಾದದಲೆಗಳು ಭಿನ್ನ ವಿಸ್ತಾರಮಾನದವಾಗಿರುವಾಗ ಬೇರೆ ಬೇರೆ ಜೋರಿನ ಒಂದೇ ಉತ್ಥಾನವುಳ್ಳ ರಾಗಗಳನ್ನು ಉಂಟುಮಾಡುತ್ತವೆ.

ಭಿನ್ನ ಭಿನ್ನ ವಾದ್ಯಗಳ ವಿಶಿಷ್ಟ ಗುಣವನ್ನು ಧ್ವನಿಗುಣವೆನ್ನಲಾಗುತ್ತದೆ. ವೀಣೆಯಲ್ಲಿಯೂ ಹಾರ್ಮೋನಿಯಮ್ಮಿನಲ್ಲಿಯೂ ಒಂದೇ ರಾಗವನ್ನು ನುಡಿಸಿದರೂ ಅವುಗಳ ಭೇದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಧ್ವನಿಗುಣ ಭೇದವೇ ಅದಕ್ಕೆ ಕಾರಣ. ಧ್ವನಿಗುಣವು ಜನ್ಯ ತರಂಗಗಳಿಗೆ ಸೇರಿದ್ದು. ಪ್ರತಿಯೊಂದು ನಿಯತ ನಾದತರಂಗವನ್ನೂ ಇತರ ಜನ್ಯತರಂಗಗಳು ಅನುಸರಿಸುತ್ತವೆ. ಮೂಲತರಂಗದ


ಕಂಪ-ಪ್ರಮಾಣಕ್ಕೆ ಸರಿಯಾದ ಗುಣಿತಪ್ರಮಾಣದಲ್ಲಿ ಜನ್ಯತರಂಗಗಳ ಕಂಪ-ಪ್ರಮಾಣಗಳಿರುತ್ತವೆ. ಸೆಕುಂದಿಗೆ ೧೦೦ರಂತೆ ಕಂಪಿಸುವ ಮೂಲತರಂಗವು ೨೦೦, ೩೦೦, ೪೦೦ರ ಜನ್ಯತರಂಗಗಳನ್ನು ಹುಟ್ಟಿಸುತ್ತದೆ. ಈ ಜನ್ಯತರಂಗಗಳನ್ನು ಉತ್ತರರಾಗಗಳೆಂದೂ ಹೇಳುತ್ತಾರೆ. ಉತ್ತರರಾಗಗಳ ಸಂಖ್ಯೆ–ಸಾಮರ್ಥ್ಯಗಳೇ ಪ್ರತಿಯೊಂದು ವಾದ್ಯಕ್ಕೂ ಅದರದರ ವಿಶಿಷ್ಟ ಧ್ವನಿಗುಣವನ್ನು ಕೊಡುತ್ತವೆ. ಕಂಪನೋಪಕರಣವು (Tuning Fork) ಪೂರ್ಣ ಶುದ್ಧ ರಾಗವನ್ನು ಉಂಟುಮಾಡುತ್ತದೆ. ಅದರಿಂದಲೇ ಸಂಗೀತದ ಪಕ್ಕವಾದ್ಯಗಳಲ್ಲಿ ಕೊಳಲಿನ ರಾಗವು ಒಂದೇ ಇದ್ದಾಗ ಅದು ಬಹಳ ತೆಳ್ಳಗಾಗಿಯೂ ಸಪ್ಪೆಯಾಗಿಯೂ ಕೇಳಿಸುತ್ತದೆ.

ನಾಲಿಗೆಯ ಸಂವೇದನೆಗಳು


ಮೂಲಭೂತ ರುಚಿಗಳು ನಾಲ್ಕು; ಉಪ್ಪು, ಹುಳಿ, ಸಿಹಿ ಮತ್ತು ಕಹಿ. ನಾಲಿಗೆಯ ತುದಿಗೆ ಸಿಹಿ ಗೊತ್ತಾದರೆ, ಅದರ ಬದಿಗಳಿಗೆ ಹುಳಿ ಗೊತ್ತಾಗುತ್ತದೆ. ಅದರ ಹಿಂಬದಿಗೆ ಕಹಿಯ ಸಂವೇದನೆಯೂ, ತುದಿ-ಬದಿಗಳಿಗೆ ಉಪ್ಪಿನ ಸಂವೇದನೆಯೂ ಆಗುತ್ತವೆ ಎಂದು ಸ್ಥೂಲವಾಗಿ ಹೇಳಬಹುದು. ನಾಲಿಗೆಯಲ್ಲಿ ನಿಜವಾಗಿ ರುಚಿಯನ್ನು ಗ್ರಹಿಸುವ ಅವಯವಗಳೆಂದರೆ ರುಚಿ-ಮೊಗ್ಗೆಗಳು. ಅವು ಅದರ ಮೇಲ್ಮೈಯ ಅಡಿಯಲ್ಲಿ ಅಡಗಿವೆ. ನಾವು ಬಾಯಲ್ಲಿ ಒಂದು ತುತ್ತು ಅನ್ನವನ್ನು ಹಾಕಿಕೊಂಡರೆ ಅದು ಚೂರುಚೂರಾಗಿ ಲಾಲಾರಸ ಅಥವಾ ನೀರಿನಲ್ಲಿ ಕರಗಿ ನಾಲಿಗೆಯಲ್ಲಿರುವ ಅಸಂಖ್ಯ ಸಣ್ಣ ತೂತುಗಳ ಮೂಲಕ ರುಚಿ–ಮೊಗ್ಗೆಗಳನ್ನು ಮುಟ್ಟುತ್ತದೆ.

ಮೂಲಭೂತ ರುಚಿಗಳು ನಾಲ್ಕೆಂದು ಹೇಳಿದ್ದು ವೈಜ್ಞಾನಿಕ ದೃಷ್ಟಿಯಿಂದ. ನಮ್ಮ ಪರಂಪರೆಯಲ್ಲಿ ಆರು ರುಚಿಗಳು ಪ್ರಸಿದ್ಧವಾಗಿವೆ. ಸೂಕ್ಷ್ಮಮತಿಗಳು ಈ ಆರರ ಪಟ್ಟಿಗೆ ಇನ್ನು ಎಷ್ಟನ್ನು ಬೇಕಾದರೂ ಸೇರಿಸಿಯಾರು. ಆದರೆ ಉಕ್ತ ನಾಲ್ಕರಿಂದ ಭಿನ್ನವಾದ ರುಚಿಗಳೆಲ್ಲವೂ ನಮ್ಮ ಮೂಗು ಮತ್ತು ಚರ್ಮಗಳ ಕೂಡಿಸಿಕೊಟ್ಟಂಥ ರಸಗಳು (Flavours). ಹವೆಯಿಂದ ರುಚಿಯಲ್ಲಿ ಬದಲಾವಣೆಯಾಗುವುದುಂಟು. ಮಂಜುಗಡ್ಡೆಯಲ್ಲಿ ಇಟ್ಟು ತಣಿಸಿದ ಕಾಫಿಯ ರುಚಿಗಿಂತ ಬಿಸಿ ಕಾಫಿಯ ರುಚಿ ಭಿನ್ನ. ಬಾಯಿಯಲ್ಲಿ ಹಾಕಿಕೊಂಡ ಪದಾರ್ಥದ ಒರಟು ಅಥವಾ ನಯವೂ ರುಚಿವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಹರಳ

14



TASTE BUD



15 THE LOCATION OF TASTE CELLS ON THE HUMAN TONGUE


ಸಕ್ಕರೆಯ ರುಚಿಗೂ ಪುಡಿ ಸಕ್ಕರೆಯ ರುಚಿಗೂ ವ್ಯತ್ಯಾಸವಿದೆ. ಈ ಎರಡು ತರದ ಸಕ್ಕರೆಗಳೂ ನಾಲಿಗೆಯ ಮೇಲ್ಭಾಗವನ್ನು ಮುಟ್ಟಿದಾಗ, ಅವು ಉಂಟು ಮಾಡುವ ಚರ್ಮಸಂವೇದನೆಗಳು ಭಿನ್ನ. ಆದರೆ ರುಚಿಯ ಮೇಲೆ ಸ್ಪರ್ಶಕ್ಕಿಂತ ವಾಸನೆ ಮಾಡುವ ಪರಿಣಾಮ ಹೆಚ್ಚಿನದು: ಸೂಕ್ಷ್ಮವೆಂದು ಹೇಳಲಾಗುವ ನಮ್ಮ ಅನೇಕ ರುಚಿವಿಶೇಷಗಳು ನಿಜವಾಗಿ ನೋಡಿದರೆ ಮೂಗಿಗೂ ಬಾಯಿಗೂ ನಡುವಿನ ವಾಯುಮಾರ್ಗಗಳ ಮೂಲಕ ಮುಟ್ಟಿದ ವಾಸನೆಗಳೇ. ಬಲವಾಗಿ ನೆಗಡಿಯಾದಾಗ ನಮ್ಮ ರುಚಿಸಂವೇದನೆಗಳೆಲ್ಲಾ ನಾಶ ಹೊಂದುವುದೇ ಇದಕ್ಕೆ ಸಾಕ್ಷಿ. ರುಚಿಯನ್ನಲ್ಲದೆ ನಾಲಿಗೆಯು ಸ್ಪರ್ಶ, ಉಷ್ಣಸ್ಪರ್ಶ, ಶೀತಸ್ಪರ್ಶಗಳನ್ನು ಗ್ರಹಿಸಬಲ್ಲುದು. ಈ ಸ್ಪರ್ಶಗಳೂ ಎಷ್ಟೋ ಸಲ ರುಚಿಯೊಡನೆ ಸೇರಿ ರಸ ಹುಟ್ಟಿಸುತ್ತವೆ.

ಮೂಗಿನ ಸಂವೇದನೆಗಳು

ಮೂಗಿನ ಹೊಳ್ಳೆಯ ಒಳಗಿರುವ ಗಂಧಗ್ರಾಹಕ ಪೊರೆಯೇ ವಾಸನೆಯನ್ನು ತಿಳಿಯುವ ಸಾಧನ. ವಾಸನೆಗಳು ಆರು: ದಾಲಚಿನ್ನಿಯಂಥ ಸಂಬಾರದ ದಿನಸಿನ ವಾಸನೆ, ಚಾಕಲೇಟು ಮುಂತಾದವುಗಳಿಗೆ ಹಾಕುವ ಹೂವಿನ ಪರಿಮಳ, ಹಣ್ಣಿನ ವಾಸನೆ, ನೀಲಗಿರಿ ಎಣ್ಣೆಯಲ್ಲಿರುವಂಥ ಸುಟಿಯಾದ ವಾಸನೆ, ಡಾಮರ್ ಎಣ್ಣೆಯಿಂದ ಬರುವ ಸುಟ್ಟ ವಾಸನೆ ಮತ್ತು ಕೊಳೆತ ಪದಾರ್ಥಗಳ ವಾಸನೆ. ಗಂಧಗ್ರಾಹಕ ಪೊರೆಯ ಬೇರೆ ಬೇರೆ ಭಾಗಗಳು ಬೇರೆ ಬೇರೆ ವಾಸನೆಗಳನ್ನು ಗ್ರಹಿಸುತ್ತಿರಬಹುದು. ಕೆಲವು ಕಾಹಿಲೆಗಳಲ್ಲಿ ರೋಗಿಗೆ ಕೆಲವು ವಾಸನೆಗಳು ಗೊತ್ತಾಗುವುದಿಲ್ಲ. ಸಮಸ್ಥಿತಿಯ ಮನುಷ್ಯರು ಕೂಡ ಕೆಲವೊಂದು ವಾಸನೆಗಳನ್ನು ಬಹಳ ಹೊತ್ತು ತೆಗೆದುಕೊಂಡರೆ ಸುಸ್ತಾಗುತ್ತಾರೆ. ಆ ಮೇಲೆ ಸ್ವಲ್ಪ ಕಾಲ ಅವರಿಗೆ ಆ ವಾಸನೆಗಳನ್ನು ಗ್ರಹಿಸುವ ಶಕ್ತಿಯೇ ಇರುವುದಿಲ್ಲ. ಬಹಳ ಕಾಲ ಕರ್ಪೂರವನ್ನು ಮೂಸಿದ ಮನುಷ್ಯನಿಗೆ ಹೆಂಡದ ವಾಸನೆಯು ಗೊತ್ತಾಗುವುದಿಲ್ಲ; ಆದರೆ ಅಯೋಡಿನ್ನಿನ ವಾಸನೆ ಮಾತ್ರ ಗೊತ್ತಾಗುತ್ತದೆ. ಇಲ್ಲಿಯೂ ಸಹ ನಮ್ಮ ವಾಸನೆಗಳಲ್ಲಿ ಚರ್ಮದ ಮತ್ತು ನಾಲಿಗೆಯ ಸಂವೇದನೆಗಳು ಸಮ್ಮಿಶ್ರವಾಗಿರುತ್ತವೆ. ಕ್ಲೋರೋಫಾರಮ್ಮಿನ ಮಧುರಗಂಧವು ಹೆಚ್ಚಾಗಿ ರುಚಿಗೆ ಸೇರಿದ್ದು. ಅಮೋನಿಯದ ಸ್ವಾಭಾವಿಕ ವಾಸನೆಯು ಹೆಚ್ಚಾಗಿ ನೋವಿನ ಸಂವೇದನೆಗೆ ಸೇರಿದ್ದು.

ಚರ್ಮದ ಸಂವೇದನೆಗಳು

ಇಂದ್ರಿಯಗಳಲ್ಲೆಲ್ಲ ಚರ್ಮವು ಅತ್ಯಂತ ಸರಳವಾದುದು. ಅದರ ಸಂವೇ
ದನೆಗೆ ಸ್ಪರ್ಶವೆಂದು ಹೆಸರು. ಈ ಸ್ಪರ್ಶದಲ್ಲಿ ನಾಲ್ಕು ಬಗೆಗಳಿವೆ. ಈ
ನಾಲ್ಕಕ್ಕೂ ಬೇರೆ ಬೇರೆ ಇಂದ್ರಿಯಾವಯವಗಳಿವೆ. ತಂಪು, ಬಿಸಿ, ಒತ್ತ
ಮತ್ತು ನೋವು ಎಂಬಿವೇ ಆ ನಾಲ್ಕು ಚರ್ಮಸಂವೇದನೆಗಳು. ಉಕ್ತ ಸಂವೇ
ದನೆಗಳಿಗೆ ಸಂಬಂಧಿಸಿದ ಇಂದ್ರಿಯಾವಯವಗಳು ಚರ್ಮದ ಮೇಲ್ಪೊರೆಯ
ಒಳಗಿರುತ್ತವೆ. ಚರ್ಮದ ಯಾವ ಭಾಗವನ್ನು ತೆಗೆದುಕೊಂಡರೂ ಈ ನಾಲ್ಕು
ಕೇಂದ್ರಗಳು ಭಿನ್ನ ಪ್ರಮಾಣಗಳಲ್ಲಿ ಇರುತ್ತವೆ. ರೋಮ ಹೆಚ್ಚಾಗಿ ಬೆಳೆಯ
ದಿರುವ ಚರ್ಮದ ಒಂದು ಭಾಗದಲ್ಲಿ ಶಾಯಿಯಿಂದ ಒಂದು ಅಂಗುಲದ ಚೌ
ವನ್ನು ಗುರುತು ಮಾಡಿರಿ. ಮೊದಲು ಆ ಪ್ರದೇಶದ ಮೇಲೆ ಮೆಲ್ಲಗೆ, ತಣ್ಣ
ಗಿರುವ ಸೂಜಿಯೊಂದನ್ನು ಓಡಾಡಿಸಿರಿ. ಆಗ ಕೆಲ ಸ್ಥಳಗಳಲ್ಲಿ ತಪ್ಪದೆ ಶೀ
ಸಂವೇದನೆ ಉಂಟಾಗುತ್ತದೆ. ಈ ಸ್ಥಳಗಳೇ ಶೀತಸ್ಥಳಗಳು. ಮಿಕ್ಕ ಕ
ಗಳಲ್ಲಿ ಯಾವ ಸಂವೇದನೆಯೂ ಉಂಟಾಗುವುದಿಲ್ಲ; ನಮ್ಮ ಪ್ರೇರಣೆಯ
ಬೇರೆ ಬಗೆಯ ಸ್ಥಳವನ್ನು ಮುಟ್ಟಿದ್ದರಿಂದ ಅನುಕ್ರಿಯೆ ಉಂಟಾಗುವುದಿಲ್ಲ
ಶೀತಸ್ಥಳಗಳನ್ನು ಕಂಡುಹಿಡಿಯುವುದು ಎಲ್ಲಕ್ಕಿಂತಲೂ ಸುಲಭ. ಉಷ್ಣಸ್ಥ
ಗಳನ್ನು ಕಂಡು ಹಿಡಿಯುವುದು ಅದಕ್ಕಿಂತ ಕಷ್ಟ. ಏಕೆಂದರೆ ಅವು ಚರ್ಮದ
ಹೆಚ್ಚು ಆಳವಾದ ಕಡೆ ಇರುತ್ತವೆ. ಬೆಚ್ಚಗಿರುವ ಸೂಜಿಯನ್ನು ಮೇಲಿನಂತೆ
ಉಕ್ತ ಚರ್ಮದ ಭಾಗದ ಮೇಲೆ ಓಡಾಡಿಸಿದಾಗ ಉಷ್ಣಸ್ಥಳಗಳು ಸಿಗುತ್ತ
ಚರ್ಮದ ಉಷ್ಣಮಾನವು ಮೈಯ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆಯಾ
ಇರುತ್ತದೆ. ಛಂಡಿಯ ದಿವಸಗಳಲ್ಲಿ ನಮ್ಮ ಮೈಯ ಮುಚ್ಚಿಕೊಂಡ ಭಾಗಕ್ಕಿ
ತೆರೆದ ಭಾಗವು ಹೆಚ್ಚು ತಣ್ಣಗಾಗಿರುತ್ತದೆ. ವಿಶಿಷ್ಟ ಚರ್ಮಭಾಗದ ವಿಶಿ
ವಧಿಯ ಉಷ್ಣಮಾನವನ್ನು 'ಶರೀರಶಾಸ್ತ್ರೀಯ ಶೂನ್ಯಸ್ಥಳ' ವೆನ್ನುತ್ತ
(Physiological Zero Point). ಉಷ್ಣಪ್ರೇರಣೆಯು ಪರಿಣಾಮಕಾರಿಯ
ಬೇಕಾದರೆ ಚರ್ಮದ ಉಷ್ಣಮಾನವು ಈ ಶೂನ್ಯಸ್ಥಳಕ್ಕಿಂತ ಮೇಲಿರಬೇ
ಗುತ್ತದೆ. ಸಾಮಾನ್ಯವಾಗಿ, ಆಯಾ ಪ್ರೇರಣಾನುಸಾರವಾಗಿ ಶೀತಸ್ಥ
ಶೀತಾನುಕ್ರಿಯೆಯನ್ನು ಉಂಟುಮಾಡಿದರೆ, ಉಷ್ಣಸ್ಥಳವು ಉಷ್ಣಾನುಕ್ರಿ
ಯನ್ನು ಉಂಟು ಮಾಡುತ್ತದೆ. ಆದರೆ ಕೆಲವೊಮ್ಮೆ ಶೀತಪ್ರೇರಣೆಯು ಉ



CUTANEOUS RECEPTORS

A. Hair folicle

B. Meissner Corpuscle

C. Pacinian Corpuscle

D. Ruffini corpuscle

E. Krause corpuscle

F. Free nurve endings

ಸ್ಥಳವನ್ನು ಮುಟ್ಟಿದಾಗ ಉಷ್ಣಾನುಕ್ರಿಯೆ ಉಂಟಾಗುತ್ತದೆ. ಹಾಗೆಯೇ ಉಷ್ಣಪ್ರೇರಣೆಯು ಶೀತಸ್ಥಳವನ್ನು ಮುಟ್ಟಿದರೆ, ಶೀತಾನುಕ್ರಿಯೆ ಉಂಟಾಗುತ್ತದೆ. ಇವಕ್ಕೆ 'ವ್ಯತಿರೇಕ ಉಷ್ಣಸಂವೇದನೆ'ಮತ್ತು 'ವ್ಯತಿರೇಕ ಶೀತ ಸಂವೇದನೆ' ಎನ್ನುತ್ತಾರೆ. ಶೀತಸ್ಥಳವು ಎಲ್ಲ ಪ್ರೇರಣೆಗೂ ಶೀತಾನುಕ್ರಿಯೆಯನ್ನೇ ಉಂಟುಮಾಡುತ್ತದೆ. ಅದೇ ಮೇರೆಗೆ ಉಷ್ಣಸ್ಥಳವು ಎಲ್ಲ ಪ್ರೇರಣೆಗೂ ಉಷ್ಣಾನುಕ್ರಿಯೆಯನ್ನೇ ಉಂಟುಮಾಡುತ್ತದೆ.

ಹಿಂಸೆ ಅಥವಾ ನೋವಿನ ಕೇಂದ್ರಗಳನ್ನು ಸುಲಭವಾಗಿ ಗೊತ್ತುಮಾಡಬಹುದು. ಇವು ಬಹಳವಾಗಿವೆ. ಶರೀರಕ್ಕೆ ಅಪಾಯವಾಗುವುದನ್ನು ಸೂಚಿಸುವುದರಿಂದ ಇದೊಂದು ರಕ್ಷಣಾ ತಂತ್ರವಾಗಿದೆ. ಇವು ಬಹಳ ಚುರುಕಾಗಿದ್ದರೂ ಚರ್ಮದ ಆಳದಲ್ಲಿ ಇರುತ್ತವೆ. ಅಂಥ ಕೇಂದ್ರಗಳ ನಡುವಿನ ಸ್ಥಳವು ಯಾವ ನೋವನ್ನೂ ಗ್ರಹಿಸಲಾರದು. ನೋವನ್ನು ಗ್ರಹಿಸದ ಈ ಭಾಗವಾದರೂ ಒಂದು ರಕ್ಷಣಾತಂತ್ರವೇ. ಅದು ಅನವಶ್ಯಕವಾಗಿ ನಾವು ನೋವಿನ ಅಪಾಯಕ್ಕೆ ಗಾಬರಿಗೆಡದಂತೆ ನೋಡಿಕೊಳ್ಳುತ್ತದೆ. ಸೂಜಿಯಿಂದ ನೋವಿನ ಕೇಂದ್ರಗಳನ್ನು ಗುರುತಿಸುವುದು ಸುಲಭ.

ಶೀತೋಷ್ಣಕೇಂದ್ರಗಳಿಗಿಂತ ಒತ್ತಡ ಅಥವಾ ಸಂಮರ್ದದ ಕೇಂದ್ರಗಳು ಹೆಚ್ಚಾಗಿವೆ. ಆದರೆ ಅವುಗಳ ಸಂಖ್ಯೆ ನೋವಿನ ಕೇಂದ್ರಗಳಿಗಿಂತ ಕಡಿಮೆ. ಅವು ಮೈತುಂಬ ಇವೆ. ಚರ್ಮದಲ್ಲಿರುವ ಪ್ರತಿಯೊಂದು ರೋಮದ ಬುಡದಲ್ಲಿಯೂ ಒಂದೊಂದು ಒತ್ತಡ ಕೇಂದ್ರವಿದೆ. ಅವು ನೀರೋಮ ಸ್ಥಳಗಳಲ್ಲಿಯೂ ಇರುತ್ತವೆ. ಅವನ್ನು ಹುಡುಕಲು ಕುದುರೆಯ ಒರಟಾದ ರೋಮವನ್ನು ಹಿಂದೆ ಹೇಳಿದಂತೆ ಮೈಮೇಲೆ ಆಡಿಸಬೇಕು. ಆದರೆ ಅದರ ಒತ್ತಡ ಚರ್ಮದಮೇಲೆ ಒಂದೇ ಸಮನಾಗಿರಬೇಕಿದೆ. ಹೆಚ್ಚಾದರೆ ನೋವಿನ ಸಂವೇದನೆ ಆದೀತು. ಹಿಂಸೆ-ಸಂಮರ್ದಗಳ ನೈಷೇಧಿಕ ಮುಖಗಳ ಸಂವೇದನೆಗಳು ಅನುಕ್ತ.

ಮಾಂಸಲ ಸಂವೇದನೆ: ಈ ಸಂವೇದನೆಯು ನಮಗೆ ಶರೀರದ ಚಲನೆ, ಇತರ ಪದಾರ್ಥಗಳನ್ನು ಅದು ಅವರೋಧಿಸುವುದು ಮತ್ತು ನಮ್ಮ ಕೈಗಳಿಂದ ವಿವಿಧ ಪದಾರ್ಥಗಳನ್ನು ಎತ್ತಿದಾಗ ಅವುಗಳ ಭಾರ—ಇವನ್ನು ತಿಳಿಸುವುದು. ಯಾವುದಾದರೊಂದು ಭಾರವಾದ ವಸ್ತುವನ್ನು ನಾವು ಎತ್ತಿದರೆ, ಕೈಯಲ್ಲಿ ಒತ್ತಡದ ಸಂವೇದನೆಯಾಗುವುದಲ್ಲದೆ, ಕಷ್ಟದ ಭಾವನಾಂಶವು ತಿಳಿದುಬರು

ತ್ತದೆ. ಅಂಥ ಸಂವೇದನೆಯು ಮುಷ್ಟಿಯನ್ನು ಬಿಗಿಮಾಡಿಕೊಂಡಾಗಲೂ ಉಂಟಾಗುವುದು. ಇದು ಚರ್ಮಸ್ಪರ್ಶಕ್ಕೆ ಮೀರಿದ್ದು. ಏಕೆಂದರೆ ಇದು ಚರ್ಮ ಸಂವೇದನೆಯ ಶಕ್ತಿಯನ್ನು ಸಂಪೂರ್ಣ ಕಳೆದುಕೊಂಡವರಲ್ಲಿಯೂ ಕಂಡು ಬಂದಿದೆ. ಭಾರದ ಸಂವೇದನೆಯು ಕೇವಲ ಒತ್ತಡಕ್ಕೇ ಒಳಗಾಗಿದ್ದರೆ ಒಂದು ವಸ್ತುವನ್ನು ನಾವು ಎತ್ತಿದ ಕೂಡಲೇ ಅದರ ಭಾರವೆಷ್ಟೆಂಬುದನ್ನು ಹೇಳಲು ನಮಗೆ ಸಾಧ್ಯವಾಗಬೇಕಿತ್ತು. ಆದರೆ ನಮ್ಮ ಕೈಯನ್ನು ಅನೇಕ ಸಲ ಮೇಲೆ ಕೆಳಗೆ ಆಡಿಸಿದ ಹೊರತು ಹಾಗೆ ಹೇಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಸ್ಪರ್ಶಸಂವೇದನೆಯು ಕೊಡುವ ನೆರವನ್ನೂ ಮೀರಿ ನಮ್ಮಲ್ಲಿ ಚಲನೆ ಮತ್ತು ಭಾರಗಳನ್ನು ಗುರುತಿಸುವ ವಿಶಿಷ್ಟ ಸಾಧನ ಇದೆಯೆಂದು ತಿಳಿಯಬೇಕಾಯಿತು. ಅದೇ ಮಾಂಸಲಸಂವೇದನೆ.

ಮೇಲೆ ಹೇಳಿದ ಸಂವೇದನೆಯು ನಮ್ಮ ಶರೀರದಲ್ಲಿರುವ ತಕಲಿಯಂತಿರುವ ಮಾಂಸಗಳಲ್ಲಿ ಉಂಟಾಗುತ್ತದೆ. ಇವು ಇತರ ಮಾಂಸಖಂಡಗಳ ಒಳಗಿದ್ದು ಜ್ಞಾನವಾಹಿ ನರಗಳೊಡನೆ ಸಂಬಂಧವಿಟ್ಟುಕೊಂಡಿರುತ್ತವೆ. ಮಿಕ್ಕ ಇಂದ್ರಿಯಾವಯವಗಳು ಮಾಂಸ-ಪೇಶಿ ಮತ್ತು ಸಂದಿಗಳಲ್ಲಿ ಸುತ್ತುಮುತ್ತ ಇರುತ್ತವೆ. ನಮ್ಮ ರಟ್ಟೆಯನ್ನು ಜಟ್ಟಿಯಂತೆ ಬಗ್ಗಿಸಿದಾಗ ಒಂದು ಜೊತೆ ಮಾಂಸ ಖಂಡಗಳು ಕುಗ್ಗಿದರೆ, ಇನ್ನೊಂದು ಜೊತೆ ಹಿಗ್ಗುತ್ತದೆ. ಒಂದು ಜೊತೆಯಲ್ಲಿ ಮಾಂಸದ ತಕಲಿಗಳು ಒತ್ತಲ್ಪಟ್ಟರೆ ಇನ್ನೊಂದರಲ್ಲಿ ಅವು ಹಿಗ್ಗಿಸಲ್ಪಡುತ್ತವೆ. ಈ ಮಾಂಸದ ತಕಲಿಗಳಿಂದ ಬರುವ ಸಂವೇದನೆಗಳು ನಾವು ಕಣ್ಣುಮುಚ್ಚಿಕೊಂಡರೂ ನಮ್ಮ ಕೈಕಾಲುಗಳು ಎಲ್ಲಿವೆ ಎಂಬುದನ್ನು ನಮಗೆ ಸೂಚಿಸುತ್ತವೆ.

ಸಂವೇದನೆಗಳ ಸ್ವರೂಪ

ಜ್ಞಾನವೆಂಬ ಪದಾರ್ಥವು ಮೊದಲೇ ಸಿದ್ಧವಾಗಿ ನಮ್ಮ ತಲೆಯನ್ನು ಪ್ರವೇಶಿಸುವ ವಸ್ತುವಲ್ಲ. ಜ್ಞಾನವಾಗಿ ಕೊನೆಯಲ್ಲಿ ಪರಿಣಮಿಸುವ ವಿಸ್ತಾರವಾದ ಪ್ರಕ್ರಿಯೆಯ ಮೊದಲ ಹೆಜ್ಜೆಯೇ ಸಂವೇದನೆ. ಮೊದಲು ನಾವು ಒಂದು ಸಂವೇದನೆಗೆ ಉನ್ಮುಖರಾಗಬೇಕು. ಅನಂತರ ಅದಕ್ಕೆ ಒಂದು ಅರ್ಥವನ್ನು ಕಂಡುಕೊಂಡು ಕೊನೆಯಲ್ಲಿ ಅಂಥ ಅನೇಕ ಅರ್ಥಗಳನ್ನು ಕೂಡಿಸಿ, ಒಂದು ಸಾಮಾನ್ಯ ಕಲ್ಪನೆಯನ್ನು ಮಾಡಿಕೊಳ್ಳುವುದೇ ಜ್ಞಾನ. ನಾವು ಉನ್ಮುಖತೆಯನ್ನು ತೋರಿಸದ ಸಂವೇದನೆಯು ಎಂದೆಂದಿಗೂ ನಮಗೆ ಕಳೆದು

ಹೋದಂತೆಯೇ ಸರಿ. ಸಂವೇದನೆಗಳನ್ನು ಜ್ಞಾನಕ್ಕೆ ರೂಪಾಂತರಿಸುವ ಕಾರ್ಯದಲ್ಲಿ ಮನಸ್ಸಿನ ಪಾತ್ರ ಬಹಳ ಮುಖ್ಯವಾದುದು. ಎಷ್ಟೋವೇಳೆ ಇಂದ್ರಿಯಾಂಗಗಳು ಜ್ಞಾನದ ಹೆಬ್ಬಾಗಿಲಾಗದೆ, ಜ್ಞಾನಕ್ಕೆ ಅಡ್ಡಿ ಮಾಡುವ ಗೋಡೆಗಳೂ ಆಗುವುದುಂಟು. ಪ್ರತಿಯೊಂದು ಇಂದ್ರಿಯಾಂಗವೂ ವಿಶಿಷ್ಟ ಸಂವೇದನೆಯೊಂದನ್ನು ಗ್ರಹಿಸಲೆಂದೇ ನಿರ್ಮಿತವಾಗಿದೆ. ಕಿವಿಗಳು ನೋಡಲಾರವು, ಕಣ್ಣುಗಳು ಕೇಳಲಾರವು. ಒಂದು ಬೆಳಕಿನ ಪ್ರೇರಣೆಯು ಕಿವಿಯ ಮೇಲೆ ಬಿದ್ದಾಗ ಕಿವಿಯು ಅವನ್ನು ತಡೆಯುವುದಲ್ಲದೆ ಒಳಗೆ ಬಿಡುವುದಿಲ್ಲ. ಇನ್ನು ತಾನು ತೆಗೆದುಕೊಳ್ಳಬೇಕಾದ ಪ್ರೇರಣೆಯನ್ನಾದರೂ ಅದು ನಿರ್ದಿಷ್ಟ ಅಳತೆಯೊಳಗೆ ಇದ್ದರೆ ಮಾತ್ರ ತೆಗೆದುಕೊಳ್ಳುತ್ತದೆ. ಬಹಳ ಜೋರಾದ ಶಬ್ದಕ್ಕೂ ತೀರ ಮೆಲ್ಲನೆಯ ಶಬ್ದಕ್ಕೂ ಕಿವಿಯ ಬಾಗಿಲು ಮುಚ್ಚಿಕೊಳ್ಳುತ್ತದೆ.

ಇಂದ್ರಿಯಗಳಲ್ಲೆಲ್ಲ ಯಾವುದು ಹೆಚ್ಚು? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವಾಗಿ "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎಂದು ಯಾರಾದರೂ ಹೇಳಬಹುದು. ಅನಂತರ ಬರುವುದು ಕಿವಿ. ಆದರೆ ಇಂದ್ರಿಯಗಳ ಪ್ರಾಮುಖ್ಯವು ಆಯಾ ವ್ಯಕ್ತಿಗಳ ದೃಷ್ಟಿಕೋನ ಮತ್ತು ಆಸಕ್ತಿಗಳನ್ನು ಅವಲಂಬಿಸಿದೆ ಎಂಬುದು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳತಕ್ಕ ಸಂಗತಿ. ಹೆಚ್ಚು ಅನನುಕೂಲತೆ ತಂದುಕೊಳ್ಳದೆ ಬಿಟ್ಟುಬಿಡಬಹುದಾದ ಇಂದ್ರಿಯವೆಂದರೆ ಮೂಗು. ನೆಗಡಿ ಹಿಡಿದಾಗ ನಮಗೆ ಯಾವುದಾದರೂ ವಾಸನೆ ಗೊತ್ತಾಗುತ್ತದೆಯೆ? ಆದರೂ ನಮ್ಮ ನಿತ್ಯದ ಕೆಲಸ ಸಾಗಿಯೇ ಸಾಗುತ್ತದೆ.

ಸಂವೇದನೆಯ ಲಕ್ಷಣಗಳು: ಪ್ರೇರಣೆಯನ್ನು ಕೊಡುವುದು ಸಂವೇದನೆಯ ಪ್ರಥಮ ಲಕ್ಷಣ. ಎಂಗೆಲ್ಲನು ಇದನ್ನು ಉತ್ಕ್ಷೇಪ (Shock) ಎನ್ನುತ್ತಾನೆ. ಸಂವೇದನೆಗಳು ನಮ್ಮ ಒಳಗಿನ ಅಥವಾ ಹೊರಗಿನ ಕೆಲವು ಸಂಗತಿಗಳನ್ನು ಮೊದಲೇ ನಮ್ಮ ಗಮನಕ್ಕೆ ತಂದುಕೊಡುತ್ತವೆ. ಅವು ಸಾಮಾನ್ಯವಾಗಿ ನಮ್ಮ ಸುತ್ತುಮುತ್ತಲಿನ ಭೌತಿಕ ಪ್ರಪಂಚದ ಗಾಳಿಯಲೆ, ಉಷ್ಣತರಂಗಗಳು ಮುಂತಾದ ಚಲನೆಯ ರೂಪವನ್ನು ತಾಳುತ್ತವೆ.

ಸಂವೇದನೆಗಳು ಪರಿಣಾಮಕಾರಿಗಳಾಗಬೇಕಾದರೆ ಅವಕ್ಕೆ ಕೆಲ ಮಟ್ಟದ ತೀವ್ರತೆ ಇರಬೇಕು. ಅತಿ ಮಸುಕಾದ ಬೆಳಕು, ಅತಿ ಸೂಕ್ಷ್ಮವಾದ ವಾಸನೆ ಅಥವಾ ಅತಿ ಮಂದವಾದ ಶಬ್ದ ನಮ್ಮ ಗಮನವನ್ನು ಸೆಳೆಯಲಾರವು. ಆದರೆ

ಸಂವೇದನೆಗಳು ಅತಿ ತೀವ್ರವಾದಾಗಲೂ ಅವು ನಮ್ಮ ಮೇಲೆ ತಕ್ಕ ಪರಿಣಾಮ ಗಳನ್ನು ಉಂಟುಮಾಡದೆ ಕೇವಲ ನೋವನ್ನು ಉಂಟುಮಾಡುತ್ತವೆ. ಅತಿ ತೀಕ್ಷ್ಣವಾದ ಬೆಳಕು ಕಣ್ಣು ಕುಕ್ಕುತ್ತದೆ; ಅತಿ ಕರ್ಕಶ ಸ್ವರವು ಕಿವಿಯ ತಂಬಟೆಯನ್ನು ಒಡೆಯುತ್ತವೆ; ಅತಿಯಾದ ಚಳಿಯಿಂದ ಮೈಯ ನರನಾಡಿ ಗಳು ಸೆಟೆದು ಹೋಗುತ್ತವೆ.

ಒಂದು ಸಂವೇದನೆಯು ನಿರರ್ಥಕವಾಗುವ ಕೆಳಗಿನ ಮಟ್ಟವನ್ನು 'ಇಳಿಗಡು' ಎನ್ನಬಹುದು. ಅದು ಸಾರ್ಥಕವಾಗದೆ ಕೇವಲ ನೋವನ್ನು ಉಂಟುಮಾಡುವ ಮಟ್ಟಕ್ಕೆ 'ಏರುಗಡು' ಎನ್ನಬಹುದು. ಈ ಎರಡು ಗಡಿಗಳ ನಡುವೆ ಇಂದ್ರಿಯ ಸಂವೇದನೆಯ ತೀವ್ರತೆಯ ಅನೇಕ ಅಳತೆಗಳಿರುತ್ತವೆ. ಇಳಿಗಡುವಿನ ಕೆಳಗೆ ಪ್ರೇರಣೆಯೊಂದು ಬಿದ್ದರೆ ಅದು ಅನುಕ್ರಿಯೆಯನ್ನು ಹುಟ್ಟಿಸುವುದಿಲ್ಲ. ಅಂಥ ಅಶಕ್ತ ಪ್ರೇರಣೆಯನ್ನು 'ಅವಕ್ಷೀಣ ಪ್ರೇರಣೆ' ಎಂದು ಕರೆಯಬಹುದು (Subliminal Stimulus). ಆದರೆ ಎರಡು ಮೂರು ಅವಕ್ಷೀಣ ಪ್ರೇರಣೆಗಳು ಒಟ್ಟಾಗಿ ಒಂದು ಬಲವಾದ ಪ್ರತಿಕ್ರಿಯೆಯನ್ನು ಉಂಟುಮಾಡಬಹುದು. ಈ ಘಟನೆಯನ್ನು 'ಪ್ರೇರಣಾಸಮುದಯ' ಎನ್ನಬಹುದು. ಒಂದು ಕಪ್ಪೆಯ ಬೆನ್ನಿನ ಮೇಲೆ ಒಂದು ಹನಿ ಗಂಧಕಾಮ್ಲವನ್ನು ಸುರಿದರೆ ಅದು ಬಹಳ ಮೆಲ್ಲಗೆ ತುರಿಸಿಕೊಳ್ಳುವಷ್ಟು ಅನುಕ್ರಿಯೆಯನ್ನು ಹುಟ್ಟಿಸುತ್ತದೆ. ಅದರ ಬೆನ್ನಿನ ಇನ್ನೊಂದು ಭಾಗದಲ್ಲಿ ಇನ್ನೊಂದು ಹನಿಯನ್ನು ಬೀಳಿಸಿದರೆ ಅದು ಅಂಥದೇ ಇನ್ನೊಂದು ಅನುಕ್ರಿಯೆಯನ್ನು ಹುಟ್ಟಿಸುತ್ತದೆ. ಆದರೆ ಎರಡು ಹನಿಗಳನ್ನು ಏಕಕಾಲದಲ್ಲಿ ಒಂದೇ ಸ್ಥಳದಲ್ಲಿ ಸುರಿದರೆ ಬಲವಾಗಿ ತುರಿಸಿಕೊಳ್ಳುವ ಅನು ಕ್ರಿಯೆಯನ್ನು ಅವು ಹುಟ್ಟಿಸುತ್ತವೆ.

ಸಂವೇದನೆಗಳಿಗೆ ಸುಪ್ತಿಕಾಲವಿದೆ. ನಮ್ಮ ಶರೀರದ ಪೇಶಿಗಳು ಸಮುಸ್ಥಿತಿಯ ಅನುಕ್ರಿಯೆಗಳನ್ನು ಮಾಡಲು ತೆಗೆದುಕೊಳ್ಳುವ ಕಾಲಕ್ಕೆ 'ಸುಪ್ತಿಕಾಲ' ಎಂದು ಹೆಸರು. ಒಂದು ಇಂದ್ರಿಯಾಂಗವನ್ನು ಎಬ್ಬಿಸಲು ·೦೦೫ ಸೆಕುಂಡಗಳಿಂದ ·೦೧ ಸೆಕುಂಡದ ವರೆಗಿನ ಕಾಲಾವಧಿ ಅಗತ್ಯ. ಮಿದುಳಿಗೆ ಹೋಗುವ ನರದ ಹುರಿಗಳನ್ನು ಉದ್ರೇಕಿಸಲು ಕೂಡ ಕಾಲಬೇಕು. ಮಿದುಳಿನ ಸಂಘಟಕಗಳು, ಕ್ರಿಯಾವಾಹಿ ನರಗಳು ಮತ್ತು ಮಾಂಸಖಂಡಗಳು ಕೆಲಸಮಾಡಲು ಕೆಲಕಾಲ ಹಿಡಿಯುತ್ತವೆ. ಹೀಗೆ ಸಂವೇದನೆಯ ಗ್ರಹಿಕೆಗೂ ತತ್ಫಲವಾಗಿ ಆರಂಭವಾಗುವ

ಕಾರ್ಯಕ್ಕೂ ನಡುವೆ ಕೆಲಕಾಲ ಕಳೆದುಹೋಗುವುದು ಅನಿವಾರ್ಯ. ಈ ಮಧ್ಯ ಕಾಲವನ್ನು ನಾವು ಕಾಲಮಾಪಕ ಯಂತ್ರದಿಂದ ಅಳೆಯಬಹುದು. ನರಗಳೂ ಪೇಶಿಗಳೂ ಅನುಕ್ರಿಯೆಯನ್ನು ಎಸಗಲು ಕಾಲ ತೆಗೆದುಕೊಳ್ಳುವುವು; ಅಷ್ಟೇ ಅಲ್ಲದೆ, ಕಾಲಹೋದ ಹಾಗೆ ಅವು ಅನುಕ್ರಿಯೆಯನ್ನು ನಿಲ್ಲಿಸುತ್ತಲೂ ಹೋಗುವುವು. ಹೀಗೆ ಎರಡು ಕಡೆಯಲ್ಲಿಯೂ ಕಾಲಯಾಪನೆ ಇದೆ. ಪ್ರಕಾಶಕ್ಷೇತ್ರದಲ್ಲಿ ಈ ಘಟನೆಯು ಉತ್ತರಪ್ರತಿಮೆಗೆ ಕಾರಣವಾಗುತ್ತದೆ.

ಒಂದು ಪ್ರೇರಣೆಯು ಪರಿಣಾಮಕಾರಿಯಾಗಬೇಕಾದರೆ ಅದಕ್ಕೆ 'ಉಳಿಗಾಲ' (duration) ಬೇಕು. ಅದು ಸಂಬಂಧಪಟ್ಟ ಇಂದ್ರಿಯಾಂಗದಮೇಲೆ ನಿರ್ದಿಷ್ಟ ಕಾಲ ಕೆಲಸಮಾಡಬೇಕು. ಒಂದು ಸಂವೇದನೆಯ ಸ್ವರೂಪವು ಉಳಿಗಾಲದ ಅವಧಿಯನ್ನುಮೀರಿ ಮತ್ತೂ ಮುಂದುವರಿದರೆ ಬದಲಾಗುತ್ತದೆ. ಒಂದು ಬಣ್ಣವನ್ನು ಬಹಳ ಕಾಲ ನೋಡುತ್ತ ಕುಳಿತರೆ ನಮ್ಮ ಕಣ್ಣು ಸುಸ್ತಾಗಿ ಕಣ್ಣ ಮುಂದೇ ಆ ಬಣ್ಣವು ಕ್ರಮೇಣ ಅಸ್ಪಷ್ಟವಾಗುತ್ತ ಹೋಗಿ, ಕೊನೆಗೆ ಮಾಯವಾಗಿಬಿಡುತ್ತದೆ.

ಅನೇಕ ಸಂವೇದನೆಗಳಿಗೆ ವ್ಯಾಪ್ತಿ (Extension) ಇದೆ ಕರ್ಣಸಂವೇದನೆಗಳನ್ನು ನಾವು ಕೆಲ ಕಾಲಪರಿಮಾಣದ ವರೆಗೆ ಹಬ್ಬಿರುವ ಸಂಗತಿಗಳೆಂದು ತಿಳಿಯುತ್ತೇವೆ. ಚರ್ಮ ಮತ್ತು ನೇತ್ರಗಳ ಸಂವೇದನೆಗಳನ್ನೂ ಹಾಗೇ. ಸಂವೇದನೆಗಳು ಇಂದ್ರಿಯಾಂಗದ ಚಿಕ್ಕ ಅಥವಾ ದೊಡ್ಡ ಪ್ರದೇಶಗಳಲ್ಲಿ ಕೆಲಸ ಮಾಡುತ್ತವೆ. ಬಿಸಿನೀರಿನ ಸ್ನಾನದಿಂದ ಉಂಟಾಗುವ ಸಂವೇದನೆಗಳ ವ್ಯಾಪ್ತಿ ಸೂಜಿ ಚುಚ್ಚಿದ್ದರಿಂದ ಉಂಟಾಗುವ ಸಂವೇದನೆಯ ವ್ಯಾಪ್ತಿಗಿಂತ ಹೆಚ್ಚಿನದು.

ಅಧ್ಯಾಯ ನಾಲ್ಕು

ಇಂದ್ರಿಯಪ್ರತ್ಯಕ್ಷ

ಮಿದುಳಿನ ಸಂಪರ್ಕಪ್ರದೇಶಗಳನ್ನು ಹೇಳುವಾಗ, ರಾಮನ ಸ್ವರವನ್ನು ಗುರುತಿಸುವ ಸಂಗತಿಯನ್ನು ಹೇಳಿವೆವಷ್ಟೆ; ಅದನ್ನು ಇಲ್ಲಿ ಮತ್ತೆ ನೆನೆಸಿ ಕೊಂಡರೆ, ಹಾಗೆ ರಾಮನನ್ನು ಗುರುತಿಸುವ ಒಟ್ಟು ಅನುಭವವನ್ನು ಹೀಗೆ ವಿವರಿಸಬಹುದು: ಅಲ್ಲಿ ಶ್ರವಣಸಂವೇದನೆಗಳು ಕಲ್ಪನೆ-ಪ್ರತಿಮೆಗಳನ್ನೂ ಇತರ ವಿವಿಧ ಸ್ಮೃತಿಗಳನ್ನೂ ಕೂಡಿಕೊಂಡು ರಾಮನನ್ನು ಗುರುತಿಸುವ ಇಂದ್ರಿಯ ಪ್ರತ್ಯಕ್ಷಕ್ಕೆ ಕಾರಣವಾಗುತ್ತವೆ. ಕೇವಲ ರಾಮನ ಸ್ವರವನ್ನು ಕೇಳುವುದು ಸಂವೇದನೆ ಎನಿಸುತ್ತದೆ. ನಮ್ಮ ಮಿದುಳಿನಲ್ಲಿಯ ಜ್ಞಾನೇಂದ್ರಿಯ ಸ್ಥಳಗಳಲ್ಲಿ ಒಂದಲ್ಲ ಒಂದರ ನರಪುಟಗಳು ಪ್ರೇರಿತವಾದಾಗ ಆಗುವ ಅನುಭವವೇ ಸಂವೇದನೆ. ಇಂಥ ಸಂವೇದನೆಯೊಡನೆ ನಮ್ಮ ಮಿದುಳಿನಲ್ಲಿಯ ಸಂಪರ್ಕಪ್ರದೇಶಗಳ ನರಪುಟಗಳು ಪ್ರೇರಿತವಾದಾಗ ಉಂಟಾಗುವ ಅನುಭವವನ್ನು ಕೂಡಿಸಿದರೆ ಇಂದ್ರಿಯಪ್ರತ್ಯಕ್ಷ ಉಂಟಾಗುತ್ತದೆ — ಅಥವಾ ಇಂದ್ರಿಯಪ್ರತ್ಯಕ್ಷವೆಂದರೆ ಪೂರ್ವಾನುಭವದಿಂದ ಹುಟ್ಟಿದ ಮತ್ತು ಸಂಪರ್ಕಬಲದಿಂದ ಪುನರಾಗಮಿಸಿದ ಕಲ್ಪನೆ, ಪ್ರತಿಮೆ ಮುಂತಾದವುಗಳಿಂದ ಪುಷ್ಟಿಗೊಂಡ ಸಂವೇದನೆ. ಸಂಪರ್ಕ ಪ್ರದೇಶಗಳಿಗೆ ಅಪಾಯ ಉಂಟಾದರೆ, ಸಂವೇದನೆಯು ಸರಿಯಾಗಿ ಆದರೂ ಇಂದ್ರಿಯಪ್ರತ್ಯಕ್ಷದಲ್ಲಿ ಹೆಚ್ಚಿನ ಗೊಂದಲ ಉಂಟಾಗುತ್ತದೆ ಎಂಬ ಅಂಶವನ್ನು ನಾವು ಆಗಲೇ ಹೇಳಿದ್ದೇವೆ.

ನಾವು ಒಂದು ಮನೆಯನ್ನು ಕಂಡಾಗ, ಮನೆಯ ಇಂದ್ರಿಯಪ್ರತ್ಯಕ್ಷಕ್ಕೆ ಕಾರಣವಾಗುವ ಜಲಿಪೊರೆಯ ಪ್ರತಿಮೆಯು (Retinal Image) ಕೇವಲ ಬೂದಿ ಬೂದಿಯಾದ, ಹೆಚ್ಚುಕಡಿಮೆ ಎತ್ತರಕ್ಕಿಂತ ಅಗಲ ಹೆಚ್ಚಾದ ಆಕೃತಿಯಾಗಿರುತ್ತದೆ. ಆದರೆ ಮನೆಯನ್ನು "ಪ್ರತ್ಯಕ್ಷವಾಗಿ ಕಾಣುವುದು" ಎಂಬುದು ಬೂದಿ ಬಣ್ಣದ, ಎತ್ತರಕ್ಕಿಂತ ಅಗಲ ಹೆಚ್ಚಾದ ಒಂದು ಆಕೃತಿಯ ಸಂವೇದನೆಯನ್ನು ಪಡೆಯುವುದಕ್ಕಿಂತ ಹೆಚ್ಚು ಅರ್ಥವುಳ್ಳದ್ದು. ನಮ್ಮ ದೃಷ್ಟಿಯಲ್ಲಿ

ಒಂದು ಮನೆ ಎಂದರೆ ಸುತ್ತಲೂ ಗೋಡೆಯುಳ್ಳ—ಒಳಗಡೆ ಕೋಣೆಗಳು, ಬಾಗಿಲುಗಳು ಮುಂತಾದವುಗಳನ್ನು ಒಳಗೊಂಡಿರುವ ಒಂದು ಕಟ್ಟಡ. ಈ ಎಲ್ಲ ಜ್ಞಾನವು ನಮ್ಮ ಅನುಭವದ ಅಂಗವಾಗಿದೆ— ಒಂದು ವಸ್ತುವು ನಮ್ಮ ಇಂದ್ರಿಯಪ್ರತ್ಯಕ್ಷಕ್ಕೆ ಬರುವಾಗ, ನಾವು ಅದು ಹೊಂದಿದೆ ಎಂದು ನಮಗೆ ಗೊತ್ತಿರುವ, ಆದರೆ ನಾವು ಸದ್ಯಃ ಸಂವೇದಿಸದಿರುವ ಗುಣಗಳನ್ನು ಪರೋಕ್ಷಾ ಪರೋಕ್ಷವಾಗಿ ಅದಕ್ಕೆ ಅನ್ವಯಿಸುತ್ತೇವೆ.

ಸಾಮಾನ್ಯವಾಗಿ ವಾಸ್ತವ ಜಗತ್ತಿನಲ್ಲಿ — ಅದರಲ್ಲೂ ಹೆಚ್ಚಾಗಿ "ನೋಡು ವುದು" ಎಂಬ ಇಂದ್ರಿಯಪ್ರತ್ಯಕ್ಷದಲ್ಲಿ — ಸಂವೇದನೆಯನ್ನೂ ಇಂದ್ರಿಯ ಪ್ರತ್ಯಕ್ಷವನ್ನೂ ಪ್ರತ್ಯೇಕವಾಗಿ ಗ್ರಹಿಸುವುದು ಅಸಾಧ್ಯ. ವಿಚಾರದಲ್ಲಿಮಾತ್ರ ಆ ಪ್ರತ್ಯೇಕತೆಯನ್ನು ಕಂಡುಕೊಳ್ಳಬಹುದು. ಒಂದು ವಸ್ತುವಿನ ಆಕೃತಿಯನ್ನು ಅದರ ಗಾತ್ರದಿಂದ ಪ್ರತ್ಯೇಕಿಸಿ ತಿಳಿದುಕೊಳ್ಳಬಹುದು. ಆದರೆ ಅವನ್ನು ಪ್ರತ್ಯೇಕವಾಗಿ ಅನುಭವಿಸುವುದು ಅಸಾಧ್ಯ. ಒಟ್ಟಿನಲ್ಲಿ ಪ್ರತ್ಯಕ್ಷಾನುಭವ ವೆಂದರೆ ನಮ್ಮ ಯಾವುದಾದರೂ ಒಂದು ಇಂದ್ರಿಯವು ಗ್ರಹಿಸಿದ ಬಾಹ್ಯ ವಸ್ತುವಿನ ಗುಣಗಳ ಸಂವೇದನೆಯು ಆ ವಸ್ತುವಿನ ಬಗ್ಗೆ ನಮ್ಮ ಸ್ಮೃತಿಯಲ್ಲಿ ಇರುವ ಅದರ ಗುಣಗಳ ಕಲ್ಪನೆಯನ್ನು ಕೂಡಿಕೊಂಡು ಉಂಟುಮಾಡುವ ಸೇರವಾದ ವಸ್ತುಜ್ಞಾನ ಅಥವಾ ಇಂದ್ರಿಯಪ್ರತ್ಯಕ್ಷ ಎಂದು ತಾತ್ಪರ್ಯ. ಯಥಾರ್ಥವಾದ ಇಂದ್ರಿಯಪ್ರತ್ಯಕ್ಷದಲ್ಲಿ ಇಂದ್ರಿಯಗೋಚರವಾಗುವ ಪದಾ ರ್ಥದ ವಿಶಿಷ್ಟವಾದ ಗುಣ ಅಥವಾ ಧರ್ಮಗಳ (ಇವುಗಳಲ್ಲಿ ಪದಾರ್ಥದ ವಿಶಿಷ್ಟಾಂಗದ ಅಥವಾ ವಿಶಿಷ್ಟ ವರ್ಣ, ಆಕೃತಿ ಮುಂತಾದುದರ ಲಕ್ಷಣಗಳೂ ಅಡಕವಾಗುತ್ತವೆ) ಸಂವೇದನೆ ಸಾಕಷ್ಟು ಪರಿಪೂರ್ಣವಾಗಿ ಆಗುವುದು ಅತ್ಯ ವಶ್ಯ. ಮೇಲಿನ ನಿದರ್ಶನದಲ್ಲಿ ಮನೆಯ ಕಲ್ಪನೆಯನ್ನು ಮಿದುಳಿನ ಸಂಪರ್ಕ ಪ್ರದೇಶವು ಪರಿಪೂರ್ಣಗೊಳಿಸಿ ಕೊಡಲು ಸಮರ್ಥವಾಗಬೇಕಾದರೆ ಅದಕ್ಕೆ ಮನೆಯ ಸ್ವರೂಪದಲ್ಲಿರುವ ವಿಶಿಷ್ಟವಾದ ಲಕ್ಷಣ ಅಥವಾ ಲಕ್ಷಣಗಳ ಸ್ಪಷ್ಟ ವಾದ ಚಾಕ್ಷುಷ ಸಂವೇದನೆಗಳು ದೊರಕಬೇಕು. ಉಕ್ತ ಸಂವೇದನೆಗಳ ಅಸ್ಪ ಷ್ಟತೆ ಹಾಗೂ ಅಪರ್ಯಾಪ್ತತೆಗಳಿಂದ ಇಂದ್ರಿಯಪ್ರತ್ಯಕ್ಷದ ಚಾಕ್ಷುಷಾನುಭವವು ಅಯಥಾರ್ಥವೆನಿಸುವುದು. ಇಂದ್ರಿಯಪ್ರತ್ಯಕ್ಷವು ಅಂಗಿಯಾದರೆ ಇಂದ್ರಿಯ ಸಂವೇದನೆಯು ಅದರ ಅವಿಭಾಜ್ಯವಾದ ಅಂಗವೆನಿಸುತ್ತದೆ.

ಇಂದ್ರಿಯಕ್ಷೇತ್ರದ ಸಂಘಟನೆ: ಪದಾರ್ಥಗಳ ಇಂದ್ರಿಯಪ್ರತ್ಯಕ್ಷವು ಯಥಾರ್ಥವಾಗಿ ಅಥವಾ ಅಯಥಾರ್ಥವಾಗಿ ನಮಗಾಗುವಾಗ ನಮ್ಮ ಅನುಭವವು ಬಹುಮಟ್ಟಿಗೆ ಮಿದುಳನ್ನೇ ಅವಲಂಬಿಸಿರುವುದು ಸುವ್ಯಕ್ತ. ಆದರೆ ಅದಕ್ಕೂ ಮೊದಲು ಮಿದುಳು ಏನನ್ನೂ ಮಾಡದೆ ಕುಳಿತಿರುವುದೆಂದು ತಿಳಿಯಬಾರದು. ಹಿಂದೆ ಲಕ್ಷಿಸಿದಂತಹ ಇಂದ್ರಿಯಪ್ರತ್ಯಕ್ಷದ ಅವಸ್ಥೆಗೆ ನಾವು ಬಂದು ಮುಟ್ಟುವುದಕ್ಕೆ ಎಷ್ಟೋ ಹಿಂದೆಯೇ ಮಿದುಳು ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸಿರುತ್ತದೆ.

ಎಲ್ಲ ನೋಟವೂ ಚಿರಪರಿಚಿತ ಪದಾರ್ಥಗಳನ್ನು ಗುರುತಿಸುವುದಕ್ಕೇ ಮಿತವಾಗಿರುವುದಿಲ್ಲ. ನಮ್ಮ ಇಡಿ ಚಾಕ್ಷುಷಕ್ಷೇತ್ರವು ಯಾವ ವಾಸ್ತವಿಕ ಪದಾರ್ಥವೊಂದನ್ನೂ ಪ್ರತಿನಿಧಿಸದಂತಹ ಔಪಚಾರಿಕ ಯೋಜನೆಯಿಂದ ತುಂಬಿಕೊಂಡಿರಬಹುದು. ಆದರೆ ಅಂಥ ಪ್ರಕರಣದಲ್ಲಿ ನಾವು ಕಂಡದ್ದು ಸಂವೇದನೆಗಳ ಒಂದು ಬರಿ ಅಸಂಬದ್ಧ ರಾಶಿಯಾಗಿರದು. ನಾವು ಯೋಜನೆಯನ್ನು ಯೋಜನೆಯನ್ನಾಗಿಯೇ ನೋಡಬೇಕು — ಅಂದರೆ ಕೆಲ ಆಕೃತಿಗಳನ್ನೂ ವರ್ಣಪ್ರದೇಶಗಳನ್ನೂ ಒಟ್ಟಿಗೇ ಕೂಡಿರತಕ್ಕವೆಂದು ಗಣಿಸಬೇಕು ಮತ್ತು ಯೋಜನೆಯ ಕೆಲ ಭಾಗಗಳನ್ನು ರೂಪಗಳನ್ನಾಗಿಯೂ ಮತ್ತೆ ಕೆಲ ಭಾಗಗಳನ್ನು ಹಿನ್ನೆಲೆಯನ್ನಾಗಿಯೂ ನೋಡಬೇಕು. ಇಂದ್ರಿಯಕ್ಷೇತ್ರವು ಸಂಘಟಿತವಾಗಿರಬೇಕಾದದ್ದು ಹೀಗೆ.

ನಾವು ಮೊದಲಿಂದೂ ನೋಡದಿರುವ ಒಂದು ವಸ್ತುವನ್ನು ನೋಡಹೋದಾಗಲೂ ಆ ವಸ್ತು ಯಾವುದೆಂದು ತಿಳಿಯದೆ ಹೋದರೂ ಅದರ ಆಕೃತಿಯು ನಮಗೆ ಸಮಗ್ರ, ಸುಸಂಗತ, ಸುಂಸಬದ್ಧವಾಗಿಯೇ ಕಾಣುವುದು. ಹೀಗಾಗಲು ಇಂದ್ರಿಯಕ್ಷೇತ್ರದಲ್ಲಿ ಆಕೃತಿ-ರಚನೆಗಳ ಜ್ಞಾನವು ಹುಟ್ಟುಗುಣವಾಗಿಯೇ ನಮಗೆ ಬಂದಿರುವುದೇ ಕಾರಣ. ಇದು ಗೆಸ್ಟಾಲ್ಟರ ಮತ.

ಈ ಸಂಘಟನೆಯು ಮಿದುಳನ್ನವಲಂಬಿಸಿದೆ; ಆದರೆ ಇದರಲ್ಲಿ ಮಿದುಳಿನ ಸಂಪರ್ಕಪ್ರದೇಶಗಳೂ ಸೇರಿಕೊಂಡಿವೆಯೋ ಅಥವಾ ಇಲ್ಲವೋ ಎಂಬುದು ಅನಿಶ್ಚಿತ. ಇಂದ್ರಿಯಕ್ಷೇತ್ರದ ಸಮೂಹಾಂಗಗಳಿಗೊಯ್ಯುವ ಮುಖ್ಯ ಕಾರಕಗಳನ್ನು ಐದು ವಿಧವಾಗಿ ವಿಂಗಡಿಸಬಹುದು: ಸನ್ನಿಕರ್ಷ ಅಥವಾ ಸಾಮೀಪ್ಯ, ಸಾದೃಶ್ಯ, ಸಾತತ್ಯ, ಪರ್ಯಾಪ್ತಿ ಮತ್ತು ಸಮಪಾರ್ಶ್ವತೆ ಇಲ್ಲವೆ ಸಮಾಂಗತೆ.

ಇಂದ್ರಿಯಪ್ರತ್ಯಕ್ಷದ ಮೇಲೆ ಪ್ರಭಾವ ಬೀರುವ ಕಾರಕಗಳು : ಪ್ರತೀಕ್ಷೆ ಅಥವಾ ಅಪೇಕ್ಷೆಯಿಂದ ನಮ್ಮ ಉನ್ಮುಖತೆ ಪ್ರಥಮತಃ ಮಾರ್ಗದರ್ಶನ ಪಡೆವ ಅಂಶವು ಪ್ರತ್ಯಕ್ಷಾನುಭವದ ಮೇಲೆ ಹೆಚ್ಚಿನ ಪ್ರಭಾವ ಬೀರಬಹುದು. ಕಪಾಟಿನಲ್ಲಿ ನಾವು ಒಂದು ಪುಸ್ತಕವನ್ನು ಹುಡುಕಲಾರಂಭಿಸಿದಾಗ ಕೇವಲ ಅದರ ಹೆಸರನ್ನು ತಿಳಿದಿರುವುದಕ್ಕಿಂತ ಅದರ ಆಕೃತಿಯ ಸರಿಯಾದ ಕಲ್ಪನೆ ಗೊತ್ತಿದ್ದರೆ ಅದು ನಮಗೆ ಹೆಚ್ಚು ಸುಲಭವಾಗಿ ದೊರಕುತ್ತದೆ. ಏಕೆಂದರೆ ಆಗ ನಮ್ಮ ಮನಸ್ಸಿನಲ್ಲಿ ಉಚಿತವಾದ ಕಲ್ಪನೆಗಳೂ ಪ್ರತಿಮೆಗಳೂ ಮೊದಲೇ ಮೂಡಿರುವುದರಿಂದ ಇಂದ್ರಿಯಪ್ರತ್ಯಕ್ಷದ ಜ್ಞಾನವನ್ನು ಮಾಡಿಕೊಳ್ಳಲು ನಮಗೆ ಅತಿ ಚಿಕ್ಕ ಸಂವೇದನಾತ್ಮಕ ಜ್ಞಾನ ದೊರೆತರೂ ಸಾಕಾಗುವುದು; . ಆದರೆ ಅಂಥ ಸಂದರ್ಭಗಳಲ್ಲಿ ಕೆಲವೊಮ್ಮೆ ಇಂದ್ರಿಯಾನುಭವವು ಭ್ರಮೆಯಾಗುವುದೂ ಉಂಟು. ಸಂಜೆಯಲ್ಲಿ ಹೊತ್ತು ಮುಳುಗುತ್ತಿರುವಾಗ ನಾವು ಒಂದು ಹುಲ್ಲುಬಣಬೆಯನ್ನು ಮನೆಯೆಂದು ಕಾಣುವ ಪ್ರಸಂಗ ಅದಕ್ಕೆ ಒಂದು ಉದಾಹರಣೆ. ಇಲ್ಲಿ ಚಿರಪರಿಚಯ, ಪ್ರತೀಕ್ಷೆ ಅಥವಾ ಆಸಕ್ತಿಯ ಮೂಲಕ ಮಿದುಳಿನ ಕೆಲ ಭಾವಪ್ರಕಾರಗಳು ಚಾಕ್ಷುಷಪ್ರತ್ಯಕ್ಷಕ್ಕೆ ಮೊದಲೇ ಒಂದು ಬಗೆಯ ಉಪೋದ್ರೇಕದ ಅವಸ್ಥೆಯನ್ನು ಹೊಂದಿರುತ್ತವೆ. ಆದ್ದರಿಂದ ಅನುಚಿತ ಪ್ರೇರಣೆಯಿಂದ ಸುಲಭವಾಗಿ ಅವು ಸ್ಪರ್ಶಹೊಂದಿ ಗೃಹಭ್ರಮೆಯನ್ನು ನಮ್ಮಲ್ಲಿ ಹುಟ್ಟಿಸುವುವು. ಮನಸ್ಸಿನಲ್ಲಿ ಮೊದಲೇ ಎಣಿಸಿಕೊಂಡದ್ದನ್ನು ಎಣಿಸಿದ ವಸ್ತುವಿನಿಂದ ಭಿನ್ನವಾದದ್ದರಲ್ಲಿ ಕಾಣುವ ಪ್ರಸಂಗ ಎಲ್ಲರಿಗೂ ಗೊತ್ತಿರುವ ಅನುಭವ. ಅಪೇಕ್ಷೆ–ಪ್ರತೀಕ್ಷೆಗಳು ಯಥಾರ್ಥವಾದ ಇಂದ್ರಿಯಪ್ರತ್ಯಕ್ಷಕ್ಕೆ ಪ್ರತಿಬಂಧಕಗಳಾಗುವ ಬಗೆ ಹೀಗೆ :

ಸಾಮೀಪ್ಯ : ೧೭(ಅ)ನೆಯ ನಕ್ಷೆಯಲ್ಲಿ ಜೊತೆಜೊತೆಯಾಗಿರುವ ಎರಡೆರಡು ಉದ್ದ ಗೆರೆಗಳನ್ನು ಕಾಣುತ್ತೇವೆ. ಅವುಗಳ ನಡುವೆ ಇರುವ ಜಾಗದ ದೆಸೆಯಿಂದ ಅವೆರಡೂ ಒಟ್ಟು ಒಂದು ರೂಪವಾಗಿ ಕಾಣುತ್ತವೆ. ಆ ರೂಪದ ಹಿಂದಿನ ಜಾಗವೇ ಹಿನ್ನೆಲೆ. ಇಂಥ ಮೂರು ರೂಪಗಳು ಅಲ್ಲಿವೆ. ಬಿ ಮತ್ತು ಸಿ ಎಂಬ ಗೆರೆಗಳನ್ನು ಒಟ್ಟುಗೂಡಿಸಲು ಶಕ್ಯವೇ ಇಲ್ಲ ಎಂದು ತೋರುತ್ತದೆ. ಹಾಗೇ ಡಿ ಮತ್ತು ಈ ಎಂಬ ಗೆರೆಗಳನ್ನೂ ಕೂಡಿಸಲಾಗದೆನಿಸುತ್ತದೆ. ಹೀಗೇ ಹತ್ತಿರದಲ್ಲಿರುವ ತಾರೆಗಳು ಒಂದು ಗುಂಪಾಗಿ ತೋರುತ್ತವೆ. ಒಂದು ಗುಂಪಿನ ಒಂದು


ನಕ್ಷತ್ರವನ್ನೂ ಮತ್ತೊಂದು ಗುಂಪಿನ ಒಂದು ನಕ್ಷತ್ರವನ್ನೂ ಒಂದು ಗುಂಪಿಗೆ ಸೇರಿದವೆಂದು ನಾವು ನೋಡುವುದಶಕ್ಯ.

ಸಾದೃಶ್ಯ: ೧೭(ಬ)ನೆಯ ನಕ್ಷೆಯಲ್ಲಿ ಎಡಗಡೆಯ ಚುಕ್ಕೆಗಳು ಉದ್ದ ಸಾಲಿನಲ್ಲಿರುವಂತೆಯೂ ಬಲಗಡೆಯ ಚುಕ್ಕೆಗಳು ಅಡ್ಡ ಸಾಲಿನಲ್ಲಿರುವಂತೆಯೂ ತೋರುತ್ತವೆ. ಈ ಎರಡರಲ್ಲೂ ನಾವು ಸದೃಶ ಪದಾರ್ಥಗಳನ್ನು ಒಟ್ಟುಗೂಡಿಸುತ್ತೇವೆ. ಇದು ಸಹಜ.


ಸಾತತ್ಯ: ಇದನ್ನೂ ತಾರೆಗಳ ಉದಾಹರಣೆಯಿಂದ ವಿವರಿಸಬಹುದು. ನೇರವಾದ ಸಾಲಿನಲ್ಲಿರುವ ತಾರೆಗಳನ್ನು ಒಂದು ಗುಂಪನ್ನಾಗಿಯೂ ಸಪ್ತರ್ಷಿ ಮಂಡಲದಂತೆ ಸೊಟ್ಟ ಸಾಲಿನಲ್ಲಿರುವುವನ್ನು ಒಂದು ಗುಂಪನ್ನಾಗಿಯೂ ನಾವು ನೋಡುತ್ತೇವೆ. ಗುಂಪಾಗಿ ಗ್ರಹಿಸುವ ನಮ್ಮ ಪ್ರವೃತ್ತಿಗೆ ಇಲ್ಲಿ ಸಾತತ್ಯವೇ ಕಾರಕವಾಗಿದೆ.

ಪರ್ಯಾಪ್ತಿ ಮತ್ತು ಸಮಾಂಗತೆ: ಸಂಪೂರ್ಣ ನೀರಂಧ್ರವಾದ ಒಂದು ರೂಪ—ಆದರಲ್ಲೂ ಅದು ಸಮಾಂಗವಾಗಿದ್ದಾಗ—ನಮಗೆ ಒಂದೇ ಘಟಕವಾಗಿ ಹಿನ್ನೆಲೆಯಿಂದ ಎದ್ದು ಕಾಣುವ ಪ್ರವೃತ್ತಿಯನ್ನು ತೋರಿಸುತ್ತದೆ. ಒಂದು ಮೋಡವು ಎಷ್ಟೇ ಪ್ರಕಾಶಮಾನವಾಗಿದ್ದರೂ ಅದು ಅನಿಯತ ಆಕೃತಿಯುಳ್ಳದ್ದಾಗಿರುವುದರಿಂದ ಮಗುವು ಅದನ್ನು ನೋಡದೆ, ಅದರ ಸಮೀಪದಲ್ಲಿರುವ ಅಷ್ಟೇ ಪ್ರಕಾಶಮಾನವಾಗಿರುವ ಆದರೆ ನಿಯತಾಕೃತಿಯುಳ್ಳ ಚಂದ್ರನನ್ನೇ ಸಹಜವಾಗಿ ನೋಡುತ್ತದೆ.

ಗೆಸ್ಟಾಲ್ಟ್ ಸಿದ್ಧಾಂತ: ಇಂದ್ರಿಯಕ್ಷೇತ್ರದ ಸಂಘಟನೆಯು ಪ್ರವೃತ್ತಿಯು ಹುಟ್ಟುಗುಣವೋ ಕಟ್ಟುಗುಣವೋ ಎಂಬುದರ ಬಗ್ಗೆ ಬಹಳ ವಾದವಿವಾದಗಳಾಗಿವೆ. ಅಭಿಜಾತ ಮನಃಶಾಸ್ತ್ರಜ್ಞರು ಅದು ಕಟ್ಟುಗುಣ ಅಥವಾ ಅನುಭವದಿಂದ ಕಲಿತುಕೊಳ್ಳತಕ್ಕದ್ದು ಎಂದು ನಂಬಿದರು. ಮಗುವಿನ ಇಂದ್ರಿಯಕ್ಷೇತ್ರವು ಅವ್ಯವಸ್ಥಿತ ಸಂವೇದನಾಂಶಗಳಿಂದ ತುಂಬಿರುತ್ತದೆ ಎಂದೂ ಮಗು ಕ್ರಮೇಣ ಅನುಭವದಿಂದ ಅದರ ಕೆಲವು ಅಂಶಗಳನ್ನು ಒಟ್ಟುಗೂಡಿಸಿ ಇಡಿ ಇಂದ್ರಿಯಕ್ಷೇತ್ರದಲ್ಲಿ ಪ್ರತ್ಯೇಕ ಹಾಗೂ ಗೌಣವಾದ ಇಡಿ ಆಕೃತಿಯನ್ನಾಗಿ ನೋಡಲು ಕಲಿಯುತ್ತದೆ ಎಂದೂ ಅವರು ಅಭಿಪ್ರಾಯಪಟ್ಟರು. ೧೮೯೬ರಲ್ಲಿ ಸ್ಟ್ರಾಟನ್



7 (అ)



7 (ఆ)

ಈ ಅಭಿಪ್ರಾಯವನ್ನು ಟೀಕಿಸಿದನು. ಇತ್ತೀಚೆಗೆ ಗೆಸ್ಟಾಲ್ಟ್ ಪ್ರಸ್ಥಾನದವ ರೆಂದುಕೊಂಬ ಜರ್ಮನ್ ಮನಃಶಾಸ್ತ್ರಜ್ಞರು ಅದರ ಮೇಲೆ ಒಟ್ಟಾಗಿ ದಾಳಿ ಮಾಡಿದ್ದಾರೆ. ಈ ಪ್ರಸ್ಥಾನದ ಮೂಲತತ್ವಗಳಲ್ಲಿ ಆಕೃತಿ ಅಥವಾ ರಚನೆಯ ಜ್ಞಾನವು ನಮ್ಮ ಇಂದ್ರಿಯಕ್ಷೇತ್ರದಲ್ಲಾಗುವುದು ನಮ್ಮ ಹುಟ್ಟುಗುಣವೆಂಬುದು ಒಂದು. ಅನುಭವದಿಂದಲೇ ನಾವು ವಸ್ತುಗಳನ್ನು ಗುರುತಿಸಬೇಕು ಎಂಬುದು ನಿಜ. ಆದರೆ ತೀರ ಅಪರಿಚಿತ ಪದಾರ್ಥವಾದರೂ ಒಂದು ಮಗುವಿಗೆ ಒಂದು "ಗೆಸ್ಟಾಲ್ಟ್" ಆಗಿ ಕಾಣುವುದು. "ಗೆಸ್ಟಾಲ್ಟ್" ಎಂದರೆ ಸುಸಂಬದ್ಧವಾದ ಅಂಗ ಗಳಿಂದ ಕೂಡಿದ ಒಂದು ಅಂಗಿ ಅಥವಾ ಇಡಿ ಪದಾರ್ಥ; ಅದನ್ನು ಆಕೃತಿ, ರೂಪ ಎಂದು ಮುಂತಾಗಿ ಭಾಷಾಂತರಿಸುವುದುಂಟು. ಮೊದಲು ಕಂಡಿರದ ಪದಾರ್ಥ ವನ್ನಾದರೂ ಮಗುವು ಈ ಕಾರಣದಿಂದಲೇ ಅಸಂಬದ್ಧ ಸಂವೇದನೆಗಳ ರಾಶಿ ಯನ್ನಾಗಿ ಕಾಣದೆ, ಒಂದು ಪ್ರತ್ಯೇಕವಾದ ಇಡಿ ಆಕೃತಿಯನ್ನಾಗಿಯೇ ಕಾಣುತ್ತದೆ.

ಈ ವಿಷಯದಲ್ಲಿ ಗೆಸ್ಟಾಲ್ಟ್ ಸಿದ್ಧಾಂತಕ್ಕೆ ಎಲ್ಲ ಸಾಕ್ಷಿಗಳೂ ಅನುಕೂಲ ವಾಗಿವೆ. ಮಕ್ಕಳ ಸಂವೇದನೆಗಳ ವಿಷಯದಲ್ಲಿ ನಿಷ್ಕೃಷ್ಟವಾದ ಸಾಕ್ಷಿ ದೊರ ಕುವ ಸಂಭವ ಇಲ್ಲವಾದರೂ ಗೆಸ್ಟಾಲ್ಟ್ ಸಿದ್ಧಾಂತಕ್ಕೆ ಕುರುಡರಾಗಿ ಹುಟ್ಟಿ ಅನಂತರ ಶಸ್ತ್ರಚಿಕಿತ್ಸೆಯಿಂದ ಕಣ್ಣು ಪಡೆದವರ ಪ್ರಕರಣಗಳ ಅಭ್ಯಾಸದಿಂದ ಬಲವಾದ ಸಮರ್ಥನೆ ಸಿಗಬಹುದು. ಅಂಥ ರೋಗಿಗಳು ತಾವು ನೋಡ ಲಾರಂಭಿಸಿದ ಕ್ಷಣದಿಂದ ಸಂಘಟಿತ ಇಂದ್ರಿಯಕ್ಷೇತ್ರದಿಂದಲೇ ನೋಡಲಾರಂಭಿ ಸುತ್ತಾರೆ. ಅವರು ಆ ಕ್ಷಣದಲ್ಲಿ ಯಾವ ವಸ್ತುವನ್ನೂ ಗುರುತಿಸಲಾರರು: ಅವರು ಕುರುಡರಾಗಿದ್ದಾಗ ಮುಟ್ಟಿ ತಿಳಿದುಕೊಂಡ ಸುಪರಿಚಿತ ಆಕೃತಿಯನ್ನು ಮೊಟ್ಟಮೊದಲು ಎದುರಿಟ್ಟರೆ ಸಾಮಾನ್ಯವಾಗಿ ಅವರಿಗೆ ಅದರ ಹೆಸರನ್ನು ಹೇಳಲು ಬರದು. ಆದರೆ ಅವರು ಅದನ್ನು ನೋಡುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ಯಾರಾದರೂ ಅವರನ್ನು ನೀವು ಏನು ನೋಡುತ್ತೀರಿ? ಎಂದು ಕೇಳಿದರೆ ಅವರು ಹೇಳುವ ಉತ್ತರ, "ಒಂದು ವಸ್ತುವನ್ನು ಅಥವಾ ಕೊನೆಯ ಪಕ್ಷ ಒಂದು ಗೆಸ್ಟಾಲ್ಟನ್ನು" ಎಂದು. ತಾವು ಯಾವ ಸಂವೇದನೆಗಳ ಮೊತ್ತ ವನ್ನು ಒಂದು ಇಡಿ ವಸ್ತುವೆಂದು ಗ್ರಹಿಸಬೇಕು ಎಂಬುದನ್ನು ಅವರು ಅನುಭವ ದಿಂದ ಕಲಿತುಕೊಳ್ಳಬೇಕಾಗಿಲ್ಲ. ಗೆಸ್ಟಾಲ್ಟ್ ಪ್ರಸ್ಥಾನವು ಹಿಂದಿನ ಮನಃ

ಶಾಸ್ತ್ರೀಯ ಲೇಖಗಳಲ್ಲಿ ಗೃಹೀತವೆಂದು ತಿಳಿದುಕೊಳ್ಳಲಾದ ಸಂಬಂಧಗಳನ್ನು ಅಥವಾ ಸಂಬಂಧ ಹೊಂದಿರುವ ಅಂಗಗಳನ್ನು ನೋಡುವ ಕಾರ್ಯವು ಅಂಗಗಳನ್ನೇ ವಾಸ್ತವಿಕವಾಗಿ ನೋಡುವುದಾದ ಮೇಲೆ ಗೌಣವಾಗಿ ಬರುತ್ತದೆ ಎಂಬುದನ್ನು ಖಂಡಿಸುತ್ತದೆ. ಅಂದರೆ ಪದಾರ್ಥದ ಇಂದ್ರಿಯಪ್ರತ್ಯಕ್ಷವು ಪದಾರ್ಥದ ಅಂಗಗಳ ಪರಸ್ಪರ ಸಂಬಂಧಗಳ ಪ್ರತ್ಯಕ್ಷಕ್ಕಿಂತ ಮೊದಲೇ ಪ್ರಧಾನವಾಗಿ ಆಗುತ್ತದೆ ಎಂಬ ಹಳೆಯ ಮತವನ್ನು ಗೆಸ್ಟಾಲ್ಟ್ ಪಂಥ ಅಲ್ಲಗಳೆಯುತ್ತದೆ. ಈ ಹಳೆಯ ಮತವನ್ನು ಇಲ್ಲಿ ಪರಾಮರ್ಶಿಸೋಣ: ಹಿಂದೆ ಹೇಳಿದ ನಕ್ಷೆಯಲ್ಲಿ ಮೊದಲು ನಾವು ಒಂದಿಷ್ಟು ಗೆರೆಗಳನ್ನು ನೋಡಿ ಅನಂತರ ಅವು ಜೊತೆಜೊತೆಯಾಗಿವೆ ಎಂಬುದನ್ನು ನೋಡುವುದಿಲ್ಲ. ನಮಗೆ ತತ್‌ಕ್ಷಣವೇ ಸಾಲುಗಳ ಜೋಡಿಗಳು ಕಾಣಿಸುತ್ತವೆ. ನಾವು ಅವನ್ನು ಜೋಡಿಜೋಡಿಯಾಗಿ ಕಾಣುವುದೂ ಸಾಲುಗಳನ್ನಾಗಿ ಕಾಣುವುದೂ ಏಕಕಾಲಿಕ. ಪ್ರಾಣಿಗಳು ಕೂಡ ನಮ್ಮಂತೆಯೇ ಪದಾರ್ಥ ಹಾಗೂ ಅದರ ಅಂಗಸಂಬಂಧಗಳನ್ನು ಒಂದೇ ಕಾಲದಲ್ಲಿ ನೋಡಬಲ್ಲವೆಂಬುದು ಇತರ ಪ್ರಯೋಗಗಳಿಂದಲೂ ಸಿದ್ಧವಾಗಿದೆ. ಬೂದುಬಣ್ಣದ ಎರಡು ತಟ್ಟೆಗಳಲ್ಲಿ ಆಹಾರವಿಟ್ಟು ಅದರಲ್ಲಿ ಹೆಚ್ಚು ಕಪ್ಪಾದ ತಟ್ಟೆಯಲ್ಲಿರುವ ಆಹಾರವನ್ನೇ ತೆಗೆದುಕೊಳ್ಳುವಂತೆ ಕೋಳಿಗಳಿಗೆ ತರಬೇತು ಕೊಡಲಾಯಿತು. ಆ ಎರಡರಲ್ಲಿ ಕಡಿಮೆ ಕಪ್ಪಾದ ತಟ್ಟೆಗೆ ಬದಲಾಗಿ ಅನಂತರ ಕಪ್ಪು ತಟ್ಟೆಯನ್ನು ತಂದಿಡಲಾಯಿತು. ಅದರಿಂದ ಆರೆಬೂದಿಬಣ್ಣವುಳ್ಳ (ಹಿಂದೆ ಹೆಚ್ಚು ಕಪ್ಪೆನಿಸಿದ್ದ) ತಟ್ಟೆ ಈಗ ಎರಡರಲ್ಲಿ ಕಡಿಮೆ ಕಪ್ಪಿನದಾಯಿತು. ಅನೇಕ ಕೋಳಿಗಳು ಹಿಂದೆಮುಂದೆ ನೋಡದೆ ಹೊಸ ಕರಿ-ಬೂದಿಬಣ್ಣದ ತಟ್ಟೆಯ ಕಡೆಗೇ ಹೋದವು. ಇದರಿಂದ ಗೊತ್ತಾಗುವುದೇನಂದರೆ — ಬೂದಿಬಣ್ಣದ ಯಾವುದಾದರೊಂದು ವಿಶಿಷ್ಟ ಬಗೆಗೆ ಅನುಕ್ರಿಯೆಯನ್ನು ತೋರಿಸುವ ಬದಲು ಜೋಡಿಯಾಗಿಟ್ಟ ಎರಡು ಪದಾರ್ಥಗಳಲ್ಲಿ ಹೆಚ್ಚು ಕಪ್ಪಾದುದಕ್ಕೇ ಅವು ಅನುಕ್ರಿಯೆಯನ್ನು ತೋರಿಸಲು ಕಲಿತವು.

ಗೆಸ್ಟಾಲ್ಟ್ ಸಿದ್ಧಾಂತದ ಸಾರವು ಪದಾರ್ಥದ ಹೂರಣವು ಅದರ ಆಕೃತಿಯಷ್ಟೇ ಮುಖ್ಯ ಎಂದು ಸಾಧಿಸುವುದರಲ್ಲಿ ಇದೆ. ಅಭಿಜಾತ ಮನಃಶಾಸ್ತ್ರಜ್ಞರು ಯಾವುದೇ ಒಂದು ಜಟಿಲ ವಸ್ತುವಿನ ಮೂಲಸತ್ಯವನ್ನು ತಿಳಿದುಕೊಳ್ಳಬೇಕಾದರೆ (ಅದು ಮಾನಸಿಕವಿರಲಿ, ಭೌತಿಕವಿರಲಿ) ಅದನ್ನು ಅಂಗಗಳನ್ನಾಗಿ ವಿಂಗ

ಡಿಸಬೇಕು ಎಂಬ ವಿಭಾಗಪದ್ಧತಿಯನ್ನು ಗೆಸ್ಟಾಲ್ಟ್ ಪ್ರಸ್ಥಾನವು ವಿರೋಧಿಸಿತು. ಉಕ್ತಪ್ರಸ್ಥಾನದ ಪ್ರಕಾರ ಒಂದು ಜಟಿಲ ಪದಾರ್ಥದ ಸ್ವರೂಪ ಇಲ್ಲವೆ ಗೆಸ್ಟಾಲ್ಟ್ ಆದರೂ ಅದರ ಅಂಗಗಳನ್ನು ಎಷ್ಟರಮಟ್ಟಿಗೆ ಅವಲಂಬಿಸುತ್ತದೋ ಅಷ್ಟು ಮಟ್ಟಿಗೇ ಆ ಅಂಗಗಳ ಪರಸ್ಪರ ಸಂಬಂಧಗಳನ್ನೂ ಅವಲಂಬಿಸುತ್ತದೆ. ಬಿಡಿಗಳಿಂದ ಕೂಡಿದ ಒಂದು ಇಡಿ ಪದಾರ್ಥವು ಎಂದೂ ಒಂದು ಬಿಡಿಗಳ ರಾಶಿಯಲ್ಲ. ಅದು ಸುಸಂಬದ್ಧವಾದ ಬಿಡಿಗಳ ಒಂದು ಇಡಿ. ಪದಾರ್ಥ ಸ್ವರೂಪದ ಅಂಗವಾದಾಗ, ಒಂದು ಅಂಗವು ಅದರ ಅಂಗವಾಗಿರದಿದ್ದಾಗಿನ ತನ್ನ ಸ್ವರೂಪಕ್ಕಿಂತ ಭಿನ್ನವಾದ ಸ್ವರೂಪದ್ದಾಗಿರಬಹುದು; ಅಥವಾ ಸ್ವತಂತ್ರವಾದ ಒಂದು ಬಿಡಿಯು ಇಡಿಯೊಂದರ ಅಂಗವಾದಾಗ ತನ್ನ ಸ್ವತಂತ್ರ ಸ್ವರೂಪವನ್ನು ಕಳೆದುಕೊಂಡು ಅಂಗಸ್ವರೂಪವನ್ನು ಪಡೆಯುತ್ತದೆ. ಏಕೆಂದರೆ ಅದು ಇಡಿಯ ಅಂಗವಾದಾಗ ಇಡಿಯ ಹಿನ್ನೆಲೆ ಮತ್ತು ಆವರಣಗಳಿಂದ ಪ್ರಭಾವಿತವಾಗುವುದಲ್ಲದೆ, ಇಡಿಯಲ್ಲಿ ಅದಕ್ಕೆ ಸಿಕ್ಕುವ ಸ್ಥಾನದಿಂದಲೂ ಅದು ಸ್ವರೂಪಾಂತರ ಹೊಂದುತ್ತದೆ. ಬೇರೆ ಬಣ್ಣಗಳ ನಡುವಿಟ್ಟಾಗ ಒಂದು ಬಣ್ಣದ ಮೊದಲಿನ ಸ್ವರೂಪವು ಕೆಲಮಟ್ಟಿಗಾದರೂ ಬದಲಾಗುವುದು. ಬಾಯಿ ಹಾಡುಗಾರಿಕೆಯು ಪಕ್ಕವಾದ್ಯದ ಶ್ರುತಿಯೊಡನೆ ಸಮರಸವಾದಾಗ, ಅದರ ಸ್ವರೂಪ ಬದಲಾಗುವುದನ್ನು ನಾವು ಸ್ಪಷ್ಟವಾಗಿ ಅನುಭವದಿಂದ ಕಂಡುಕೊಳ್ಳಬಹುದು.

ಅಧ್ಯಾಯ ಐದು

ಉನ್ಮುಖತೆ

ನಮ್ಮ ಅನುಭವಕ್ಕೆ ಬರುವ ವಿಚಾರ, ಕಲ್ಪನೆ, ಸಂವೇದನೆಗಳನ್ನು ಒಂದು ಪ್ರಜ್ಞಾಪ್ರವಾಹಕ್ಕೆ ಹೋಲಿಸಲಾಗಿದೆ. ಈ ಪ್ರವಾಹವು ಸತತವಾಗಿ ಹರಿಯುತ್ತದೆ. ಅದರ ಕೆಲವು ಅಂಶಗಳನ್ನು ಮಾತ್ರ ನಾವು ಪ್ರತ್ಯೇಕವಾಗಿ ಅನುಭವಿಸಬಲ್ಲೆವು. ಅದರ ಮಿಕ್ಕ ಅಂಶಗಳು ನಮ್ಮ ಜ್ಞಾತಪ್ರಜ್ಞೆಯ ಹೊರಗಿವೆ. ಒಮ್ಮೆ ಅವು ನಮ್ಮ ಅನುಭವಕ್ಕೆ ಬಂದರೂ ಅವನ್ನು ಬಿಡಿ ಬಿಡಿಯಾಗಿ ವಿಂಗಡಿಸಿದ ಅಂಶಗಳೆಂದು ನಮಗೆ ತಿಳಿದುಕೊಳ್ಳಲಾಗುವುದಿಲ್ಲ. ಅವು ಪ್ರತಿಕ್ಷಣವೂ ನಮ್ಮೆದುರು ಬರುವ ಜ್ಞಾನರಾಶಿಯ ಮೊತ್ತದ ಅಂಗವಾಗಿಯೇ ಇರುತ್ತವೆ. ಈಗ ನಾವು ಒಂದು ಕೋಣೆಯಲ್ಲಿ ಕಾದಂಬರಿಯನ್ನು ಓದುತ್ತ ಕುಳಿತುಕೊಂಡಿದ್ದೇವೆ ಎಂದು ಭಾವಿಸೋಣ. ಆಗ ನಾವು ಕಾದಂಬರಿಯ ವಸ್ತುವಿನಲ್ಲೇ ಸಾಮಾನ್ಯವಾಗಿ ಲೀನರಾಗಿರುವುದರಿಂದ, ನಮಗೆ ಕೋಣೆಯಲ್ಲಿರುವ ಗಡಿಯಾರದ ಸದ್ದಾಗಲಿ, ಹೊರಗೆ ಮಕ್ಕಳು ಮಾಡುತ್ತಿರುವ ಗಲಾಟೆಯಾಗಲಿ, ಎದುರು ರಸ್ತೆಯ ಮೇಲೆ ಓಡಾಡುವ ವಾಹನಗಳ ಸದ್ದಾಗಲಿ ಕೇಳಿಸದಿರಬಹುದು. ನಾವು ಸ್ಪಷ್ಟವಾಗಿ ತಿಳಿಯದಿರುವ ಉಕ್ತ ಅನುಭವಗಳು ನಮ್ಮ ಪ್ರಜ್ಞೆಯ ಒಳ ಅಂಚಿನಲ್ಲಿ ಇವೆ ಎಂದು ಹೇಳಬಹುದು. ನಾವು ಓದುತ್ತಿರುವ ಕಾದಂಬರಿಯು ನಮ್ಮ ಪ್ರಜ್ಞೆಯ ಕೇಂದ್ರಸ್ಥಳವನ್ನು ಆಕರ್ಷಿಸಿ ಹಿಡಿದಿರುತ್ತದೆ. ಇದೇ ಉನ್ಮುಖತೆ (ಅವಧಾನ). ಅಂದರೆ ನಮ್ಮ ಪ್ರಜ್ಞೆಯ ಕೇಂದ್ರ ಬಿಂದುವು ಕಾದಂಬರಿಯ ವಸ್ತುವಿಗೆ ಉನ್ಮುಖವಾಗಿರುತ್ತದೆ ಎಂದು ಅರ್ಥ. ನಾವು ಓದುತ್ತಿರುವ ಕಾದಂಬರಿಯಿಂದ ನಮ್ಮ ಉನ್ಮುಖತೆಯು ನಮ್ಮ ಪ್ರಜ್ಞೆಯ ಅಂಚಿನಲ್ಲಿರುವ ವಿವಿಧ ಪದಾರ್ಥಗಳಲ್ಲಿ ನಿಷ್ಠವಾಗಬಹುದು; ಅನಂತರ ಪುನಃ ಓದುತ್ತಿರುವ ಕಾದಂಬರಿಯ ಕಡೆಗೆ ತಿರುಗಬಹುದು. ನಮ್ಮ ಉನ್ಮುಖತೆ ಹೀಗೆ ನಮ್ಮ ಪ್ರಜ್ಞೆಯ ಮಧ್ಯದಿಂದ ಅಂಚಿಗೆ ಹಾಗೂ ಅಂಚಿನಿಂದ ಮಧ್ಯಕ್ಕೆ ಆಗಿಂದಾಗ ತಿರುಗುವಾಗ ಒಮ್ಮೆ ಸ್ಪಷ್ಟವಾದದ್ದು ಇನ್ನೊಮ್ಮೆ ಅಸ್ಪಷ್ಟವೂ,

ಒಮ್ಮೆ ಅಸ್ಪಷ್ಟವಾದದ್ದು, ಇನ್ನೊಮ್ಮೆ ಸ್ಪಷ್ಟವೂ ಆಗಿ ತೋರುತ್ತದೆ. ನಮ್ಮ ಪ್ರಜ್ಞೆಯ ಅಂಚಿನಲ್ಲಿ ಇರುವವೆಂದು ಹೇಳಲಾದ ವಸ್ತುಗಳ ಪ್ರಜ್ಞೆ ನಮಗೆ ಏನೂ ಇಲ್ಲದಾಗ ನಾವು ಅವುಗಳ ಇರವನ್ನು ಹೇಗೆ ಗುರುತಿಸಬಹುದು? ಎಂದು ಯಾರಾದರೂ ಕೇಳಿಯಾರು. ಅದಕ್ಕೆ ಉತ್ತರವಾಗಿ ಪ್ರಜ್ಞೆಯ ಅಂಚಿನಲ್ಲಿರುವ ಯಾವುದಾದರೂ ಒಂದು ಪದಾರ್ಥವು ತನ್ನ ಕಾರ್ಯವನ್ನು ನಿಲ್ಲಿಸಿಬಿಟ್ಟರೆ ಆಗ ನಮಗೆ ಬದಲಾವಣೆಯೊಂದು ಆದದ್ದು ಕಂಡುಬರುವುದೇ ಸಾಕ್ಷಿ ಎನ್ನಬಹುದು.

ನಮ್ಮ ಕೋಣೆಯಲ್ಲಿರುವ ಗಡಿಯಾರದ ಸದ್ದನ್ನು ನಮ್ಮ ಪ್ರಜ್ಞಾಕೇಂದ್ರವು ಬಹಳ ಹೊತ್ತು ಗ್ರಹಿಸದೆ ಇದ್ದಾಗ ಒಮ್ಮೆ ಅದು ನಿಂತುಹೋದರೆ ಆ ಬದಲಾವಣೆಯನ್ನು ನಮ್ಮ ಪ್ರಜ್ಞೆ ಆ ಕೂಡಲೇ ಗ್ರಹಿಸುತ್ತದೆ. ನಮ್ಮ ಪ್ರಜ್ಞೆಯ ಅಂಚಿನ ಅನುಭವಗಳೆಲ್ಲವೂ ನಮ್ಮ ದಿನದ ಬಾಳಿಗೆ ಅನೇಕ ವಿಧದಿಂದ ನೆರವಾಗುತ್ತವೆ. ಅವು ಯಾವಾಗಲೂ ಪ್ರಜ್ಞಾಕೇಂದ್ರವನ್ನು ಹೊಗಲು ಸಿದ್ಧವಾಗಿಯೇ ಇರುತ್ತವೆ. ಉನ್ಮುಖರಾದರೆ ನಾವು ಗಡಿಯಾರದ ಸದ್ದನ್ನು ಕೇಳಬಹುದು; ಆದರೆ ಅದು ನಮಗೆ ಬೇಕಾಗುವ ವರೆಗೆ ನಮ್ಮ ಪ್ರಜ್ಞಾಕೇಂದ್ರವನ್ನು ಹೊಗುವುದಿಲ್ಲ. ಮನಸ್ಸು ನಮ್ಮ ಪ್ರಜ್ಞಾಕೇಂದ್ರಕ್ಕೆ ಲಕ್ಷ್ಯವಾಗುವ ಅಂಗಗಳನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ಕೆಲಮಟ್ಟಿಗೆ ಆಯುತ್ತದೆ. ಈ ದೃಷ್ಟಿಯಿಂದ ನೋಡಿದರೆ ಉನ್ಮುಖತೆಯನ್ನು ನಮ್ಮ ಪ್ರಜ್ಞೆಯ 'ಆಯುವ ಚಟುವಟಿಕೆ' ಎಂದು ಲಕ್ಷಣಿಸಬಹುದು.

ಉನ್ಮುಖತೆಯ ಕ್ಷೇತ್ರ: ಮನುಷ್ಯರ ಪ್ರಜ್ಞಾಕೇಂದ್ರವನ್ನು ಏಕಕಾಲದಲ್ಲಿ ಆಕ್ರಮಿಸಬಲ್ಲ ವಸ್ತುಗಳ ಸಂಖ್ಯೆಯನ್ನು ಪ್ರಯೋಗಪರೀಕ್ಷೆಗೆ ಗುರಿಪಡಿಸಲಾಗಿದೆ. ಒಂದು ಕಾಲದಲ್ಲಿ ಒಂದೇ ಪದಾರ್ಥಕ್ಕೆ ಉನ್ಮುಖರಾಗಬಹುದು ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಈ ಮಾತನ್ನು ತಿದ್ದಬೇಕು. ಏಕೆಂದರೆ ಒಂದು ವಸ್ತುವು ಸರಳವಾಗಿಯೂ ಇರಬಹುದು ಅಥವಾ ಜಟಿಲವಾಗಿಯೂ ಇರಬಹುದು. ನಾವು ಒಂದು ಮನೆಯನ್ನು ಒಂದು ಘಟಕ ಅಥವಾ ವಸ್ತುವೆಂದು ತಿಳಿಯುತ್ತೇವೆ; ಆದರೆ ಅದರಲ್ಲಿ ಕಿಟಕಿ, ಬಾಗಿಲು ಮುಂತಾದ ತಮ್ಮಲ್ಲೇ ಸ್ವತಂತ್ರ ಘಟಕಗಳೆನಿಸಿದ ಅನೇಕ ಭಾಗಗಳಿವೆ. ಆದುದರಿಂದ ಒಂದು ವಸ್ತುವಿನ ಒಂದುತನವು ನಮ್ಮ ಉದ್ದೇಶಕ್ಕೆ ತಕ್ಕಂತೆ

ಬದಲಾಗುತ್ತದೆ. ಒಂದು ವಸ್ತುವು ಒಂದೇ ಒಂದು ಪದಾರ್ಥವಾಗಿರಬಹುದು ಇಲ್ಲವೆ ಅನೇಕ ಪದಾರ್ಥಗಳನ್ನು ಗುಂಪುಗೂಡಿಸಿ ಒಂದೇ ವಸ್ತುವೆಂದು ತಿಳಿದು ಕೊಂಡದ್ದಾಗಿರಬಹುದು.

ಶೀಘ್ರದರ್ಶಿ ಯಂತ್ರವು (Tachistoscope) ನಮ್ಮ ಕಣ್ಣ ಮುಂದೆ ೧೦೦ನೆಯ ಒಂದು ಸೆಕುಂಡದಿಂದ ೧/೫ ಸೆಕುಂಡದ ವರೆಗಿನ ಕಾಲಾವಧಿಯಲ್ಲಿ, ಚುಕ್ಕೆ, ಗೆರೆ ಅಕ್ಷರ, ಬಣ್ಣಗಳನ್ನು ಇಟ್ಟು ತೆಗೆಯುತ್ತದೆ. ನೋಟದ ಕಾಲವನ್ನು ಇಷ್ಟು ಕಡಿಮೆಮಾಡಿದ್ದು ಏತಕ್ಕೆ? ಅಷ್ಟು ಕಾಲದಲ್ಲಿ ನಮ್ಮ ಕಣ್ಣು ಚಲಿಸಿ ಆ ಮೂಲಕ ನಾವು ನೋಡಿದ ವಸ್ತುಗಳನ್ನು ಲೆಕ್ಕಿಸುವ ಅವಕಾಶವನ್ನು ತಪ್ಪಿ ಸುವುದಕ್ಕೆ. ಅಂಥ ಕ್ಷಣಾಂಶದಲ್ಲಿ ನಾವು ಗುರುತಿಸಬಹುದಾದ ವಸ್ತುಗಳ ಸಂಖ್ಯೆ ಹೆಚ್ಚೆಂದರೆ ನಾಲ್ಕು ಇಲ್ಲವೆ ಐದು. ಇದನ್ನೇ ನಾವು ಉನ್ಮುಖತಾಕ್ಷೇತ್ರವೆನ್ನು ತ್ತೇವೆ. ಉನ್ಮುಖತೆಯ ಒಂದೇ ಒಂದು ಸ್ಪಂದ ಅಥವಾ ಕಟಾಕ್ಷದಲ್ಲಿ ನಾವು ಗ್ರಹಿಸಬಹುದಾದ ವಸ್ತುಗಳ ಸಂಖ್ಯೆಗೆ ಉನ್ಮುಖತಾಕ್ಷೇತ್ರವೆನ್ನಬಹುದು. ಐದು ಬೇರೆ ಬೇರೆ ಅಕ್ಷರಗಳ ಬದಲು ಐದು ಚಿಕ್ಕ ಪದಗಳನ್ನು ಗುರುತಿಸಬಹುದು ಎಂಬುದು ಕುತೂಹಲಕರವಲ್ಲವೆ? ಮತ್ತು ಚುಕ್ಕೆಗಳನ್ನು ಗುಂಪು ಗುಂಪಾಗಿ ಇಟ್ಟಿದ್ದರೆ ಬೇರೆಬೇರೆ ಚುಕ್ಕೆಗಳು ಎಷ್ಟಿವೆಯೋ ಅಷ್ಟೇ ಸಂಖ್ಯೆಯ ಗುಂಪು ಗಳನ್ನು ಪ್ರತ್ಯೇಕವಾಗಿ ಗುರುತಿಸಬಹುದು. ಐದು ಜೊತೆ ಗೆರೆಗಳನ್ನು ಐದು ಪ್ರತ್ಯೇಕ ಗೆರೆಗಳೆಂದು ಗುರುತಿಸುವುದು ಸುಲಭ. ಹೀಗೆ ಗುರುತಿಸುವ ಶಕ್ತಿಯು ನಮಗೆ ವಯಸ್ಸು ಮತ್ತು ಅಭ್ಯಾಸ ಹೆಚ್ಚಾದಂತೆ ಹೆಚ್ಚಾಗುತ್ತದೆ. ಅಂದರೆ ನಮ್ಮ ಉನ್ಮುಖತಾಕ್ಷೇತ್ರ ಹೆಚ್ಚುವುದೆಂದು ಅರ್ಥವಲ್ಲ—ಆದರೆ ಘಟಕಗಳು ಹೆಚ್ಚು ಹೆಚ್ಚು ಜಟಿಲವಾಗುತ್ತ ಹೋಗಬಹುದು ಎಂದರ್ಥ. ನಮಗೆ ಮು ಗುವ ವಸ್ತುಗಳನ್ನು ಏಕಕಾಲದಲ್ಲಿ ಗ್ರಹಿಸುವ ಬದಲು ಅನುಕ್ರಮವಾಗಿ ಗ್ರಹಿ ಸುವಲ್ಲಿಯೂ ಇದೇ ತತ್ವ ಅಡಗಿದೆ. ಕಾಲಲೋಲಕ (Metronome) ಯಂತ್ರ ಬಡಿತಗಳನ್ನು ಒಂದಾದಮೇಲೆ ಒಂದರಂತೆ (ಆದರೆ ಎಣಿಸಲು ಶಕ್ಯವಾಗದ ಬೇಗ) ನಾವು ಕೇಳಲಾರಂಭಿಸಿದರೆ, ಒಂದು ಕ್ಷಣದಲ್ಲಿ ಎಂಟಕ್ಕಿಂತ ಹೆ ಬಡಿತಗಳನ್ನು ಕೇಳಲಾರೆವು. ಕಾಲ-ಲೋಲಕವು ಮೊದಲು ಎಂಟುಸಲ ಅ ಕ್ರಮವಾಗಿ ಎಂಟು ಬಡಿತಗಳನ್ನು ಬಡಿದು ಅನಂತರ ಅನುಕ್ರಮವಾಗಿ ಬಡಿತಗಳನ್ನು ಬಡಿದರೆ, ಯೋಜ್ಯನು ಅವುಗಳನ್ನು ಎಣಿಸದೆ ಒಂದನ

ಗುಂಪನ್ನು ಎರಡನೆಯ ಗುಂಪಿನಿಂದ ಪ್ರತ್ಯೇಕಿಸಿ ತಿಳಿದುಕೊಳ್ಳಬಲ್ಲನು; ಆದರೆ ಎಂಟು ಬಡಿತಗಳಿಗಿಂತ ಹೆಚ್ಚಿನ ಗುಂಪುಗಳ ವಿಷಯವಾಗಿ ಅವನ ತೀರ್ಪನ್ನು ಆಧರಿಸಲು ಬರದು.

ಯಾವುದಾದರೊಂದು ಭೌತಿಕ ಪ್ರೇರಣೆಯು ನಿಂತುಹೋದ ನಂತರ ಅದರಿಂದ ಉಂಟಾದ ಜಟಿಲ ಸಂವೇದನೆಯ ವಿಶ್ಲೇಷಣ ಆರಂಭಿಸುವುದೆಂದು ಹೇಳುವುದುಂಟು. ಈ ವಿಶ್ಲೇಷಣೆಯಲ್ಲಿ ಆ ಜಟಿಲ ಸಂವೇದನೆಯ ಒಂದೊಂದೇ ಅಂಗವನ್ನು ಪ್ರತ್ಯೇಕಿಸಿ, ಅದಕ್ಕೆ ನಾವು ವಿಶೇಷತಃ ಉನ್ಮುಖರಾಗುತ್ತೇವೆ. ಹಿಂದೆ ಹೇಳಿದ ಪ್ರಯೋಗದಲ್ಲಿರುವ ಚುಕ್ಕೆ ಅಥವಾ ಗೆರೆಗಳ ಎಣಿಕೆ ಇಲ್ಲವೆ ಅಕ್ಷರಗಳನ್ನು ಗುರುತಿಸುವುದು, ಅವು ನಮ್ಮ ಕಣ್ಣೆದುರಿನಿಂದ ಹೊರಟು ಹೋದ ನಂತರವೇ. ಒಬ್ಬ ಸಂಶೋಧಕನು ಅನೇಕ ವ್ಯಕ್ತಿಗಳ ಸ್ಮೃತಿ-ಪ್ರತಿಮೆಗಳ ಉಳಿಗಾಲವನ್ನು ಅಳೆದು, ಮೂಲ ಪ್ರೇರಣೆ ಹೋಗಿ ಬಹಳ ಕಾಲವಾದ ಮೇಲೆ ಕೂಡ ಸ್ಮೃತಿಪ್ರತಿಮೆಯು ಯಾರಲ್ಲಿ ಅಚ್ಚಳಿಯದೆ ಉಳಿದಿರುವುದೋ ಅಂಥವರ ಉನ್ಮುಖತಾ ಕ್ಷೇತ್ರವು ಬಹಳ ವಿಸ್ತಾರವಾದದ್ದೆಂದು ತೀರ್ಮಾನಿಸಿದ್ದಾನೆ. ಹೀಗಿರುವುದರಿಂದ ಉನ್ಮುಖತಾಕ್ಷೇತ್ರವು ಸ್ಮೃತಿಪ್ರತಿಮೆಯನ್ನು ಅವಲಂಬಿಸಿದೆ ಎಂಬುದರಲ್ಲಿಯೂ ಕೆಲಮಟ್ಟಿನ ಸತ್ಯಾಂಶವಿದೆ ಎಂದು ಹೇಳಬಹುದು.

ಉನ್ಮುಖತೆಯ ಕಾರಕಗಳು

ಉನ್ಮುಖತೆಯನ್ನು ಉಂಟುಮಾಡುವ ಕಾರಕಗಳಲ್ಲಿ ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ ಎಂಬ ಎರಡುಬಗೆಗಳಿವೆ.

ವಸ್ತುನಿಷ್ಠ ಉನ್ಮುಖತೆ: ಒಂದಲ್ಲ ಒಂದು ಕಾಲದಲ್ಲಿ ಎಲ್ಲರೂ ಎಲ್ಲದಕ್ಕೂ ಉನ್ಮುಖರಾಗಬಹುದು. ಆದರೆ ಸಾಮಾನ್ಯವಾಗಿ ಮನುಷ್ಯರು ಕೆಲವನ್ನು ಬಿಟ್ಟು ಇನ್ನು ಕೆಲವಕ್ಕೆ ಮಾತ್ರ ಉನ್ಮುಖರಾಗುವುದು ರೂಢಿ. ಈ ಸಂದರ್ಭದಲ್ಲಿ ಯಾವ ತರದ ವಸ್ತುಗಳು ಜನರ ಉನ್ಮುಖತೆಯನ್ನು ಸೆಳೆದು ನಿಲಿಹಿಡಿಯುವುವೆಂಬುದು ಮನಃಶಾಸ್ತ್ರೀಯ ಪ್ರಶ್ನೆ. ಪ್ರೇರ್ಯ, ಪ್ರೇರಣೆ ಮತ್ತು ಅನುಕ್ರಿಯೆಗಳ ಸೂತ್ರವನ್ನು ಇಟ್ಟುಕೊಂಡರೆ ನಾವು ಉತ್ತರವನ್ನು ಹುಡುಕುವುದು ಸುಲಭವಾಗುತ್ತದೆ. ಉನ್ಮುಖತೆಯನ್ನು ಸೆಳೆಯುವಲ್ಲಿ ಕೆಲ ಬಗೆಯ ಪ್ರೇರಣೆಗಳು ಹೆಚ್ಚು ಅನುಕೂಲವಾಗಿರುತ್ತವೆ.

ತೀವ್ರತೆ: ಪ್ರೇರಣೆಯ ತೀವ್ರತೆಯು ಮೊದಲನೆಯ ಕಾರಕ. ಉನ್ಮುಖತೆಯನ್ನು ಸೆಳೆಯುವಲ್ಲಿ ದುರ್ಬಲ ಪ್ರೇರಣೆಗಿಂತ ಬಲಿಷ್ಠ ಪ್ರೇರಣೆ ಹೆಚ್ಚು ಅನುಕೂಲವಾಗುತ್ತದೆ. ಪಿಸುಮಾತಿಗಿಂತ ಜೋರಾದ ಸದ್ದು, ಮಿಣುಕು ದೀಪಕ್ಕಿಂತ ತೀಕ್ಷ್ಣಪ್ರಕಾಶವೂ ನಮ್ಮ ಉನ್ಮುಖತೆಯನ್ನು ಸೆಳೆದುಕೊಳ್ಳುವುದರಲ್ಲಿ ಹೆಚ್ಚು ಸಮರ್ಥ. ದೃಶ್ಯಪದಾರ್ಥಗಳಲ್ಲಿ ಅವುಗಳ ಗಾತ್ರವು ತೀವ್ರತೆಯಷ್ಟೇ ಪರಿಣಾಮಕಾರಿ. ಸಣ್ಣ ವಸ್ತುಗಳಿಗಿಂತ ದೊಡ್ಡ ವಸ್ತುಗಳು ನಮ್ಮ ಉನ್ಮುಖತೆಯನ್ನು ಸೆಳೆಯುವುದು ಹೆಚ್ಚು.

ಪುನರಾವೃತ್ತಿ: ಪುನರಾವೃತ್ತಿ ಅಥವಾ ಪ್ರೇರಣೆಗಳ ಸಮುದಯವು ಇನ್ನೊಂದು ಕಾರಕ. "ಅಯ್ಯೋ, ಅಯ್ಯೋ, ಅಯ್ಯೋ!" ಎಂದರೆ ಯಾರಾದರೂ ಓಡಿ ಬಂದಾರು. ಹಾಗಲ್ಲದೆ, ಒಂದೇ ಸಲ "ಅಯ್ಯೋ" ಅಂದರೆ ಯಾರೂ ಓಡಿಬರದಿರಬಹುದು. ಆದರೆ ಒಂದು ಪ್ರೇರಣೆಯನ್ನು ಬಹಳ ಸಲ ಪುನರಾವರ್ತಿಸಿದರೆ ತನ್ನ ಏಕತಾನದ ದೆಸೆಯಿಂದ ಅದು ನಮ್ಮ ಉನ್ಮುಖತೆಯನ್ನು ಸೆರೆಹಿಡಿಯಲಾರದು. ಆಗ ನಮ್ಮ ಉನ್ಮುಖತೆಯು ಬದಲಾವಣೆ ಹಾಗೂ ಹೊಸತನಗಳಿರುವ ಇನ್ನಾವುದಾದರೂ ಪ್ರೇರಣೆಗೆ ವಶವಾಗುತ್ತದೆ.

ವ್ಯಭಿಚಾರ: ಇದೊಂದು ಬಲಿಷ್ಠವಾದ ಕಾರಕ. ವ್ಯಭಿಚಾರ ಪ್ರೇರಣೆಯು ಸ್ಥಾಯಿಪ್ರೇರಣೆಗಿಂತ ಹೆಚ್ಚು ಸಾಮರ್ಥ್ಯ ಉಳ್ಳದ್ದು. ಅಚಲವಾಗಿ ನಿಂತ ಚಿತ್ರ ಒಂದಕ್ಕಿಂತ ಚಂಚಲಿಸುವ ಚಿತ್ರವು ನಮ್ಮ ಲಕ್ಷ್ಯವನ್ನು ಹೆಚ್ಚಾಗಿ ಸೆಳೆಯುತ್ತದೆ. ಸ್ಥಿರವಾದ ಬೆಳಕಿಗೆ ಎದುರಾದ ಜಾಹೀರಾತಿಗಿಂತ ನಂದಿ ಉರಿವ ಬೆಳಕಿಗೆ ಎದುರಾದ ಜಾಹೀರಾತು ಹೆಚ್ಚು ಆಕರ್ಷಕ. ಆದುದರಿಂದ ವಸ್ತುವು ಬದಲಾಯಿಸುವ ಅಥವಾ ವ್ಯಭಿಚರಿಸುವ ಅಂಶವೂ ಒಂದು ಗಮನೀಯ ಕಾರಕ.

ವಿಲಕ್ಷಣತೆ: ಪರಿಣಾಮದಲ್ಲಿ ಸಾಧಾರಣವಾಗಿ ವಿಲಕ್ಷಣತೆಯು ವ್ಯಭಿಚಾರವನ್ನೇ ಹೋಲುತ್ತದೆ. ತನ್ನ ಪರಿಸರದಲ್ಲಿ ಇರುವ ಇತರ ವಸ್ತುಗಳಿಗಿಂತ ವಿಲಕ್ಷಣವಾಗಿರುವ ವಸ್ತುವು ನಮ್ಮ ಲಕ್ಷ್ಯವನ್ನು ಬಹುಬೇಗ ಸೆಳೆಯುವುದು. ಅದು ಬಿಳಿಯ ಗೋಡೆಯ ಮೇಲೆ ಇಟ್ಟ ಕರಿಯ ಚುಕ್ಕೆಯಾಗಬಹುದು; ಇಲ್ಲವೆ ಸಂತೆಯಲ್ಲಿರುವ ಒಂದು ಏಕಾಂತ ಸ್ಥಳವಾಗಬಹುದು; ನಯವಾದ ಕೆನ್ನೆಯಮೇಲೆ

ಒರಟಾಗಿ ಎದ್ದ ನೊಡವೆಯಾಗಬಹುದು; ಇಲ್ಲವೆ ಪಟ್ಟೆಯ ಸೀರೆಯ ಒಂದು ಹರಕೂ ಆಗಬಹುದು.

ವ್ಯಕ್ತಿನಿಷ್ಠ ಕಾರಕಗಳು: ಇವು ಎರಡು ಬಗೆಯಾಗಿವೆ. ಮೊದಲನೆಯದು ವ್ಯಕ್ತಿಯ ಸ್ಥಿರವಾಗಿರುವ ಅಥವಾ 'ರಚನಾಗತವಾಗಿರುವ' ಲಕ್ಷಣಗಳು; ಎರಡನೆಯದು ತಾತ್ಕಾಲಿಕವಾಗಿರುವ ಸ್ಥಿತಿ ಮತ್ತು (ನಡೆಯುತ್ತಲೇ ಇರುವ) ಕಾರ್ಯಪ್ರವಾಹ. ಸ್ಥಿರಕಾರಕಗಳಲ್ಲಿ ವ್ಯಕ್ತಿಯ ಉನ್ಮುಖತೆ ಮತ್ತು ಪರಾಙ್ಮುಖತೆ ಅಭ್ಯಾಸದಿಂದ (Habit) ಬರುತ್ತವೆ. ಕೆಲವು ವಸ್ತುಗಳ ಬಗ್ಗೆ ಲಕ್ಷ್ಯ ಹಾಕುವುದನ್ನೂ ಮತ್ತೆ ಕೆಲವು ವಸ್ತುಗಳನ್ನು ಅಲಕ್ಷ್ಯ ಮಾಡುವುದನ್ನೂ ಪ್ರತಿಯೊಂದು ವ್ಯಕ್ತಿಯೂ ಕಲಿತಿರುತ್ತದೆ. ಮೋಟಾರು ಕಾರಿನ ಡ್ರೈವರನಿಗೆ ಅದರ ಸದ್ದನ್ನು ಕೇಳಿ ಅಭ್ಯಾಸವಾಗಿರುತ್ತದೆ; ಅದರ ಸದ್ದು ಮೋಟಾರು ಸರಾಗವಾಗಿ ಹೋಗುತ್ತಿದೆಯೇ ಇಲ್ಲವೇ ಎಂಬುದನ್ನು ಅವನಿಗೆ ತಿಳಿಸುತ್ತದೆ. ಸಸ್ಯಶಾಸ್ತ್ರಜ್ಞನಿಗೆ ಕಲ್ಲು ಮತ್ತು ಮರಗಳಲ್ಲಿರುವ ಅತ್ಯಂತ ಕ್ಷುದ್ರವಾದ ಸಸ್ಯ ವಿಶೇಷಗಳನ್ನೂ ನೋಡುವುದು ಅಭ್ಯಾಸವಾಗಿರುತ್ತದೆ. ನೋಡತಕ್ಕದ್ದು ಯಾವುದು ಬಿಡತಕ್ಕದ್ದು ಯಾವುದು ಎಂಬುದನ್ನು ಮಗುವು ದೊಡ್ಡವರಿಂದ ಕಲಿತಿರುತ್ತದೆ.

ತಾತ್ಕಾಲಿಕ ವ್ಯಕ್ತಿನಿಷ್ಠ ಕಾರಕಗಳಲ್ಲಿ ಆಸಕ್ತಿಯು ಬಹಳ ಮುಖ್ಯವಾದದ್ದು. ಪ್ರಸ್ತುತ ಕಾಲದಲ್ಲಿ ನಿಮ್ಮ ಆಸಕ್ತಿಗೆ ಅನುಗುಣವಾಗಿರುವುದು ಯಾವುದೆಂಬುದನ್ನು ನೀವು ನೋಡುತ್ತೀರಿ. ಒಂದು ವಸ್ತುಪ್ರದರ್ಶನದಲ್ಲಿ ನೀವು ಕೊಳ್ಳಬೇಕೆಂದಿರುವ ವಸ್ತು ನಿಮ್ಮ ಕಣ್ಣನ್ನು ಸೆಳೆಯುತ್ತದೆ; ಮಿಕ್ಕ ವಸ್ತುಗಳನ್ನು ಅಲ್ಲಿ ಎಷ್ಟು ಎದ್ದು ಕಾಣುವಂತೆ ಪ್ರದರ್ಶಿಸಿದ್ದರೂ ಅತ್ತಕಡೆ ನಿಮ್ಮ ಲಕ್ಷ್ಯ ಹರಿಯುವುದಿಲ್ಲ. ಎಷ್ಟೋ ವೇಳೆ ನಿಮ್ಮ ನಿಯತಕಾಲಿಕ ಆಸಕ್ತಿಯು ಪ್ರಶ್ನೆಯ ರೂಪವನ್ನು ತಾಳುತ್ತದೆ. ಒಮ್ಮೆ ಬೆಲೆಯ ಪ್ರಶ್ನೆ ನಿಮ್ಮ ಮನಸ್ಸಿನ ಎದುರು ಬಂದ ಕೂಡಲೆ ನಿಮ್ಮ ಉನ್ಮುಖತೆಯನ್ನು ಒಂದು ಅಪ್ರಮುಖವಾದ ಬೆಲೆ ಪಟ್ಟಿಯು ಆಕರ್ಷಿಸುತ್ತದೆ!

ಲಕ್ಷ್ಯವನ್ನು ಸೆಳೆಯುವುದೇ ಒಂದು, ಅದನ್ನು ಸೆರೆಹಿಡಿದಿಡುವುದೇ ಮತ್ತೊಂದು. ಹೊಸತನ ಮತ್ತು ತೀವ್ರತೆ ಮುಂತಾದ ಪ್ರೇರಣಾಕಾರಕಗಳು ನಿಮ್ಮ ಲಕ್ಷ್ಯವನ್ನು ಸೆಳೆಯುತ್ತವೆ; ಆದರೆ ಬಹಳ ಕಾಲದ ವರೆಗೆ ನಿಮ್ಮ ಲಕ್ಷ್ಯ

ವನ್ನು ಸೆರೆಹಿಡಿದಿಡಲು ಯಾವುದಾದರೊಂದು ನಿಜವಾದ ಆಸಕ್ತಿ ಬೇಕು. ನಿಜವಾದ ಆಸಕ್ತಿಯು ನಿಮ್ಮ ಉನ್ಮುಖತೆಗೆ ಬೆಂಬಲವಾಗಿ (Re-inforcement) ನಿಲ್ಲುತ್ತದೆ.

ಎಷ್ಟೋ ಸಲ ಉಪಾಧ್ಯಾಯರು ಮಕ್ಕಳು ತಾವು ಹೇಳುವುದನ್ನು ಲಕ್ಷಿಸುವದಿಲ್ಲವೆಂದು ದೂರುತ್ತಾರೆ. ಅದೇ ವೇಳೆಗೆ ವಿದ್ಯಾರ್ಥಿಗಳಾದರೂ ತಮ್ಮ ಉನ್ಮುಖತೆಯ ಶಕ್ತಿಯು ತೀರ ದುರ್ಬಲವೆಂದು ದೂರಿಕೊಳ್ಳುವುದುಂಟು. ಮಕ್ಕಳನ್ನು ಕಾಡಿಸುವುದು ಸಂಪೂರ್ಣ ಪರಾಙ್ಮುಖತೆಯಲ್ಲ. ಅವರಿಗೆ ಅಂಟಿಕೊಂಡಿರುವ ರೋಗವೆಂದರೆ ಅನ್ಯೋನ್ಮುಖತೆ. ವಿದ್ಯಾರ್ಥಿಗಾದರೂ ಉಂಟಾಗುವ ತೊಂದರೆ ಇದೇ. ಅವನು ತನ್ನ ಇತರ ಆಸಕ್ತಿಗಳನ್ನು ಬಿಟ್ಟುಕೊಟ್ಟಾಗ ಅವನ ಮನಸ್ಸಿನ ಅಲೆದಾಟ ನಿಲ್ಲುವುದು; ಅಂಥ ಸ್ತಿಮಿತ ಮನಸ್ಸಿನಿಂದ ಉಪನ್ಯಾಸದಲ್ಲಿ ನಿಜವಾದ ಆಸಕ್ತಿಯನ್ನು ತಾಳಿದರೆ ಅವನ ತೊಂದರೆ ಪರಿಹಾರವಾಗುವುದು.

ಉನ್ಮುಖತಾಭಂಗ : ಇದು ಉನ್ಮುಖತೆಗೆ ವಿರುದ್ಧವಾದ ಧರ್ಮ. ಉನ್ಮುಖತಾಭಂಗವೆಂಬುದು ನಾವು ಉನ್ಮುಖರಾಗಬಯಸುವ ವಸ್ತುವಿನಿಂದ ನಮ್ಮ ಉನ್ಮುಖತೆಯನ್ನು ತನ್ನ ಕಡೆಗೆ ಎಳೆವ ಒಂದು ಪ್ರೇರಣೆ. ಉನ್ಮುಖತೆಯನ್ನು ವ್ಯವಸ್ಥೆಗೊಳಿಸಿಕೊಳ್ಳುವುದರಲ್ಲಿ ಉನ್ಮುಖತಾಭಂಗವನ್ನು ಗೆದ್ದುಕೊಳ್ಳುವುದು ಅತ್ಯಂತ ಮುಖ್ಯವಾದ ಅಂಶ.

ಉನ್ಮುಖತಾಭಂಗವು (Distraction) ಮೂರು ವಿಧವಾಗಿದೆ: ಆಂತರಿಕ, ಬಾಹ್ಯ ಮತ್ತು ಭಾವಿಕ ಎಂದು. ತಲೆನೋವು, ಹೊಟ್ಟೆನೋವು ಮುಂತಾದವು ಆಂತರಿಕ ಭಾಗಗಳು. ಹೊರಗಿನ ಗದ್ದಲಗಳು ಬಾಹ್ಯ ಭಂಗಗಳು. ನಾವು ಒಂದು ವಸ್ತುವಿನಲ್ಲಿ ಉನ್ಮುಖರಾಗಿರುವಾಗ ನಮ್ಮ ವಿಚಾರಗಳು ಬೇರೆ ದಿಕ್ಕುಗಳಿಗೆ ನಮ್ಮನ್ನು ಎಳೆದುಕೊಂಡು ಹೋದರೆ ಅಂಥ ಭಂಗವು ಭಾವಿಕ (Ideational) ಎನಿಸುತ್ತದೆ.

ಉನ್ಮುಖತಾಭಂಗವನ್ನು ಗೆಲ್ಲಲು ಅನೇಕ ಮಾರ್ಗಗಳಿವೆ. ಅವುಗಳಲ್ಲಿ ಮೊದಲನೆಯದೆಂದರೆ ಉನ್ಮುಖತಾಭಂಗವನ್ನು ಕಿತ್ತು ಬಿಸುಡುವುದು. ನಾವು ಓದುತ್ತಿದ್ದಾಗ ಯಾರಾದರೊಬ್ಬರು ಬಂದು ಜೋರಾಗಿ ಮಾತಾಡಲು ಶುರು ಮಾಡಿದರೆ, ಅವರನ್ನು ನಾವು ಹೊರಗೆ ಅಟ್ಟಿಬಿಡಬಹುದು. ಇದು ಒಂದನೆಯ

ಮಾರ್ಗ. ಹಾಗಲ್ಲದೆ ಅವರನ್ನು ಮಾತಾಡಲು ಬಿಟ್ಟು ಓದುವಿಕೆಯಲ್ಲಿ ನಾವು ಹೆಚ್ಚು ಪ್ರಯತ್ನವನ್ನು ಹಾಕಬಹುದು. ಅದರಿಂದ ಹೆಚ್ಚು ಏಕಾಗ್ರರಾಗಿ, ಗಟ್ಟಿಯಾಗಿ ಓದತೊಡಗಬಹುದು; ಇಲ್ಲವೆ ನಮ್ಮ ತಲೆಯನ್ನು ಪುಸ್ತಕದ ಹತ್ತಿರಕ್ಕೆ ಒಯ್ಯಬಹುದು. ಈ ಪ್ರಯತ್ನದಲ್ಲಿ ನಾವು ಮಾಡುತ್ತಿರುವ ಕೆಲಸ ದಲ್ಲಿ ಹೆಚ್ಚಿನ ಶಕ್ತಿಯನ್ನು ಪ್ರಯೋಗಿಸುತ್ತೇವೆ. ಹೀಗೆ ಉನ್ಮುಖತಾಭಂಗ ವನ್ನು ಗೆಲ್ಲುವುದು ಎರಡನೆಯ ಮಾರ್ಗ.

ಅದನ್ನು ಬಿಟ್ಟು ನಾವು ಉನ್ಮುಖತಾಭಂಗದ ಪ್ರೇರಣೆಗೆ ಪರಾಙ್ಮುಖ ರಾಗುವ ಅಭ್ಯಾಸವನ್ನು ಬೆಳೆಸಿಕೊಂಡು ಅದನ್ನು ಗೆಲ್ಲಬಹುದು. ಈ ಪ್ರಕ್ರಿಯೆಯೇ ಸ್ವೈಷೇಧಿಕ ಹೊಂದಿಕೆ. ಪದೇಪದೇ ಭಂಗವೊಂದು ನಮ್ಮನ್ನು ಪೀಡಿಸತೊಡಗಿ ದರೆ ಕಾಲಹೋದಹಾಗೆ ನಾವು ಅದನ್ನು ಅಲಕ್ಷಿಸುವುದನ್ನು ಕಲಿಯುತ್ತೇವೆ. ರೈಲುನಿಲ್ದಾಣದ ಬಳಿ ವಾಸ ಮಾಡುವವರಿಗೆ ಅಲ್ಲಿಗೆ ಬಂದು ಹೋಗುವ ರೈಲು ಗಳ ಸದ್ದಿನಿಂದ ಯಾವ ತೊಂದರೆಯೂ ಆಗುವುದಿಲ್ಲ. ಅದೇ ಒಬ್ಬ ಹೊಸಬನು ಅಲ್ಲಿಗೆ ಹೋದರೆ ಅವನಿಗೆ ಆ ಸದ್ದು ಅತ್ಯಂತ ಬಲವಾದ ಭಂಗವೆನಿಸುತ್ತದೆ.

ಕೊನೆಯದಾಗಿ, ನಮ್ಮ ಮುಖ್ಯ ಕಾರ್ಯದೊಡನೆ ಉನ್ಮುಖತಾಭಂಗವನ್ನು ಜೋಡಿಸಿಕೊಂಡು ಬಿಟ್ಟರೆ ಆಗ ಅದರ ವಿಷದ ಹಲ್ಲನ್ನು ಮುರಿದಂತೆ ಆಗುತ್ತವೆ. ಆಗ ಉನ್ಮುಖತಾಭಂಗವೆಂಬುದೇ ನಮ್ಮ ಮಿತ್ರನಾಗಿ ಕೆಲಸಮಾಡತೊಡಗು ತ್ತದೆ. ಒಬ್ಬ ಸಂಗೀತಗಾರನು ಬಲಗೈಯಿಂದ ಕಾಲಿನಿಂದ ಒತ್ತುವ ಹಾರ್ಮೋನಿ ಯಮ್ಮನ್ನು ನುಡಿಸುತ್ತಿದ್ದಾಗ ಅವನಿಗೆ ಅವನ ಎಡಗೈಯೊಂದು ಉನ್ಮುಖತಾ ಭಂಗದ ಕಾರಣವೆನಿಸಿತು. ಆ ಕೈಯಿಂದ ಏನು ಮಾಡಬೇಕೆಂಬುದೇ ಗೊತ್ತಾಗ ಲಿಲ್ಲ. ಆದರೆ ಕಾಲಕ್ರಮೇಣ ಅವನು ಎಡಗೈಯಿಂದಲೂ ನುಡಿಸುವುದನ್ನು ಕಲಿತನು. ಹೀಗೆ ಅವನು ಉನ್ಮುಖತಾಭಂಗಕ್ಕೆ ಕಾರಣವಾದ ಅವನ ಎಡಗೈ ಯನ್ನು ಮಿತ್ರನನ್ನಾಗಿ ಮಾಡಿಕೊಂಡನು.

ಉನ್ಮುಖತೆಯ ಬಗೆಗಳು: ಸಕ್ರಿಯ ಮತ್ತು ನಿಷ್ಕ್ರಿಯ. ಸಂಪೂರ್ಣ ನಿಷ್ಕ್ರಿಯವಾದ ಉನ್ಮುಖತೆ ಎಂಬುದು ಇಲ್ಲ. ಈ ಭೇದ ಕೇವಲ ಸಾಪೇಕ್ಷ. ಸಂಕಲ್ಪದ ಪ್ರಯತ್ನ ಇರುವಾಗ ನಡೆಯುವುದು ಸಕ್ರಿಯ ಉನ್ಮುಖತೆ. ಇದನ್ನೇ ಸ್ವೇಚ್ಛಾಕೃತ ಉನ್ಮುಖತೆ ಎಂದು ಕರೆಯಬಹುದು. ನಿಷ್ಕ್ರಿಯ ಉನ್ಮುಖತೆ ಯಲ್ಲಿ ಸಂಕಲ್ಪದ ಪ್ರಯತ್ನವು ಅಷ್ಟು ಎದ್ದು ಕಾಣುವುದಿಲ್ಲ. ಅದೊಂದು

ಸಹಜವಾಗಿ ನಡೆಯುವ ಕ್ರಿಯೆ—ಅಲ್ಲಿ ವಸ್ತುವಿನಲ್ಲಿಯೇ ಇರುವ ಏನೋ ಒಂದು ನಮ್ಮ ಉನ್ಮುಖತೆಯನ್ನು ತನ್ನಕಡೆ ಸೆಳೆದುಕೊಳ್ಳುತ್ತದೆ. ಮೂಲ ಮತ್ತು ಜನ್ಯವೆಂಬುದು ಎರಡನೆಯ ವರ್ಗ—ಮೂಲ ಉನ್ಮುಖತೆಯಲ್ಲಿ ನಾವು ಉನ್ಮುಖರಾಗುವುದು ವಸ್ತುವಿನ ಸಲುವಾಗಿಯೇ; ಜನ್ಯ ಉನ್ಮುಖತೆಯಲ್ಲಿ ಯಾವುದೋ ಒಂದು ಸಿದ್ಧಿಯ ಸಾಧನವನ್ನಾಗಿ ತೆಗೆದುಕೊಂಡು ಒಂದು ವಸ್ತುವಿಗೆ ನಾವು ಉನ್ಮುಖರಾಗುತ್ತೇವೆ. ಒಂದು ಸರ್ಕಸ್ಸು ನೋಡುವಾಗ ಇರುವ ಉನ್ಮುಖತೆಯು ಮೂಲ ಸ್ವರೂಪದ್ದು. ಅಲ್ಲಿ ಅವರ ಕಸರತ್ತಿನಲ್ಲಿಯೇ ನಾವು ಆಸಕ್ತರಾಗಿರುತ್ತೇವೆ. ಬೇಸರ ಬರಿಸುವ ಒಂದು ಪ್ರಾಚಾರ್ಯ ಭಾಷಣವನ್ನು ಕೇಳುವಾಗ ಇರುವ ನಮ್ಮ ಉನ್ಮುಖತೆ ಜನ್ಯ ಸ್ವರೂಪದ್ದು. ಇಲ್ಲಿ ನಾವು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಅದೊಂದು ಸಾಧನವೆಂದು ತಿಳಿದು ಬಲವಂತದಿಂದ ಆ ಬೇಸರಬರಿಸುವ ಭಾಷಣವನ್ನು ಕೇಳುತ್ತೇವೆ. ಮಕ್ಕಳಿಗೆ ಸಾಮಾನ್ಯವಾಗಿ ಮೂಲ ಸ್ವರೂಪದ ಉನ್ಮುಖತೆಯೇ ಇರುತ್ತದೆ. ಏಕೆಂದರೆ ಅವರಿಗೆ ಪ್ರಯೋಜನದೃಷ್ಟಿ ಇರುವುದಿಲ್ಲ. ಅವರ ಹೃದಯವನ್ನು ಆಕರ್ಷಿಸಿದ ವಸ್ತುವಿನಲ್ಲಿ ಅವರ ಉನ್ಮುಖತೆ ಲೀನವಾಗುತ್ತದೆ. ಈ ಸಹಜಪ್ರವೃತ್ತಿಯು ದೊಡ್ಡವರಾದ ಹಾಗೆ ಅಳಿದು ಹೋಗುತ್ತದೆ. ಏಕೆಂದರೆ ವಿಷಯಗಳಿಗೆ ನಾವು ಕೆಲವು ಕೃತಕ ಬೆಲೆಗಳನ್ನು ಅನ್ವಯಿಸಿ ಅವು ಬೇಸರಬರಿಸುತ್ತಿದ್ದರೂ ಅವುಗಳಿಂದ ಲಾಭವಿದೆ ಎಂದು ತಿಳಿದು ಅವುಗಳಿಗೆ ಉನ್ಮುಖರಾಗುತ್ತೇವೆ.

ಅಧ್ಯಾಯ ಆರು

ಪ್ರತಿಮಾ ಸಂಪುಟ

ಸಂವೇದನೆ ಮತ್ತು ಇಂದ್ರಿಯಪ್ರತ್ಯಕ್ಷಗಳ ಸ್ವರೂಪವನ್ನು ನಾವು ಹಿಂದೆ ತಿಳಿದೆವು. ಅವು ಸದ್ಯಃ ನೇರವಾಗಿ ನಮ್ಮೆದುರಿರುವ ಆವರಣಕ್ಕೆ ಸಂಬಂಧಿಸಿದಂಥವು. ಹಾಗಲ್ಲದೆ ನಮ್ಮ ಮನಸ್ಸಿನಲ್ಲಿ ಎದುರಿರದ ಹಾಗೂ ಭೂತಕಾಲದ ಮಾನಸಿಕ ಪ್ರತಿಮೆಗಳೂ ಇರುತ್ತವೆ; ಎಂದೂ ನಿಜವಾಗಿ ಸಂಭವಿಸಿರದ ಪದಾರ್ಥ ಅಥವಾ ಘಟನೆಗಳ ಪ್ರತಿಮೆಗಳೂ ಇರಬಹುದು. ಈ ಮಾನಸಿಕ ಪ್ರತಿಮೆಗಳು ಮಿದುಳಿನ ಚಟುವಟಿಕೆಯನ್ನು ಅವಲಂಬಿಸಿರುವುವಲ್ಲದೆ ಸದ್ಯದ ನೇರವಾದ ಬಾಹ್ಯ ಪ್ರೇರಣೆಗಳನ್ನಲ್ಲ. ಇಂಥ ಪ್ರತಿಮೆಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

ಸ್ಮೃತಿಪ್ರತಿಮೆಗಳು ಮತ್ತು ರಚಿತಪ್ರತಿಮೆಗಳು: ರಾಮನ ಮುಖವನ್ನು ಮನಸ್ಸಿನ ಕಣ್ಣೆಸೆದುರು ತಂದುಕೊಂಡರೆ ಅಥವಾ ಅವನ ಸ್ವರದ ಶ್ರಾವಣಪ್ರತಿಮೆಯನ್ನು ನೆನೆದುಕೊಂಡರೆ, ನಾವು ಒಂದು ಸ್ಮೃತಿಪ್ರತಿಮೆಯನ್ನು ಅನುಭವಿಸುತ್ತೇವೆ ಎಂದಾಗುತ್ತದೆ. ನಾವು ಸ್ವರ್ಗದ ಅಮರಾವತಿಯ ರತ್ನದ ಬಾಗಿಲನ್ನೂ ಬಂಗಾರದ ರಸ್ತೆಗಳನ್ನೂ ಅಥವಾ ಕೋತಿಯ ಮುಖ, ಮೇಕೆಯ ಮೈ ಮತ್ತು ಹುಲಿಯ ಕೈಕಾಲುಗಳುಳ್ಳ ಪ್ರಾಣಿಯನ್ನು ಕಣ್ಣೆದುರು ಚಿತ್ರಿಸಿಕೊಂಡಾಗ ಅದು ರಚಿತಪ್ರತಿಮೆ ಎನಿಸಿಕೊಳ್ಳುತ್ತದೆ. ಅಂಥ ಪ್ರತಿಮೆಗಳು ನೇತ್ರೇಂದ್ರಿಯದ ಜ್ಞಾನಗಳಿಗಿಂತ ಭಿನ್ನವಾದ ಜ್ಞಾನಗಳಿಂದ ಹುಟ್ಟುತ್ತವೆ; ಕೇಳ್ಮೆಯಲ್ಲಿ ಇದು ಇನ್ನಷ್ಟು ಸ್ಪಷ್ಟ. ತಾನು ಎಂದೂ ಅನುಭವಿಸಿರದ ನಾದಾನುಕ್ರಮವನ್ನು ಒಬ್ಬ ಸಂಗೀತ ನಿರ್ಮಾತನು ಮನಸ್ಸಿನಿಂದಲೇ ಕೇಳುವದಿಲ್ಲವೆ? ಸ್ಮೃತಿಪ್ರತಿಮೆಗಳೆಲ್ಲವೂ ಭೂತಕಾಲದಲ್ಲಿ ನಾವು ಅನುಭವಿಸಿದ ಯಾವುದಾದರೊಂದನ್ನು ಹೋಲುತ್ತವೆ ಇಲ್ಲವೆ ಅವನ್ನು ಪುನರುತ್ಪತ್ತಿ ಮಾಡುತ್ತವೆ. ರಚಿತಪ್ರತಿಮೆಗಳು ಹಾಗೆ ಮಾಡುವುದಿಲ್ಲ. ಅವೆಲ್ಲ ಹೊಸವು. ರಚಿತ ಪ್ರತಿಮೆಯು ಸಂಪೂರ್ಣವಾಗಿ ಹೊಸದಾದರೂ ಅದರ ವಿವಿಧ ಅಂಗಗಳೆಲ್ಲವಕ್ಕೂ

ತಕ್ಕ ಬಿಂಬಗಳು ನಮ್ಮ ಗತಾನುಭವದಲ್ಲಿರುತ್ತವೆ. ರತ್ನದ ಬಾಗಿಲುಗಳನ್ನೂ ಬಂಗಾರದ ರಸ್ತೆಗಳನ್ನೂ ನಾವು ಎಂದೂ ಕಂಡಿಲ್ಲ. ಆದರೆ ನಾವು ಬಾಗಿಲುಗಳನ್ನೂ ರತ್ನಗಳನ್ನೂ ಮತ್ತು ಬಂಗಾರವನ್ನೂ ನೋಡಿದ್ದೇವೆ. ರಚಿತ ಪ್ರತಿಮೆಯು ಈ ಅಂಗಗಳನ್ನು ಒಂದು ಹೊಸ ಸ್ವರೂಪದಲ್ಲಿ ಸಂಯೋಜಿಸುವುದರಲ್ಲಷ್ಟೇ ಹೊಸ ರಚನೆ ಎನಿಸುತ್ತದೆ.

ವಿವಿಧ ಇಂದ್ರಿಯಗಳ ಪ್ರತಿಮೆಗಳು: ಸಂವೇದನೆಗಳು ಎಷ್ಟು ಬಗೆಯಾಗಿವೆಯೋ ಅಷ್ಟೇ ಬಗೆಯ ಪ್ರತಿಮೆಗಳೂ ಇವೆ. ನಾವು ಮನಸ್ಸಿನ ಕಣ್ಣಿನಿಂದ ಚಿತ್ರಗಳನ್ನು ನೋಡಬಲ್ಲೆವು; ಅದರ ಕಿವಿಯಿಂದ ಶಬ್ದಗಳನ್ನು ಕೇಳಬಲ್ಲೆವು ಮತ್ತು ಮಿಕ್ಕ ಎಲ್ಲ ವಿಶಿಷ್ಟ ಇಂದ್ರಿಯಗಳಿಗೆ ಸಂಬಂಧಿಸಿದ ಪ್ರತಿಮೆಗಳನ್ನೂ ಸ್ಮೃತಿಪಥಕ್ಕೆ ತಂದುಕೊಳ್ಳಬಲ್ಲೆವು. ಉದಾ: ಕೇಸರಿಭಾತಿನ ರುಚಿ, ಗುಲಾಬಿಯ ವಾಸನೆ, ಪಚ್ಚೆಯ ನಯ, ಕಾವಲಿಯ ಬಿಸಿ, ಮಂಜುಗಡ್ಡೆಯ ತಂಪು, ಸುಟ್ಟಗಾಯದ ನೋವು ಅಥವಾ ನೀರೆತ್ತುವಾಗಿನ ಮಾಂಸಖಂಡಗಳ ಪ್ರಯತ್ನ. ಪ್ರತಿಮೆಗಳು ಸರಿಯಾದ ಅಳತೆಗೆ ಸಿಕ್ಕದಿರುವುದರಿಂದ ಬೇರೆ ಬೇರೆ ಬಗೆಯ ಪ್ರತಿಮೆಗಳ ಸಾಪೇಕ್ಷ ಸ್ಪಷ್ಟತೆಯನ್ನು ಬೆಲೆ ಕಟ್ಟುವುದು ಕಷ್ಟ. ಬಹಳ ಜನರಿಗೆ ಸಾಮಾನ್ಯವಾಗಿ ಅವನ್ನು ಐದು ವರ್ಗಗಳಾಗಿ ವಿಂಗಡಿಸಲು ಬರುತ್ತದೆ: ಬಹಳ ಸ್ಪಷ್ಟ, ಸ್ಪಷ್ಟ, ಸುಮಾರು ಸ್ಪಷ್ಟ, ಸಂಪೂರ್ಣ ಅಸ್ಪಷ್ಟ ಮತ್ತು ಪ್ರತಿಮೆಯ ಅಭಾವ ಎಂದು. ಅನೇಕರ ಅನುಭವದ ಫಲವಾಗಿ (ವೈಯಕ್ತಿಕ ಭಿನ್ನಾಭಿಪ್ರಾಯಗಳು ಎಷ್ಟೇ ಇದ್ದರೂ) ಈ ವಿಷಯದಲ್ಲಿ ಒಂದು ಸಾಮಾನ್ಯ ಅಭಿಪ್ರಾಯಕ್ಕೆ ಬರಲು ಶಕ್ಯವಾಗಿದೆ. ಆ ಪ್ರಕಾರ ಚಾಕ್ಷುಷ ಪ್ರತಿಮೆ ಅತ್ಯಂತ ಸ್ಪಷ್ಟ, ಶ್ರಾವಣಪ್ರತಿಮೆ ಎರಡನೆಯದು ಮತ್ತು ನೋವು ಹಾಗೂ ವಾಸನೆಯ ಪ್ರತಿಮೆಗಳು ಪಟ್ಟಿಯ ಕೊನೆಯಲ್ಲಿ ಬರುತ್ತವೆ. ಈ ಫಲಿತಾಂಶವು ಮನುಷ್ಯನಲ್ಲಿ ಕಣ್ಣಿಗಿರುವ ಪ್ರಾಧಾನ್ಯವನ್ನೂ ಮೂಗಿನ ಶಕ್ತಿಯ ಸಾಪೇಕ್ಷ ಕಡಿಮೆ ಬೆಳವಣಿಗೆಯನ್ನೂ ಸೂಚಿಸುತ್ತದೆ. ಚಾಕ್ಷುಷಪ್ರತಿಮೆಗಳು ಶ್ರಾವಣಪ್ರತಿಮೆಗಳಿಗಿಂತ ಸ್ಪಷ್ಟತರವೂ ಪದೇ ಪದೇ ಬರತಕ್ಕವೂ ಆಗಿವೆ ಮಿಕ್ಕ ಅನೇಕ ಬಗೆಯ ಪ್ರತಿಮೆಗಳೊಡನೆ ಸಹಜವಾಗಿ ಉದ್ಭವಿಸಲು ಪ್ರವರ್ತಿಸುತ್ತವೆ. ಮಿಕ್ಕ ಪ್ರತಿಮೆಗಳು ಚಾಕ್ಷುಷಪ್ರತಿಮೆಗಳೊಡನೆ ಈ ಪ್ರಕಾರ ಪದೇ ಪದೇ ಬರುವುದಿಲ್ಲ. ಉದಾ: ಮಾವಿನ ಹಣ್ಣಿನ ಮಾನಸಿಕ ಚಿತ್ರವಿಲ್ಲದೆಯೆ

ನಮಗೆ ಅದರ ರುಚಿಯನ್ನು ಊಹಿಸಲು ಸಾಧ್ಯವಿಲ್ಲ. ಭಾರವಾದ ಒಂದು ಕಲ್ಲಿನ ಮಾನಸಿಕ ಚಿತ್ರವಿಲ್ಲದೆ ನಾವು ಅದನ್ನು ಎತ್ತುವ ಮಾಂಸಖಂಡ ಪ್ರಯತ್ನ ವನ್ನು ಕಲ್ಪಿಸಲಾರೆವು. ಆದರೆ ಒಂದು ಮರದ ಚಾಕ್ಷುಷಪ್ರತಿಮೆ ನಮ್ಮ ಮನಸ್ಸಿನಲ್ಲಿ ಎದ್ದಾಗ ಯಾವಾಗಲೂ ನಮಗೆ ಅದರ ತೊಗಟೆಯ ಒರಟಿನ ಪ್ರತಿಮೆ ನೆನಪಾಗಬೇಕೆಂದಿಲ್ಲ. ಪ್ರತಿಮೆಗಳಲ್ಲಿ ಇರುವ ವೈಯಕ್ತಿಕ ಭೇದಗಳ ವ್ಯಾಪಕತೆಯನ್ನು ಒತ್ತಿಹೇಳಬೇಕಾಗಿದೆ. ಬಹಳ ಜನರಿಗೆ ಚಾಕ್ಷುಷಪ್ರತಿಮೆ ಗಳು ಬಹು ಮುಖ್ಯವೆನಿಸಿದರೂ ಅನೇಕರಿಗೆ ಅವು ಶ್ರಾವಣ, ಮಾಂಸಲ ಇಲ್ಲವೆ ಇತರ ಪ್ರತಿಮೆಗಳಷ್ಟು ಮುಖ್ಯವಲ್ಲ. ದೂರದಲ್ಲಿರುವ ಸ್ನೇಹಿತರ ಆಕೃತಿಗಿಂತ ಹೆಚ್ಚಾಗಿ ಅವರ ಧ್ವನಿಯನ್ನೇ ನೆನೆದುಕೊಳ್ಳುವವರು ಇದ್ದಾರೆ. ಅಂಥವರು ಜ್ಯಾಮಿತಿಯಲ್ಲಿ ಅಥವಾ ಭೂಪಟವನ್ನು ಓದುವುದರಲ್ಲಿ ಕೋನ ವಿಭಾಗ ಗಳನ್ನೋ ವೃತ್ತದಲ್ಲಿರುವ ತ್ರಿಭುಜಗಳನ್ನೋ ಅಥವಾ ಸೀಮಾರೇಖೆಗಳನ್ನೋ ಚಾಕ್ಷುಷಪ್ರತಿಮೆಯ ರೂಪದಲ್ಲಿ ಮನಸ್ಸಿನ ಎದುರು ಸ್ಪಷ್ಟವಾಗಿ ತಂದು ಕೊಳ್ಳಲಾರರು.

ಪದಪ್ರತಿಮೆಗಳು: ನಮ್ಮ ವಿಚಾರಪ್ರಪಂಚದಲ್ಲಿ—ಅದರಲ್ಲೂ ಅದು ಸೂಕ್ಷ್ಮವಾಗಿರುವಾಗ—ನಾವು ವಸ್ತುಗಳ ಅಥವಾ ಸಂಗತಿಗಳ ಪ್ರತಿಮೆಗಳಿಗೆ ಬದಲಾಗಿ ಹೆಚ್ಚಾಗಿ ಪದಪ್ರತಿಮೆಗಳನ್ನೇ ಬಳಸುತ್ತೇವೆ. ಅವನ್ನು ಪದೇ ಪದೇ ನಮ್ಮ ಮಾನಸಿಕ ಪ್ರಕ್ರಿಯೆಯನ್ನು ಅನುಸರಿಸಿ ಬರುವ ಸ್ವರತಂತುಗಳ (Vocal cords) ನಾಲಿಗೆಯ, ತುಟಿಗಳ ಮತ್ತು ಇತರ ವಾಗಂಗಗಳ ಮುಂದ ಚಲನೆಗಳೊಡನೆ ಸೇರಿಸಬಾರದು. ಓದುವಾಗ ಅಥವಾ ವಿಚಾರ ಮಾಡುವಾಗ ಉಕ್ತ ಅಂಗಗಳು ಚಲಿಸಬಹುದು. ಆದರೆ ಅವು ಇತರ ಶಾರೀರಿಕ ಚಲನೆಗಳಂ ತೆಯೇ ಮಾನಸಿಕ ಪ್ರತಿಮೆಗಳಾಗಲಾರವು. ಪದಪ್ರತಿಮೆಯು ಒಮ್ಮೆ ಅದರ ಲಿಖಿತ ಅಥವಾ ಮುದ್ರಿತ ಆಕೃತಿಯ ಚಾಕ್ಷುಷಪ್ರತಿಮೆಯಾಗಬಹುದು. ಅಥವಾ ಅದರ ಶಬ್ದದ ಇಲ್ಲವೆ ನಾದದ ಶ್ರಾವಣ ಪ್ರತಿಮೆಯಾದರೂ ಆಗ ಬಹುದು. ಅದರೊಟ್ಟಿಗೆ ಮಾತಿನಲ್ಲಿ, ಬರಹದಲ್ಲಿ ಅಥವಾ ಅಭಿನಯದಲ್ಲಿ ಅದನ್ನು ಹೇಳುವಾಗ ಉಂಟಾಗುವ ಚಲನೆಗಳ ಮಾಂಸಲ ಇಲ್ಲವೆ ಕ್ರಿಯಾತ್ಮಕ ಪ್ರತಿಮೆ ಗಳೂ ಬರಬಹುದು.

ಪ್ರತಿಮೆಗಳೂ ಸಂವೇದನೆಗಳೂ

ತಕ್ಕ ಇಂದ್ರಿಯಾಂಗಕ್ಕೆ ಪ್ರೇರಣೆ ಮಾಡಿದಾಗ ಮಾತ್ರ ಸಂವೇದನೆ ಉಂಟಾಗ ಬಲ್ಲದು. ಅವಕ್ಕೆ ಅದ್ಯತನಭೂತಕಾಲದಲ್ಲಿ ಪ್ರೇರಣೆ ದೊರೆತರೆ ಮಾತ್ರ ಉತ್ತರ ಸಂವೇದನೆಗಳು ಉಂಟಾಗುತ್ತವೆ. ಆದರೆ ಪ್ರತಿಮೆಗೆ ಅಂಥ ಯಾವ ಪ್ರೇರಣೆಯೂ ಬೇಕಾಗಿಲ್ಲ. ಕತ್ತಲಲ್ಲಿ ಇದ್ದಾಗ ನಮ್ಮ ಬಗೆಗನ್ನಡಿಯಲ್ಲಿ ಚಾಕ್ಷುಷಪ್ರತಿಮೆಗಳು ಮೂಡಬಹುದು. ಶಬ್ದಾವರೋಧಕ ಕೋಣೆಯಲ್ಲಿ ಸುಮ್ಮನೆ ಕುಳಿತ ನಮ್ಮ ಮನಸ್ಸಿನಲ್ಲಿ ಶ್ರಾವಣಪ್ರತಿಮೆಗಳು ಉದಯಿಸ ಬಹುದು. ಅದೇ ಪ್ರಕಾರ ಕಣ್ಣು ಕುರುಡಾಗಿ ಹೋದರೆ, ಕಿವಿ ಕಿವುಡಾಗಿ ಹೋದರೆ ನಮಗೆ ಚಾಕ್ಷುಷ ಇಲ್ಲವೆ ಶ್ರಾವಣಪ್ರತಿಮೆಗಳನ್ನು ಕಲ್ಪಿಸಿಕೊಳ್ಳುವ ಶಕ್ತಿಯು ಹೋಗುವುದಿಲ್ಲ.

ಎರಡನೆಯದಾಗಿ, ಇಂದ್ರಿಯಾಂಗವನ್ನು ಅವಲಂಬಿಸಿದ ಸಂವೇದನೆಗಳು ಪ್ರೇರಣೆ ನಿಂತರೆ ಅಥವಾ ಬದಲಾದರೆ ಆ ಕೂಡಲೆ ನಿಂತುಹೋಗುವುವು; ಆದರೆ ನಮ್ಮ ಇಂದ್ರಿಯಾಂಗಗಳ ಕಾರ್ಯವನ್ನು ಲೆಕ್ಕಿಸದೆ ಇತರ ಪ್ರತಿಮೆಗಳು ಸ್ವತಂತ್ರವಾಗಿ ಬಂದುಹೋಗುತ್ತವೆ.

ಮೂರನೆಯದಾಗಿ, ಸಂವೇದನೆಗಳಿಗಿಂತ ಪ್ರತಿಮೆಗಳು ಹೆಚ್ಚು ಅನಾಕ್ರಮಣ ಪ್ರವೃತ್ತಿಯವು. ಒಂದು ಇಂದ್ರಿಯಾಂಗದ ಪ್ರೇರಣೆಯು ಫಲಿತ ಸಂವೇದನೆ ಯನ್ನು ಪ್ರೇರಣೆ ಮುಗಿಯುವ ತನಕ—ನಮಗೆ ಇಷ್ಟವಿರಲಿ ಇಲ್ಲದಿರಲಿ, ನಾವು ಅದಕ್ಕೆ ಲಕ್ಷ್ಯಕೊಡಲಿ, ಕೊಡದೆ ಇರಲಿ, ನಮ್ಮ ಪ್ರಜ್ಞಾಕ್ಷೇತ್ರದಲ್ಲಿ ತುಂಬುತ್ತಲೇ ಹೋಗುವುದು. ಪ್ರತಿಮೆಗಳನ್ನು ನಮಗೆ ಬೇಕಾದಾಗ ಬರಿಸಿಕೊಳ್ಳಬಹುದು, ಬೇಡವಾದಾಗ ನಿವಾಳಿಸಬಹುದು. ಅವುಗಳನ್ನು ಉನ್ಮುಖತೆಯ ಪ್ರಯತ್ನದಿಂದ ನಾವು ಹಿಡಿದಿಡದಿದ್ದರೆ ಅವು ಬಹುಬೇಗ ಮಾಯವಾಗಿ ಹೋಗುತ್ತವೆ. ನಾಲ್ಕ ನೆಯದಾಗಿ, ತಾನು ಸಮನ್ವಿತವಾಗುವ ಒಂದು ಇಂದ್ರಿಯಪ್ರಜ್ಞೆಯ ಸಂದ ರ್ಭವು ಪ್ರತಿಯೊಂದು ಸಂವೇದನೆಗೂ ಇದೆ. ಅಂದರೆ ಸಂವೇದನೆಯೂ ಆದರ ಇಂದ್ರಿಯಜ್ಞಾನದ ಸನ್ನಿವೇಶವೂ ಒಟ್ಟಿಗೇ ಬರುತ್ತವೆ. ಆದರೆ ಪ್ರತಿಮೆಗಳು ಸಾಪೇಕ್ಷವಾಗಿ ಒಂಟಿಗಳು ಮತ್ತು ಅವೇ ಕಾಲದಲ್ಲಿ ನಾವು ಅನುಭವಿಸುತ್ತಿರುವ ಸಂವೇದನೆಗಳೊಡನೆ ಸಮರಸವಾಗುವುದಿಲ್ಲ. ನಾವು ಗಂಟೆಯ ಸದ್ದನ್ನು ಕೇಳುತ್ತಿರುವಾಗ ಇಲ್ಲವೆ ಒಂದು ಸಂಪಿಗೆಯ ಪರಿಮಳವನ್ನು ಮೂಸುತ್ತಿರು

ವಾಗ ಈ ಸಂವೇದನೆಗಳು ಏಕಕಾಲಿಕ ಸಂವೇದನೆಗಳ ರೂಪದ ಒಂದು ಸಮ್ಮಿಶ್ರ ವಸ್ತುವಿನ ಭಾಗವೆನಿಸಿ, ಪರಸ್ಪರ ಹೊಂದಿಕೆಯಿಂದ ಹಾಸುಹೊಕ್ಕಾಗಿರುತ್ತವೆ. ಅಂದರೆ ಶ್ರಾವಣ ಅಥವಾ ಘ್ರಾಣ ಸಂವೇದನೆಗಳು ಆರಂಭದಲ್ಲಿ ಸೂಕ್ಷ್ಮ ರೀತಿಯಿಂದ ಅನುಕ್ರಮವಾಗಿದ್ದರೂ ಅವು ಒಂದರೊಡನೊಂದು ಸಮರಸವಾಗಿ ಹೊಂದಿಕೊಂಡಿರುತ್ತವೆ. ತದ್ವಿರುದ್ಧವಾಗಿ ನಾವು ಘಂಟಾನಾದ ಇಲ್ಲವೆ ಸಂಪಿಗೆ ವಾಸನೆಯ ಪ್ರತಿಮೆಗಳನ್ನು ನೆನೆದುಕೊಂಡಾಗ ಅವು ಸಾಪೇಕ್ಷವಾಗಿ ಒಂಟೊಂಟಿಯಾಗಿ ಬರುತ್ತವೆ; ಈ ಯಾವ ಒಂದು ಪ್ರತಿಮೆಯನ್ನೂ ಅದರ ಹಿನ್ನೆಲೆಯ ಪ್ರತಿಮೆಯು ಅನುಸರಿಸಿ ಬರುವುದಿಲ್ಲ. ಈ ಅಥವಾ ಇನ್ನಿತರ ಪ್ರತಿಮೆಗಳು ನಮ್ಮ ಏಕಕಾಲಿಕ ಇಂದ್ರಿಯಾನುಭವಗಳೊಡನೆ ಕೂಡುವುದೂ ಇಲ್ಲ, ಪರಸ್ಪರ ಕ್ರಿಯೆಯನ್ನು ಮಾಡುವುದೂ ಇಲ್ಲ. ಕಾರ್ಖಾನೆಯ ಸದ್ದು ನಮ್ಮ ಕಿವಿಯನ್ನು ಗಡಚಿಕ್ಕಿದರೂ ನಾವು ಗಂಟೆಯನ್ನು ಊಹಿಸಿಕೊಳ್ಳಬಹುದು. ಆಗ ಆ ಗಂಟೆಯ ಪ್ರತಿಮೆಯು ಕಾರ್ಖಾನೆಯ ಗದ್ದಲಕ್ಕೆ ಆದೇಶವಾಗುವುದಿಲ್ಲ; ಅದರೊಡನೆ ಸಮರಸವಾಗಿ ಬೆರೆಯುವುದೂ ಇಲ್ಲ. ಐದನೆಯದಾಗಿ, ಸನ್ನಿಕೃಷ್ಟ ಪ್ರತಿಮೆಗಳನ್ನೂ (Eidetic Images) ಮಾಯಾರೂಪಗಳನ್ನೂ ಬಿಟ್ಟರೆ ಮಿಕ್ಕ ಪ್ರತಿಮೆಗಳೆಲ್ಲವೂ ಸಂವೇದನೆಗಳಿಗಿಂತ ಹೆಚ್ಚು ಅಸ್ಥಿಮಿತ, ಅಸ್ಪಷ್ಟ, ಅಪ್ರತ್ಯೇಕೀಕೃತ. ಜನಸಂಮರ್ದವುಳ್ಳ ರಸ್ತೆಯ ಚಾಕ್ಷುಷ ಪ್ರತಿಮೆಯು ಅದರ ಸಾಕ್ಷಾತ್ ಸಂವೇದನೆಗಿಂತ ಹೆಚ್ಚು ಹರಕುಮುರುಕು, ಅಸ್ಪಷ್ಟ ಮತ್ತು ವಿವರರಹಿತ.

ಸಂವೇದನೆಗಳಿಗೂ ಪ್ರತಿಮೆಗಳಿಗೂ ಇಷ್ಟು ವ್ಯತ್ಯಾಸಗಳಿದ್ದರೂ ಕೆಲವೇಳೆ ನಾವು, ಅವನ್ನು ಇವೆಂದೂ, ಇವನ್ನು ಅವೆಂದೂ ತಿಳಿದುಕೊಳ್ಳುವುದುಂಟು. ಮಾಯೆ (Hallucination) ಎಂಬುದು ಸಾಕಷ್ಟು ತೀವ್ರತೆ ಹಾಗೂ ಸ್ಪಷ್ಟತೆಯುಳ್ಳ ಪ್ರತಿಮೆ. ಅದನ್ನು ಮಾಯಾಜಾಲದಲ್ಲಿ ಸಿಕ್ಕಿದ ವ್ಯಕ್ತಿಯು ಒಂದು ಸಂವೇದನೆ ಎಂದೇ ಗ್ರಹಿಸುತ್ತಾನೆ. ನಾವೆಲ್ಲರೂ ಒಂದು ಮೆಲುದನಿಯ ಪ್ರತಿಮೆಯನ್ನೂ ಅದರ ಸಂವೇದನೆಯನ್ನೂ ಪ್ರತ್ಯೇಕಿಸಿ ತಿಳಿದುಕೊಳ್ಳಲಾರದಾದೇವು. ಗಾರ್ಡನರ್ ಮರ್ಫಿ ಮುಂತಾದವರು ನಡೆಸಿದ ಪ್ರಯೋಗಗಳಿಂದ ಸಂವೇದನೆಗಳಿಗೂ ಪ್ರತಿಮೆಗಳಿಗೂ ಇರುವ ವ್ಯತ್ಯಾಸವು ಯಾವಾಗಲೂ ಗುರುತಿಸಬರುವಂಥದಲ್ಲ—ಕೆಲವು ಕಾಲದಲ್ಲಿ ಮಾತ್ರ ಗುರುತಿಸಲು ಶಕ್ಯವಾಗುವಂಥದು.

ಪ್ರತಿಮೆಗಳಲ್ಲಿ ವ್ಯಕ್ತಿಗತ ವ್ಯತ್ಯಾಸಗಳು: ಹಿಂದೆ ಹೇಳಿದಂತೆ ಬಹಳ ಜನರಲ್ಲಿ ಚಾಕ್ಷುಷ ಪ್ರತಿಮೆಗಳು ಹೆಚ್ಚು ಪರಿಪುಷ್ಟವಾಗಿರುತ್ತವೆ; ಅವುಗಳ ನಂತರ ಶ್ರಾವಣ ಪ್ರತಿಮೆಗಳು. ಕೆಲ ಜನರು ಒಂದಲ್ಲ ಒಂದು ವಿಧದ ಪ್ರತಿಮಾ ಸಂಪುಟವನ್ನೇ ಅವಲಂಬಿಸುತ್ತಾರೆ. ವಿಚಾರ ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತ ಹೋದಹಾಗೆ ವಸ್ತು ಅಥವಾ ಸಂಗತಿಗಳ ಪ್ರತಿಮೆಗಳಿಗಿಂತ ಪದ ಅಥವಾ ಸಂಕೇತಗಳ ಪ್ರತಿಮೆಗಳು ಬಹಳ ಮುಖ್ಯವಾಗುತ್ತ ಹೋಗುತ್ತವೆ. ಒಂದು ಕಾಲದಲ್ಲಿ ಈ ವ್ಯತ್ಯಾಸಗಳನ್ನು ಆಧರಿಸಿಕೊಂಡು ಜನರನ್ನು ವರ್ಗೀಕರಿಸಲಾಗಿತ್ತು. ಆ ಪ್ರಕಾರ ಚಾಕ್ಷುಷ ಪ್ರತಿಮೆಗಳನ್ನು ಪ್ರಧಾನವಾಗಿ ಉಳ್ಳವರು ಚಾಕ್ಷುಷರು, ಶ್ರಾವಣಪ್ರತಿಮಾಪ್ರಧಾನರು ಶ್ರಾವಣರು. ಇದೇ ರೀತಿಯಲ್ಲಿ ಘ್ರಾಣರು, ಚಾರ್ಮಣರು ಮತ್ತು ರಾಸನರು ವರ್ಗೀಕೃತರಾದರು. ಆದರೆ ಇತ್ತೀಚಿನ ಸಂಶೋಧನೆಯಿಂದ ಬೇರೆಬೇರೆ ಬಗೆಯ ಹೆಚ್ಚುಕಡಿಮೆ ಸ್ಪಷ್ಟ ಪ್ರತಿಮೆಗಳುಳ್ಳ ಮನುಷ್ಯರು ಒಂದೇ ಒಂದು ಬಗೆಯ ಪ್ರತಿಮೆಗಳನ್ನು ಸಾಕಷ್ಟು ವ್ಯಾಪಕವಾಗಿ ಉಳ್ಳವರಿಗಿಂತ ಅಧಿಕಸಂಖ್ಯರು ಎಂದು ತಿಳಿದುಬಂದಿದೆ.

ಕೆಲವರಿಗೆ ವಿಚಿತ್ರಪ್ರತಿಮೆಗಳೂ ಭಾಸವಾಗುತ್ತವೆ. ಅವುಗಳಲ್ಲಿ ಸಂಖ್ಯಾಕೃತಿಗಳು ಒಂದು ಬಗೆ. ಅವುಗಳಲ್ಲಿ ಸಂಖ್ಯೆಗಳು ಬದಲಾಗದ ನಿಶ್ಚಿತ ರೂಪದ ನಕ್ಷೆಯಲ್ಲಿ ವ್ಯವಸ್ಥಿತವಾಗಿರುತ್ತವೆ. ಅವರು ಒಂದು ಅಂಕೆಯನ್ನು ಯೋಚಿಸಿದ ಕೂಡಲೆ ಈ ನಕ್ಷೆಯು ಅವರ ಮನಸ್ಸಿನ ಕಣ್ಣಿಗೆ ಎದುರಾಗುತ್ತದೆ. ಆಗ ಅವರು ಯುಕ್ತಸ್ಥಳದಲ್ಲಿ ಇರುವ ಆ ಅಂಕೆಯನ್ನು ಮಾನಸಿಕವಾಗಿ ನೋಡುತ್ತಾರೆ. ಗಾಲ್ಟನ್ನನ ಪ್ರಯೋಗದ ಫಲವಾಗಿ ಸಂಖ್ಯಾ-ಆಕೃತಿಗಳು ಕೌಟುಂಬಿಕ ವರ್ಗದಲ್ಲಿರುವುವು ಎಂದು ತಿಳಿದುಬಂದಿದೆ. ಅವುಗಳನ್ನು ಬಗೆಗಳನ್ನಾಗಿ ವಿಂಗಡಿಸಲಾಗಿದೆ. ಬಾಲ್ಯದಲ್ಲಿ ಅಂಕೆಗಳನ್ನು ಕಲಿಯುವ ಯಾವ ವಿಶಿಷ್ಟ ಕ್ರಮದೊಡನೆಯೂ ಅವು ಸಂಬಂಧಿಸಿಲ್ಲ. ಸಂಖ್ಯಾಪ್ರತಿಮೆಗಳನ್ನು ಕಾಣಬಲ್ಲವರನ್ನು ಕಂಡರೆ ಮಿಕ್ಕವರಿಗೆ ಎಷ್ಟು ಆಶ್ಚರ್ಯಕರವಾಗುವುದೋ, ಮಿಕ್ಕವರನ್ನು ಕಂಡರೂ ಅವರಿಗೆ ಅಷ್ಟೇ ಆಶ್ಚರ್ಯವಾಗುವುದು! ಸಂಖ್ಯಾಪ್ರತಿಮೆಗಳನ್ನು ಕಾಣಬಲ್ಲವರು ಮಾನಸಿಕ ಗಣಿತ ಕಾರ್ಯದಲ್ಲಿ ಅಸಾಧಾರಣ ಕೌಶಲವುಳ್ಳವರೋ ಅಲ್ಲವೋ ಎಂಬುದಕ್ಕೆ ಅನಂತರದ ಸಂಶೋಧಕರು ಸಾಕ್ಷಿಗಳನ್ನು ಒದಗಿಸಲಾರದೆ ಹೋದರು.

ಪ್ರತಿಮಾಸಂಪರ್ಕ ಕಾರ್ಯವು ಎರಡನೆಯ ವಿಚಿತ್ರ. ಈ ಪ್ರವೃತ್ತಿಯುಳ್ಳವರು ಒಂದು ಇಂದ್ರಿಯಕ್ಕೆ ಸೇರಿದ ಪ್ರತಿಮೆಗಳನ್ನು ಇನ್ನೊಂದು ಇಂದ್ರಿಯದ ಸಂವೇದನೆ, ಪ್ರತಿಮೆ ಇಲ್ಲವೆ ಕಲ್ಪನೆಗಳೊಡನೆ ಕೂಡಿಸುತ್ತಾರೆ. ಪ್ರತಿಮಾಸಂಪರ್ಕ ಕಾರ್ಯದ ಸರ್ವಸಾಧಾರಣ ಬಗೆ ಎಂದರೆ ರಂಜಿತ ವಿಚಾರಕ್ರಮ. ಈ ಕ್ರಮದಲ್ಲಿ ಬೇರೆ ಬೇರೆ ಬಣ್ಣಗಳ ಪ್ರತಿಮೆಗಳನ್ನು ಬೇರೆ ಬೇರೆ ಶಬ್ದಗಳು, ಜನಗಳು, ತಿಂಗಳುಗಳು ಅಥವಾ ದಿನಗಳೊಂದಿಗೆ ಇಲ್ಲವೆ ವರ್ಣಮಾಲೆಯ ವಿವಿಧ ಅಕ್ಷರಗಳೊಂದಿಗೆ ಸೇರಿಸಲಾಗುತ್ತದೆ.

ಮೂರನೆಯದು ಸನ್ನಿಕೃಷ್ಟಪ್ರತಿಮೆ. ಕೆಲವರು ಕಾಣಬಲ್ಲ ಈ ಪ್ರತಿಮೆಯು ವಿವರಪೂರ್ಣವೂ ವಸ್ತುಸದೃಶವೂ ಸುಸ್ಪಷ್ಟವೂ ಆಗಿರುವುದಲ್ಲದೆ ಹೊರ ಜಗತ್ತಿನಲ್ಲಿ ಅವಕ್ಕೆ ಸ್ಥಳನಿರ್ದೇಶನ ಮಾಡಬಹುದು. ಈ ಬಗೆಯ ಪ್ರತಿಮೆಗಳಿಗೂ ಮಾಯಾಪ್ರತಿಮೆಗಳಿಗೂ ಬಹಳ ವ್ಯತ್ಯಾಸವಿದೆ. ಇವನ್ನು ವಾಸ್ತವಿಕ ಪ್ರತಿಮೆಗಳೆಂದು ಯಾರೂ ತಪ್ಪಾಗಿ ತಿಳಿದುಕೊಳ್ಳುವುದಿಲ್ಲ. ಇವು ಸತತ ಪೀಡಕ ಮತ್ತು ಭಂಗಕಾರಕ ಎನಿಸಬಹುದು. ಇಲ್ಲವೆ ಆಕಸ್ಮಿಕ ನಿಯಂತ್ರಣಾರ್ಹ ಮತ್ತು ವ್ಯಕ್ತಿಯ ಉದ್ದೇಶಗಳಿಗೆ ಅನುಗುಣ ಎನಿಸಲೂ ಬಹುದು. ಸರ್ವಸಾಧಾರಣವಾಗಿ ಸನ್ನಿಕೃಷ್ಟಪ್ರತಿಮೆಯು ತದನುಗುಣವಾದ ಇಂದ್ರಿಯಪ್ರತ್ಯಕ್ಷವಾದ ಮೇಲೆ ಬರುತ್ತದೆ; ಆದರೆ ಎಲ್ಲ ಸನ್ನಿಕೃಷ್ಟಪ್ರತಿಮೆಗಳೂ ಇಂದ್ರಿಯಪ್ರತ್ಯಕ್ಷಗಳ ತತ್‌ಕ್ಷಣದ ಪುನರ್ನಿರ್ಮಿತಿಗಳಲ್ಲ. ಎಷ್ಟೋ ವೇಳೆ ಅವು ಸತತವಾಗಿರುತ್ತವೆ; ಕೆಲ ಕಾಲದ ವರೆಗೆ ಪುನಃಪುನಃ ಉಂಟಾಗುತ್ತಿರುತ್ತವೆ. ಅವುಗಳಲ್ಲಿ ಕೆಲವು ರಚಿತಪ್ರತಿಮೆಗಳ ವರ್ಗಕ್ಕೆ ಸೇರುತ್ತವೆ — ಸ್ಮೃತಿ ಪ್ರತಿಮಾವರ್ಗಕ್ಕಲ್ಲ. ಸನ್ನಿಕೃಷ್ಟಪ್ರತಿಮೆಗಳನ್ನು ಕಾಣುವ ಶಕ್ತಿಯು ಮಕ್ಕಳಲ್ಲಿ ಇದ್ದಷ್ಟು ದೊಡ್ಡವರಲ್ಲಿ ಇಲ್ಲ.

ಪ್ರತಿಮೆಗಳ ಕೃತ್ಯಗಳು: ಸ್ಪಷ್ಟ ವಿಚಾರಕ್ಕೆ ಕಣ್ಣೆದುರಿಗೆ ಇರದ ವಾಸ್ತವಿಕವಾದ ಭೂತ-ಭವಿಷ್ಯತ್ ಇಲ್ಲವೆ ಸಂಭಾವನಾತ್ಮಕ ಸಂಗತಿ ಅಥವಾ ವಸ್ತುಗಳ ಪ್ರತಿಮೆಗಳು ಮುಖ್ಯ ಸಾಮಗ್ರಿಗಳು. ಸಂವೇದನೆಗಳಿಲ್ಲದೆ ಹೇಗೆ ನಾವು ಯಾವುದರ ಇಂದ್ರಿಯಜ್ಞಾನವನ್ನೂ ಪಡೆಯಲಾರೆವೋ ಹಾಗೇ ಯಾವ ಪ್ರತಿಮೆಯೂ ಇಲ್ಲದೆ ಯಾವ ವಸ್ತುವಿನ ಕಲ್ಪನೆಯನ್ನೂ ಮಾಡಿಕೊಳ್ಳಲಾರೆವು; ಸಂವೇದನೆಗೂ ಇಂದ್ರಿಯಜ್ಞಾನಕ್ಕೂ ಯಾವ ಸಂಬಂಧವಿದೆಯೋ

ಪ್ರತಿಮೆಗೂ ಕಲ್ಪನೆಗೂ ಅಂಥದೇ ಸಂಬಂಧವಿದೆ. ಇತ್ತೀಚಿನ ಪ್ರಯೋಗಗಳ ಫಲವಾಗಿ ಕಲ್ಪನೆಗಳು ಪ್ರತಿಮೆಗಳಿಂದ ಭಿನ್ನವಾಗಿದ್ದರೂ ಅವಕ್ಕೆ ಶಬ್ದ ಅಥವಾ ಸಂಕೇತದಂತಹ ಪ್ರತಿಮೆಗಳ ಬೆಂಬಲವಾದರೂ ಇದ್ದೇ ಇರಬೇಕು ಎಂದು ಕಂಡುಬಂದಿದೆ.

ಎರಡನೆಯದಾಗಿ, ಪ್ರತಿಮೆಗಳು ಸ್ಮೃತಿಗೆ ನೆರವಾಗುತ್ತವೆ. ಚಾಕ್ಷುಷ ಮುಂತಾದ ಪ್ರತಿಮೆಯ ಬಲದಿಂದ ನಾವು ಹೆಚ್ಚು ಸುಲಭವಾಗಿ ವಿಷಯ ಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬಹುದು. ವ್ಯಾಲೆಂಟೈನ್ ನಡೆಸಿದ ಒಂದು ಪ್ರಯೋಗದಲ್ಲಿ ಒಂದು ವರ್ಗದ ವಿದ್ಯಾರ್ಥಿಗಳಿಗೆ ಭೂಪಟ ಸಹಿತವಾದ ಮತ್ತು ಭೂಪಟರಹಿತವಾದ ಸಮಪ್ರಮಾಣದ ಎರಡು ಇತಿಹಾಸಪಾಠಗಳನ್ನು ಹೇಳಲಾಯಿತು. ಅನಂತರ ಅವರನ್ನು ಪರೀಕ್ಷೆ ಮಾಡಿದಲ್ಲಿ ಭೂಪಟಸಹಿತವಾಗಿ ಹೇಳಿಕೊಟ್ಟ ಇತಿಹಾಸಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಗಳು ಹೆಚ್ಚು ಸಿಕ್ಕಿದವು. ಇದರಿಂದ ಶಿಕ್ಷಣದಲ್ಲಿ ಚಾಕ್ಷುಷೋಪಕರಣಗಳು ಎಷ್ಟು ಸಹಾಯಕವಾಗುತ್ತವೆ ಎಂಬುದು ತಿಳಿದುಬರುತ್ತದೆ.

ಮೂರನೆಯದಾಗಿ, ಪದಪ್ರತಿಮೆಗಳು ಸೂಕ್ಷ್ಮ ವಿಚಾರಕ್ಕೆ ಬಹಳ ಸಹಾಯ ಮಾಡುತ್ತವೆ. ಪದಗಳ, ಅಂಕೆಗಳ ಮತ್ತು ಇತರ ಸಂಕೇತಗಳ ಪ್ರತಿಮೆಗಳ ನೆರವಿಲ್ಲದೆ ಗಣಿತ ಪ್ರಶ್ನೆಗಳನ್ನು ಎಂದೂ ನಾವು ಬಿಡಿಸಲಾರೆವು. ಪಿಯರನಂಥ ಕೆಲ ಮನಃಶಾಸ್ತ್ರಜ್ಞರು ಸೂಕ್ಷ್ಮ ವಿಚಾರ ಮಾಡುವಲ್ಲಿ ಸಂಕೇತರ ಪ್ರತಿಮೆಗಳು ಪದಪ್ರತಿಮೆಗಳಿಗಿಂತ ಹೆಚ್ಚು ಪ್ರಯೋಜನಕರ ಎನ್ನುತ್ತಾರೆ.

ನಾಲ್ಕನೆಯದಾಗಿ, ಅಪೂರ್ವ ಉಪಕರಣಗಳ ನಿರ್ಮಾಣದಲ್ಲಿ, ಸಮಸ್ಯೆ ಗಳನ್ನು ಬಿಡಿಸುವುದರಲ್ಲಿ ಮತ್ತು ವಾಸ್ತವಿಕ ಅಥವಾ ಸಂಭವವಸ್ತುಗಳ ಮಾನಸಿಕ ಲೆಕ್ಕಾಚಾರದಲ್ಲಿ ಪ್ರತಿಮೆಗಳು ಬಹಳ ಉಪಕಾರವನ್ನು ಮಾಡು ತ್ತವೆ. ತಾನು ಕಟ್ಟಲಿರುವ ಹೊಸ ಕಟ್ಟಡ ಹೇಗಿರಬೇಕೆಂದು ವಾಸ್ತುಶಿಲ್ಪಿ ಯೊಬ್ಬ ವಿಚಾರಮಾಡುವಾಗ ಕೆಟ್ಟುಹೋದ ಯಂತ್ರದ ಯಾವ ಭಾಗ ಕೆಟ್ಟಿದೆ ಎಂಬುದನ್ನು ದುರಸ್ತುಗಾರನು ಊಹಿಸುವಾಗ ಮತ್ತು ಒಬ್ಬ ಹುಡುಗನು ೧೨ ಅಡಿ ತಗ್ಗಿಗೆ ಹಾರಿದರೆ ತನ್ನ ಮಾಂಸಲ ಸಂವೇದನೆ ಎಂಥದಾಗಬಹುದೆಂದು ಕಲ್ಪಿಸುವಾಗ ವಿಚಾರ ಹಾಗೂ ವರ್ತನೆಗಳ ಮಾರ್ಗದರ್ಶಕಗಳನ್ನಾಗಿ ಪ್ರತಿಮೆ ಗಳನ್ನು ಬಳಸುತ್ತಾರೆ.

ಐಜನೆಯದಾಗಿ, ಸಾಹಿತ್ಯ, ಚಿತ್ರ, ಮೂರ್ತಿ ಶಿಲ್ಪ ಮತ್ತು ಇತರ ಕಲೆಗಳನ್ನು ಮೆಚ್ಚುವುದರಲ್ಲಿ ನಮ್ಮ ಪ್ರತಿಮೆಗಳು ಪ್ರವೇಶಿಸುತ್ತವೆ. ನಾವು ಒಂದು ಚಿತ್ರವನ್ನೋ ವಿಗ್ರಹವನ್ನೋ ನೋಡುತ್ತಿರುವಾಗ ನಮ್ಮಲ್ಲಿ ಚಾಕ್ಷುಷ ಸಂವೇದನೆ ಹಾಗೂ ಇಂದ್ರಿಯಪ್ರತ್ಯಕ್ಷಗಳನ್ನಲ್ಲದೆ ಬೇರೆ ಇಂದ್ರಿಯಗಳಿಂದ ಹುಟ್ಟಿದ ಅನೇಕ ತರದ ಪ್ರತಿಮೆಗಳನ್ನು ಮನಸ್ಸಿನಲ್ಲೇ ಅನುಭವಿಸಿದಂತೆ ಭಾಸವಾಗುತ್ತದೆ. ಕೆಲವು ಕವಿಗಳು ಚಾಕ್ಷುಷಪ್ರತಿಮೆಗಳನ್ನೇ ಬಳಸಿದರೆ, ಮತ್ತೆ ಕೆಲವರು ಶ್ರಾವಣಪ್ರತಿಮೆಗಳಿಗೆ ಹೆಚ್ಚು ಶರಣಾಗುತ್ತಾರೆ. ಇದರಿಂದ ಗೊತ್ತಾಗುವುದೇನೆಂದರೆ ಸೂಕ್ಷ್ಮವೂ ಸಾಮಾನ್ಯವೂ ಆದ ಪದಗಳ ಪ್ರಯೋಗಕ್ಕಿಂತ ಸಂದರ್ಭಾನುಸಾರವಾಗಿ ಮಾಡುವ ಸುಸ್ಪಷ್ಟವಾದ ಪ್ರತಿಮೆಗಳ ಪ್ರಯೋಗವು ಮನುಷ್ಯರಲ್ಲಿ ಬಹುಬೇಗ ಭಾವನೋದ್ರೇಕವನ್ನು ಉಂಟು ಮಾಡಿ ಅವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಬಲ್ಲುದು. ಅಂಥ ಪ್ರತಿಮಾ ಪ್ರಯೋಗಗಳನ್ನು ರೂಪಕ, ಉಪಮೆ ಮುಂತಾದ ಅಲಂಕಾರಗಳಲ್ಲಿ ಚೆನ್ನಾಗಿ ಕಾಣಬಹುದು. ಅವು ರಸಿಕನ ಮನಸ್ಸುಬೇಗ ಹಾಗೂ ತೀವ್ರವಾಗಿ ರಸಕಾರ್ಯವನ್ನು ಮಾಡಲು ಹಚ್ಚುವುದು ಅನುಭವಸಿದ್ಧ.

ಅಧ್ಯಾಯ ಏಳು

ಕಲಿಯುವಿಕೆ

ತನ್ನ ಆವರಣದ ಮೇಲೂ ತನ್ನಮೇಲೂ ಪ್ರಭುತ್ವವನ್ನು ಸಂಪಾದಿಸಿಕೊಳ್ಳ ಬೇಕಾದರೆ ವ್ಯಕ್ತಿಯು ಕಲಿಯಬೇಕು, ಜ್ಞಾಪಿಸಿಕೊಳ್ಳಬೇಕು ಮತ್ತು ವಿಚಾರ ಮಾಡಬೇಕು. ಹೊಸ ಪರಿಸ್ಥಿತಿಗಳನ್ನು ವ್ಯಕ್ತಿಯು ಹೇಗೆ ಎದುರಿಸಿ ಅವುಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳುತ್ತಾನೆ, ಹೊಸ ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಳ್ಳುತ್ತಾನೆ, ತನ್ನ ಸಿದ್ಧಿಗಳನ್ನವನು ಹೇಗೆ ಉಳಿಸಿಕೊಳ್ಳು ತ್ತಾನೆ ಮತ್ತು ಅವನ್ನು ಅವನು ಅದೇ ಸನ್ನಿವೇಶವನ್ನು ಮತ್ತೊಮ್ಮೆ ಎದುರಾ ದಾಗ ಇಲ್ಲವೆ ಅಂಥದೇ ಇನ್ನೊಂದು ಸನ್ನಿವೇಶ ಎದುರಾದಾಗ ಹೇಗೆ ಉಪ ಯೋಗಿಸಿಕೊಳ್ಳುತ್ತಾನೆ ಎಂಬುದನ್ನೀಗ ನಾವು ಅಭ್ಯಾಸ ಮಾಡಬೇಕಾಗಿದೆ. ಒಂದು ಸಮಸ್ಯೆಯನ್ನು ವಿಚಾರದಿಂದ ಬಗೆಹರಿಸಿಕೊಂಬುದು ಮನುಷ್ಯನಿಗೆ ವಿಶಿಷ್ಟವಾದದ್ದು. ಕಲಿಯುವುದೂ ನೆನಪಿಟ್ಟುಕೊಳ್ಳುವುದೂ ಮನುಷ್ಯನಿಗೂ ಪ್ರಾಣಿಗೂ ಸಾಧಾರಣ. ಏನಾದರೊಂದನ್ನು ಕಲಿಯುವಾಗ ವ್ಯಕ್ತಿಯು ಸ್ಪಷ್ಟ ವಾಗಿ ಹೊಸದೊಂದು ಸನ್ನಿವೇಶದೊಡನೆ ವ್ಯವಹರಿಸುತ್ತಾನೆ. ಹಾಗಲ್ಲದೆ ಸನ್ನಿವೇಶವು ಸಂಪೂರ್ಣ ಸುಪರಿಚಿತವೇ ಆಗಿದ್ದಲ್ಲಿ ಅವನು ತನ್ನ ಸ್ಮೃತಿಯನ್ನು ಅವಲಂಬಿಸಿದರಷ್ಟೇ ಸಾಕಾದೀತಲ್ಲದೆ ಕಲಿಯಬೇಕಾದದ್ದು ಅಲ್ಲಿ ಏನೂ ಇರದು.

ಕಲಿಯುವಿಕೆಯ ಲಕ್ಷಣ: ತನ್ನ ಪಾಲಿನ ಕೆಲಸವೇನನ್ನೂ ಮಾಡದೆ ವ್ಯಕ್ತಿಯು ಕೇವಲ ಆವರಣ ಬಲದಿಂದ ರೂಪಿಸಲ್ಪಡುತ್ತಾನೆ ಎಂಬುದು ಸುಳ್ಳು. ಅವನು ತಾನು ರೂಪಿಸಲ್ಪಡುವ ಕಾರ್ಯದಲ್ಲಿ ತನಗೆ ದೊರಕುವ ಪ್ರೇರಣೆಗಳಿಗೆ ಸಕ್ರಿಯವಾಗಿ ಅನುಕ್ರಿಯೆಯೆಸಗುವುದರ ಮೂಲಕ ಕಲಿಯುತ್ತಾನೆ— ನಿಷ್ಕ್ರಿಯನಾಗಿ ತನ್ನತ್ತ ಆವರಣವು ಕಳಿಸಿದ ಪ್ರೇರಣೆಗಳಿಗೆ ಅನುಕ್ರಿಯೆ ಯೆಸಗುತ್ತ ಕುಳಿತಿರುವುದಿಲ್ಲ. ಏಕೆಂದರೆ, ಅವನೊಂದು ಜಡ ಯಂತ್ರವಲ್ಲ; ಅಥವಾ ವಶವಿಲ್ಲದೆ ಕ್ಷೇಪಕ್ರಿಯೆಗಳನ್ನು ಮಾತ್ರ ಮಾಡಿ ಬದುಕುವ ಗಿಡಮರ ಗಳಂತಿರುವವನಲ್ಲ. ಕಲಿಯುವಿಕೆಯಲ್ಲಿ ನಾವು ಮಾಡುವ ನರಮಂಡಲ ಹಾಗೂ

ಮಿದುಳುಗಳ ಚಟುವಟಿಕೆಯು ಮಾಂಸಪೇಶಿಗಳಿಗೆ ಶಕ್ತಿ ಕೊಡುತ್ತದೆ; ಮಿದುಳಿನ ನರದ ರವೆಗಳಿಗೂ ಬಹುಶಃ ತ್ರಾಣ ನೀಡುತ್ತದೆ. ಆದರೆ ಕಲಿಯುವುದೆಂಬುದು ಕೇವಲ ಶಕ್ತಿವರ್ಧನ ಎಂಬುದಕ್ಕಿಂತ ಹೆಚ್ಚಿನದು. ಕಲಿತ ಕೆಲಸವೆಂಬುದು ವ್ಯಕ್ತಿ ತನ್ನ ಸಂಗ್ರಹಕ್ಕೆ ಸೇರಿಸಿಕೊಂಡ ಹೊಸದೊಂದು ಅಂಶ. ಕಲಿಯುವುದು ವ್ಯಕ್ತಿಯು ಉಳಿಸಿಕೊಂಡು ಮತ್ತೊಮ್ಮೆ ಬಳಸಿಕೊಂಬಂತಹ ಏನೋ ಹೊಸದೊಂದನ್ನು ಮಾಡುವುದರಲ್ಲಿದೆ. ಈ ಹೊಸದೊಂದು ಎಂಬುದು ಒಂದು ಚಲನೆಗಳ ಕೂಟವಾಗಿರಬಹುದು ಇಲ್ಲವೆ ಹೊಸ ವಸ್ತು ಅಥವಾ ಮುಖವೊಂದನ್ನು ನೋಡಿ ಅನಂತರ ಗುರುತಿಸುವ ಕಾರ್ಯವಾಗಿರಬಹುದು. ಕಲಿಯುವುದೆಂಬುದು ಇಂಥ ಒಂದು ವಿಶೇಷವಾದ ಚಟುವಟಿಕೆ ಎಂದು ಹೇಳಲು ಬರದು; ಆದರೆ ಅದು ಹೊಸದಾಗಿರಬೇಕು—ಇಡಿಯಾಗಿ ಅಥವಾ ಅಂಶತಃ—ಎಂಬುದು ಅನಿವಾರ್ಯ.

ಆದರೆ ಪ್ರತಿಯೊಂದು 'ಹೊಸತೂ' ಕಲಿಯಲ್ಪಡುವುದಿಲ್ಲ. ಒಂದು ಹೊಸ ಸನ್ನಿವೇಶದ ಮೇಲೆ ಪ್ರಭುತ್ವವನ್ನು ಪಡೆಯಲು ಯತ್ನಿಸುವಾಗ ಅನೇಕ ಬಗೆಯ ಕಾರ್ಯಗಳನ್ನು ನೀವು ಮಾಡುವ ಸಂಭವವುಂಟು. ಅವುಗಳಲ್ಲಿ ಎಲ್ಲವೂ ವ್ಯರ್ಥವೆನಿಸಿ ಕೊನೆಗೆ ಯಾವುದೋ ಒಂದು ಬಗೆಯ ಕಾರ್ಯವು ಬಲ ಪಡೆದು ನಿಮ್ಮಿಂದ ಕಲಿಯಲ್ಪಡುತ್ತದೆ. ಅದೇ ಯಶಸ್ವಿ ಕಾರ್ಯ. ಮಿಕ್ಕ ಕಾರ್ಯಗಳನ್ನು ನೀವು ಉಳಿಸಿಕೊಳ್ಳದೆ ಬಿಟ್ಟುಬಿಡುತ್ತೀರಿ. ಯಶಸ್ವಿ ಕಾರ್ಯವು ಬಲ ಪಡೆಯುತ್ತದೆ. ಆದುದರಿಂದ ಕಲಿಯುವಿಕೆಯಲ್ಲಿ ಈ ಬಲವನ್ನು ಪಡೆಯುವ ಅಂಶವು ಮೂಲಭೂತವಾದದ್ದು ಎಂಬುದು ಗಮನಾರ್ಹ.

ಪ್ರಾಣಿಗಳು ಕಲಿಯುವ ಬಗೆ: ಮೇಲ್ಮಟ್ಟದವೆನಿಸಿದ ಮನುಷ್ಯರ ಬೌದ್ಧಿಕ ಪ್ರಕ್ರಿಯೆಗಳಿಂದ ಜಟಿಲವಾಗದೆ, ಹೆಚ್ಚು ಸರಳವಾಗಿ ಉಳಿದಿರುವ ಕಲಿಯುವಿಕೆಯ ಮೂಲಭೂತ ಪ್ರಕ್ರಿಯೆಗಳನ್ನು ನಾವು ಪ್ರಾಣಿಗಳಲ್ಲಿ ಕಾಣಬಹುದು. ಕಲಿಯುವಿಕೆಯ ಬಗ್ಗೆ ತಮಗಾಗುವ ಅಂಥ ಮೂಲಭೂತ ಜ್ಞಾನವು ಮಾನವ ಜೀವನದಲ್ಲಿ ಹೆಚ್ಚು ಪ್ರಯೋಜನಕಾರಿಯಾಗಬಲ್ಲದು ಎಂದು ಭಾವಿಸಿ, ಮನಃಶಾಸ್ತ್ರಜ್ಞರು ಪ್ರಾಣಿಗಳ ಕಲಿಯುವಿಕೆಯಲ್ಲಿ ಅನೇಕ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ. ಪ್ರಾಣಿಗಳನ್ನು ಯೋಜ್ಯಗಳನ್ನಾಗಿ ತೆಗೆದುಕೊಂಡಾಗ ಲಾಯ್ಡ್ ಮಾರ್ಗನ್ನನ ನೀತಿಯನ್ನು ಅನುಸರಿಸಲಾಯಿತು.

ಈ ರೀತಿಯ ಪ್ರಕಾರ ಮಾನಸಮಟ್ಟದಲ್ಲಿ ಕೆಳಗಿರುವ ಯಾವುದಾದರೊಂದು ಪರಿಹಾರಪ್ರಯತ್ನದ ಫಲವೆಂದು ಒಂದು ಕಾರ್ಯವನ್ನು ಅರ್ಥಮಾಡಲು ಬರುವ ಯಾವ ಪ್ರಕರಣದಲ್ಲಿಯೂ ಅದನ್ನು ಮೇಲ್ಮಟ್ಟದ ಮಾನಸಿಕ ಶಕ್ತಿಯ ಫಲವೆಂದು ಯಾರೂ ಅರ್ಥಮಾಡಹೋಗಬಾರದು.

ಲಾಯ್ಡ್ ಮಾರ್ಗನ್ನನ ಹತ್ತಿರ ಒಂದು ನಾಯಿಯಿತ್ತು. ಅದನ್ನವನು ಬೇಲಿ ಹಾಕಿದ ಎದುರಂಗಳದಲ್ಲಿ ಒಮ್ಮೆ ಇಟ್ಟನು. ಆಗ ಅದು ತನ್ನ ವರ್ತನೆಯಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಬೀದಿಗೋಡುವ ಲವಲವಿಕೆಯನ್ನು ತೋರಿಸಿತು. ಅನಂತರ ಅದು ಬೇಲಿಗೂಟಗಳ ನಡುವೆ ತನ್ನ ಮೂಗನ್ನು ಹಾಕಿ ಒತ್ತುತ್ತ ಹೋಯಿತು. ಅಂಥ ಒಂದು ಸ್ಥಳದಲ್ಲಿ ಬೇಲಿಯ ಬಾಗಿಲಿತ್ತು. ಅದನ್ನೊತ್ತಿದ ಕೂಡಲೇ ಅದು ತೆರೆಯಿತು. ಆಗ ನಾಯಿಯು ಹೊರಬಿದ್ದು ಓಡಿಹೋಯಿತು. ಆ ಮೇಲೆ ಅಂಗಳದಲ್ಲಿ ಬಿಟ್ಟಾಗ ಅದು ಬೇಲಿಬಾಗಿಲಿನ ಹತ್ತಿರವಲ್ಲೇ ಮೂಗುಹಾಕಿ ಒತ್ತಲಾರಂಭಿಸಿ, ಬಾಗಿಲು ತೆರೆಯುವುದನ್ನು ಕಲಿತು, ಅಂತ್ಯದಲ್ಲಿ ಸೀದಾ ಒಮ್ಮೆಲೇ ಬಾಗಿಲೆದುರು ಹೋಗಿ ಅದನ್ನು ಮೂಗಿನಿಂದ ಒತ್ತಿ ಎತ್ತಿ ತೆರೆಯಲು ಕಲಿತುಬಿಟ್ಟಿತ್ತು. ನಾಯಿಯ ವರ್ತನೆಯಲ್ಲಿ ವಿಚಾರದ ಲಕ್ಷಣವಿಲ್ಲ. ವಿಚಾರಜನ್ಯ ಕಾರ್ಯದಲ್ಲಿ ಚೋದನಾತ್ಮಕತೆಗಿಂತ ಬುದ್ಧಿಪೂರ್ವಕವಾಗಿ ಮಾಡುವ ಅಂಶ ಹೆಚ್ಚಾಗಿರುತ್ತದೆ. ಅಂಥ ಲಕ್ಷಣ ನಾಯಿಯ ಆ ವರ್ತನೆಯಲ್ಲಿ ಇದ್ದಂತೆ ತೋರಲಿಲ್ಲ. ಯಾವಾಗಲೂ ಹೊರಹೋಗಬೇಕೆಂದು ಪ್ರಯತ್ನಿಸುತ್ತ ತನ್ನ ಚಟುವಟಿಕೆಯನ್ನು ಬದಲಾಯಿಸುತ್ತ ಹೋಗುವ ರೀತಿಯಿಂದ ಅದು ಬಂದ ಸಂಕಟದ ಪರಿಹಾರಕ್ಕೆ ಪ್ರಯತ್ನ ನಡೆಸಿತ್ತು. ಇಂಥ ಪರಿಹಾರ ಪ್ರಯತ್ನದ ಬಗೆಯನ್ನು "ಪ್ರಯತ್ನ ಮತ್ತು ತಪ್ಪು" ಎಂದು ಕರೆಯಬಹುದು. ಅದರ ಮುಖ್ಯ ಅಂಶಗಳು ನಾಲ್ಕು: ಒಂದು ಗುರಿಯನ್ನು ಮುಟ್ಟಲು ಮೊದಲು ಒಂದು ಸನ್ನಿವೇಶ ತಯಾರಾಗಬೇಕು; ಆಗ ಗುರಿಯನ್ನು ಮುಟ್ಟುವ ಯಾವ ಸ್ಪಷ್ಟ ಮಾರ್ಗವೂ ತೋರದಂತಿರಬೇಕು; ಬಳಿಕ ಪರಿಸ್ಥಿತಿಯ ಪರಿಶೋಧ: ಶಕ್ಯಮಾರ್ಗಗಳನ್ನು ಹುಡುಕಿ, ಆ ಮೂಲಕ ಪ್ರಯತ್ನಿಸಿ, ಆ ಈ ಮಾರ್ಗದಲ್ಲಿ ಶಕ್ಯವಾಗದೆಂದು ಕಂಡುಬಂದಾಗ ಹಿಂದಕ್ಕೆ ಸರಿದು ಮತ್ತೊಂದು ಮಾರ್ಗ ಹಿಡಿದು ಪ್ರಯತ್ನಿಸತೊಡಗಬೇಕು. ಅಂತ್ಯದಲ್ಲಿ ಸರಿಯಾದ ಮಾರ್ಗವನ್ನು ಕಂಡುಕೊಂಡು ಗುರಿಯನ್ನು ಮುಟ್ಟಬೇಕು.

ಯಾವ ಕಲಿಯುವಿಕೆಯೂ ಇಲ್ಲದೆ ಈ ಸಂಗತಿಗಳೆಲ್ಲ ನಡೆಯಬಹುದು. ಆದರೆ ಪ್ರತಿದಿನವೂ ತೋರುತ್ತಹೋದ ಸುಧಾರಣೆಯು ಅಲ್ಲಿ ಕಲಿಯುವಿಕೆ ನಡೆಯಿತೆಂಬುದಕ್ಕೆ ಸಾಕ್ಷಿ. ಮೇಲೆ ಹೇಳಿದ ಪ್ರಯತ್ನ ಮತ್ತು ತಪ್ಪುಗಳ ಪದ್ಧತಿಯಿಂದ ನಾಯಿಯು 'ಎಲ್ಲಿ ಕೆಲಸ ನಡೆಸಿದರೆ ಕಾರ್ಯಸಿದ್ಧಿಯಾಗುವುದು' ಎಂಬ ಅಂಶವನ್ನು ಕಲಿಯಿತು. ಮೊದಲು ಅದು ಹೆಚ್ಚು ಕಡಿಮೆ ಅಂದಾಜು ಕಟ್ಟಿ ಎಲ್ಲಿ ಕೆಲಸಮಾಡಬೇಕೆಂಬುದನ್ನು ಕಲಿತು, ಅನಂತರ ಸರಿಯಾಗಿ ಎಲ್ಲಿ ಮಾಡಬೇಕೆಂಬುದನ್ನು ಕಲಿಯಿತು. ಇದನ್ನು "ಸ್ಥಳದ ಕಲಿಯುವಿಕೆ" ಎನ್ನಬಹುದು. ಕೊನೆಯಲ್ಲಿ ಬಾಗಿಲು ತೆರೆಯುವುದು ಹೇಗೆ ಎಂಬುದನ್ನು ಕಲಿಯಿತು. ಇದನ್ನು "ಸಾಧನದ ಕಲಿಯುವಿಕೆ" ಎಂದು ಹೇಳಬಹುದು. ಲಾಯಡ್ ಮಾರ್ಗನ್ನನ ನೀತಿಯ ಪ್ರಕಾರ ಕೆಲ ಮಾಂಸಖಂಡಗಳ ಚಟುವಟಿಕೆಗಳನ್ನು ಮಾಡುವುದರ ಮೂಲಕ ಪ್ರಾಣಿಯು ಅತ್ಯಂತ ಕೆಳಮಟ್ಟದಲ್ಲಿ ಯಾವುದಾದರೊಂದು ಇಂದ್ರಿಯಪ್ರೇರಣೆಗೆ ಅನುಕ್ರಿಯೆದೋರಲು ಕಲಿಯುತ್ತದೆ. ಅದಕ್ಕಿಂತ ಸ್ವಲ್ಪ ಮೇಲ್ಮಟ್ಟದಲ್ಲಿ ಅದು ಸ್ಥಳವನ್ನು ಹುಡುಕುವುದರ ಮೂಲಕ ಸ್ಥಳಜ್ಞಾನವನ್ನು ಪಡೆಯುವುದು. ಆ ಬಳಿಕ ಒಂದು ವಸ್ತುವನ್ನು ಸರಿಯಾಗಿ ಬಳಸುವುದರ ಮೂಲಕ ವಸ್ತುಜ್ಞಾನವನ್ನು ಹೊಂದುತ್ತದೆ. ಪ್ರಾಣಿಯ ಕರ್ಮೇಂದ್ರಿಯದ ವರ್ತನೆಯು ಈ ಲಬ್ಧಜ್ಞಾನದಿಂದ ನಿಯಂತ್ರಿತವಾಗುವುದಲ್ಲಪೆ, ಕೇವಲ ನೇರವಾಗಿ ಲಬ್ಧಪ್ರೇರಣೆಯಿಂದ ಅಲ್ಲ. ಪ್ರಾಣಿಯು ಸರಿಯಾಗಿ "ಏನನ್ನು" ಮತ್ತು "ಹೇಗೆ" ಕಲಿಯುತ್ತದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಮನಃಶಾಸ್ತ್ರಜ್ಞರು ಈ ಪ್ರಕಾರ ಸ್ಥಳ ಹಾಗೂ ಸಾಧನಗಳ ಜ್ಞಾನಕ್ಕೆ ಸಂಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ.

ಸ್ಥಳಜ್ಞಾನ ಪಡೆಯುವುದು: ಕೆಲ ಅಕಶೇರುಕಗಳನ್ನು ಬಿಟ್ಟು ಮಿಕ್ಕ ಎಲ್ಲ ಪ್ರಾಣಿಗಳೂ ಸ್ಥಳಗಳನ್ನು ಹುಡುಕಿ ಬಹಳ ವ್ಯರ್ಥ ಪ್ರಯತ್ನ ಮಾಡದೆ ಅಲ್ಲಿ ಹೋಗುವುದನ್ನು ಕಲಿಯುತ್ತವೆ.

ಪ್ರಯೋಗಶಾಲೆಗಳಲ್ಲಿ ಬಿಳಿ ಇಲಿಯನ್ನು ಸಾಕಲಾಗುವುದರಿಂದ ಅದರವಂಶ, ವಯಸ್ಸು ಮತ್ತು ಹಿಂದಿನ ಅನುಭವಗಳು ಮೊದಲೇ ತಿಳಿದಿರುತ್ತವೆ. ಆದುದರಿಂದ ಮನುಷ್ಯರೂಪದ ಯೋಜ್ಯರ ಮೇಲೆ ಮಾಡುವ ಪ್ರಯೋಗಗಳಲ್ಲಿಗಿಂತ ಹೆಚ್ಚು ಸಮರ್ಪಕವಾಗಿ ಈ ಮುಖ್ಯ ಪರಿವರ್ತಿ-ಕಾರಕಗಳನ್ನು ನಿಯಂತ್ರಣದಲ್ಲಿ

ಇಟ್ಟುಕೊಳ್ಳಲು ಸಾಧ್ಯವಾಗುವುದು.

ನೈಷೇಧಿಕ ಹೊಂದಿಕೆ: ಒಂದು ಇಲಿಯನ್ನು ಒಂದು ಹೊಸ ಸ್ಥಳದಲ್ಲಿ ಅಂದರೆ ಒಂದು ಪೆಟ್ಟಿಗೆಯಲ್ಲಿ ಇಟ್ಟಾಗ ಅದು ಭಯ ಅಥವಾ ಜಾಗರೂಕತೆಯ ಚಿಹ್ನೆಗಳನ್ನು ತೋರಿಸುತ್ತದೆ. ಪೆಟ್ಟಿಗೆಯಿಂದ ತಪ್ಪಿಸಿಕೊಂಡು ಹೋಗಲು ಅದು ವಿಲಿವಿಲಿ ಒದ್ದಾಡಬಹುದು ಇಲ್ಲವೆ ಒಂದು ಮೂಲೆಯಲ್ಲಿ ಹೋಗಿ ಹೆದರಿ ಕೂತು ಬಿಡಬಹುದು. ಸ್ವಲ್ಪ ಕಾಲಾನಂತರ ಅದರ ಭಾವನಾ ಕ್ಷೋಭೆಯು ಇಳಿದ ಮೇಲೆ ಅದು ತಪ್ಪಿಸಿಕೊಂಡು ಹೋಗಲು ಅನುಕೂಲವಾದ ಸ್ಥಳವನ್ನು ಹುಡುಕಲಾರಂಭಿಸುತ್ತದೆ. ಆ ದಿನ ಅದನ್ನು ಪೆಟ್ಟಿಗೆಯಿಂದ ಹೊರದೆಗೆದು ಮರುದಿನ ಮತ್ತೆ ಅದನ್ನು ಅದರಲ್ಲೇ ಇಟ್ಟಾಗ ಅದರ ವರ್ತನೆ ಅದೇನೋ ಹೊಸದನ್ನು ಕಲಿಯಿತೆಂಬುದನ್ನು ತೋರಿಸುತ್ತದೆ. ಏಕೆಂದರೆ, ಅದು ಹಿಂದಿನ ದಿನದಷ್ಟು ಬೆದರುವುದಿಲ್ಲ ಮತ್ತು ಅದು ಪೆಟ್ಟಿಗೆಯ ಒಂದು ಮೂಲೆಯಿಂದ ಇನ್ನೊಂದು ಮಾಲೆಗೆ ಸರಾಗವಾಗಿ ಓಡಾಡುತ್ತ, ಅತ್ತಿತ್ತ ಸಿಕ್ಕಿದ್ದನ್ನು ಮೂಸುತ್ತ, ಸಾಗುತ್ತದೆ. ಪೆಟ್ಟಿಗೆಯಲ್ಲಿ ತಿಂಡಿ-ತೀರ್ಥ ಮುಂತಾದ ಇಲಿಗೆ ಬೇಕಾದ ಯಾವ ಸಾಮಾನೂ ಇಲ್ಲದಿದ್ದಲ್ಲಿ ಅದರ ಹುಡುಕಾಟದ ಚಟುವಟಿಕೆ ಸ್ವಲ್ಪ ಕಾಲದಲ್ಲೇ ನಿಂತು ಹೋಗುತ್ತದೆ. ಮಾರನೆಯ ದಿನ ಅದನ್ನು ಅದೇ ಪೆಟ್ಟಿಗೆಯಲ್ಲಿ ಇಟ್ಟಾಗ ಅದರ ಚಟುವಟಿಕೆ ಮತ್ತಷ್ಟು ಕಡಿಮೆಯಾಗುತ್ತದೆ—ಪುನಃ ಆ ಇಲಿಯ ಸುಧಾರಿತ ವರ್ತನೆಯು ಅದು ಮತ್ತೇನೋ ಹೊಸದನ್ನು ಕಲಿತಿದೆ ಎಂಬುದನ್ನು ತೋರಿಸುತ್ತದೆ.

ಇಲ್ಲಿಯ ವರೆಗಿನ ಕಲಿಯುವಿಕೆಗೆ "ನೈಷೇಧಿಕ ಹೊಂದಿಕೆ" ಎನ್ನುತ್ತಾರೆ. ಇಲ್ಲಿ ಇಲಿಯು ಪೆಟ್ಟಿಗೆಯೊಳಗಿರುವ ಆವರಣಕ್ಕೆ ಹೊಂದಿಕೊಂಡಿತು. ಈ ಹೊಂದಿಕೆಯಲ್ಲಿ ಕೆಲ ಅನುಕ್ರಿಯೆಗಳನ್ನು ಬಿಟ್ಟು ಬಿಡುವುದು ಅಡಗಿದೆ. ಮೊದಲು ಭಯಾನುಕ್ರಿಯೆಗಳು ಬಿಟ್ಟು ಹೋದವು. ಅನಂತರ ಶೋಧಾನುಕ್ರಿಯೆಗಳು ಹೊರಟು ಹೋದವು. ಇಲಿಗೆ ಪೆಟ್ಟಿಗೆಯಲ್ಲಿ ಭಯಾನುಕ್ರಿಯೆಯನ್ನು ಬೆಂಬಲಿಸುವ ಯಾವ ಸನ್ನಿವೇಶವೂ ದೊರಕಲಿಲ್ಲ. ಒಳಗಿನ ಜಾಗವನ್ನು ಚೆನ್ನಾಗಿ ಪರಿಶೀಲಿಸಿದ ನಂತರ ಶೋಧಾನುಕ್ರಿಯೆಗಳು ನಿಂತು ಹೋದವು.

ನೈಷೇಧಿಕ ಹೊಂದಿಕೆ ಎಂಬುದು ಒಂದು ಮೂಲಭೂತವಾದ ಕಲಿಯುವಿಕೆ.

ಪಳಗಿಸಲಾಗುವ ಎಲ್ಲ ಪ್ರಾಣಿಗಳಲ್ಲಿಯೂ ಈ ವಿಧವಾದ ಕಲಿಯುವಿಕೆಯನ್ನು ಕಾಣಬಹುದು. ಸರ್ಕಸ್ಸಿಗೆ ಹೊಸದಾಗಿ ಪಳಗಿಸಲು ತೆಗೆದುಕೊಂಡ, ಹುಲಿ, ಚಿರತೆ, ಆನೆ, ಸಿಂಹ ಮುಂತಾದ ಪ್ರಾಣಿಗಳು ಹೇಗೆ ಕ್ರಮೇಣ ತಮ್ಮ ಭಯವನ್ನು ಕಳೆದುಕೊಳ್ಳುತ್ತ ಅಲ್ಲಿಯ ಆವರಣಕ್ಕೆ ಹೊಂದಿಕೊಂಡು ವರ್ತಿಸುವುವು ಎಂಬುದು ಮೇಲಿನ ಮಾತಿಗೆ ದೃಷ್ಟಾಂತ. ತಪ್ಪಿಸಿಕೊಂಡು ಹೋಗುವ ಇಲ್ಲವೆ ಎದುರು ಬೀಳುವ ಉಗ್ರಪ್ರತಿಕ್ರಿಯೆಯನ್ನು ತೋರಿದ ಸನ್ನಿವೇಶದಲ್ಲಿ ಸಮಾಧಾನದಿಂದ ವರ್ತಿಸುವುದನ್ನು ಕಲಿಸುವುದೇ ಪಳಗಿಸುವ ಕಾರ್ಯ. ಮನುಷ್ಯನಾದರೂ ಮೊದಮೊದಲು ತನ್ನಲ್ಲಿ ಭಯ ಇಲ್ಲವೆ ಅರಕ್ಷಿತತೆಯ ಭಾವನೆಯನ್ನು ಹುಟ್ಟಿಸಿದ ಸನ್ನಿವೇಶಕ್ಕೆ ನೈಷೇಧಿಕವಾಗಿ ಹೊಂದಿಕೊಳ್ಳುತ್ತಾನೆ— ಅವನ ಭಯಾನುಕ್ರಿಯೆಗಳು ಹೊಂದಿಕೊಂಡು ಹೋಗುತ್ತವೆ. ಅವನ ಕೋಪಾನುಕ್ರಿಯೆಗಳಾದರೂ ಹಾಗೇ: ಫಕ್ಕನೆ ಅವನ ಲಕ್ಷ್ಯವನ್ನು ಸೆಳೆದ ಒಂದು ಸದ್ದು ಪದೇಪದೇ ಉಂಟಾದಾಗ ಅವನ ಸಂಪೂರ್ಣ ಅಲಕ್ಷ್ಯಕ್ಕೆ ಗುರಿಯಾಗುವುದು ಒಂದು ನಿದರ್ಶನ. ನೈಷೇಧಿಕ ಹೊಂದಿಕೆಯು ವ್ಯರ್ಥಾನುಕ್ರಿಯೆಗಳನ್ನು ಕಳೆದುಬಿಡುತ್ತದೆ; ಕೊಟ್ಟ ಆವರಣದಲ್ಲಿರುವ ಮುಖ್ಯವಾದ ವಸ್ತುಗಳೊಡನೆ ವ್ಯವಹರಿಸಲು ಅವನನ್ನು ಸ್ವತಂತ್ರಗೊಳಿಸುತ್ತದೆ. ಅದು ಅವನ ಸನ್ನಿವೇಶದ ಒಂದು ಭಾಗವೇ ಆಗುತ್ತದೆ.

ಗಲಿಬಿಲಿ ಪೆಟ್ಟಿಗೆಯಲ್ಲಿ ಇರುವ ಇಲಿ: ಗಲಿಬಿಲಿ ಪೆಟ್ಟಿಗೆಯಲ್ಲಿ ನಡುನಡುವೆ ಗೋಡೆಗಳಿರುತ್ತವೆ. ಆ ಗೋಡೆಗಳಲ್ಲಿ ಅನೇಕ ಇಕ್ಕಟ್ಟಾದ ಮಾರ್ಗಗಳಿರುತ್ತವೆ. ಅವುಗಳೊಟ್ಟಿಗೆ ತಪ್ಪುದಾರಿಗಳಿರುತ್ತವೆ. ಅವುಗಳಲ್ಲಿ ಆಹಾರದ ಪೆಟ್ಟಿಗೆಗೆ ಒಯ್ದು ಮುಟ್ಟಿಸುವ ಒಂದು ವಕ್ರವಾದ ರಾಜಮಾರ್ಗವೂ ಇರುತ್ತದೆ. ಅದರಲ್ಲಿ ಇಟ್ಟ ಇಲಿಗೆ ಬಹಳ ದೂರದಲ್ಲಿ ಇಟ್ಟಿರುವ ಆಹಾರದ ಪೆಟ್ಟಿಗೆಯು ಕಾಣಿಸುವುದಿಲ್ಲ. ಮೊಟ್ಟಮೊದಲು ಪೆಟ್ಟಿಗೆಯಲ್ಲಿ ಇರುವ ಇಲಿಗೆ ನಿರ್ದಿಷ್ಟವಾದ ಯಾವ ಗುರಿಯೂ ಇರುವುದಿಲ್ಲ. ಆದರೆ ಅದರ ವಿವಿಧ ದ್ವಾರಗಳಲ್ಲಿ ಸುತ್ತಾಡುತ್ತ, ಸಿಕ್ಕಸಿಕ್ಕಲ್ಲಿ ಮೂಸುತ್ತ, ಇಲಿಯು ಆಹಾರವನ್ನು ಹುಡುಕಲು ಆರಂಭಿಸುತ್ತದೆ. ಹೀಗೆ ಸುತ್ತಾಡುತ್ತ ಅದು ಆಹಾರದ ಪೆಟ್ಟಿಗೆಯನ್ನು ಮುಟ್ಟಿ ಅದರಲ್ಲಿರುವ ಆಹಾರವನ್ನು ತಿಂದುಬಿಡುತ್ತದೆ. ಅದನ್ನು ಮತ್ತೆ ಮೊದಲಿನ ಜಾಗಕ್ಕೆ ತಂದು ಬಿಟ್ಟರೆ ತಾನು ಆಗಲೇ ಏನನ್ನೋ ಕಲಿತಿದ್ದೇನೆ ಎಂಬುದನ್ನು ತೋರಿಸುತ್ತದೆ.

ಹೇಗೆಂದರೆ, ಈಗ ಅದರ ವರ್ತನೆಯು ಮೊದಲಿನಷ್ಟು ಸಾವಕಾಶವಾಗಿರದೆ, ತಪ್ಪುದಾರಿಗಳಲ್ಲಿ ಹೆಚ್ಚಾಗಿ ಹೋಗದೆ, ಬೇಗನೆ ಆಹಾರದ ಪೆಟ್ಟಿಗೆಯನ್ನು ಮುಟ್ಟುವ ರೂಪದಲ್ಲಿ ಇರುತ್ತದೆ. ಈಗ ಅದಕ್ಕೆ ಒಂದು ನಿರ್ದಿಷ್ಟ ಗುರಿ ಇದೆ. ಅದಕ್ಕೆ ಇದೇ ರೀತಿಯಲ್ಲಿ ತರಬೇತನ್ನು ಕೊಡುತ್ತ ಹೋದರೆ, ಕ್ರಮೇಣ ಅದು ತಪ್ಪುದಾರಿಗಳಲ್ಲಿ ಹೋಗುವುದು ಕಡಿಮೆ ಆಗುತ್ತದೆ; ಅನಂತರ ತಪ್ಪುದಾರಿಯು ಎದುರು ಹೋಗಿ ನಿಂತು ಅಲ್ಲಿಂದ ಅಡ್ಡ ತಿರುಗುತ್ತದೆ; ಕೊನೆಯಲ್ಲಿ ಅದು ತಲೆಯನ್ನು ಅತ್ತಿತ್ತ ತಿರುಗಿಸದೆ ನೇರವಾಗಿ ಆಹಾರದ ಪೆಟ್ಟಿಗೆಯಕಡೆ ಹೋಗುತ್ತದೆ. ಈ ಪ್ರಕರಣದಲ್ಲಿ ಇಲಿಯು ನಿಶ್ಚಿತವಾದ ಚಲನಸಂತಾನವನ್ನು ಕಲಿಯಿತು. ಕಲಿಯುವಿಕೆಯ ಈ ಸೂತ್ರವನ್ನು ಮಾಲಾಕ್ಷೇಪ ಸಿದ್ಧಾಂತ (Chain Reflex Theory) ಎಂದು ಹೇಳುತ್ತಾರೆ. ಮೊಟ್ಟಮೊದಲು ಇಲಿಯು ವಿವಿಧವಾಗಿ ಚಲಿಸಿತು. ತಪ್ಪುದಾರಿಗಳನ್ನು ಹುಡುಕುವುದರಲ್ಲಿ ಮಾಡಿದಂಥ ಅದರ ಎಷ್ಟೋ ಚಲನವಲನಗಳು ಅನವಶ್ಯಕ. ಈ ವ್ಯರ್ಥ ಚಲನಗಳನ್ನು ಕ್ರಮೇಣ ಬಿಟ್ಟುಕೊಟ್ಟನಂತರ ಉಳಿಯುವುದು ಒಂದು ನಿಯತವಾದ ಚಲನಸಂತಾನ. ಈ ಚಲನಸಂತಾನವನ್ನು ಅದು ಪೆಟ್ಟಿಗೆಯ ಉತ್ತರೋತ್ತರ ಭಾಗಗಳಿಂದ ಬಂದ ನಿಯತವಾದ ಪ್ರೇರಣಾಸಂತಾನಕ್ಕೆ ಅನುಕ್ರಿಯೆಯಾಗಿ ಮಾಡಿತು. ಈ ಸಿದ್ಧಾಂತದ ಯೋಗ್ಯತೆ ಅದರ ಸರಳತೆಯಲ್ಲಿ ಇದೆ. ಆದರೆ ಗಲಿಬಿಲಿ ಪೆಟ್ಟಿಗೆಯಲ್ಲಿ ನಡೆಯುವ ಇಲಿಯ ಚಲನವಲನಗಳನ್ನು ಆಧರಿಸಿದ ಈ ಸಿದ್ಧಾಂತವು ಹೇಳುವಷ್ಟು ಯಾಂತ್ರಿಕವಲ್ಲ ಎಂದು ಇತರ ಪ್ರಯೋಗಗಳು ಸಿದ್ಧಮಾಡಿಕೊಟ್ಟಿವೆ. ಅಂಥ ಪ್ರಯೋಗಗಳಲ್ಲಿ ಈ ಕೆಳಗಿನದು ಬಹಳ ಮುಖ್ಯವಾದದ್ದು:

ಒಂದು ಗಲಿಬಿಲಿ ಪೆಟ್ಟಿಗೆಯನ್ನು ಹೊಸದಾಗಿ ನಿರ್ಮಿಸಲಾಯಿತು. ಅದರಲ್ಲಿ ಬೇಕಾದ ಮಟ್ಟದ ವರೆಗೆ ನೀರನ್ನು ತುಂಬಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಸ್ವಲ್ಪ ಪ್ರಮಾಣದ ನೀರಿನಲ್ಲಿ ನಡೆದುಕೊಂಡು ಹೋಗಿ, ಆಹಾರದ ಪೆಟ್ಟಿಗೆಗೆ ಒಯ್ಯುವ ಮುಟ್ಟಿಸುವ ಸರಿಯಾದ ಮಾರ್ಗವನ್ನು ಅನುಸರಿಸಲು ಕಲಿತ ಇಲಿಗಳು — ನೀರು ಆಳವಾಗಿ, ಅದರಲ್ಲಿ ಈಜಿಕೊಂಡು ಹೋಗಬೇಕಾದ ಪ್ರಸಂಗ ಒದಗಿದಾಗಲೂ ಅದೇ ಮಾರ್ಗವನ್ನು ಹಿಡಿದು ಆಹಾರದ ಪೆಟ್ಟಿಗೆಯನ್ನು ಮುಟ್ಟಿದವು. ಇದೇ ರೀತಿಯಲ್ಲಿ ಮೊದಲು ಈಜಿಕೊಂಡು ಹೋಗಿ ಆಹಾರದ ಪೆಟ್ಟಿಗೆಯನ್ನು ಮುಟ್ಟಿದ ಇಲಿಗಳು ಅದೇ ಮಾರ್ಗವನ್ನು ಅನುಸರಿಸಿ


ಸ್ವಲ್ಪ ಪ್ರಮಾಣದ ನೀರಿನಲ್ಲಿ ನಡೆಯುತ್ತ ಹೋಗಿ, ಅದನ್ನು ಮುಟ್ಟಲು ಶಕ್ತವಾದವು. ನಡಿಗೆಗೆ ಸಂಬಂಧಿಸಿದ ಚಲನಸಂತಾನವನ್ನು ಆಳವಾದ ನೀರಿನಲ್ಲಿ ಮಾಡಲು ಬರದು. ಹಾಗೆಯೇ ಈಜುವುದಕ್ಕೆ ಸಂಬಂಧಿಸಿದ ಚಲನಸಂತಾನವನ್ನು ಸ್ವಲ್ಪ ಪ್ರಮಾಣದ ನೀರಿನಲ್ಲಿ ಮಾಡಲು ಬರದು. ಆದುದರಿಂದ ಇಲಿಗಳು ಒಂದು ಪರಿಸ್ಥಿತಿಯಿಂದ ಇನ್ನೊಂದು ಪರಿಸ್ಥಿತಿಗೆ ಬದಲಾಯಿಸುವಾಗ ಕಲಿತದ್ದು ಕೇವಲ ಒಂದು ಯಾಂತ್ರಿಕ ಚಲನಸಂತಾನವನ್ನಲ್ಲ. ಅವು ಆಹಾರದ ಪೆಟ್ಟಿಗೆಗೆ ಹೋಗುವ ಸರಿಯಾದ ದಾರಿಯನ್ನು ಕಲಿತವು. ಒಂದು ಕಾಲನ್ನು ಮುರಿದುಕೊಂಡ ನಾಯಿಯು ತನ್ನ ಮೂರು ಕಾಲುಗಳಿಂದ ನಡೆಯುವಂತಾದಾಗಲೂ ಅದಕ್ಕೆ ಮನೆಗೆ ಹೋಗುವ ದಾರಿ ಗೊತ್ತಿರುತ್ತದೆ ಎಂಬ ಅಂಶವು ಮೇಲಿನ ಪ್ರಯೋಗಕ್ಕೆ ಸಮಾನವಾದದ್ದು:

ಆದರೆ ಈ "ನಿಶ್ಚಿತ ಮಾರ್ಗ ಸಿದ್ಧಾಂತವು" (The Fixed Path Theory) ಸಾಲದು. ಆ ಪ್ರಾಣಿ ಕಲಿಯುವುದು ಗಲಿಬಿಲಿ ಪೆಟ್ಟಿಗೆಯ ಮೂಲಕ ಹೋಗುವ ಒಂದು ಮಾರ್ಗವನ್ನು ಮಾತ್ರವಲ್ಲ; ಒಂದು ಸರಳವೂ ಚಚ್ಚೌಕವೂ ಆದ ಅಂಗಳದ ಒಂದು ನಿಶ್ಚಿತವಾದ ಮೂಲೆಯಲ್ಲಿ ಆಹಾರದ ಪೆಟ್ಟಿಗೆಯನ್ನು ಇಟ್ಟು, ಒಂದು ಇಲಿಯನ್ನು ಪದೇ ಪದೇ ಅದರಲ್ಲಿ ಬಿಡಿರಿ. ಅಂಗಳದ ಬಾಗಿಲಿನಿಂದ ಆಹಾರದ ಪೆಟ್ಟಿಗೆ ಇದ್ದಲ್ಲಿಗೆ ಬೇಗನೆ ಹೋಗುವುದನ್ನು ಅದು ಕಲಿತ ನಂತರ, ಅಂಗಳದ ನಡುವೆ ಸ್ವಲ್ಪ ಎತ್ತರದ ಅಡ್ಡ ಗೋಡೆಯನ್ನು ನಿರ್ಮಿಸಿರಿ. ಆಗಲೂ ಇಲಿಯು ಅಗತ್ಯವಾದ ಅಡ್ಡತಿರುಗಾಟಗಳನ್ನು ಮಾಡಿ ಆಹಾರದ ಪೆಟ್ಟಿಗೆಯನ್ನು ಹೆಚ್ಚು ತೊಂದರೆ ಇಲ್ಲದೆ ಮುಟ್ಟುತ್ತದೆ. ಇದರಿಂದ ಗುರಿಯನ್ನು ಮುಟ್ಟುವುದು ಮುಖ್ಯವಲ್ಲದೆ, ಇಂಥ ಒಂದು ಬಗೆಯ ಚಲನವನ್ನೇ ಮಾಡಬೇಕೆಂಬುದು ಮುಖ್ಯವಲ್ಲ ಎಂಬುದು ಗೊತ್ತಾಗುತ್ತದೆ.

ಇಲಿಯು ಗಲಿಬಿಲಿ ಪೆಟ್ಟಿಗೆಯಲ್ಲಿ ಇಟ್ಟಾಗ ಅದರ ಅಡ್ಡಗೋಡೆ, ಮೂಲೆ, ತಪ್ಪುದಾರಿ, ಸರಿ ದಾರಿಗಳನ್ನೆಲ್ಲ ಶೋಧಿಸಿ ಅವನ್ನು ಇಡಿ ಪೆಟ್ಟಿಗೆಯಲ್ಲಿ ಸ್ಥಾನಾನುಗುಣವಾಗಿ ಗೊತ್ತುಮಾಡಿಕೊಳ್ಳುತ್ತದೆ. ಅದು ಆಹಾರದ ಪೆಟ್ಟಿಗೆಯನ್ನು ಹುಡುಕಿ ಹೆಚ್ಚು ಕಡಿಮೆ ನಿಷ್ಕೃಷ್ಟವಾಗಿ ಅದರ ಸ್ಥಳವನ್ನು ಗೊತ್ತುಮಾಡಿಕೊಳ್ಳುತ್ತದೆ. ಈ ಸಂಗತಿಗಳನ್ನು ಅನುಭವಕ್ಕೆ ತಂದುಕೊಂಡು ಅವುಗಳಲ್ಲಿ ಕೆಲವನ್ನು ನೆನಪಿಟ್ಟುಕೊಂಡು, ಕ್ರಮೇಣ ಅದು ಆ ಗಲಿಬಿಲಿ ಪೆಟ್ಟಿಗೆಯನ್ನು

ಸುಪರಿಚಿತವನ್ನಾಗಿ ಮಾಡಿಕೊಳ್ಳುತ್ತದೆ. ಅದರಲ್ಲಿಯು ಅವರ ಚಲನವಲನಗಳು ಹೆಚ್ಚುಕಡಿಮೆ ಬದಲಾಗುತ್ತಿದ್ದರೂ ಒಟ್ಟಿನಲ್ಲಿ ಅವೆಲ್ಲವೂ ಪೆಟ್ಟಿಗೆಯ ಆವರಣ ದಿಂದ ನಿಯಂತ್ರಿತವಾಗಿವೆ. ಒಂದು ಗಲಿಬಿಲಿ ಪೆಟ್ಟಿಗೆಯ ಮೇಲೆ ಪ್ರಭುತ್ವ ವನ್ನು ಸಂಪಾದಿಸುವುದರಲ್ಲಿ ಬಹುಶಃ ಅನೇಕ ಹಂತಗಳಿವೆ: ಭಾವನೆಗಳನ್ನು ಹೊಂದಿಸಿಕೊಳ್ಳುವುದು ಮೊದಲನೆಯ ಹಂತ. ಅನಂತರ ಪೆಟ್ಟಿಗೆಯ ಶೋಧ ಮತ್ತು ಅದರ ಪರಿಚಯ ಮಾಡಿಕೊಳ್ಳುವುದು. ಆಮೇಲೆ ಕ್ರಮೇಣ ತಪ್ಪು ದಾರಿಗಳನ್ನು ಬಿಟ್ಟುಬಿಡುವುದು ಮತ್ತು ನೇರವಾದ ಮಾರ್ಗವನ್ನು ಹಿಡಿಯು ವುದು. ಇನ್ನೂ ಅನೇಕ ಸಲ ತರಬೇತು ಕೊಟ್ಟರೆ ಇಲಿಯು ತನ್ನ ವೇಗ ವನ್ನು ಹೆಚ್ಚಿಸಿಕೊಂಡು, ಮಾಲಾಕ್ಷೇಪವನ್ನು ಸೂಚಿಸುವಂಥ ಯಾಂತ್ರಿಕ ರೀತಿಯಿಂದ ಪೆಟ್ಟಿಗೆಯ ಮೂಲಕ ಓಡುತ್ತ ಹೋಗುವುದು. ಆದರೆ ಇಲ್ಲಿ ಕಲಿಯುವಿಕೆಯ ಅನುಕ್ರಮ ಹೀಗಿದೆ: ಮೊದಲು ಸ್ಥಳಜ್ಞಾನ, ಅನಂತರ ಸರಿ ಯಾದ ಮಾರ್ಗದ ಜ್ಞಾನ ಮತ್ತು ಕೊನೆಗೆ, ಚಲನೆಗಳ ನಿಕಟವಾದ ಸಮ ನ್ವಿತ ಅನುಕ್ರಮದ ಜ್ಞಾನ.

ಸಾಧನದ ಜ್ಞಾನವನ್ನು ಪಡೆಯುವುದು: ಸ್ಥಳಜ್ಞಾನವನ್ನು ಪಡೆ ಯುವುದೆಂದರೆ ಶೋಧ ಮಾಡಿ ಕಲಿಯುವುದು ಎಂದಾದರೆ, ನಾವು ಈಗ ತೆಗೆದು ಕೊಳ್ಳುವುದು ಕೌಶಲವನ್ನು ಉಪಯೋಗಿಸಿ ಕಲಿಯುವುದನ್ನು. ಒಂದು ಸ್ಥಳ ವನ್ನು ಪರಿಚಯ ಮಾಡಿಕೊಳ್ಳಬೇಕಾದರೆ, ನಮ್ಮ ಇಂದ್ರಿಯಗಳನ್ನು ಬಳಸಿ ಕೊಂಡೇ ಓಡಾಡುತ್ತೇವೆ; ನಾವಿಲ್ಲಿ ಚಲನೆಯೊಡನೆ ನಿರೀಕ್ಷಣೆಯನ್ನು ಕೂಡಿ ಸುತ್ತೇವೆ. ಒಂದು ವಸ್ತುವನ್ನು ಪರಿಚಯ ಮಾಡಿಕೊಳ್ಳಬೇಕಾದರೆ, ನಾವು ಅನೇಕ ಸಲ ಅದರೊಡನೆ ವ್ಯವಹರಿಸಿ, ಅದರ ಗತಿಕ್ರಮದಲ್ಲಿ ಅದನ್ನು ಇಟ್ಟು ನೋಡಬೇಕಾಗುತ್ತದೆ. ಕೆಲವು ಫಲಗಳು ಉಂಟಾಗುವಂತೆ ನಾವು ಕೌಶಲದಿಂದ ಬಳಸುವ ವಸ್ತುವೇ ಸಾಧನ. ಕೌಶಲದಿಂದ ಬಳಸಿ ಅದರ ಫಲವನ್ನು ನಿರೀಕ್ಷಿಸು ವುದರಿಂದ ನಮಗೆ ಸಾಧನದ ಪರಿಚಯವಾಗುತ್ತದೆ. ಮನುಷ್ಯನು ತನ್ನ ಹಸ್ತ ಪಾದಗಳನ್ನು ಕೌಶಲದಿಂದ ಬಳಸಿದರೆ, ಪ್ರಾಣಿಗಳು ತಮ್ಮ ಕಾಲು, ಹಲ್ಲು, ಸೊಂಡಿಲು ಇಲ್ಲವೆ ಕೊಕ್ಕು ಅಥವಾ ದೇಹದ ಇತರ ಅವಯವಗಳನ್ನು ಉಪ ಯೋಗಿಸಿ ಪದಾರ್ಥಗಳನ್ನು ಅಲುಗಾಡಿಸಿ, ಅವುಗಳ ಪರಿಚಯವನ್ನು ಮಾಡಿ ಕೊಳ್ಳುತ್ತವೆ.


CAT IN PUZZLE-BOX

ಥಾರೆನ್‌ಡೈಕನ ಒಗಟಿನ ಪೆಟ್ಟಿಗೆಯಲ್ಲಿ ಇಟ್ಟ ಬೆಕ್ಕು : ಒಂದು ಹಸಿದ ಬೆಕ್ಕಿನ ಮರಿಯನ್ನು ಚಿಕ್ಕ ಬೋನೊಂದರಲ್ಲಿ ಇಡಿರಿ. ಅದರ ಹೊರಗೆ ಒಂದು ಲೋಟದ ತುಂಬ ಹಾಲನ್ನು ಇಡಿರಿ. ಆಗ ಅದು ತನ್ನ ಜೋಟನ್ನು ಬೋನಿನ ಸರಳುಗಳ ನಡುವೆ ಹಸರಿಸುತ್ತದೆ. ಆದರೆ ಅದಕ್ಕೆ ಲೋಟ ಸಿಕ್ಕುವುದಿಲ್ಲ. ಅನಂತರ ಅದು ಸರಳುಗಳ ನಡುವೆ ತನ್ನ ಮೂಗು ಹಾಕಿ ಒತ್ತುತ್ತದೆ. ಆದರೆ ಆಗಲೂ ಅದರ ಮೂಲಕ ಅದಕ್ಕೆ ಲೋಟವನ್ನು ಮುಟ್ಟಲಾಗುವುದಿಲ್ಲ. ಆ ಮೇಲೆ ಅದು ಸರಳುಗಳನ್ನು ಕಚ್ಚುತ್ತದೆ; ಅಲ್ಲೇನಾದರೂ ಚಿಕ್ಕ ಪದಾರ್ಥ ವಿದ್ದರೆ ಅದನ್ನು ತನ್ನ ಉಗುರುಗಳಿಂದ ಎಳೆಯುತ್ತದೆ, ಸಡಿಲವಾಗಿ ಏನಿದ್ದರೂ ಅದನ್ನು ಅಲ್ಲಾಡಿಸುತ್ತದೆ. ಆ ಪ್ರಕಾರ ಅದು ಲೋಟಕ್ಕೆ ಸಮೀಪವಾಗಿರುವ ಬೋನಿನ ಎಲ್ಲ ಭಾಗವನ್ನೂ ಪರಚಿ ನೋಡುವ ಸಂಭವವಿದೆ. ಸ್ವಲ್ಪ ಹೊತ್ತಿನಲ್ಲಿಯೇ ಅದು ಮುಚ್ಚಿದ ಬಾಗಿಲಿನ ತಾಳನ್ನು ಮುಟ್ಟುತ್ತದೆ. ಅನಂತರ ಕೌಶಲದಿಂದ ಅದನ್ನು ಎತ್ತಿ ಬಿಡುತ್ತದೆ: ಆಗ ಬೋನಿನ ಬಾಗಿಲು ತೆರೆಯುತ್ತದೆ ಮತ್ತು ಬೆಕ್ಕು ಹೊರಹೋಗಿ ಹಾಲನ್ನು ಕುಡಿಯುತ್ತದೆ. ಈ ಮೊದಲನೆಯ ಪ್ರಯತ್ನದ ಕಾಲವನ್ನು ದಾಖಲೆ ಮಾಡಿಕೊಂಡ ನಂತರ ಪ್ರಯೋಜಕನು ಇನ್ನೂ ಹಸಿದುಕೊಂಡೇ ಇದ್ದ ಆ ಬೆಕ್ಕಿನ ಮರಿಯನ್ನು ಬೋನಿನಲ್ಲಿ ಬಿಟ್ಟು ಬಾಗಿಲು ಹಾಕಿ ಮತ್ತೊಂದು ಲೋಟದ ತುಂಬ ಹಾಲನ್ನು ಇಡುತ್ತಾನೆ. ಪುನಃ ಅದು "ಪ್ರಯತ್ನ ಮತ್ತು ತಪ್ಪು" ಎಂಬ ಮಾರ್ಗದಲ್ಲಿಯೇ ವರ್ತಿಸುತ್ತದೆ; ಆದರೆ ಹಿಂದಿನಷ್ಟು ತಪ್ಪುವುದಿಲ್ಲ. ಇನ್ನು ಮುಂದಿನ ಪ್ರಯತ್ನಗಳಲ್ಲಿ ವ್ಯರ್ಥ ಚಲನೆ ಮಾಡುವುದನ್ನು ಬಿಟ್ಟು ಕೊನೆಯ ಸಲ ಬೋನಿನಲ್ಲಿ ಇಟ್ಟ ಅರೆನಿಮಿಷದಲ್ಲಿ ಅದು ತಾಳನ್ನು ಎತ್ತಿ ಹೊರಗೆ ಹೋಗಿ ಹಾಲನ್ನು ಕುಡಿದು ಬಿಡುತ್ತದೆ. ಇಷ್ಟನ್ನು ಕಲಿಯಬೇಕಾದರೆ, ಅದಕ್ಕೆ ಬಹುಶಃ ಹತ್ತು ಇಪ್ಪತ್ತು ಸಲ ಇದೇ ರೀತಿಯಲ್ಲಿ ಪ್ರಯತ್ನಮಾಡಬೇಕಾಗಿ ಬಂದಿರಬಹುದು.

ಮುದಿಯಾದ, ಇಲ್ಲವೆ ಸ್ತಿಮಿತ ಮನೋಭಾವದ ಅಥವಾ ಯಾವುದಾದರೊಂದು ಕಾರಣಕ್ಕಾಗಿ ಅಷ್ಟು ಉತ್ಸಾಹವನ್ನು ತೋರಿಸದಿರುವ ಬೆಕ್ಕು ಕರ್ಮೇಂದ್ರಿಯದ ಚಟುವಟಿಕೆಯನ್ನು ಇಷ್ಟು ಹೆಚ್ಚಾಗಿ ಮಾಡದೆಯೆ ಉದ್ರಿಕ್ತ ಬೆಕ್ಕಿಗೆ ಬೇಕಾದ್ದಕ್ಕಿಂತ ಅಲ್ಪ ಪ್ರಯತ್ನಗಳಿಂದಲೇ ಈ ಉಪಾಯವನ್ನು ಕಲಿತುಕೊಂಡೀತು. ಇದರಿಂದ ಗೊತ್ತಾಗುವುದೇನೆಂದರೆ, ಕಲಿಯುವಿಕೆಯಲ್ಲಿ

ಪ್ರಬಲವಾದ ಕರ್ಮೇಂದ್ರಿಯ-ಕಾರ್ಯಕ್ಕಿಂತ ಜ್ಞಾನೇಂದ್ರಿಯ-ಕಾರ್ಯವೇ ಪ್ರಧಾನವೆಂಬುದು. ಒಂದು ಸಲ ಬೋನಿನಿಂದ ಹೊರಗೆ ಹೊರಟು ಹೋದ ಬೆಕ್ಕುಗಳು ಮತ್ತೊಮ್ಮೆ ಬೋನಿನಲ್ಲಿ ಇಟ್ಟಾಗ, ಬಾಗಿಲ ಸಮೀಪದ ಪ್ರದೇಶದ ಮೇಲೆಯೇ ತಮ್ಮ ಕಾರ್ಯವನ್ನು ಕೇಂದ್ರೀಕರಿಸುತ್ತವೆ. ಆಗಲೇ ಅವು ಕೆಲಮಟ್ಟಿನ ಸ್ಥಳಜ್ಞಾನವನ್ನು ಪಡೆದುಕೊಂಡಿರುತ್ತವೆ. ಒಂದು ವಿಧದ ಒಗಟಿನ ಪೆಟ್ಟಿಗೆಯಲ್ಲಿ ಅದರ ಬಾಗಿಲನ್ನು ತೆರೆಯಬೇಕಾದರೆ ಅದರಲ್ಲಿ ನೇತಾಡುತ್ತಿರುವ ತಂತಿಯನ್ನೋ, ಹಗ್ಗವನ್ನೋ ಎಳೆಯಬೇಕಾಗುತ್ತದೆ. ಬೆಕ್ಕುಗಳು ಬಹಳ ಬೇಗನೆ ಈ ಹಗ್ಗದ ಮೇಲೆ ಕಣ್ಣಿಡುತ್ತವೆ. ಈ ಸಂದರ್ಭದಲ್ಲಿ ಪ್ರಯೋಜಕನು ಹಗ್ಗವನ್ನು ಬೋನಿನ ಇನ್ನೊಂದು ಭಾಗಕ್ಕೆ ಸರಿಸಿದರೆ ಅವು ಮೊದಲು ಆ ಹಗ್ಗ ಇದ್ದ ಸ್ಥಳಕ್ಕೆ ಹೋಗಿ ಮೇಲಕ್ಕೆ ಜೋಟು ಎತ್ತುತ್ತವೆ; ಆದರೆ ಅಲ್ಲಿ ಅವುಗಳ ಪ್ರತೀಕ್ಷೆ ಸಫಲವಾಗುವುದಿಲ್ಲ. ಇದರಿಂದ ಅವಕ್ಕೆ ಸ್ಥಳಜ್ಞಾನ ಉಂಟಾಗಿದೆ ಎಂದು ತಿಳಿದು ಬರುತ್ತದೆ. ಆಮೇಲೆ ಹೊಸ ಜಾಗದಲ್ಲಿ ಆ ಹಗ್ಗವನ್ನು ಕಂಡಾಗ, ಅವು ಮೊದಲಿನ ಜಾಗದಲ್ಲಿ ಇದ್ದಾಗ ಅದನ್ನು ಎಳೆಯುವುದನ್ನು ಕಲಿತಂತೆಯೇ ಈಗಲೂ ಎಳೆದುಬಿಡುತ್ತವೆ. ಇದರಿಂದ ಅವಕ್ಕೆ ವಸ್ತುವಿನ ಅಥವಾ ಸಾಧನದ ಜ್ಞಾನವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇನ್ನೊಂದು ಸಂಗತಿ: ಹಗ್ಗ ಎಳೆಯಲು ಕಲಿತ ಬೆಕ್ಕು ಒಮ್ಮೆ ಉಗುರಿನಿಂದ ಅದನ್ನು ಎಳೆದರೆ ಮತ್ತೊಮ್ಮೆ ಅದೇ ಉದ್ದೇಶ ಸಾಧನೆಗಾಗಿ ಹಲ್ಲಿನಿಂದ ಕಚ್ಚಿ ಎಳೆದರೂ ಎಳೆದೀತು. ಕೆಲವು ವೇಳೆ ಇಂಥ ಚಲನೆ ಯಾಂತ್ರಿಕವಾದೀತು; ಆದರೆ ಬಹಳ ಸಲ ಹಾಗಾಗುವುದಿಲ್ಲ. ಇದರಿಂದ ಅದು ಕೇವಲ ಏನನ್ನೋ ಕಂಡು ಕೆಲ ಬಗೆಯ ಚಲನವಲನಗಳನ್ನು ಮಾಡದೆ ವಸ್ತು ಇಲ್ಲವೆ ಸಾಧನದೊಡನೆ ವ್ಯವಹರಿಸುತ್ತದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಮೇಲಿನ ಪ್ರಯೋಗದಲ್ಲಿ ಬೆಕ್ಕು ಕಲಿಯುವುದು ಯಾವುದೋ ಒಂದು ಬಗೆಯ ಚಲನ ಇಲ್ಲವೆ ಚಲನಸಂತಾನಗಳನ್ನಲ್ಲ; ಅದು ಕಲಿಯುವುದು ಕೆಲ ವಸ್ತುಗಳ ಉಪಯೋಗವನ್ನು ಹಾಗೂ ಮಿಕ್ಕ ಕೆಲ ವಸ್ತುಗಳ ನಿರುಪಯೋಗವನ್ನು. ಅಭ್ಯಾಸಬಲದಿಂದ ಪ್ರಾಣಿಯೂ ಮನುಷ್ಯನೂ ತಮ್ಮ ಕರ್ಮೇಂದ್ರಿಯದ ಕೌಶಲವನ್ನು ಹೆಚ್ಚಿಸಿಕೊಳ್ಳಬಹುದು.

ಚಿಂಪಾಂಜಿಗಳು ಮತ್ತು ಮಂಗಗಳು ಕಲಿಯುವ ಕ್ರಮ: ನಾಯಿ ಬೆಕ್ಕುಗಳಿಗಿಂತ ಕೋತಿಗಳು ತಮ್ಮ ಕೈಕಾಲು, ಕಣ್ಣು ಮತ್ತು ಮಿದುಳು ಗಳನ್ನು ಹೆಚ್ಚಿನ ಕೌಶಲದಿಂದ ಬಳಸಬಲ್ಲವು.

ಅವು ಬೇಗ ಕಲಿಯಬಲ್ಲವು ಮತ್ತು ಹೆಚ್ಚಿನ ಜಟಿಲ ಸಾಧನಗಳನ್ನು ಉಪ ಯೋಗಿಸಬಲ್ಲವು. ಚಿಂಪಾಂಜಿಯು ಮಂಗನಿಗಿಂತ ದೊಡ್ಡ ಮಿದುಳಿನದಾಗಿರು ತ್ತದೆ. ಮನುಷ್ಯನ ಸಾಧನೋಪಯೋಗ ಶಕ್ತಿಗೆ ಬಹುಶಃ ಅದರ ಶಕ್ತಿಯು ಬಹಳ ಹತ್ತಿರವಾಗಿದೆ ಎನ್ನಬಹುದು. ಒಂದು ಮಂಗವು ಬೋನಿನಲ್ಲಿ ಇದೆ ಎಂದು ಭಾವಿಸಿರಿ. ಬೋನಿನ ಹೊರಗೆ ಒಂದು ಬಾಳೆ ಹಣ್ಣು ಇದೆ ಎಂದುಕೊಳ್ಳಿರಿ. ಆದರೆ ಹತ್ತಿರದಲ್ಲೇ ಒಂದು ಕೋಲಿದೆ. ಅದನ್ನು ತೆಗೆದುಕೊಂಡ ಮಂಗವು ಬಾಳೆ ಹಣ್ಣನ್ನು ತನ್ನ ಕಡೆಗೆ ಬಹು ಬೇಗ ಎಳೆದುಕೊಳ್ಳುತ್ತದೆ. ಅದಾದ ನಂತರ ಎರಡನೆಯ ಬಾರಿ ಹೊರಗೆ ಬಾಳೆ ಹಣ್ಣನ್ನು ಇಟ್ಟು ಒಂದು ಚಿಕ್ಕ ಹಾಗೂ ದೊಡ್ಡ ಕೋಲುಗಳನ್ನು ಹತ್ತಿರದಲ್ಲಿ ಇಡಿರಿ. ಆಗ ಅದು ಸಣ್ಣ ಕೋಲಿನಿಂದ ಬಾಳೆ ಹಣ್ಣನ್ನು ಮುಟ್ಟಲಾರದೆ, ಆದರಿಂದ ದೊಡ್ಡ ಕೋಲನ್ನು ತನ್ನ ಕಡೆ ಎಳೆದುಕೊಂಡು ಆ ಕೋಲಿನಿಂದ ಬಾಳೆ ಹಣ್ಣನ್ನು ತನ್ನ ಕಡೆಗೆ ಎಳೆದುಕೊಳ್ಳು ತ್ತದೆ. ಹೀಗೆ ಎರಡಕ್ಕಿಂತ ಹೆಚ್ಚು ಕೋಲುಗಳನ್ನು ಇಟ್ಟಾಗಲೂ ಮಂಗವು ಈ ಉಪಾಯವನ್ನು ಬಹುಬೇಗ ಕಲಿಯುತ್ತದೆ.

ಕೋಲಿನಿಂದ ಬೋನಿನ ಹೊರಗಿನ ಬಾಳೆ ಹಣ್ಣನ್ನು ಎಳೆದುಕೊಂಡು ತಿನ್ನುವುದನ್ನು ಆಗಲೇ ಕಲಿತುಕೊಂಡ ಚಿಂಪಾಂಜಿ ಒಂದಕ್ಕೆ ಎರಡು ಕೋಲು ಗಳನ್ನು ಕೊಟ್ಟು ಬೋನಿನಲ್ಲಿ ಇಡಿರಿ. ಅವುಗಳಲ್ಲಿ ಒಂದು ಕೋಲು ಬಾಳೆ ಹಣ್ಣನ್ನು ಮುಟ್ಟುವಂತಿರಬಾರದು. ಆದರೆ ಅವುಗಳಲ್ಲಿ ಒಂದನ್ನು ಇನ್ನೊಂದ ರಲ್ಲಿ ಸಿಕ್ಕಿಸುವಂಥ ಅನುಕೂಲವಿರಬೇಕು. ಆಗ ಅದು ಒಂದೊಂದೇ ಕೋಲನ್ನು ಹಿಡಿದುಕೊಂಡು ಬಾಳೆ ಹಣ್ಣನ್ನು ಮುಟ್ಟಲು ಹೋಗಿ ಅವೆಲ್ಲ ಗಿಡ್ಡ ಎಂಬು ದನ್ನು ತಿಳಿದುಕೊಳ್ಳುತ್ತದೆ. ಆಗ ಆ ಪ್ರಯತ್ನವನ್ನು ಬಿಟ್ಟುಕೊಟ್ಟು ಬೋನಿನ ಹಿಂಬದಿಗೆ ಹೋಗಿ ಅದು ಆ ಕೋಲುಗಳನ್ನು ತೆಗೆದುಕೊಂಡು ಆಟವಾಡಲು ಆರಂಭಿಸುತ್ತದೆ. ಆಟದ ಕಾಲದಲ್ಲಿ ಅದು ಒಂದರ ತುದಿಯಿಂದ ಇನ್ನೊಂದರ ಬುಡವನ್ನು ಒತ್ತುವಾಗ ಅವು ಒಂದಕ್ಕೊಂದು ಸಿಕ್ಕು ಹಾಕಿಕೊಳ್ಳುತ್ತವೆ. ಅದನ್ನು ಕಂಡು ಒಮ್ಮೆಲೇ ಹಿಗ್ಗಿ ಚಿಂಪಾಂಜಿಯು ಆ ಕೂಡುಗೋಲಿನಿಂದ

ಬಾಳೆ ಹಣ್ಣನ್ನು ಎಳೆದುಕೊಳ್ಳಹೋಗುತ್ತದೆ.ಆಗ ಗಟ್ಟಿಯಾಗಿ ಸಿಕ್ಕಿಕೊಳ್ಳದಿದ್ದ ಆ ಕೋಲುಗಳು ಬಿಡಿಯಾಗಿ ಬಿದ್ದುದನ್ನು ಕಂಡು ಅದು ತನ್ನ ಕೌಶಲದಿಂದ ಪುನಃ ಅವನ್ನು ಜೋಡಿಸಿ ಬಾಳೆ ಹಣ್ಣನ್ನು ಒಳಗೆ ಎಳೆದುಕೊಳ್ಳುತ್ತದೆ. ಅಷ್ಟೇ ಅಲ್ಲದೆ, ತಿನ್ನುವುದನ್ನು ಕೂಡ ಬಿಟ್ಟು ಆ ಜೋಡುಗೋಲಿನಿಂದ ಅದು ಬೋನಿನ ಹೊರಗೆ ಹತ್ತಿರದಲ್ಲಿ ಇರುವ ಎಲ್ಲ ವಸ್ತುಗಳನ್ನೂ ಒಳಗೆ ಎಳೆದು ಕೊಳ್ಳುತ್ತದೆ. ಇದೇ ವ್ಯವಸ್ಥೆ ಮಾಡಿ ಮರುದಿನ ಅದನ್ನು ಬೋನಿನಲ್ಲಿಟ್ಟಾಗ ಅದು ಮೊದಲು ಸ್ವಲ್ಪ ಕಾಲ ಹಿಂದಿನಂತೆಯೇ ಕೆಲವು ವ್ಯರ್ಥ ಚಲನೆಗಳನ್ನು ಮಾಡಿದರೂ ಅರೆಕ್ಷಣದಲ್ಲಿ ಕೋಲುಗಳನ್ನು ಕೂಡಿಸಿಕೊಂಡು ಹೊರಗಿನ ಬಾಳೆ ಹಣ್ಣನ್ನು ಒಳಗೆ ಎಳೆದುಕೊಳ್ಳುತ್ತದೆ. ಇಂಥ ಪ್ರಯೋಗಗಳನ್ನು ಮಕ್ಕಳ ಮೇಲೂ ಮಾಡಿ ಸದೃಶ ಫಲಗಳನ್ನು ಪಡೆಯಬಹುದು.

ಸೂಕ್ಷ್ಮದೃಷ್ಟಿ: ಮೇಲೆ ಹೇಳಿದ ಚಿಂಪಾಂಜಿಯು ತನ್ನ ಅಸಹಾಯ ಅವಸ್ಥೆ ಯಿಂದ ಅಕಸ್ಮಾತ್ತಾಗಿ ಪಾರಾಗುವ ಉಪಾಯವನ್ನು ಕಂಡುಕೊಂಡ ಸಂಧಿಯು ನಾಟಕೀಯ. ಒಮ್ಮೆಲೇ ಎರಡು ಕೋಲುಗಳನ್ನು ಜೋಡಿಸಲು ಅದಕ್ಕೆ ಹೊಳೆ ದದ್ದು ಸೂಕ್ಷ್ಮದೃಷ್ಟಿಯಿಂದ. ಸಣ್ಣಕೋಲು ಸಾಲದಾದಾಗ ದೊಡ್ಡ ಕೋಲು ಉಪಯುಕ್ತವಾದೀತೆಂದು ಕಂಡುಕೊಂಡದ್ದು ಹಾಗೂ ಒಂದು ಕೋಲು ಸಾಕಾಗದಾಗಲು ಎರಡು ಕೋಲುಗಳನ್ನು ಆಕಸ್ಮಿಕವಾಗಿ ಜೋಡಿಸಿದರೂ ಆ ಕೂಡುಗೋಲು ಪ್ರಯೋಜನಕ್ಕೆ ಬಂದೀತೆಂದು ಅದಕ್ಕೆ ಊಹಿಸಲು ಸಾಧ್ಯ ವಾದದ್ದು ಸೂಕ್ಷ್ಮದೃಷ್ಟಿಗೆ ತಕ್ಕ ನಿದರ್ಶನ. ಇಲ್ಲಿ ಪ್ರಾಣಿಯು ತನ್ನ ಜ್ಞಾನೇಂದ್ರಿಯಗಳನ್ನು ಬಳಸಿಕೊಂಡು ವಸ್ತುಗಳ ಪರಿಚಯ ಮಾಡಿಕೊ ಳ್ಳುವುದರಲ್ಲಿ ಯಶಸ್ವಿಯಾಗಿ, ಅವನ್ನು ಗುರಿಯನ್ನು ಮುಟ್ಟುವ ಸಾಧನಗಳ ನ್ನಾಗಿ ಮಾಡಿಕೊಳ್ಳುವುದು ಗಣ್ಯ.

ಸೂಕ್ಷ್ಮದೃಷ್ಟಿಯೆಂಬುದು ಕೆಲವೊಮ್ಮೆ ಮುನ್ನೋಟವಾದರೆ ಮತ್ತೆ ಕೆಲವೊಮ್ಮೆ ಹಿನ್ನೋಟವೆನಿಸುತ್ತದೆ. ಚಿಂಪಾಂಜಿಯು ಕೂಡುಗೋಲನ್ನು ಹಿಡಿದು ಬಾಳೆಯ ಹಣ್ಣನ್ನು ಎಳೆದುಕೊಳ್ಳಲು ಓಡಿದಾಗ ಅದಕ್ಕಿದ್ದುದು ಮುನ್ನೋಟ; ತನಗೆ ಜಯ ಕಟ್ಟಿಟ್ಟದ್ದು ಎಂಬ ತಿಳಿವಳಿಕೆಯಿಂದ ಅದು ಓಡಿತು — ಅದಕ್ಕಾಗ ಗೆಲುವಿನ ಮುನ್ನೋಟವಿತ್ತು. ಒಗಟಿನ ಪೆಟ್ಟಿಗೆಯ

ಳ್ಳಿದ್ದ ಚಿಕ್ಕ ಗಲಿಬಿಲಿ ಪೆಟ್ಟಿಗೆಯಲ್ಲಿದ್ದ ಇಲಿಯೂ ಒಂದು ಮಾರ್ಗ ಹಿಡಿದು ಹೋಗಿ ನಡುವೆಯೇ ಮುಂದಿನ ದಾರಿ ಕಾಣದಾದಾಗ, ತಾವು ಹಿಡಿದದ್ದು ತಪ್ಪುದಾರಿ ಎಂದು ತಿಳಿದುಕೊಂಡದ್ದು ಹಿನ್ನೋಟದಿಂದ. ಅನುಸರಿಸಿ ತಮಗೆ ಉಪಯುಕ್ತವೆಂದು ಒಂದು ವಸ್ತುವನ್ನೋ, ಕಾರ್ಯವನ್ನೋ ಅವು ತಿಳಿದು ಕೊಂಡದ್ದೂ ಅಂಥ ನೋಟದಿಂದಲೇ. ಅನುಸರಿಸುವ ಮೊದಲೇ ಗುರಿಯನ್ನು ಮುಟ್ಟುವ ಮಾರ್ಗವನ್ನು ಕಂಡುಕೊಳ್ಳುವುದೂ ಸಾಕ್ಷಾತ್ತಾಗಿ ಬಳಸದೆ ಅಥವಾ ಅನುಸರಿಸದೆ ಒಂದು ವಸ್ತುವನ್ನೋ, ದಾರಿಯನ್ನೋ ನಿರುಪಯುಕ್ತ ವೆಂದು ಮೊದಲೇ ತಿಳಿದುಕೊಳ್ಳಲು ಶಕ್ತರಾಗುವುದೂ ಮುನ್ನೋಟವೆನಿಸು ತ್ತದೆ. ಅದೇಮೇರೆಗೆ ಬಳಸಿದ ಇಲ್ಲವೆ ಅನುಸರಿಸಿದ ನಂತರ ಒಂದು ವಸ್ತು ವನ್ನೋ, ಚಟುವಟಿಕೆಯನ್ನೋ ಒಳ್ಳೆಯದು ಅಥವಾ ಕೆಟ್ಟದ್ದು ಎಂದು ತಿಳಿದುಕೊಳ್ಳುವುದು ಹಿನ್ನೋಟ. ಇಡಿ ಸನ್ನಿವೇಶವು ಸ್ಪಷ್ಟವಾಗಿ ನಿಃಸ್ಸಂಧಿಗ್ಧ ವಾದಾಗ ಮುನ್ನೋಟಕ್ಕೆ ಸದವಕಾಶವಿರುತ್ತದೆ. ಸನ್ನಿವೇಶದ ಮುಖ್ಯ ಲಕ್ಷಣ ಗಳನ್ನು ಶೋಧನ ಮಾರ್ಗದಿಂದಲೂ ಕುಶಲ ತಂತ್ರದಿಂದಲೂ ಕಂಡುಹಿಡಿಯ ಬೇಕಾಗಿರುವಾಗ ಹಿನ್ನೋಟವು ಮಹೋಪಕಾರ ಮಾಡಬಲ್ಲದು.

ಪ್ರಾಣಿಯ ಹಾಗೂ ಮನುಷ್ಯನ ಕಲಿಯುವಿಕೆಯಲ್ಲಿರುವ ವ್ಯತ್ಯಾಸ ಗಳು: ಪ್ರಾಣಿಗಳ ಕಲಿಯುವಿಕೆಗಿಂತ ಮನುಷ್ಯನ ಕಲಿಯುವಿಕೆ ಕೆಳಗಿನ ನಾಲ್ಕು ಅಂಶಗಳಿಂದ ಹೆಚ್ಚಿನದೆನಿಸುತ್ತದೆ. ಮನುಷ್ಯನು ಪ್ರಾಣಿಗಿಂತ ಉತ್ತಮ ನಾದ ನಿರೀಕ್ಷಕ. ಪ್ರಾಣಿಯ ಅಳವಿಗೆ ಮೀರಿದ ವಸ್ತು, ಜನ ಮತ್ತು ಸನ್ನಿ ವೇಶಗಳ ಅನೇಕ ಲಕ್ಷಣಗಳನ್ನವ ನಿರೀಕ್ಷಿಸಬಲ್ಲ. ಒಂದು ಸಮಸ್ಯೆಯನ್ನು ಎದುರಿಸುವಾಗ ಮಾನವನು ಹೆಚ್ಚಿನ ಬುದ್ಧಿಯನ್ನೂ ವ್ಯವಸ್ಥಾನೀತಿಯನ್ನೂ ನಿಯಂತ್ರಣಶಕ್ತಿಯನ್ನೂ ಉಪಯೋಗಿಸುತ್ತಾನೆ. ಅವನು ಕಲಿಯುವುದರಲ್ಲಿ ಹೆಸರುಗಳನ್ನೂ ಸಂಖ್ಯೆಗಳನ್ನೂ ಭಾಷೆಯನ್ನೂ ವಿನಿಯೋಗಿಸುತ್ತಾನೆ. ಸಾಮ ಗ್ರಿಗಳು ತನ್ನ ಎದುರಿಲ್ಲದಾಗಲೂ ಅವನು ಅಂಶತಃ ಭಾಷಾಬಲದಿಂದ ಸಮಸ್ಯೆ ಗಳ ಬಗ್ಗೆ ವಿಚಾರಮಾಡಬಲ್ಲನು; ಒಂದು ಸಮಸ್ಯೆಯನ್ನು ಬಗೆಹರಿಸಲು ವ್ಯರ್ಥ ಪ್ರಯತ್ನ ಮಾಡಿ, ಹಾಸಿಗೆಯಲ್ಲಿ ಉರುಳಿಕೊಂಡು, ಮರುದಿನ ಬೆಳಿಗ್ಗೆ ಪರಿಹಾರೋಪಾಯವನ್ನು ಕಂಡುಕೊಂಡ ನಿದರ್ಶನವುಂಟು. ಕೊಟ್ಟ ಕ್ಷಣ ದಲ್ಲಿ ಎದುರಿಲ್ಲದ ವಸ್ತುಗಳ ಬಗ್ಗೆ ವಿಚಾರ ಮಾಡಬಲ್ಲ ಭಾವಿಕತ್ವವು

ಬಿಕ್ಕ ಯಾವ ಪ್ರಾಣಿಗಳಲ್ಲೂ ಕಂಡು ಬರದಷ್ಟು ಹೆಚ್ಚಾಗಿ ಬೆಳೆದಿರುವುದು ಮಾನವನಲ್ಲಿ ನಿಃಸಂದಿಗ್ಧವಾಗಿ ಕಂಡುಬರುತ್ತದೆ.

ನಿಯಂತ್ರಿಸುವುದು ಅಥವಾ ಅನುಕ್ರಮಗಳನ್ನು ಕಲಿತುಕೊಳ್ಳುವುದು: ತನ್ನ ಆವರಣವನ್ನರಿತು ಅದರೊಡನೆ ವ್ಯವಹರಿಸಬಲ್ಲವನಾಗಬೇಕಾದರೆ ಮಾನವನು ಸ್ಥಳಜ್ಞಾನ, ಸಾಧನಜ್ಞಾನಗಳ ಜೊತೆಗೆ ಅನುಕ್ರಮಜ್ಞಾನವನ್ನೂ ಪಡೆದುಕೊಳ್ಳುವುದು ಅಗತ್ಯ. ಘಟನೆ, ಸಂಭೂತಿ, ಸಂಗತಿ ಇಲ್ಲವೆ ಬದಲಾವಣೆ ಎಂಬುದು ಅನುಕ್ರಮರೂಪದಲ್ಲಿರಬಹುದು; ಅನುಕ್ರಮಗಳು ನಿಯತವಾಗಿಯೂ ಇರುವುದುಂಟು. ಬಾಲ್ಯದಿಂದಲೂ ಮನುಷ್ಯ ಅನುಕ್ರಮಗಳನ್ನು ಬಲ್ಲ; ಅದರಿಂದಲೇ ಎಷ್ಟೋ ವೇಳೆ ಅವನು ಚಿರಪರಿಚಿತ ಸನ್ನಿವೇಶಗಳನ್ನು ಪ್ರತೀಕ್ಷಿಸಬಲ್ಲವನೆನಿಸುತ್ತಾನೆ. ಮಿಂಚನ್ನು ಕಂಡಕೂಡಲೇ ಗುಡುಗನ್ನು ಪ್ರತೀಕ್ಷಿಸುವುದಿಲ್ಲವೇ? ಪ್ರಾಚಾರ್ಯರಿಗೆ ಕೋಪ ಬಂದ ಕೂಡಲೇ ವಾಕ್‌ಪ್ರವಾಹವನ್ನು ಅವರಿಂದ ನಾವು ಪ್ರತೀಕ್ಷಿಸುವುದಿಲ್ಲವೇ? ಎಷ್ಟೋ ಸಲ ಗೆಳೆಯರೋ ಗುರುಗಳೋ ಹೇಳಿದ ಅರ್ಧ ವಾಕ್ಯವನ್ನು ನಾವು ಪೂರ್ಣ ಮಾಡಬಲ್ಲವರಾಗುತ್ತೇವೆ; 'ಸು' ಎಂದರೆ ಸುಕ್ಕಿನುಂಡೆ ಎಂದು ನಾವು ಊಹಿಸುತ್ತೇವೆ. ಇದು ನಾವು ಮೇಲಿಂದ ಮೇಲೆ ನಡೆದ ಒಂದು ವಿಷಯವನ್ನು ಅನೇಕ ಬಾರಿ ನೋಡಿ ಲಬ್ಧವಾದ ನಿಯತಾನುಕ್ರಮದ ಜ್ಞಾನದಿಂದ ಮಾಡುವ ಪ್ರತೀಕ್ಷೆ. ಇದರಲ್ಲಿ ನಿರೀಕ್ಷಣೆ, ಕಲಿಯುವಿಕೆ ಮತ್ತು ನೆನಪಿಟ್ಟುಕೊಳ್ಳುವುದು ಎಂಬ ಮೂರು ಕ್ರಿಯೆಗಳು ಕ್ರಮವಾಗಿ ಅಳವಟ್ಟಿವೆ. ಮಾನವನ ಶರೀರದ ಅಂಗ–ಉಪಾಂಗಗಳಲ್ಲಿ ಕೂಡ ವಿವಿಧ ಚಲನಗಳ ನಿಯತಾನುಕ್ರಿಯೆಗಳಿವೆ. ಅವು ಅವನ ವರ್ತನೆಯಲ್ಲಿ ಚಿರಪರಿಚಿತವೂ ಅನಿಚ್ಛಾಕೃತವೂ ಆಗಿ ತೋರುತ್ತವೆ. ಚಿರಪರಿಚಿತ ಪದವೊಂದನ್ನವನು ಉಚ್ಚರಿಸುವಾಗ ತಪ್ಪದೆ ವಾಕ್-ಚಲನಗಳ ಕಲಿತ ಅನುಕ್ರಮವನ್ನು ಪುನರಾವರ್ತಿಸುತ್ತಾನೆ. ನೆನಪಿನಿಂದ ಅವನೊಂದು ಹಾಡು ಹೇಳುವುದು ಅಂಥ ಇನ್ನೊಂದು ಉದಾಹರಣೆ. ಟೈಪ್‌ರೈಟಿಂಗ್ ಮುಂತಾದ ಕುಶಲಕರ್ಮಗಳ 'ಮೇಲ್ಮಟ್ಟದ ಘಟಕಗಳೂ' (Higher Units) ಅಂಥವೇ.

ಈ ಪ್ರೇರಣಾನುಕ್ರಮ ಹಾಗೂ ಚಲನಾನುಕ್ರಮಗಳಲ್ಲದೆ, ಜ್ಞಾನೇಂದ್ರಿಯ ಪ್ರೇರಣೆ ಮತ್ತು ಕರ್ಮೇಂದ್ರಿಯಾನುಕ್ರಿಯೆಗಳುಳ್ಳ ಸುಶಿಕ್ಷಿತ ಅನುಕ್ರಮಗಳು

ಅನೇಕವಾಗಿವೆ. ಅಂಥ ಅನುಕ್ರಮದ ಆಕೃತಿಯು—

ಪ್ರೇ೧—ಅ೧—ಪ್ರೇ೨—ಅ೨

ಎಂಬಂತಿರುತ್ತದೆ; ಅಲ್ಲದೆ ಅನೇಕ ಪ್ರೇರಣೆ-ಅನುಕ್ರಿಯೆಗಳ ಪಂಕ್ತಿಯಾಗಿರಬಹುದು. ಅನೇಕ ಪ್ರಕರಣಗಳಲ್ಲಿ ಪ್ರೇ೧ ಎಂಬುದು ಪ್ರೇ೨ ಬರುತ್ತದೆ ಎಂಬುದಕ್ಕೆ ಸೂಚನೆ ಅಥವಾ ಎಚ್ಚರಿಕೆ. ಅ೧ ಎಂಬುದು ಅ೨ ಎಂಬುದಕ್ಕೆ ಪೂರ್ವಸಿದ್ಧತೆ. "ಸಿದ್ಧನಾಗು! ಹೋಗು!" ಎಂಬಿವು ಎರಡು ಪ್ರೇರಣೆಗಳು ಮತ್ತುಮೊದಲನೆಯ ಅನುಕ್ರಿಯೆಯಾದ ಅ೧ ಎಂಬುದು ಬೇಗ ಹೋಗುವಿಕೆ ಎಂಬ ಅ೨ ಕ್ಕೆ ಸಿದ್ಧತಾಭಂಗಿಯಾಗಬಹುದು. ಒಂದು ಓಟದ ಸ್ಪರ್ಧೆಯಲ್ಲಿ ಓಟಗಾರರಿಗೆ ಓಡಲು ಎರಡು ಪ್ರೇರಣೆಗಳನ್ನು ಕೊಡಲಾಗುತ್ತದೆ: ಒಂದು ಪ್ರಧಾನ, ಮತ್ತೊಂದು ಗೌಣ; "ಸಿದ್ಧರಾಗಿರಿ" ಎಂಬುದು ಮೊದಲು ಕೊಡುವ ಗೌಣ ಪ್ರೇರಣೆ, "೧, ೨, ೩ — ನಡೆಯಿರಿ" ಎಂದು ಅನಂತರ ಕೊಡುವ ಪ್ರೇರಣೆಯು ಪ್ರಧಾನ ಪ್ರೇರಣೆ ಎನಿಸುತ್ತದೆ. ಎಷ್ಟೋ ವೇಳೆ ಓಟಗಾರರು ಪ್ರಧಾನ ಪ್ರೇರಣೆಯನ್ನು ಕೊಡುವ ಮೊದಲು ಗೌಣ ಪ್ರೇರಣೆಗೇ ಅನುಕ್ರಿಯೆಯನ್ನು ಎಸಗುವುದುಂಟು. ಇದರಿಂದ ಅನುಕ್ರಿಯೆಯು ಪ್ರಧಾನಪ್ರೇರಣೆಗೆ ಬದಲಾಗಿ ಗೌಣಪ್ರೇರಣೆಯನ್ನು ಅನುಸರಿಸುವುದೂ ಉಂಟು.

ಪಾವಲಫ್ ಮಹಾಶಯನ ಉಪಾಹಿತ ಪ್ರಯೋಗಗಳು: ಕ್ರಿ. ಶ. ೧೯೦೦ರಲ್ಲಿ ನಾಯಿಗಳನ್ನು ಯೋಜ್ಯಸ್ಥಾನದಲ್ಲಿ ಇಟ್ಟುಕೊಂಡು ಪಚನಕಾರ್ಯವನ್ನು ಅಭ್ಯಾಸ ಮಾಡುತ್ತಿದ್ದಾಗ ರಷ್ಯದ ಪ್ರಸಿದ್ಧ ಶರೀರಶಾಸ್ತ್ರಜ್ಞ ಪಾವಲಫ್ ಲಾಲಾಪ್ರವಾಹವನ್ನು ಅಳೆಯುವ ಕ್ರಮ ಒಂದನ್ನು ಯೋಜಿಸಿದನು. ಲಾಲಾಗ್ರಂಥಿಗಳಲ್ಲಿ ಒಂದರ ನಾಳವು ನಾಯಿಯ ಗಲ್ಲದ ಹೊರಗೆ ಲಾಲಾರಸವನ್ನು ಸುರಿಸುವಂತೆ ಮಾಡಿ ಅದರಿಂದ ಹರಿದುಬರುವ ಲಾಲಾರಸವನ್ನು ಒಂದು ಮಾಪಕದಲ್ಲಿ ಬೀಳುವಂತೆ ಮಾಡಲಾಯಿತು. ಈ ಪ್ರಯೋಗಧಾನಿಯನ್ನು ಬಳಸುತ್ತಿದ್ದಾಗ ಆನುಷಂಗಿಕವಾಗಿ ಆಹಾರವು ನಾಯಿಯ ಬಾಯಿಯಲ್ಲಿ ಇರುವಾಗ ಮಾತ್ರವಲ್ಲದೆ, ತಿನ್ನುವ ಮೊದಲು ಆಹಾರವನ್ನು ತಟ್ಟೆಯಲ್ಲಿ ಕಂಡಾಗಲೂ ಜವಾನನು ಆಹಾರ ತರುವುದನ್ನು ಕಂಡಾಗಲೂ ಇಲ್ಲವೆ ಪಕ್ಕದ ಕೋಣೆಯಿಂದ ಅವನ ಕಾಲಿನ ಹೆಜ್ಜೆಯ ಸದ್ದನ್ನು ಕೇಳಿದಾಗ ಕೂಡ, ಲಾಲಾರಸವು ಹರಿದುಬರುವುದನ್ನು ಪಾವಲಫ್ ಕಂಡ. ಆಹಾರ ಸಾಕ್ಷಾತ್ತಾಗಿ

ಬಾಯಿಯಲ್ಲಿ ಇರುವಾಗ ಲಾಲಾರಸ ಒಸರುವುದು ಸಹಜಕ್ಷೇಪ. ಆದರೆ ಅದು ತಟ್ಟೆಯ ನೋಟ ಇಲ್ಲವೆ ಹೆಜ್ಜೆಯ ಸಪ್ಪಳ ಮುಂತಾದ ಪ್ರೇರಣೆಗಳಿಂದ ಉಂಟಾದಾಗ ಶಿಕ್ಷಿತಾನುಕ್ರಿಯೆ ಎನಿಸುತ್ತದೆ. ಈ ಶಿಕ್ಷಿತಾನುಕ್ರಿಯೆಯು ಹಿಂದೆ ಪ್ರಯೋಗ ಶಾಲೆಯಲ್ಲಿ ಇಟ್ಟ ಆ ಪ್ರಾಣಿಗೆ ಆಹಾರವನ್ನು ಕೊಟ್ಟ ಉಪಾಧಿಗಳನ್ನು ಅವಲಂಬಿಸುತ್ತದೆ. ಪಾವಲಫ್ ಇದನ್ನು ಉಪಾಹಿತ ಕ್ಷೇಪವೆಂದು (Conditioned Reflex) ಕರೆದನು.

ಆದರೆ ನಿಷ್ಕೃಷ್ಟಾರ್ಥದಲ್ಲಿ ಅದು ಕ್ಷೇಪವಲ್ಲವಾದುದರಿಂದ ಅದನ್ನು ಉಪಾಹಿತ ಅನುಕ್ರಿಯೆ (Conditioned Response) ಎಂದು ಕರೆಯಬಹುದು.

ತಟ್ಟೆಯ ನೋಟ ಇಲ್ಲವೆ ಹೆಜ್ಜೆಯ ಸದ್ದನ್ನು ಕೇಳುವುದು ಆಹಾರ ಬರುತ್ತಿದೆ ಎಂಬುದರ ಸೂಚನೆ: ಬಾಯಿಯಲ್ಲಿ ಸಾಕ್ಷಾತ್ತಾಗಿ ಆಹಾರ ಹೋಗುವ ಮೊದಲೇ ಲಾಲಾರಸ ಒಸರುವುದು ಸಿದ್ಧತೆಯ ಅನುಕ್ರಿಯೆ. ನಾಯಿಯು ಇಲ್ಲಿ ಪ್ರೇ$_{೧}$ – ಅ$_{೧}$ – ಪ್ರೇ$_{೨}$ – ಅ$_{೨}$ ಎಂಬ ಅನುಕ್ರಮವನ್ನು ಕಲಿತಿತ್ತೆಂಬುದು ಸ್ಪಷ್ಟ. ಆಹಾರದ ತಟ್ಟೆಯ ನೋಟ ಇಲ್ಲವೆ ಹೆಜ್ಜೆಯ ಸದ್ದಿನ ಕೇಳ್ಮೆ ಎಂಬ ಪ್ರೇ$_{೧}$ ಉಪಾಹಿತ ಪ್ರೇರಣೆಯಾಗಿದೆ. ಅ$_{೧}$ ಎಂಬುದು ಲಾಲಾರಸ; ಮೊದಲೇ ಒಸರುವ ರೂಪದ ಉಪಾಹಿತ ಅನುಕ್ರಿಯೆ. ಬಾಯಿಯಲ್ಲಿ ಇರುವ ಆಹಾರ ರೂಪದ ಪ್ರೇ$_{೨}$ ಅನುಪಾಹಿತ ಪ್ರೇರಣೆ. ಬಾಯಿಯಲ್ಲಿಯ ಆಹಾರದಿಂದ ಉದ್ಭವಿಸಿದ ಲಾಲಾ ಪ್ರವಾಹ ರೂಪದ ಅ$_{೨}$ ಎಂಬುದು ಅನುಪಾಹಿತ ಅನುಕ್ರಿಯೆ.

ಪಾವಲಫ್ ಮಹಾಶಯನ ಉಪಾಧಾನ ಪ್ರಯೋಗಗಳು : ಬೆಂಬಲ ಪಡೆದ ಪುನರಾವರ್ತನೆಯಿಂದ ಉಪಾಹಿತ ಅನುಕ್ರಿಯೆಯ ಸ್ಥಾಪನೆ: ಗಂಟೆಯ ಶಬ್ದ, ಚರ್ಮಸ್ಪರ್ಶ ಇಲ್ಲವೆ ಪ್ರಾಣಿಯನ್ನು ಹೆಚ್ಚು ಗಲಿಬಿಲಿಗೊಳಿಸದೆ ಅದರ ಉನ್ಮುಖತೆಯನ್ನು ಆಕರ್ಷಿಸುವ ಪ್ರೇರಣೆ ಮುಂತಾದ ಸಂಪೂರ್ಣ ನಿರಂಕುಶ ಪ್ರೇರಣೆಗೆ ಲಾಲಾನುಕ್ರಿಯೆ ಉಂಟಾಗುವಂತೆ ಉಪಾಧಿಯನ್ನು ಇಡಲು ಪಾವಲಫ್ ಪ್ರಯತ್ನಿಸಿದ. ಚೆನ್ನಾಗಿ ಸಾಕಿದ, ಪ್ರಯೋಗ ಶಾಲೆಯನ್ನು ಚೆನ್ನಾಗಿ ಪರಿಚಯ ಮಾಡಿಕೊಂಡ ಒಂದು ಹಸಿದ ನಾಯಿಯನ್ನು ಅತ್ತಿತ್ತ ಅಲುಗಾಡದಂತೆ ಕೊಕ್ಕೆ ಹಾಕಿ ಮೇಜಿನ ಮೇಲೆ ಅವನು ನಿಲ್ಲಿಸಿದನು. ಅದು ಈ ಸನ್ನಿವೇಶಕ್ಕೆ ಹೊಂದಿಕೊಂಡು ಸಮಾಧಾನವಾದ ಮೇಲೆ ವಿದ್ಯುತ್ತಿನ ಗಂಟೆಯನ್ನು ಬಾರಿಸಲು ಶುರು ಮಾಡಲಾಯಿತು. ಸುಮಾರು ೧೫ ಸೆಕೆಂಡುಗಳ ಕಾಲ ಗಂಟೆ

ಒಡಿದ ಮೇಲೆ ಅದರ ಬಾಯಿಯಲ್ಲಿ ಆಹಾರವನ್ನು ಹಾಕಲಾಯಿತು. ಕೆಲ ನಿಮಿಷಗಳ ನಂತರ ಪ್ರೇರಣೆಗಳ ಅದೇ ಅನುಕ್ರಮವನ್ನು ಪುನರಾವರ್ತಿಸಲಾಯಿತು. ಅದೇ ಮೇರೆಗೆ ನಡುನಡುವೆ ಬಿಟ್ಟುಬಿಟ್ಟು ಹಾಗೇ ಪ್ರೇರಣೆಗಳನ್ನು ಕೊಡಲಾಯಿತು. ಗಂಟೆ ಮತ್ತು ಆಹಾರರೂಪದ ಪ್ರೇರಣಾನುಕ್ರಮದ ಅನೇಕ ಪುನರಾವೃತ್ತಿಗಳಾದ ಮೇಲೆ, ಆಹಾರ ಕೊಡುವ ಮೊದಲು ಗಂಟೆ ಹೊಡೆಯುತ್ತಿರುವಾಗಲೇ ಲಾಲಾರಸ ಸ್ರವಿಸಲಾರಂಭಿಸಿತು. ಈ ಉಪಾಹಿತ ಲಾಲಾರಸದ ಅಳತೆಯು ಒಂದೊಂದು ಪ್ರಯೋಗ ಪ್ರಯತ್ನ ನಡೆದ ಹಾಗೂ ಹೆಚ್ಚುತ್ತ ಹೋಗಿ, ಒಂದು ಪರಮಾವಧಿಯನ್ನು ಮುಟ್ಟಿತು. ಆದರೆ ಈ ಪರಮಾವಧಿಯು ಬಾಯಿಯಲ್ಲಿರುವ ಆಹಾರ ಉಂಟುಮಾಡಿದ ಲಾಲಾಪ್ರವಾಹಕ್ಕಿಂತ ಕಡಿಮೆಯಾಗಿತ್ತು. ಈ ಪ್ರಕಾರ ಆ ದಿನದ ಉಪಾಹಿತ ಲಾಲಾನುಕ್ರಿಯೆಯನ್ನು ಗೊತ್ತುಪಡಿಸಲಾಯಿತು.

ಮರುದಿನ ಮೊದಲ ಸಲ ಗಂಟೆ ಬಾರಿಸಿದಾಗ ಲಾಲಾಪ್ರವಾಹ ಹರಿಯಲೇ ಇಲ್ಲ; ಆದರೆ ಪುನಃಪುನಃ ಬಾರಿಸಿದ ನಂತರ ಅದು ಉಂಟಾಯಿತು. ಇದೇ ರೀತಿಯಲ್ಲಿ ನಿತ್ಯವೂ ಪ್ರಯೋಗವನ್ನು ಮಾಡುತ್ತ ಹೋದ ಮೇಲೆ, ಕೆಲವೇ ದಿನಗಳಲ್ಲಿ, ಉಪಾಹಿತ ಅನುಕ್ರಿಯೆಯು ನಿಯತಪ್ರಮಾಣವನ್ನು ಹೊಂದಿತು. ಒಂದು ಸಲ ಹೀಗೆ ಸ್ಥಾಪಿಸಲ್ಪಟ್ಟ ಉಪಾಹಿತ ಅನುಕ್ರಿಯೆಯನ್ನು ಅನೇಕ ತಿಂಗಳ ಕಾಲ ಒಂದು ಪ್ರಾಣಿಯು ಉಳಿಸಿಕೊಳ್ಳಬಲ್ಲುದು.

ಅಳತೆಗೆ ಸಿಗುವ ಲಾಲಾರಸದ ಪ್ರಮಾಣವೆಷ್ಟೆಂಬುದನ್ನು ಅರಿಯುವುದೇ ಪಾವಲಫ್ ಮಹಾಶಯನ ಗುರಿಯಾಗಿದ್ದರೂ ಗ್ರಂಥಿಯ ಅನುಕ್ರಿಯೆಯನ್ನು ಒಂದು ಉಪಾಹಿತ ಕರ್ಮೇಂದ್ರಿಯಾನುಕ್ರಿಯೆಯು ಅನುಸರಿಸಿದ್ದನ್ನು ಕಂಡ. ಆಹಾರ ಕೊಡುವ ಮೊದಲು ಗಂಟೆ ಹೊಡೆಯುತ್ತಿದ್ದಾಗ ನಾಯಿಯು ಆಹಾರದತ್ತ ತನ್ನ ಕತ್ತನ್ನು ತಿರುಗಿಸುತ್ತಿತ್ತು. ಗ್ರಂಥಿಯ ಮತ್ತು ಕರ್ಮೇಂದ್ರಿಯದ ಉಪಾಹಿತ ಅನುಕ್ರಿಯೆಗಳ ಮೊತ್ತವು ಆಹಾರ ಸ್ವೀಕಾರದ ಸಿದ್ಧತೆಯಾಗಿತ್ತು. ಒಟ್ಟಿನಲ್ಲಿ ಈ ಸಿದ್ಧತಾನುಕ್ರಿಯೆಯು ಆಹಾರವನ್ನು ತಿನ್ನುವ ಅಂತ್ಯಾನುಕ್ರಿಯೆಯಿಂದ ಭಿನ್ನ. ಏಕೆಂದರೆ, ಅದರ ಗ್ರಂಥೀಯ ಭಾಗವು ಪ್ರಮಾಣವೊಂದನ್ನು ಬಿಟ್ಟು ಮಿಕ್ಕ ವಿಷಯದಲ್ಲಿ ಒಂದೇ ಆಗಿತ್ತು ಮತ್ತು ಆಹಾರವನ್ನು ಸಮೀಪಿಸುವ ಸಿದ್ಧತೆಯ ರೂಪದ ಚಲನೆಯು ಅದನ್ನು ಅಗಿವ ಕೊನೆಯ ಕೆಲಸಕ್ಕಿಂತ

ತೀರ ಭಿನ್ನವಾಗಿತ್ತು. ಆಹಾರ ಕೊಡುವ ನಿಯತ ಕಾಲವನ್ನು ಸೂಚಿಸಲು ಗಂಟೆ ಹೊಡೆದ ಮೇಲೆಯೇ ಯಾವಾಗಲೂ ಆಹಾರವನ್ನು ಕೊಡುತ್ತಿದ್ದುದು ಈ ಸಂದರ್ಭದಲ್ಲಿ "ಬೆಂಬಲ"ವೆನಿಸುತ್ತದೆ.

ಬೆಂಬಲ ಕೊಡದೆ ಪುನರಾವೃತ್ತಿಯಿಂದ ಉಪಾಹಿತ ಅನುಕ್ರಿಯೆಯನ್ನು ಹೋಗಲಾಡಿಸುವುದು: ಅನುಪಾಹಿತ ಪ್ರೇರಣೆಯನ್ನು ಅನುಗತವಾಗಿ ಕೊಡದೆ ಉಪಾಹಿತ ಪ್ರೇರಣೆಯನ್ನು ಪದೇಪದೇ ಕೊಡುವುದರಿಂದ ಒಂದು ಉಪಾಹಿತ ಅನುಕ್ರಿಯೆನ್ನು ಹೋಗಲಾಡಿಸಬಹುದು ಎಂಬುದು ಪಾವಲಫ್ ಮಹಾಶಯನ ಒಂದು ಮುಖ್ಯ ಶೋಧ. ಗಂಟೆಯನ್ನು ಹೊಡೆಯಿರಿ, ಆದರೆ ಅನ್ನವನ್ನು ಹಾಕಬೇಡಿರಿ; ಪ್ರೇಗ್ನನ್ನು ಕೊಡಿರಿ. ಆದರೆ ಪ್ರೀತಿನ್ನು ಕೊಡಬೇಡಿರಿ.

ತನ್ನ ಒಂದು ಪ್ರಯೋಗದಲ್ಲಿ ಪಾವಲಫ್ ಬಡಿವ ಕಾಲಲೋಲಕವನ್ನು ಉಪಾಹಿತ ಪ್ರೇರಣೆಯನ್ನಾಗಿ ಮಾಡಿದಾಗ ಕೆಲದಿನಗಳಲ್ಲಿ ಉಪಾಹಿತ ಲಾಲಾನುಕ್ರಿಯೆಯನ್ನು ನಿಷ್ಕರ್ಷಿಸಿದ. ಅನಂತರ ಒಂದು ದಿನ ಹಿಂದಿನಂತೆಯೇ ಕಾಲಲೋಲಕವನ್ನು ಬಡಿಯಲಾಯಿತು. ಆ ಕೂಡಲೇ ಸಾಕಷ್ಟು ಲಾಲಾಪ್ರವಾಹ ಉಂಟಾಯಿತು. ಆದರೆ ಬೆಂಬಲರೂಪದ ಆಹಾರವಾವುದನ್ನೂ ನಾಯಿಗೆ ಕೊಡಲಿಲ್ಲ. ಅಂಥ ಎರಡನೆಯ ಪ್ರಯೋಗದಲ್ಲಿ ಮೂರು ನಿಮಿಷಗಳ ನಂತರ ಪ್ರವಾಹದ ಪ್ರಮಾಣವು ಕಡಿಮೆಯಾಯಿತು. ಆ ಮೇಲೂ ಆಹಾರವನ್ನು ಕೊಡಲಿಲ್ಲ. ಇದೇ ಪ್ರಕಾರ ಕಾಲಲೋಲಕವು ಲಾಲಾನುಕ್ರಿಯೆಯನ್ನು ಉಂಟು ಮಾಡಲು ಸಂಪೂರ್ಣವಾಗಿ ಅಶಕ್ತವಾಗುವವರೆಗೆ ಅದೇ ಕ್ರಮವನ್ನು ಪದೇ ಪದೇ ಅನುಸರಿಸಲಾಯಿತು. ಉಪಾಹಿತ ಅನುಕ್ರಿಯೆಯು ಕ್ರಮವಾಗಿ ಅಳಿದು ಹೋಗುವುದರ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ.

ಕಾಲಲೋಲಕವು ಪ್ರೇರಣೆ ಕೊಡಲಾರಂಭಿಸಿದ ಕಾಲ	ಲಾಲಾಬಿಂದುಗಳ ಪ್ರಮಾಣ
೧೨.೦೭ ಉ.ರೇ.	೧೩
೧೨.೧೦ ,,	೭
೧೨.೧೩ ,,	೫
೧೨.೧೬ ,,	೬
೧೨.೧೯ ,,	३

೧೨.೨೨ ,,	೨.೫
೧೨.೫೫ ,,	೦
೧೨.೨೮ ,,	೦

ಒಂದು ಅಥವಾ ಎರಡು ಸಲ ಬೆಂಬಲ ಕೊಡಿರಿ; ಆ ಕೂಡಲೆ ಉಪಾಹಿತ ಅನುಕ್ರಿಯೆ ಪುನಃ ಉಂಟಾಗುತ್ತದೆ. ಉಪಾಹಿತ ಅನುಕ್ರಿಯೆ ನಷ್ಟವಾದ ಮೇಲೆ ಯಾವ ಬೆಂಬಲವನ್ನೂ ಕೊಡಬೇಡಿರಿ; ಆದರೆ ನಾಯಿಗೆ ಸುಮ್ಮನೆ ವಿಶ್ರಾಂತಿ ಕೊಡಿರಿ; ಮತ್ತು ಮರುದಿನವೇ ಉಪಾಹಿತ ಅನುಕ್ರಿಯಾಶಕ್ತಿಯನ್ನು ನಾಯಿಯು ಪುನಃ ಪಡೆದುಕೊಳ್ಳುವುದನ್ನು ನೋಡುತ್ತೀರಿ. ಕಾಲಲೋಲಕ ಬಡಿದ ಕೂಡಲೇ ಲಾಲಾರಸವು ಹರಿಯುತ್ತದೆ. ಆ ದಿನವೂ ಅನ್ನ ಹಾಕದಿದ್ದರೆ ಉಪಾಹಿತ ಅನುಕ್ರಿಯೆಯು ನಾಶವು ಹೆಚ್ಚು ಬೇಗ ಆಗುತ್ತದೆ. ಇದನ್ನು ಪದೇ ಪದೇ ದಿನ ದಿನವೂ ಯಾವ ಬೆಂಬಲವನ್ನೂ ಕೊಡದೆ ನಡೆಸಿದರೆ, ಉಪಾಹಿತ ಅನುಕ್ರಿಯಾ ಶಕ್ತಿಯನ್ನು ನಾಯಿಯು ಸಂಪೂರ್ಣವಾಗಿ ಕಳೆದುಕೊಳ್ಳುತ್ತದೆ. ಮೂಲತಃ ಉಪಾಹಿತ ಅನುಕ್ರಿಯೆಯ ನಾಶವೂ ನೈಷೇಧಿಕ ಹೊಂದಿಕೆಯೂ ಒಂದೇ. ಈ ಎರಡರಲ್ಲಿಯೂ ಪುನಃಪುನಃ ಕೊಟ್ಟ ಪ್ರೇರಣೆಗೆ ಮಾಡುವ ವ್ಯರ್ಥಾನುಕ್ರಿಯೆಯ ಕ್ರಮಿಕ ನಿವಾರಣೆಯು ಕಂಡುಬರುತ್ತದೆ.

ವಿಲಂಬಿತ ಬೆಂಬಲದಿಂದ ವಿಲಂಬಿತ ಉಪಾಹಿತಾನುಕ್ರಿಯೆ: ಆಹಾರವನ್ನು ಕೊಡುವುದಕ್ಕೆ ಒಂದು ನಿಮಿಷ, ಮುಂಚೆ ಗಂಟೆ ಅಥವಾ (ಕಾಲಲೋಲಕ) ಹೊಡೆಯಲಿ. ಉಪಾಹಿತ ಅನುಕ್ರಿಯೆಯು ಮೊದಲ ಸಲ ಉಂಟಾಗುವ ಉಪಾಧಾನದ ಪ್ರಥಮ ಪ್ರಕ್ರಿಯೆಯಲ್ಲಿ ಉಕ್ತ ಅನುಕ್ರಿಯೆಯು ಸದ್ದಿನ ಒಡನೆಯೇ ಎಂಬಂತೆ ಶುರುವಾಗುತ್ತದೆ ಆಗ ಲಾಲಾರಸ ಹರಿಯಲು ತೊಡಗುತ್ತದೆ ಮತ್ತು ತಡ ಮಾಡಿದ ಇಡಿ ನಿಮಿಷದ ತನಕವೂ ಹಾಗೇ ಅದು ಹರಿಯುತ್ತ ಹೋಗುವುದು. ದಿನ ಹೋದ ಹಾಗೆ ಉಪಾಧಾನವನ್ನು ಮುಂದುವರಿಸಿದಾಗ, ನಿಮಿಷವು ಸಂಪೂರ್ಣವಾಗಿ ಕಳೆದು ಹೋಗುವ ವರೆಗೂ ಉಕ್ತ ಅನುಕ್ರಿಯೆಯು ವಿಲಂಬಿತವಾಗುತ್ತದೆ. ಮೊದಲಿನ ನಿಮಿಷಾರ್ಧ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚುಕಾಲ ನಾಯಿಯು ತನ್ನ ಸ್ತಬ್ಧಾವಸ್ಥೆಯಲ್ಲಿ ತೂಕಡಿಸುತ್ತ ಕುಸಿದು ಬೀಳುತ್ತದೆ; ಅದರ ನಾಲಿಗೆಯಲ್ಲಿ ಲಾಲಾರಸ ಹೊರಡುವುದಿಲ್ಲ. ಆದರೆ ನಿಮಿಷ ಮುಗಿಯುವ ಹೊತ್ತಿಗೆ ಅದು ಸರಕ್ಕನೆ ತಲೆ ಎತ್ತುತ್ತದೆ ಮತ್ತು

ಅದರ ಬಾಯಿಯಿಂದ ಲಾಲಾರಸ ಹರಿಯಲಾರಂಭಿಸುತ್ತದೆ. ಅದು ಪ್ರೇರಣೆಯ ಕಾಲನಿರ್ದೇಶಕ್ಕೆ ಹೊಂದಿಕೊಂಡಿದೆ; ಅದು ದ್ವಿಮುಖವಾದ ಉಪಾಹಿತ ಅನು ಕ್ರಿಯೆಯನ್ನು ಕಲಿತಿದೆ! ಮೊದಲು ಕಾದಿರುವುದಕ್ಕೆ ಪೂರ್ವಸಿದ್ಧತೆಯಾದ ಸಪ್ಪೆತನ; ಅನಂತರ ಆಹಾರಸ್ವೀಕಾರಕ್ಕೆ ಪೂರ್ವಸಿದ್ಧತೆ ಎಂದು ಎಷ್ಟು ಜೊಲ್ಲು ಸುರಿಸುವುದು.

ಆಯ್ದ ಬೆಂಬಲದಿಂದ ಆಯ್ದ ಉಪಾಧಾನವನ್ನು ಸಾಧಿಸಿಕೊಳ್ಳುವುದು: ಉಪಾಧಾನದಲ್ಲಿ ಸೂಚನೆ ಎಂದು ಬಳಸಿಕೊಳ್ಳುವ, ನಿಯತ ಪ್ರೇರಣೆಯನ್ನು ಹೋಲುವ ಯಾವದಾದರೊಂದು ಆಕಸ್ಮಿಕ ಪ್ರೇರಣೆಯಿಂದ ಉಪಾಹಿತಾನುಕ್ರಿಯೆಯನ್ನು ಹುಟ್ಟಿಸಬಹುದು. ಈ ದೃಷ್ಟಿಯಲ್ಲಿ ಅದು ಸ್ವಲ್ಪ ಯಾಂತ್ರಿಕವಾಗುತ್ತದೆ. ಇಲ್ಲಿಯ ವರೆಗೆ ಬಳಸಲಾದ ಉಪಾಹಿತ ಪ್ರೇರಣೆ ಕೊಡುವ ವಿದ್ಯುತ್ತಿನಗಂಟೆಗೆ ಬದಲಾಗಿ ತಂಬಟೆಯೊಂದನ್ನು ಬಳಸಿದರೆ ಸ್ವಲ್ಪ ದುರ್ಬಲವಾದರೂ ನಿಯತವಾದ ಉಪಾಹಿತ ಅನುಕ್ರಿಯೆ ನಾಯಿಯಿಂದ ನಮಗೆ ದೊರಕುತ್ತದೆ.

ಒಂದು ನಿರ್ದಿಷ್ಟ ಉಪಾಹಿತ ಪ್ರೇರಣೆಯನ್ನು ಸುಮಾರಾಗಿ ಹೋಲುವ ಇತರ ಪ್ರೇರಣೆಗೂ ಆ ನಿರ್ದಿಷ್ಟ ಉಪಾಹಿತ ಪ್ರೇರಣೆಗೇ ಮೀಸಲಾದ ಒಂದು ಉಪಾಹಿತ ಅನುಕ್ರಿಯೆಯು ಕೆಲಸ ಮಾಡಬಹುದು. ಇದನ್ನು ಪ್ರೇರಣೆಯ ಸಾಧಾರಣೀಕರಣ (Stimulus Generalization) ಎನ್ನುತ್ತಾರೆ.

ನಿರ್ದಿಷ್ಟ ಉಪಾಹಿತ ಪ್ರೇರಣೆಯನ್ನು ಕಡಿಮೆ ಕಡಿಮೆ ಹೋಲಿದಷ್ಟೂ ಬದಲು-ಪ್ರೇರಣೆಗಳು ಅಲ್ಪಪರಿಣಾಮಕರಗಳಾಗುತ್ತವೆ. ಇದನ್ನು 'ಸಾಧಾರಣೀಕರಣ ಶ್ರೇಣಿ' ಎನ್ನುತ್ತಾರೆ. ಆಯ್ದು ಬೆಂಬಲವನ್ನು ಉಪಯೋಗಿಸಿಕೊಳ್ಳುವುದರಿಂದ ಆರಂಭದ ಸಾಧಾರಣೀಕರಣವನ್ನು ಗೆದ್ದುಕೊಳ್ಳುವುದಕ್ಕೆ ವಿಂಗಡಣೆ ಎಂದು ಹೆಸರು. ನಾಯಿಯು ಬೇರೆ ಬೇರೆ ಪ್ರೇರಣೆಗಳಿಗೆ ಬೇರೆಬೇರೆಯಾಗಿ ಅನುಕ್ರಿಯೆದೋರುವುದನ್ನು ಕಲಿಯುವುದರಿಂದ ವಿಂಗಡಣೆ ಎಂದರೆ ವಿಂಗಡಿಸುವುದೆಂದೇ ಅರ್ಥ.

ಯಾವ ಆಕರ್ಷಕ ಮನುಷ್ಯನನ್ನು ಕಂಡರೂ ಮಗು "ಅಪ್ಪಾ" ಎಂದು ಕರೆಯಲಾರಂಭಿಸಿದರೆ ಅದು ಮಾಡುವುದು ಪ್ರೇರಣೆಯ ಸಾಧಾರಣೀಕರಣ ಎಂದೆನಿಸುತ್ತದೆ. ಅದರ ಸಾಮಾಜಿಕ ಆವರಣ ಕೊಡುವ ಆಯ್ದು ಬೆಂಬಲವು

ಕೂಡಲೇ ಅದರ ತಪ್ಪನ್ನು ತಿದ್ದುತ್ತದೆ.

ಸನ್ನಿವೇಶಕ್ಕೆ ಹೊಂದಿಕೊಳ್ಳುವುದು ಉಪಾಧಾನದ ಯಶಸ್ವಿ ಪ್ರದರ್ಶನಕ್ಕೆ ಆವಶ್ಯಕ. ನಾಯಿಗೆ ಪ್ರಯೋಜಕನು ಚೆನ್ನಾಗಿ ಪರಿಚಿತನಾಗಿರುವುದು ಮತ್ತು ಅದು ಪ್ರಯೋಗಶಾಲೆಯ ಆವರಣಕ್ಕೆ ಹೊಂದಿಕೊಂಡದ್ದಾಗಿರುವುದು ಈ ಪ್ರಯೋಗಗಳ ಯಶಸ್ಸಿಗೆ ಅನಿವಾರ್ಯ ಕಾರಣಗಳು. ನಡುವೆ ಭಂಗವನ್ನು ತರುವ ಯಾವುದಾದರೊಂದು ಪ್ರೇರಣೆಯು ನಾಯಿಯ ಹೊಂದಿಕೆಯನ್ನು ತಾತ್ಕಾಲಿಕವಾಗಿ ಕೆಡಿಸಬಹುದು. ಅಲ್ಲದೆ ಉಪಾಧಾನದಲ್ಲಿ ಕೈಹಾಕಿ ಅದನ್ನು ನಾಶಮಾಡಬಹುದು ಇಲ್ಲವೆ ವಿಂಗಡಣೆಗೆ ಗುರಿಪಡಿಸಬಹುದು. ಯೋಜ್ಯವಾಗಿ ತೆಗೆದುಕೊಳ್ಳುವ ಪ್ರಾಣಿಯ ಉನ್ಮುಖತೆ ಭಾಸವಾಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯವೆಂದು ಪಾವಲಫ್ ತಿಳಿದಿದ್ದನು. ಅದಕ್ಕಾಗಿ ಅವನು ಉಪಾಹಿತ ಕ್ಷೇಪ ಪ್ರಯೋಗಗಳಿಗೆಂದೇ ಒಂದು ವಿಶಿಷ್ಟವಾದ ಪ್ರಯೋಗಶಾಲೆಯನ್ನು ಕಟ್ಟಿಸಿದ್ದನು. ಅದರಲ್ಲಿ ಹೊರಗಿನ ಬೆಳಕು, ಸದ್ದು ಮುಂತಾದವು ಒಳಗೆ ಬರದಂತೆ ಬಲವಾದ ವ್ಯವಸ್ಥೆಯನ್ನು ಮಾಡಿದ್ದನಲ್ಲದೆ, ಪ್ರಯೋಜಕನು ಕೂಡ ಪ್ರಯೋಗ ಕಾಲದಲ್ಲಿ ಅದಕ್ಕೆ ಕಾಣಿಸಿಕೊಳ್ಳದೆ ಇರಲು ಬೇಕಾದ ಅನುಕೂಲತೆಗಳನ್ನು ಮಾಡಿದ್ದನು.

ಮನುಷ್ಯರಲ್ಲಿ ಉಪಾಹಿತ ಅನುಕ್ರಿಯೆ: ಮೊದಲ ಬಾರಿಗೆ ಎಳೆಮಕ್ಕಳ ಎದುರು ನಗಾರಿ ಬಾರಿಸಿದರೆ ಅವು ಹೆದರಿ ಅಳುತ್ತವೆ. ಈ ಕ್ರಮವನ್ನು ಕೆಲವು ದಿನಗಳ ವರೆಗೆ ಅನುಸರಿಸಿದರೆ, ಅವು ಉಪಾಹಿತರಾಗುವ ಲಕ್ಷಣಗಳನ್ನು ತೋರಿಸುತ್ತವೆ. ಅಂದರೆ ಅವು ನಗಾರಿ ಬಾರಿಸಿದಾಗ ಅಳುವುದನ್ನು ನಿಲ್ಲಿಸುತ್ತವೆ, ಸುಮ್ಮನೆ ಬಾಯಿ ತೆರೆಯುತ್ತವೆ ಇಲ್ಲವೆ ಬಾಯಿ ಚಪ್ಪರಿಸುತ್ತವೆ. ನಾಲ್ಕು ವರ್ಷದ ವರೆಗೆ ಮಗು ಬೆಳೆಯುತ್ತ ಹೋದಹಾಗೆ ಉಪಾಧಾನ ಸುಲಭವಾಗುತ್ತ ಹೋಗುತ್ತದೆ. ಆದರೆ ಆ ವಯಸ್ಸಿನ ನಂತರ ಮನುಷ್ಯನನ್ನು ಉಪಾಧಿಗೆ ಒಳಪಡಿಸುವುದು ಕಷ್ಟಕರವಾಗುತ್ತದೆ ಎಂದು ತೋರುತ್ತದೆ. ಕೆಲ ಪ್ರೌಢ ಮನುಷ್ಯರಲ್ಲಿ ಉಪಾಹಿತ ಲಾಲಾನುಕ್ರಿಯೆಯನ್ನು ಪ್ರಾಯೋಗಿಕವಾಗಿ ಸ್ಥಾಪಿಸಬಹುದು. ಆದರೆ ಅದು ನಾಯಿಗಳಲ್ಲಿ ಕಂಡುಬಂದದ್ದರಷ್ಟು ಅವಲಂಬನೀಯವಲ್ಲ. ಸಾಮಾನ್ಯಜೀವನದಲ್ಲಿ ಆಹಾರವನ್ನು ಕಂಡ ಕೂಡಲೆ, ಊಟದ ಗಂಟೆಯನ್ನು ಬಾರಿಸಿದೊಡನೆಯೆ ಅಥವಾ ಯಾವನಾದರೊಬ್ಬನು ನಮ್ಮ ಎದುರು

ಲಿಂಬೆ ಪಾನಕವನ್ನು ವರ್ಣಿಸಿದ ಕೂಡಲೆ ನಮ್ಮ ನಾಲಿಗೆಯಲ್ಲಿ ನೀರೂರುತ್ತದೆ. ಆದರೆ ಪ್ರಯೋಗ ಶಾಲೆಯಲ್ಲಿ ಹೊಕ್ಕ ಪ್ರೌಢನೊಬ್ಬನು ತನ್ನ ಬಾಯಿಯಲ್ಲಿ ಕೃತಕವಾಗಿ ನೀರನ್ನು ಬರಿಸಿ ಹುಚ್ಚನನ್ನಾಗಿ ಮಾಡುತ್ತಾರೆ, ತನಗೆ ಇಚ್ಛೆ ಇಲ್ಲದ ಕೆಲಸವನ್ನು ಮಾಡಿಸುತ್ತಾರೆ ಎಂದು ಮುಂತಾಗಿ ಭಾವಿಸಬಹುದು. ಕೆಲವರು ಮಿಕ್ಕವರಿಗಿಂತ ಹೆಚ್ಚು ಜೋರಾಗಿ ಪ್ರತಿಭಟಿಸಬಹುದು; ಮತ್ತು ಒಬ್ಬನೇ ವ್ಯಕ್ತಿಯ ಮನೋವೃತ್ತಿಯು ಕಾಲಕಾಲಕ್ಕೆ ಬದಲಾಯಿಸಬಹುದು. ಆದುದರಿಂದ ಪ್ರಯೋಗ ಶಾಲೆಯ ಉಪಾಹಿತ ಅನುಕ್ರಿಯೆಯು ಅವಲಂಬನೀಯವಲ್ಲ.

ಮನುಷ್ಯನ ಮೇಲೆ ಉಪಾಧಾನ ಪ್ರಯೋಗಗಳನ್ನು ಮಾಡಿದರೆ ಸಾಮಾನ್ಯವಾಗಿ ನಿಷ್ಫಲವಾಗುತ್ತದೆ ಎಂದು ಯಾರೂ ತಿಳಿದುಕೊಳ್ಳಬಾರದು. ಪ್ರಯೋಜಕನು ಒಳ್ಳೆಯ ತಂತ್ರವನ್ನು ಬಳಸಿದ್ದೇ ಆದರೆ ಅಂಥ ಪ್ರಯೋಗಗಳು ಸ್ಥಾಪನೆ (Establishment), ನಾಶ (Extinction) ಇಲ್ಲವೆ ವಿಂಗಡಣೆ (Differentiation) ಎಂಬ ಮೂರರಲ್ಲಿ ಒಂದು ರೂಪದ ಉಪಾಹಿತ ಅನುಕ್ರಿಯೆಯಲ್ಲಿ ಪರಿಣಮಿಸುತ್ತವೆ. ಸಿದ್ಧತಾಸೂಚನೆ ಮತ್ತು ವಿದ್ಯುತ್ತಿನ ಉತ್ಕಂಪ ಕೊಟ್ಟಾಗ ಕೈಯನ್ನು ಹಿಂದೆ ಸರಿಸಿಕೊಳ್ಳುವುದಕ್ಕೆ ಪೂರ್ವಸಿದ್ಧತೆ ಎನಿಸುವ ಉಪಾಹಿತ ಅನುಕ್ರಿಯೆಗಳನ್ನು ಯಶಸ್ವಿಯಾಗಿ ಸಿದ್ಧಾಂತಿಸಲಾದದ್ದು ಮೇಲಿನ ಮಾತಿಗೆ ಉದಾಹರಣೆ.

ಅಧ್ಯಾಯ ಎಂಟು

ಸ್ಮೃತಿ

ಹಿಂದೆ ಕಲಿತದ್ದನ್ನು ಕ್ರಮಶಃ ಸಮನ್ವಯಿಸಿಕೊಳ್ಳುವುದೇ ಸ್ಮೃತಿ. ಅದಕ್ಕೆ ಕಲಿಯುವಿಕೆ, ಧಾರಣೆ ಮತ್ತು ಸ್ಮೃತಿಸಮನ್ವಯ ಎಂಬ ಮೂರು ಅಂಗಗಳಿವೆ. ಸ್ಮೃತಿ ಸಮನ್ವಯದಲ್ಲಿ ಜ್ಞಾಪನ ಮತ್ತು ಪ್ರತ್ಯಭಿಜ್ಞಾನ ಎಂಬ ಎರಡು ಪ್ರಕ್ರಿಯೆಗಳು ಅಡಗಿವೆ. ಕಲಿಯುವುದೆಂದರೆ ಏನೆಂಬುದನ್ನು ಹಿಂದೆಯೇ ಹೇಳ ಲಾಗಿದೆ. ಎರಡನೆಯ ಅಂಗವಾದ ಧಾರಣೆಯು ನಿಷ್ಕ್ರಿಯಾ ಸ್ವರೂಪದ್ದು. ಸ್ಮೃತಿ ಸಮನ್ವಯವಾದರೋ ಸಕ್ರಿಯ ಸ್ವರೂಪವುಳ್ಳದ್ದು.

ಸ್ಮೃತಿಪ್ರಯೋಗದ ಸಾಮಾನ್ಯ ಯೋಜನೆ ಹೀಗಿರುತ್ತದೆ: ಕ+ಮ+ ಸ್ಮೃ. ಸ. ಈ ಸೂತ್ರದಲ್ಲಿ ಕ ಎಂದರೆ ಕಲಿಯುವಿಕೆ, ಮ ಎಂದರೆ ಧಾರಣೆಯ ಮಧ್ಯಕಾಲ, ಸ್ಮೃ. ಸ. ಎಂದರೆ ಸ್ಮೃತಿಸಮನ್ವಯ. ಅವಸರದ ಕಲಿಯುವಿಕೆಗೆ ಅನುಕೂಲವಾದ ಸನ್ನಿವೇಶವಾವುದೆಂಬುದನ್ನು ಕಂಡುಹಿಡಿಯಬೇಕಾಗಿದ್ದಾಗ ನಾವು ಕಲಿಯುವಿಕೆಗೆ ಅನುಕೂಲವಾದ ಸನ್ನಿವೇಶಗಳನ್ನು ಬದಲಾಯಿಸು ತ್ತೇವೆ; ಧಾರಣೆಯ ಕಾಲವನ್ನು ಕಡಿಮೆ ಮಾಡುತ್ತೇವೆ ಮತ್ತು ಸ್ಮೃತಿಸಮ ನ್ವಯ ಕಾಲವನ್ನು ಹಾಗೇ ಇಡುತ್ತೇವೆ. ಧಾರಣೆಯ ನಿಯಮಗಳನ್ನು ಕಂಡು ಹಿಡಿಯಬೇಕಾಗಿದ್ದಾಗ ನಾವು ಅದರ ಮಧ್ಯಕಾಲದ ಅಳತೆಯನ್ನು ಬದಲು ಮಾಡುತ್ತೇವೆ ಇಲ್ಲವೆ ಯೋಜ್ಯನನ್ನು ಕಾರ್ಯಾಂತರದಲ್ಲಿ ಮಗ್ನನನ್ನಾಗಿ ಮಾಡುತ್ತೇವೆ ಮತ್ತು ಸ್ಮೃತಿಸಮನ್ವಯವನ್ನು ಹಾಗೇ ಇಡುತ್ತೇವೆ. ನಾವು ಜ್ಞಾಪನಕ್ರಿಯೆಯಲ್ಲಿ ಇಲ್ಲವೆ ಪ್ರತ್ಯಭಿಜ್ಞಾನದಲ್ಲಿ ಕುತೂಹಲಿಗಳಾಗಿದ್ದರೆ ಸ್ಮೃತಿಸಮನ್ವಯದ ಸನ್ನಿವೇಶಗಳನ್ನು ಬದಲಾಯಿಸಿ ಕಲಿಯುವಿಕೆಯ ಮತ್ತು ಧಾರಣೆಯ ಮಧ್ಯಕಾಲಗಳನ್ನು ಹಾಗೇ ಇಡುತ್ತೇವೆ. ಕಲಿಯುವಿಕೆಯ ಸನ್ನಿ ವೇಶಗಳ ವೈವಿಧ್ಯ: ಒಬ್ಬನಿಗೆ ಒಂದು ಅವತರಣಿಕೆಯನ್ನು ಕಲಿಯಲು ಹೇಳು ವುದು ಅರ್ಥಾತ್ ಸುಸಂಬದ್ಧ ವಾಕ್ಯಸಮುದಾಯವನ್ನು ಅಭ್ಯಾಸ ಮಾಡಲು ಹೇಳುವುದು ಅವನಿಗೆ ಸುಸಂಬದ್ಧ ವಸ್ತುನಾಮಗಳನ್ನು ಕಲಿಯಲು ಹೇಳು

ವುದು, ಅಸಂಬದ್ಧ ವಸ್ತುನಾಮಗಳನ್ನು ಕಲಿಯಲು ಹೇಳುವುದು ಮತ್ತು ಅರ್ಥವಿಲ್ಲದ ಅಕ್ಷರಗಳನ್ನು ಕಲಿಯಲು ಹೇಳುವುದು. ಧಾರಣೆಯ ಮಧ್ಯಕಾಲವನ್ನು ಬದಲಾಯಿಸುವುದು ಎಂದರೆ ಆ ಕಾಲದ ಅಂತರವನ್ನು ಹೆಚ್ಚು ಅಥವಾ ಕಡಿಮೆ ಮಾಡುವುದು. ಸ್ಮೃತಿಸಮನ್ವಯವನ್ನು ಬದಲು ಮಾಡುವುದೆಂದರೆ, ಕಲಿಯಲು ಎದುರಿಟ್ಟ ಅವತರಣಿಕೆಯ ಪಠನದ ಪುನರಾವೃತ್ತಿಸಂಖ್ಯೆಯನ್ನು ಬದಲಾಯಿಸುವುದು.

ಅಂತರಿತ ಕಲಿಯುವಿಕೆ ಮತ್ತು ಅನಂತರಿತ ಕಲಿಯುವಿಕೆ: ಈ ಎರಡು ಬಗೆಯ ಕಲಿಯುವಿಕೆಗಳಲ್ಲಿ ಯಾವುದು ಹೆಚ್ಚು ಲಾಭಕರ ಎಂಬ ಬಗ್ಗೆ ಅನೇಕ ಪ್ರಯೋಗಗಳೂ ವಿವಾದಗಳೂ ನಡೆದವು. ಈಗ ಅಂತರಿತ ಕಲಿಯುವಿಕೆಯಿಂದಲೇ ಹೆಚ್ಚು ಲಾಭವುಂಟೆಂಬ ಅಭಿಪ್ರಾಯ ಮೆಲ್ಲಮೆಲ್ಲನೆ ಬಲಗೊಳ್ಳುತ್ತಿದೆ. ಅದು ಅನಂತರಿತ ಕಲಿಯುವಿಕೆಗಿಂತ ಹೆಚ್ಚು ಕಾಲ ಉಳಿಯುವುದು ಮತ್ತು ಹೆಚ್ಚು ಪರಿಣಾಮಕಾರಿಯಾಗುವುದು. ಪರೀಕ್ಷೆಗೆ ಮುಂಚೆ ವಿದ್ಯಾರ್ಥಿಯೊಬ್ಬನು ಒಂದು ವಿಷಯವನ್ನು ಅವಸರದಿಂದ ಉರುಹೊಡೆಯುವುದರಿಂದ ಅವನು ಪ್ರಥಮಶ್ರೇಣಿಯಲ್ಲೇನೋ ತೇರ್ಗಡೆಯಾದಾನು. ಆದರೆ ಪರೀಕ್ಷೆಯಾದ ಸ್ವಲ್ಪ ಕಾಲದಲ್ಲೇ ಅವನಿಗೆ ಕಲಿತದ್ದೆಲ್ಲ ಮರೆತು ಹೋಗಬಹುದು. ಹಾಗಲ್ಲದೆ ಒಂದು ವಿಷಯವನ್ನು ಸ್ಮೃತಿಗತ ಮಾಡಿಕೊಳ್ಳುವ ಪ್ರಯತ್ನಗಳಲ್ಲಿ ನಡುನಡುವೆ ನ್ಯಾಯವಾದ ಕಾಲಾವಧಿಗಳನ್ನು ಇಟ್ಟುಕೊಂಡರೆ ಹಾಗೆ ಕಲಿತದ್ದು ಮನಸ್ಸಿನಲ್ಲಿ ಬಹಳ ಕಾಲ ನಿಲ್ಲುವುದು.

ಇಡಿಯಾಗಿ ಮತ್ತು ಬಿಡಿಬಿಡಿಯಾಗಿ ಕಲಿಯುವುದು: ಸಾಮಾನ್ಯವಾಗಿ ಎಲ್ಲರೂ ಕೊಟ್ಟ ವಿಷಯವನ್ನು ಬಿಡಿಬಿಡಿಯಾಗಿ ಕಲಿಯುವುದೇ ರೂಢಿ. ಒಂದು ಪದ್ಯದಲ್ಲಿ ೩೦ ಸಾಲುಗಳಿದ್ದರೆ ಒಂದು ಸಾಲನ್ನು ಕಲಿತು ಅನಂತರ ಇನ್ನೊಂದನ್ನು ಕಲಿಯಹೋಗುವುದು ಸಾಮಾನ್ಯ; ಆದರೆ ಅದು ಅಷ್ಟು ಲಾಭಕರವಾದ ಕ್ರಮವಲ್ಲ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ. ಇಡಿ ವಿಷಯವನ್ನು ಎತ್ತಿಕೊಂಡು ಕಲಿಯುವ ಕ್ರಮವೇ ಅತ್ಯಂತ ಲಾಭಕರ. ಇಡಿ ಪದ್ಯವನ್ನು ಪದೇ ಪದೇ ಇಡಿಯಾಗಿ ಓದಿ ಅದನ್ನು ಸ್ಮೃತಿಗತ ಮಾಡಿಕೊಳ್ಳುವುದು ಅದರ ಬಿಡಿ ಸಾಲುಗಳನ್ನು ಒಂದೊಂದನ್ನಾಗಿ ತೆಗೆದುಕೊಂಡು ಸ್ಮೃತಿಗತ ಮಾಡಿಕೊಳ್ಳುವುದಕ್ಕಿಂತ ಹೆಚ್ಚು ಫಲಪ್ರದ. ಈ ಎರಡನೆಯ ಕ್ರಮ

ಸುಮಾರು ೨೪೦ ಸಾಲುಗಳ ವರೆಗೆ ಯೋಗ್ಯವೆಂದು ಕಂಡುಬಂದಿದೆ. ಎರಡನೆಯ ಕ್ರಮದ ಸಾಫಲ್ಯಕ್ಕೆ, ಅಪಸಂಯೋಜನೆಗಳ (Erroneous Bonds) ಸಂಖ್ಯೆ ಅದರಲ್ಲಿ ಕಡಿಮೆಯಾಗುವುದೇ ಕಾರಣ. ಪದ್ಯವನ್ನು ಒಂದು ಸಲಕ್ಕೆ ಒಂದು ಸಾಲಿನಂತೆ ಕಲಿಯುವಾಗ ಒಂದು ನುಡಿಯ ಮೊದಲ ಸಾಲಿಗೂ ಕಡೆಯ ಸಾಲಿಗೂ ನಡುವೆ ಒಂದು ವಿಧವಾದ ಸಂಯೋಗ ಉಂಟಾಗುತ್ತದೆ. ಈ ಸಂಯೋಗವನ್ನು ಅನಂತರ ನಿಷ್ಫಲವೆಂದು ಬಿಡಬೇಕಾಗುತ್ತದೆ. ಅಲ್ಲದೆ ಒಂದೊಂದೇ ನುಡಿಯನ್ನು ಬಿಡಿಬಿಡಿಯಾಗಿ ಕಲಿತ ನಂತರ ಅವುಗಳ ನಡುವೆ ಸರಿಯಾದ ಸಂಬಂಧವನ್ನು ಕಲ್ಪಿಸುವುದು ಅಪಸಂಯೋಗದ ದೆಸೆಯಿಂದ ಕಷ್ಟ ತರವಾಗುತ್ತದೆ. ಹಾಗಲ್ಲದೆ ಇಡಿಯಾಗಿರುವ ಕ್ರಮವನ್ನು ಹಿಡಿದರೆ ಯಾವ ನಿಷ್ಫಲ ಸಂಯೋಗವೂ ಉಂಟಾಗದೆ (ಇಡಿ ಪದ್ಯದ ಆದಿ ಅಂತ್ಯಗಳ ಸಂಯೋಗ ವೊಂದನ್ನು ಬಿಟ್ಟು) ಇರುವುದರಿಂದ ಅಪಸಂಯೋಗಗಳನ್ನು ಆ ಮೇಲೆ ಕಿತ್ತೊಗೆ ಯುವ ಸಂದರ್ಭ ಬರುವುದೇ ಇಲ್ಲ.

ಇಡಿಯಾಗಿ ಕಲಿಯುವ ಕ್ರಮವು ಮಕ್ಕಳಿಗೆ ಅಷ್ಟು ಯೋಗ್ಯವಲ್ಲ ವೆಂದು ತೋರುತ್ತದೆ. ಏಕೆಂದರೆ ಅವರಲ್ಲಿ ನಿರುತ್ಸಾಹ ಉಂಟಾಗುವ ಸಂಭವವಿದೆ. ಒಂದು ನುಡಿಯನ್ನು ಕಲಿತ ಕೂಡಲೆ ಉಂಟಾಗುವ ಉತ್ಸಾಹವು ಮುಂದಿನ ನುಡಿಯನ್ನು ಕಲಿಯಲು ಪ್ರೋತ್ಸಾಹವಾಗಬಹುದು. ಇಡಿಯಾಗಿ ಕಲಿಯುವುದರಲ್ಲಿ ಮಕ್ಕಳಿಗೆ ಈ ಅನುಕೂಲವಿಲ್ಲ. ಅವರು ಧೃತಿಗೆಡದಷ್ಟೇ ದೊಡ್ಡ ಇಡಿ ಅವತರಣಿಕೆಯನ್ನು ಸ್ಮೃತಿಗತಮಾಡಿಕೊಳ್ಳಹೇಳುವುದು ಒಳ್ಳೆಯ ದಾದೀತು. ಮಕ್ಕಳಿಗೆ ಇಡಿ ಕ್ರಮಕ್ಕಿಂತ ಬಿಡಿ ಕ್ರಮವೇ ಪ್ರಶಸ್ತ ಎಂಬ ಅಂಶವು ಇತ್ತೀಚೆಗೆ ವಿಂಚ್ ಮಹಾಶಯನು ನಡೆಸಿದ ಪ್ರಯೋಗಗಳಿಂದ ಸಿದ್ಧವಾಗಿದೆ. ಇಡಿ ಕ್ರಮದ ಇನ್ನೊಂದು ದೋಷವೆಂದರೆ ಕಲಿಯಲು ಕೊಟ್ಟ ವಸ್ತುವು ಸಮ ರೂಪವಿಲ್ಲದ್ದಾಗಿರಬಹುದು – ಅಂದರೆ ಕೆಲವು ಭಾಗ ಕಷ್ಟವಿರಬಹುದು; ಕೆಲವು ಭಾಗ ಸುಲಭವಿರಬಹುದು: ಅದರಿಂದ ಕಷ್ಟವಾದ ಭಾಗವನ್ನು ಸ್ಮೃತಿಗತ ಮಾಡಿಕೊಳ್ಳಲು ಇಡಿಯನ್ನು ಸಾಮಾನ್ಯವಾಗಿ ಬೇಕಾದ್ದಕ್ಕಿಂತ ಹೆಚ್ಚುಸಲ ಉರು ಹೊಡೆಯುವ ಅವಶ್ಯಕತೆ ಉಂಟಾಗಬಹುದು.

ಮೇಲೆ ಹೇಳಿದ ದೋಷವನ್ನು ಪರಿಹರಿಸುವ ಸಲುವಾಗಿ ಇಡಿ ಕ್ರಮದ ಬದಲು ಮಿಶ್ರಕ್ರಮವನ್ನು ಸೂಚಿಸಲಾಗಿದೆ. ಈ ಕ್ರಮದ ಪ್ರಕಾರ ಕಲಿಯು

ವವನು ಆರಂಭದಿಂದ ಮೊದಲನೆಯ ಕಷ್ಟ ಬರುವವರೆಗೆ ಸರಾಗವಾಗಿ ಮುಂದು ವರಿಯುತ್ತಾನೆ. ಕಷ್ಟದ ಭಾಗವನ್ನು ಕಲಿಯುವ ವರೆಗೆ ಅವನು ಅಲ್ಲಿ ಸ್ವಲ್ಪ ನಿಲ್ಲುತ್ತಾನೆ. ಆ ನಂತರ ಅವನು ಪುನಃ ಮೊದಲಿನಿಂದ ಅಂದರೆ (ಮೊದಲನೆಯ ಸಾಲಿನಿಂದ) ಎರಡನೆಯ ಕಷ್ಟಾಂಶ ಬಂದು ಅದನ್ನು ಗೆಲ್ಲುವ ವರೆಗೆ ಕಲಿಯುತ್ತ ಹೋಗುತ್ತಾನೆ. ಹೀಗೆ ಇಡಿ ಪದ್ಯವನ್ನು ಕಲಿತು ಮುಗಿಸುವ ವರೆಗೆ ಇದೇ ಕ್ರಮ ವನ್ನು ಅವನು ಅನುಸರಿಸುತ್ತಾನೆ. ಹೀಗಲ್ಲದೆ ಹೋದರೆ ಅವನು ಪದ್ಯದಲ್ಲಿ ಇರುವ ಕಷ್ಟಾಂಶಗಳನ್ನು ಮೊದಲೇ ಕಲಿತುಕೊಂಡು ಅನಂತರ ಇಡಿ ಪದ್ಯವನ್ನು ಅಭ್ಯಾಸಮಾಡಬಹುದು. ಡಾ| ಎಂ. ವಿ. ಗೋಪಾಲಸ್ವಾಮಿ ಕಂಡು ಹಿಡಿದ ಮೊದಲ ಪದ್ಧತಿಯನ್ನು "ಪ್ರಗತಿಕ್ರಮ" ಎಂದು ಹೇಳಬಹುದು.

ಸ್ಮೃತಿಕಾರಕಗಳು: ಉದ್ದೇಶ ಭೇದದಿಂದ ಸ್ಮೃತಿಗೆ ತಂದುಕೊಳ್ಳುವ ಕ್ರಮದಲ್ಲಿ ಭೇದ ಉಂಟಾಗುತ್ತದೆ. ಶೀಘ್ರಫಲಬೇಕಾಗಿದ್ದರೆ, ಬಿಡಿಯಾಗಿ ಇಲ್ಲವೆ ಅನಂತರಿತವಾಗಿ ಕಲಿಯುವುದು ಉತ್ತಮ. ಕಲಿತದ್ದು ಬಹಳಕಾಲ ನಿಲ್ಲಬೇಕೆಂಬ ಅಪೇಕ್ಷೆ ಇದ್ದರೆ ಇಡಿ ಇಲ್ಲವೆ ಅಂತರಿತ ಕ್ರಮವನ್ನು ಅನುಸರಿಸಬೇಕು. ಕೆಳಗೆ ಕೊಡುವ ನಾಲ್ಕು ಕಾರಕಗಳಲ್ಲಿ ಕೆಲವು ಒಂದು ಕ್ರಮಕ್ಕೆ ಅನುಕೂಲ ವಾದರೆ, ಇನ್ನು ಕೆಲವು ಮತ್ತೊಂದಕ್ಕೆ ಅನುಕೂಲವಾಗುತ್ತವೆ.

ಆತ್ಮವಿಶ್ವಾಸವು ಬಿಡಿ ಕಲಿಯುವಿಕೆಗೆ ಅನುಕೂಲವಾಗಿದೆ. ಅಂದರೆ ಒಂದು ಸಾಲನ್ನು ಕಲಿತು ಆತ್ಮವಿಶ್ವಾಸ ಪಡೆದು ಮುಂದಿನ ಸಾಲನ್ನು ಕಲಿಯುತ್ತ ಹೋಗುವ ಕ್ರಮದಿಂದ ಮಕ್ಕಳಿಗೆ ಕಲಿಯುವುದು ಸುಲಭವಾಗುತ್ತದೆ.

ಕಾಲಸಾಮೀಪ್ಯವು ಅನಂತರಿತ ಕಲಿಯುವಿಕೆಗೆ ಅನುಕೂಲವಾಗಿದೆ. ಇಲ್ಲಿ ಪುನರಾವೃತ್ತಿಗಳ ನಡುವೆ ಬಿಡುವಿಲ್ಲ.

ಅರ್ಥ, ಸ್ಥೂಲರೇಖೆ ಮತ್ತು ಸ್ಥೂಲಸಂಬಂಧಗಳು ಎಂಬುದು ಅತ್ಯಂತ ಮುಖ್ಯವಾದ ಕಾರಕ. ಇದು ಇಡಿಯಾಗಿ ಕಲಿಯುವುದಕ್ಕೆ ಅನುಕೂಲ. ಬಿಡಿ ಕಲಿಯುವಿಕೆಯು ಯಾಂತ್ರಿಕ. ಪ್ರತಿಯೊಂದು ಸಾಲನ್ನೂ ಕಲಿತುಕೊಳ್ಳುತ್ತ ಹೋದಾಗ ಇಡಿಯ ಒಂದು ವಿನ್ಯಾಸವನ್ನೇ ಮರೆತುಬಿಡುತ್ತೇವೆ. ಇಡಿ ಕ್ರಮ ದಲ್ಲಿ ಕಲಿಯಬೇಕಾದ ವಸ್ತುವಿನ ಅರ್ಥ ಮತ್ತು ಸ್ಥೂಲ ವಿನ್ಯಾಸಗಳು ನಮಗೆ ನಿಸ್ಸಂದಿಗ್ಧವಾಗಿ ಗೊತ್ತಾಗುತ್ತವೆ.

ವಿಶ್ರಾಂತಿಯು ಮೂಲಕ ಸಮಗ್ರಗೊಳಿಸುವುದು ಅಂತರಿತ ಕಲಿಯುವಿಕೆಗೆ ಅನುಕೂಲ. ಒಂದೇ ಕಾಲದಲ್ಲಿ ಒಂದೇ ವಸ್ತುವನ್ನು ಅನೇಕ ಸಲ ಪುನರಾವರ್ತಿಸಿದರೆ ಮನಸ್ಸು ಸುಸ್ತಾಗಿ ಅನುಕ್ರಿಯೆಯನ್ನು ತೋರಿಸದಿರಬಹುದು. ಕೆಲ ಪ್ರಯತ್ನಗಳಾದ ಮೇಲೆ ನಡುನಡುವೆ ವಿಶ್ರಾಂತಿ ದೊರಕಿದರೆ ಮನಸ್ಸು ಗ್ರಹಿಸಿದ್ದನ್ನು ಸಮಗ್ರಗೊಳಿಸಿಕೊಂಡು ಆ ಮೂಲಕ ಅದನ್ನು ತನ್ನಲ್ಲಿ ಸ್ಥಿರವಾಗಿ ಇಟ್ಟುಕೊಳ್ಳಬಹುದು.

ಜಡಸ್ಮೃತಿ: ಜಡಸ್ಮೃತಿಯಲ್ಲಿ ಪ್ರಾಣಿಗಳಿಗೆ ಸಹಜವಾದ ಜಡಾಭ್ಯಾಸ ಅಡಕವಾಗಿದೆ. ಜಡಾಭ್ಯಾಸವೆಂದರೆ ಅರ್ಥ ತಿಳಿದುಕೊಳ್ಳದೆ ಮತ್ತು ಸಂಬಂಧವನ್ನು ಗ್ರಹಿಸದೆ ಕಲಿಯುವುದು. ಕೆಲವರು ಇದನ್ನು ಭಾವಿಕಸ್ಮೃತಿ ಎನ್ನುತ್ತಾರೆ. ಏಕೆಂದರೆ ಅದರಲ್ಲಿ ಪದಗಳ ಪಾತ್ರ ಪ್ರಮುಖ. ನಾವು ಅರ್ಥವಿಲ್ಲದ ಪದಗಳನ್ನು ಬಳಸಬಹುದು. ಒಂದು ಮೋಟಾರನ್ನು ನಡೆಸಲಾರಂಭಿಸುವುದನ್ನು ಕಲಿಯುವುದಕ್ಕಿಂತ ಕಡಿಮೆ ಭಾವಿಕತ್ವವು ಕೆಲ ಬಗೆಯ ಜಡಸ್ಮೃತಿಯಲ್ಲಿ ಕಂಡು ಬರಬಹುದು.

ನಾವು ಒಂದು ಭಾಷೆಯನ್ನು ಕಲಿಯಲಾರಂಭಿಸಿದಾಗ ನಮ್ಮ ಕಂಠದಲ್ಲಿರುವ ಉಚ್ಚಾರಣೋಪಕರಣಗಳ ಕರ್ಮಾಭ್ಯಾಸವನ್ನಷ್ಟನ್ನೇ ಮಾಡುತ್ತೇವೆ. ಇದು ಜಡಸ್ಮೃತಿಯ ಕನಿಷ್ಠರೂಪ. ನಮ್ಮ ಭಾಷೆಯಲ್ಲಿರುವ ಅಸಂಬದ್ಧ ವಸ್ತುನಾಮಗಳನ್ನು ಕಲಿಯುವುದು ಭಾವಿಕತನವನ್ನು ಸಮೀಪಿಸುವ ಸ್ಮೃತಿ. ಇಲ್ಲಿ ಪ್ರತಿ ನಾಮಕ್ಕೂ ಅರ್ಥವಿದೆ; ಆದರೆ ಅವುಗಳ ಇಡಿ ಪಟ್ಟಿಗೆ ಸುಸಂಬದ್ಧವಾದ ಅರ್ಥವಿಲ್ಲ. ನಮ್ಮ ಭಾಷೆಯ ಗ್ರಂಥದಲ್ಲಿ ಇರುವ ಒಂದು ಅವತರಣಿಕೆಯನ್ನು ಗಟ್ಟಿ ಮಾಡುವುದು ಭಾವಿಕ ಸ್ಮೃತಿಯನ್ನು ಸಮೀಪಿಸುವ ಮುಂದಿನ ಹೆಜ್ಜೆ. ಇಲ್ಲಿ ವಾಕ್ಯರಚನೆಯ ದೆಸೆಯಿಂದ ಒಂದು ಸಂಬಂಧದ ಅರಿವಾಗುತ್ತದೆ ಮತ್ತು ಅನೇಕ ನಾಮಗಳು ಏನಾದರೊಂದು ಅರ್ಥ ಕೊಡುತ್ತವೆ. ಆದರೆ ವಿಷಯ ಗೊತ್ತಿಲ್ಲದ ಓದುಗನಿಗೆ ಆ ಇಡಿ ಅವತರಣಿಕೆ ಏನೂ ಅರ್ಥವಾಗದೆಂದೇ ಹೇಳಬೇಕು.

ಈ ಮೂರು ಬಗೆಯ ಕಲಿಯುವಿಕೆಯೂ ಗಿಳಿಯೋದು. ಇಲ್ಲಿ ಅತ್ಯಲ್ಪ ಭಾವಿಕತ್ವವಿದೆ—ಬರಿಯ ಪದಾಭ್ಯಾಸಕ್ಕಿಂತ ಸ್ವಲ್ಪ ಹೆಚ್ಚನ್ನು ಕಲಿಯಲಾಗಿದೆ. ತಮಗೆ ತಿಳಿಯದ ಟಿಪ್ಪಣಿಗಳನ್ನೋ ಪಠ್ಯಪುಸ್ತಕದ ಅವತರಣಿಕೆಗಳನ್ನೋ

ಎಷ್ಟೋ ವಿದ್ಯಾರ್ಥಿರತ್ನರು ಈ ಪ್ರಕಾರ ಪದಾಭ್ಯಾಸದಿಂದ ಕಲಿತುಕೊಳ್ಳು ತ್ತಾರೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ದೃಷ್ಟಿಯಿಂದ ಕೂಡ ಇದು ಗ್ರಾಹ್ಯ ವಲ್ಲ. ತಾನು ಸ್ಮೃತಿಗತ ಮಾಡಿಕೊಂಡದ್ದರ ಅರ್ಥ ತಿಳಿದುಕೊಳ್ಳದಿದ್ದಲ್ಲಿ ಅದರ ಮೇಲಿನ ಅವನ ಪ್ರಭುತ್ವವು ಅವಲಂಬಸೀಯವಾಗದು.

ಭಾವಿಕ ಸ್ಮೃತಿ: ವಿದ್ಯಾರ್ಥಿಗೆ ಅತ್ಯವಶ್ಯಕವಾದದ್ದು ಭಾವಿಕ ಸ್ಮೃತಿ. ಎಷ್ಟೋ ವೇಳೆ ಅದರಲ್ಲಿ ಪದಗಳ ಪ್ರಯೋಗವಿರಬಹುದು. ಆದರೆ ಹಾಗೆ ಪದ ಪ್ರಯೋಗವಿರಲೇಬೇಕೆಂಬ ನಿಯಮವಿಲ್ಲ. ಒಬ್ಬನ ರೂಪ, ಒಬ್ಬನ ಧಾಟಿ ಇಲ್ಲವೆ ಟಪ್ಪಾಲುಕಟ್ಟೆ ಇರುವ ಸ್ಥಳ ಮುಂತಾದವನ್ನು ನೆನಪಿಟ್ಟುಕೊಳ್ಳುವಲ್ಲಿ ಪದಗಳ ಅವಶ್ಯಕತೆಯೇ ಇಲ್ಲದಿರಬಹುದು. ಒಬ್ಬನಿಗೆ ಸ್ಮೃತಿಶಕ್ತಿ ಹೆಚ್ಚಾ ಗಿದೆ, ಮತ್ತೊಬ್ಬನಿಗೆ ಕಡಿಮೆಯಾಗಿದೆ ಎಂದು ಹೇಳುವುದುಂಟು. ಈ ಅರ್ಥ ದಲ್ಲಿ ಸ್ಮೃತಿಯು ಒಂದೇ ಒಂದು ಕೃತ್ಯ. ಇದು ಸ್ವಲ್ಪ ಮಟ್ಟಿಗೆ ನಿಜ. ಸ್ಮೃತಿ ಪ್ರಯೋಗಗಳು ಬುದ್ಧಿಗಿರುವಂತೆಯೇ ಸ್ಮೃತಿಗೂ ಒಂದು ಸಾಮಾನ್ಯ ಕಾರಕ ವಿದೆ ಎಂದು ಸಿದ್ಧಮಾಡಿವೆ: ಅದೇ ಆಸಕ್ತಿ. ಅದಲ್ಲದೆ ಚಾಕ್ಷುಷ, ಶ್ರಾವಣ, ಮುಂತಾದ ಸ್ಮೃತಿಗಳ ಸಮುದಾಯಕಾರಕಗಳೂ ಇತರ ವಿಶಿಷ್ಟ ಕಾರಕಗಳೂ ಇವೆ. ಕೆಲವರಿಗೆ ಇನ್ನೊಬ್ಬರ ಮುಖವನ್ನು ನೆನಪಿಟ್ಟುಕೊಳ್ಳುವುದು ಸುಲಭ ವಾಗಬಹುದು. ಇತರರಿಗೆ ಅವರ ಇಡಿ ಶರೀರವನ್ನು ನೆನಪಿಟ್ಟುಕೊಳ್ಳುವುದು ಸುಲಭವಾಗಬಹುದು. ಇಂಥವು ವಿಶಿಷ್ಟ ಕಾರಕಗಳು.

ನಶ್ವರ ಹಾಗೂ ಸ್ಥಿರ ಸ್ಮೃತಿಗಳು: ಕಲಿತ ಕೂಡಲೇ ಹೇಳಬೇಕಾದ ದ್ದನ್ನು ಕಲಿಯುವಾಗ ವ್ಯಕ್ತಿಯು ತನ್ನ ನಶ್ವರ ಸ್ಮೃತಿ ಶಕ್ತಿಯನ್ನು ಬಳಸು ತ್ತಾನೆ. ಕಲಿತ ಕೆಲಕಾಲ ಸಂದ ಅನಂತರ ಹೇಳಬೇಕಾದದ್ದನ್ನು ಕಲಿಯಲು ಅವನು ತನ್ನ ಸ್ಥಿರ ಸ್ಮೃತಿ ಶಕ್ತಿಯನ್ನು ಬಳಸುತ್ತಾನೆ.

ನಶ್ವರ ಸ್ಮೃತಿಯನ್ನು ಪರೀಕ್ಷಿಸಲು ಸ್ಮೃತಿಕ್ಷೇತ್ರ ನಿರ್ಣಯದ ಕ್ರಮವನ್ನು ಅನುಸರಿಸಲಾಗುತ್ತದೆ. ಅಂಕೆಗಳ ಇಲ್ಲವೆ ಅರ್ಥಹೀನ ಅಕ್ಷರಗಳ ಬೇರೆಬೇರೆ ಉದ್ದಳತೆಗಳ ಪಂಙ್ತಿಗಳನ್ನು ಯೋಜ್ಯನಿಗೆ ಕೊಡಲಾಗುತ್ತದೆ. ಒಂದು ಸಲ ಓದಿದಮೇಲೆ ಎಷ್ಟು ಉದ್ದದ ಪಂಙ್ತಿಯನ್ನು ಸ್ಮೃತಿಬಲದಿಂದ ಹೇಳಲು ಬರು ತ್ತದೆ ಎಂದು ಅವನನ್ನು ಪರೀಕ್ಷಿಸಲಾಗುತ್ತದೆ. ನಶ್ವರ ಸ್ಮೃತಿಯು ವಯಸ್ಸು ಹೆಚ್ಚಾದ ಹಾಗೆ ಹೆಚ್ಚುತ್ತದೆ. ಆ ಮಕ್ಕಳ ನಶ್ವರ ಸ್ಮೃತಿ ಕ್ಷೇತ್ರವು ಎಂದೂ

ಪ್ರೌಢರೆ ನಶ್ವರ ಸ್ಮೃತಿಕ್ಷೇತ್ರದ ದಕ್ಷತೆಯನ್ನು ಸಾಧಿಸಿದ್ದಿಲ್ಲ. ಮ್ಯೂವನ್ನನು ೧೩ ವರ್ಷಗಳ ವರೆಗೆ ನಶ್ವರ ಸ್ಮೃತಿಯ ಬೆಳವಣಿಗೆಯು ಬಹಳ ಮಂದ ಎಂದೂ ೧೩ರಿಂದ ೧೬ರ ವರೆಗೆ ಶೀಘ್ರವೆಂದೂ ೨೨ರಿಂದ ೨೫ರ ವರೆಗೆ ಪರಮಾವಧಿಕವೆಂದೂ ಅನಂತರ ಸ್ವಲ್ಪ ಇಳಿತಾಯ ಬರುವುದೆಂದೂ ಸಿದ್ಧ ಮಾಡಿದ್ದಾನೆ. ನಶ್ವರ ಸ್ಮೃತಿ ಶಕ್ತಿಯು ಸತತೋದ್ಯಮವನ್ನು ಆಧರಿಸಿದೆ.

ಶಿಕ್ಷಣದ ದೃಷ್ಟಿಯಿಂದ ಸ್ಮೃತಿಕ್ಷೇತ್ರ ಶೋಧವು ಗಣ್ಯ. ಏಳು ವರ್ಷದ ಒಂದು ಮಗು ೬ ಅಕ್ಷರಗಳನ್ನು ನೆನಪಿಟ್ಟುಕೊಳ್ಳಬಹುದಾದರೆ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವನ್ನು ಅದು ಕಲಿಯುವುದು ಅಸಾಧ್ಯವಾದೀತು. ಒಮ್ಮೆ ಅದು ಕಲಿಯಬೇಕಾದರೆ ಹೆಚ್ಚು ಅಕ್ಷರಗಳುಳ್ಳ ಪದವನ್ನು ಬೇರೆ ಬೇರೆ ಘಟಕಗಳನ್ನಾಗಿ ವಿಂಗಡಿಸಬಹುದು. ಸ್ಮೃತಿ ಕ್ಷೇತ್ರವನ್ನು ಚಾಕ್ಷುಷ ಇಲ್ಲವೆ ಶ್ರಾವಣ ರೀತಿಯಿಂದ ಪರೀಕ್ಷಿಸಬಹುದು.

ಪದಗಳನ್ನು ಅಥವಾ ಅಂಕೆಗಳನ್ನು ಯೋಜ್ಯನಿಗೆ ಒಂದೊಂದಾಗಿ ಬರೆದು ತೋರಿಸಬಹುದು ಅಥವಾ ಓದಿ ಹೇಳಬಹುದು. ಶ್ರಾವಣ ಸ್ಮೃತಿ ಕ್ಷೇತ್ರದ ಪ್ರಮಾಣವು ಅನೇಕ ವೃತ್ತಿಗಳಿಗೆ ಸೇರಲು ನಿಕಷವಾಗಬಹುದು. ಅಂಥ ವೃತ್ತಿ ಎಂದರೆ ಟೆಲಿಫೋನ್ ಕಚೇರಿಯ ಕೆಲಸ. ಅಲ್ಲಿ ಕೇಳಿದ ಅಂಕೆಗಳನ್ನು ನೆನಪಿಟ್ಟುಕೊಳ್ಳುವ ಶಕ್ತಿ ಚೆನ್ನಾಗಿರಬೇಕು.

ಸ್ಥಿರ ಸ್ಮೃತಿಯ ಸ್ವರೂಪವನ್ನು ಕಂಡುಹಿಡಿಯುವ ಬಗೆಗಳು

ಗ್ರಹಣಧಾರಣ ಕ್ರಮ: ಒಂದು ವಿಧದ ರೂಲು ದೊಣ್ಣೆಯ ಮೇಲೆ ಮೊದಲೇ ಅರ್ಥಹೀನವಾದ ಅಕ್ಷರಗಳನ್ನು ಇಲ್ಲವೆ ಅಂಕೆಗಳನ್ನು ಬರೆದು ಅಂಟಿಸಲಾಗುತ್ತದೆ. ಈ ರೂಲು ದೊಣ್ಣೆಯು ಸ್ಮೃತಿಪ್ರಯೋಗಧಾನಿಯ ಒಂದು ಅಂಗ. ಪ್ರಯೋಗಧಾನಿಯ ಕೀಲಿಯನ್ನು ತಿರುಗಿಸಿದಾಗ ಅದರೊಳಗೆ ನಿಲ್ಲಿಸಿದ ರೂಲು ದೊಣ್ಣೆಯ ಮೇಲಿನ ಒಂದೊಂದೇ ಅಂಕೆ ಅಥವಾ ಅಕ್ಷರವು ಒಂದು ಸಲಕ್ಕೆ ಯೋಜ್ಯನಿಗೆ ಕಾಣುತ್ತ ಹೋಗುವುದು. ಈ ಅಂಕೆಗಳ ಅಥವಾ ಅಕ್ಷರಗಳ ಪಂಕ್ತಿಯನ್ನು ಲಯಬದ್ಧವಾಗಿ ಕ್ರಮೇಣ ತೋರಿಸಲಾಗುತ್ತದೆ. ತನ್ನ ಕಣ್ಣನ್ನು ಪ್ರಯೋಗಧಾನಿಯ ಕಿಂಡಿಯ ಮೇಲೆ ನಿಲ್ಲಿಸಿ ಪಂಕ್ತಿಯಲ್ಲಿರುವ ಎಲ್ಲ ಅಂಕೆಗಳೂ ಮುಗಿಯುವ ವರೆಗೆ ಒಂದೊಂದನ್ನೇ ಗಟ್ಟಿಯಾಗಿ ಹೇಳುತ್ತ

ಹೋಗುತ್ತಾನೆ; ಅನಂತರ ಅದನ್ನು ನೆನಪಿನಿಂದ ಹೇಳಲು ಪ್ರಯತ್ನಿಸುತ್ತಾನೆ. ಅದರಲ್ಲಿ ಅವನು ಸೋತರೆ ಮತ್ತೊಮ್ಮೆ ಅದೇ ರೀತಿ ಪ್ರದರ್ಶಿಸಲಾಗುತ್ತದೆ; ಮತ್ತೂ ಸೋತರೆ ಹೀಗೇ ಅವನು ಪೂರ್ತಿಯಾಗಿ ನೆನಪಿನಿಂದ ಹೇಳಲು ಶಕ್ತನಾಗುವ ವರೆಗೆ ಪಂಙ್ತಿಪ್ರದರ್ಶನ ನಡೆಯುತ್ತದೆ. ಇದು ಕಲಿಯುವ ಕ್ರಮ. ಒಂದೆರಡು ದಿವಸಗಳಾದ ಮೇಲೆ ಅಥವಾ ಒಂದು ವಾರದ ನಂತರ ಪುನಃ ಅವನು ಕಲಿತ ಪಂಙ್ತಿಯನ್ನು ನೆನಪಿನಿಂದ ಹೇಳಲು ಪ್ರಯತ್ನಿಸುತ್ತಾನೆ. ಆಗಲೂ ಅವನು ಸೋತರೆ ಮೊದಲಿನ ಕ್ರಮದಲ್ಲೇ ಅವನು ಕಲಿಯಬೇಕು. ಕಲಿಯಲೆಂದು ಮರಳಿ ಮರಳಿ ಮಾಡಿದ ಪ್ರಯತ್ನಗಳ ಸಂಖ್ಯೆಯಲ್ಲಿರುವ ವ್ಯತ್ಯಾಸವು ಧಾರಣೆ ಎನಿಸುತ್ತದೆ.

ಹೇಳಿಕೊಡುವ ಕ್ರಮ : ಈ ಕ್ರಮದಲ್ಲಿ ಅಕ್ಷರ ಅಥವಾ ಅಂಕೆಯ ಪಂಙ್ತಿಯನ್ನು ಯೋಜ್ಯನು ಅಸಮರ್ಪಕವಾಗಿ ಕಲಿತಾಗ ಅವನು ಸರಿಯಾಗಿ ಇಡಿ ಪಂಙ್ತಿಯನ್ನು ನೆನಪಿನಿಂದದ ಹೇಳಲು ಶಕ್ತನಾಗುವ ವರೆಗೆ ಎಷ್ಟು ಸಲ ನಡು ನಡುವೆ ಅವನಿಗೆ ಹೇಳಿಕೊಡಬೇಕಾಗುತ್ತದೆ ಎಂಬುದನ್ನು ಅಳೆಯಲಾಗುತ್ತದೆ.

ಗಳಿಕೆಯ ಕ್ರಮ: ಈ ಕ್ರಮದಲ್ಲಿ ಗೊತ್ತುಮಾಡಿದಷ್ಟು ಸಲ ಯೋಜ್ಯನೆದುರಿಗೆ ಅರ್ಥಹೀನ ಅಕ್ಷರಗಳನ್ನು ಪ್ರದರ್ಶಿಸಲಾಗುತ್ತದೆ. ಈ ಪ್ರದರ್ಶನವನ್ನು ಅವನೆದುರಿಗೆ ಆ ಪಂಙ್ತಿಯನ್ನವನು ಸಂಪೂರ್ಣ ಕಲಿಯಲು ಸಾಕಾಗುವಷ್ಟು ಇಡಲಾಗುವುದಿಲ್ಲ. ಪಂಙ್ತಿಯ ಪ್ರದರ್ಶನದ ಪ್ರತಿಯೊಂದು ಪುನರಾವೃತ್ತಿಯಲ್ಲೂ ಯೋಜ್ಯನು ಉತ್ತರೋತ್ತರವಾಗಿ ಕಂಡ ಎರಡೆರಡು ಅಕ್ಷರಗಳನ್ನು ಒಟ್ಟೊಟ್ಟಿಗೆ ಓದುತ್ತಾನೆ. ಸ್ವಲ್ಪವೇಳೆ ಕಳೆದ ಮೇಲೆ ಅಕ್ಷರಯುಗಗಳಲ್ಲಿಯ ಮೊದಲನೆಯ ಅಕ್ಷರವನ್ನು ಯೋಜ್ಯನಿಗೆ ಅಕ್ರಮಬದ್ಧವಾಗಿ ತೋರಿಸಲಾಗುತ್ತದೆ ಮತ್ತು ಅವನು ಆ ಅಕ್ಷರಗಳಲ್ಲಿಯ ಮತ್ತೊಂದು ಅಕ್ಷರವನ್ನು ನೆನಪಿನಿಂದ ಹೇಳಬೇಕಾಗುತ್ತದೆ. ಅವನು ಎಷ್ಟು ಸಲ ಸರಿಯಾಗಿ ನೆನಪಿನಿಂದ ಹೇಳುತ್ತಾನೆ ಎಂಬುದು 'ಗಳಿಕೆ' ಎನಿಸುತ್ತದೆ. ಪ್ರತಿಯೊಂದು ಅಕ್ಷರಯುಗದ ಮತ್ತೊಂದು ಅಕ್ಷರವನ್ನು ನೆನಪು ಮಾಡಿಕೊಂಡು ಹೇಳಲು ಯೋಜ್ಯನು ಎಷ್ಟು ವೇಳೆ ತೆಗೆದುಕೊಳ್ಳುತ್ತಾನೆ ಎಂಬುದನ್ನು ಕಾಲಮಾಪಕವು ಅಳೆದು ತೋರಿಸುತ್ತದೆ. ಇದನ್ನು ಗಳಿಗೆಯ ಕಾಲವೆಂದು ಹೇಳಬಹುದು.

ಈ ಎಲ್ಲ ಪ್ರಯೋಗಗಳಲ್ಲಿ ಅರ್ಥವಿಲ್ಲದ ಅಕ್ಷರಗಳನ್ನೋ ಅಂಕೆಗಳನ್ನೋ ಉಪಯೋಗಿಸಬೇಕು. ಏಕೆಂದರೆ ಸನ್ನಿವೇಶವನ್ನು ಒಂದೇ ರೂಪದಲ್ಲಿ ಇಡುವುದಕ್ಕೋಸ್ಕರ ಕಲಿಯಬೇಕಾದ ವಸ್ತುವು ಎಷ್ಟು ಸರಳವಾಗಿದ್ದರೂ ಅಷ್ಟು ಉತ್ತಮ. ಅರ್ಥವತ್ತಾದ ಅಕ್ಷರಗಳನ್ನು ಬಳಸಿದರೆ ಬೇರೆ ಬೇರೆ ವ್ಯಕ್ತಿಗಳ ನೆನಪಿನ ಫಲಿತಾಂಶಗಳು ತುಲನೀಯವಾಗುವುದಿಲ್ಲ. ಅರ್ಥಹೀನ ಅಕ್ಷರಗಳು ಹೀಗಿರುತ್ತವೆ: ಡಾಕ್, ಫುವ್, ಕಿಗ್, ಮಿಗ್ ಮುಂತಾದವು.

ಮರೆವು

ಧಾರಣ ಪ್ರಯತ್ನದಲ್ಲಿ ಆಗುವ ಸೋಲೇ ಮರೆವು. ಮರೆವೆಂಬುದು ಕೇವಲ ನಿಷೇಧರೂಪದ್ದಲ್ಲ. ಅದೊಂದು ಸಕ್ರಿಯವಾದ ಪ್ರಕ್ರಿಯೆ. ಸತತೋದ್ಯಮವನ್ನು ಮನ್ನಿಸಿ ತಕ್ಕ ವಿಶ್ರಾಂತಿಯ ಮೂಲಕ ಕಲಿತದ್ದನ್ನು ಸಮಗ್ರಗಳಿಸಿಕೊಂಡು ಮನಸ್ಸಿನಲ್ಲಿ ಬೇರೂರಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ಕೊಟ್ಟರೆ ಮರೆವು ಕಡಿಮೆಯಾಗುತ್ತದೆ. ನಿದ್ರೆಯಲ್ಲಿ ಅದರ ಕಾರ್ಯವೇ ಇಲ್ಲ. ಅಜ್ಞಾತ ಪ್ರಜ್ಞೆಯಲ್ಲಿ ಕಲಿತ ವಸ್ತುವನ್ನು ಸಕ್ರಿಯವಾಗಿ ಮತ್ತು ಸರಭಸವಾಗಿ ತುಂಬುವುದರಿಂದಲೇ ಮರೆವಿನ ಕೆಲವು ಪ್ರಕಾರಗಳು ಉಂಟಾಗುತ್ತವೆ. ಮರೆಯುವ ಕಾರ್ಯದಲ್ಲಿ ಕಾಲವು ಗಣ್ಯವಾದ ಕಾರಕ ಎಂದು ಹೇಳುವುದುಂಟು. ಇದು ಸರಿಯಲ್ಲ. ಇದರ ಪ್ರಕಾರ ಮರೆವಿಗೆ ಕೇವಲ ಕಾಲ ಕಳೆಯುವುದೇ ಕಾರಣ ಎಂದಾಗುತ್ತದೆ. ಆದರೆ ಮರೆವಿಗೆ ಕಳೆದ ಕಾಲವಷ್ಟೇ ಅಲ್ಲದೆ ಅದಕ್ಕೂ ಹೆಚ್ಚಾಗಿ ಆ ಕಾಲದಲ್ಲಿ ಏನಾಯಿತು ಎಂಬುದು ಬಹು ಮುಖ್ಯ. ಅದರಲ್ಲಿಯೂ ಒಂದು ಘಟನೆ ಸಂಭವಿಸಿದ ಅಪರಕ್ಷಣದಲ್ಲಿಯೇ ಏನಾಯಿತು ಎಂಬುದು ಅತಿ ಮುಖ್ಯ. ಕಲಿತ ವಸ್ತುವನ್ನು ಮನಸಿನ್ನಲ್ಲಿ ಬೇರೂರಿಸಿಕೊಳ್ಳಲು ಈ ಸಮಯದಲ್ಲಿ ತಕ್ಕ ಕ್ರಮವನ್ನು ಕೈಕೊಂಡರೆ ವರ್ಷಗಳು ಕಳೆದು ಹೋಗುವುದು ಕೂಡ ಅದರ ಮೇಲೆ ಬಹಳ ಪರಿಣಾಮಕಾರಿಯಾಗದು. ಮರೆವು ಒಂದು ಸ್ವಾಭಾವಿಕವಾದ ಕಾರ್ಯ. ನೀವೇನಾದರೂ ಹೊಸದನ್ನು ಕಲಿಯುವಾಗ ನೀವು ನಿಮ್ಮ ಮನೋಭೂಮಿಕೆಯನ್ನು ಬದಲಾಯಿಸುತ್ತೀರಿ; ಹೊಸದೊಂದು ಸನ್ನಿವೇಶವನ್ನು ತಂದು ನೀವು ಹೊಸ ಕಾರಕವನ್ನು ಒಡ್ಡುತ್ತೀರಿ. ಮೊದ ಮೊದಲು ಅದನ್ನು ನಿಮ್ಮ ಮನಸ್ಸು ಒಪ್ಪುವುದಿಲ್ಲ ಮತ್ತು ಅದನ್ನು ಕಿತ್ತೆಸೆಯಲು ಪ್ರಯತ್ನಿಸುತ್ತದೆ. ಆದುದರಿಂದ ಮರೆವೆಂಬುದು ಹಿಂದಿದ್ದ ಸಮಸ್ಥಿತಿಗೆ ಪುನಃ ಮರಳುವ

ಕಾರ್ಯ; ಯಥಾಸ್ಥಿತಿಯನ್ನು ಉಳಿಸಿಕೊಂಬ ಬಯಕೆ. ಈ ಬಯಕೆಯನ್ನು ಯಶಸ್ವಿಯಾಗಿ ತಡೆದಾಗ ಧಾರಣೆಯು ಸಾಧ್ಯವಾಗುತ್ತದೆ.

ಮರೆವಿನ ಪ್ರಮಾಣ: ಯಾವ ವಸ್ತುವನ್ನು ತೆಗೆದುಕೊಂಡಾಗಲೂ ಕಲಿತ ಕೂಡಲೆ ಕೆಲಕಾಲ ಮರೆವಿನ ಕಾರ್ಯವು ಶೀಘ್ರವಾಗಿ ನಡೆದು ಅನಂತರ ಅದು ಬಹಳ ಮೆಲ್ಲಗೆ ಸಾಗುತ್ತದೆ. ಎಬ್ಬಿಂಗ್‌ಹಾಸನ ಪ್ರಕಾರ ಕಲಿತ ವಸ್ತುವಿನಲ್ಲಿ ಅರ್ಧದಷ್ಟು ಕಲಿತ ಅರ್ಧ ಗಂಟೆಯಲ್ಲಿಯೇ ಮರೆತು ಹೋಗುತ್ತದೆ, ಮೂರನೆಯ ಎರಡು ಅಂಶವು ಎಂಟು ಗಂಟೆಗಳ ನಂತರ ಮತ್ತು ಒಂದು ತಿಂಗಳಲ್ಲಿ ೪/೫ ಅಂಶ ಮರೆತು ಹೋಗುತ್ತದೆ. ಜಾಹೀರಾತಿನ ಪ್ರಪಂಚದಲ್ಲಿ ಇದರ ಪರಿಣಾಮವು ಗಮನಾರ್ಹ. ಕಲಿಯುವಿಕೆಯಲ್ಲಿ ಜ್ಞಾಪಿಸಿಕೊಳ್ಳುವ ಕಾರ್ಯವು ಲಾಭಕರ ಎಂಬುದನ್ನೂ ಮರೆಯುವ ಕಾರ್ಯ ಶೀಘ್ರವಾಗಿ ನಡೆಯುವ ಕಲಿಯುವಿಕೆಯ ಉತ್ತರ ಕಾಲವೇ ಜ್ಞಾಪಿಸಿಕೊಳ್ಳಲು ಅತ್ಯುತ್ತಮ ಅವಧಿ ಎಂಬುದನ್ನೂ ಮರೆವಿನ ಪ್ರಮಾಣವು ತೋರಿಸುತ್ತದೆ. ಕಲಿಯಲು ಬಳಸಿದ ಕಾಲದ ಅರ್ಧವನ್ನು ಜ್ಞಾಪಿಸಿಕೊಳ್ಳಲು ಉಪಯೋಗಿಸಬೇಕು ಎಂಬುದು ಒಂದು ಸಾಮಾನ್ಯ ನಿಯಮ.

ಮರೆವಿನ ಕಾರಣಗಳು: ಮರೆವಿನ ಕಾರಣಗಳು ಎರಡು: ಮಸುಕಾಗುವುದು ಮತ್ತು ಅಡ್ಡಿಯಾಗುವುದು. ಮಿದುಳಿನಲ್ಲಿ ನಡೆಯುವ ನರಗಳ ಚಟುವಟಿಕೆಯ ಪರಿಣಾಮಗಳೊಂದಿಗೆ ಒಂದಲ್ಲ ಒಂದು ವಿಧದಿಂದ ಸ್ಮೃತಿಯು ಸಂಬಂಧಿಸಿದೆ. ಈ ಪರಿಣಾಮಗಳನ್ನು ಮಿದುಳಿನ ಲಾಂಛನಗಳು ಅಥವಾ ಸ್ಮೃತಿ ಲಾಂಛನಗಳು ಎಂದು ಕರೆಯಬಹುದು. ಆದರೆ ಈ ಉಕ್ತ ಪರಿಣಾಮಗಳು ನಿರೀಕ್ಷಣೀಯವಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಪುನಃ ಪ್ರಚೋದಿಸದಿರುವ ಮಿದುಳಿನ ಲಾಂಛನಗಳು ಕ್ರಮಶಃ ಮಸುಕಾಗುತ್ತ ಹೋಗುವುದು ಬಹುಶಃ ಮರೆವಿನ ಮುಖ್ಯ ಕಾರಣವಾಗಿದೆ. ಜ್ಞಾಪಿಸಿಕೊಳ್ಳಲು ಸಾಕಾಗದಷ್ಟು ದುರ್ಬಲವಾದ ಒಂದು ಲಾಂಛನವು ಪ್ರತ್ಯಭಿಜ್ಞಾನಕ್ಕೆ ಸಾಕಾಗಬಹುದು; ಆದರೆ ಅದನ್ನು ಪುನಃ ಪ್ರಚೋದಿಸದಿದ್ದರೆ, ಅದು ಕ್ರಮೇಣ ಮಸುಕಾಗುತ್ತ ಹೋಗಿ, ಕೊನೆಯಲ್ಲಿ ಸಂಪೂರ್ಣ ನಷ್ಟವಾಗಿ, ನಮಗೆ ಯಾವ ಜಾಗರಿತ ಅನುಭವವನ್ನೂ ಉಂಟು ಮಾಡುವುದಿಲ್ಲ.

ಕೆಲ ಮನಃಶಾಸ್ತ್ರಜ್ಞರ ಪ್ರಕಾರ ಮಿದುಳಿನ ಯಾವ ಲಾಂಛನವೂ

ಸಂಪೂರ್ಣವಾಗಿ ನಶಿಸಿ ಹೋಗುವುದಿಲ್ಲ. ಈ ಅಭಿಪ್ರಾಯವನ್ನು ಪರಾಮರ್ಶಿಸಲು ಸಾಧ್ಯವಿಲ್ಲ. ಆದರೆ ಜಾಗರಿತ ಜ್ಞಾಪಕವನ್ನು ಉಂಟುಮಾಡುವ ಹಂತವನ್ನು ಮೀರಿಯೂ ಮಿದುಳಿನ ಲಾಂಛನಗಳು ಉಳಿಯಬಲ್ಲವು ಎಂಬುದಕ್ಕೆ ಬೇಕಾದಷ್ಟು ಪ್ರಮಾಣಗಳಿವೆ. ಈ ವಿಷಯದಲ್ಲಿ ಪುನಃ ಕಲಿಯುವುದು ಎಂಬ ಕಾರ್ಯವು ಬಲಿಷ್ಠ ಕಾರಣಗಳಲ್ಲಿ ಒಂದಾಗಿದೆ. ನಾವು ಒಂದು ಪದ್ಯವನ್ನು ಬಾಯಿಪಾಠ ಮಾಡಿ ಅದರ ಒಂದು ಸಾಲನ್ನು ಜ್ಞಾಪಿಸಿಕೊಳ್ಳಲಾರದಷ್ಟು ಚೆನ್ನಾಗಿ ಮರೆತು ಬಿಟ್ಟಿರಬಹುದು. ಹೀಗಿದ್ದರೂ ಅದನ್ನು ಪುನಃ ಕಲಿಯಲಾರಂಭಿಸಿದರೆ ಅದನ್ನು ನಾವು ಎಂದೂ ಕಲಿಯದೆ ಇದ್ದ ಅಷ್ಟೇ ಉದ್ದದ ಪದ್ಯವನ್ನು ಸ್ಮೃತಿಗತ ಮಾಡಿಕೊಳ್ಳುವುದಕ್ಕಿಂತ ಕಡಿಮೆ ಕಾಲದಲ್ಲಿ ಸ್ಮೃತಿಗತ ಮಾಡಿಕೊಳ್ಳಬಲ್ಲೆವೆಂಬುದು ಅನುಭವಕ್ಕೆ ಬರುತ್ತದೆ. ಅಲ್ಲದೆ ಸಾಮಾನ್ಯವಾಗಿ ಎಂದೂ ಜ್ಞಾಪಿಸಿಕೊಳ್ಳಲಾರದ ಸ್ಮೃತಿಗಳು ಮನೋವಶೀಕರಣ ಮಾಡಿದಾಗಿನ ಅವಸ್ಥೆಯಲ್ಲಿ ಪುನಃ ಮೂಡುತ್ತವೆ ಎಂಬುದು ಮತ್ತೊಂದು ಪ್ರಮಾಣ.

ಸ್ಮೃತಿ ಬಾಧೆ: ಮರೆವಿಗೆ ಮಿದುಳಿನ ಲಾಂಛನ ಮಸುಕಾಗುವುದೊಂದೇ ಕಾರಣವಲ್ಲ. "ಗಂಟಲಲ್ಲಿ ಇವನ ಹೆಸರು ಇದೆ, ಆದರೆ ಬಾಯಿಗೇಕೋ ಈಗ ಬರುವುದಿಲ್ಲ" ಎಂದು ನೆನಪು ಮಾಡಿಕೊಳ್ಳಲು ನಾವು ಒದ್ದಾಡುವ ಪ್ರಸಂಗದಲ್ಲಿ ನಮಗೆ ಉಂಟಾಗುವ ಮರೆವೇ ಬೇರೆ. ಶಾಲೆಯಲ್ಲಿ ನಮಗೆ ಉಪಾಧ್ಯಾಯರು ವ್ಯಾಕರಣದಲ್ಲಿ ಕಲಿಸಿದ ಪ್ರಕೃತಿ ಮತ್ತು ಧಾತು ಎಂಬವುಗಳಲ್ಲಿಯ ವ್ಯತ್ಯಾಸ ಮರೆತು ಹೋದ ಮರೆವಿನ ಲಕ್ಷಣವೇ ಬೇರೆ. ಮೊದಲನೆಯ ಪ್ರಕರಣದಲ್ಲಿ ಮಿದುಳಿನ ಲಾಂಛನವು ಅಳಿಸಿ ಹೋಗಿಲ್ಲ, ಒಂದು ಅರ್ಥದಲ್ಲಿ ಅಲ್ಲಿ ನೆನಪಿದೆ. ಆದರೆ ಏನೋ ಒಂದು ಅಡ್ಡ ಬಂದು ಅದು ಹೊರ ಹೊರಡದಂತಾಗುತ್ತದೆ. ನೆನಪಿಗೆ ಅಡ್ಡ ಬರುವ ಕಾರಣಗಳಲ್ಲಿ ಬಾಧೆ ಅಥವಾ ಅಡ್ಡಿಯೂ ಒಂದು. ನಾವು ಚಳಗೇರಿಯನ್ನು ನೆನಪು ಮಾಡಿಕೊಳ್ಳಲು ಹೋದಾಗ ಎಷ್ಟು ಪ್ರಯತ್ನಪಟ್ಟರೂ ಚಳ್ಳಕೆರೆಯೇ ನಮ್ಮ ಬಾಯಿಗೆ ಬರಬಹುದು. ಎಲ್. ಜೆ. ಬೇಂದ್ರೆಯವರನ್ನು ನೆನೆಸಿಕೊಳ್ಳಲು ಪ್ರಯತ್ನಿಸಿದಾಗ ಎಷ್ಟು ಒದ್ದಾಡಿದರೂ ದ. ರಾ. ಅಲ್ಲದೆ ಎಲ್. ಜೆ. ನೆನಪಾಗುವುದಿಲ್ಲ!

ಅಭ್ಯಾಸಬಲದ ಸ್ಮೃತಿಯಲ್ಲಿಯೂ ಇಂಥ ಅಡ್ಡಿ ಅಡ್ಡಬರಬಹುದು. ಟೆನಿಸ್ ಆಟವನ್ನು ನೆನಪು ಮಾಡಿಕೊಳ್ಳಲು ಹೋದಾಗ ಬ್ಯಾಡ್‌ಮಿಂಟನ್ ಆಟವೇ

ನೆನಪಾಗುವುದು ಇದಕ್ಕೆ ಒಂದು ಉದಾಹರಣೆ. ಎರಡು ಸದೃಶವಾದ ಭಾವ ಪ್ರಕಾರಗಳು ತಲೆಯಲ್ಲಿ ಇದ್ದಾಗ ಅವುಗಳಲ್ಲಿ ಒಂದು ಹೆಚ್ಚು ಸಲ, ಹೆಚ್ಚು ಇತ್ತೀಚೆಗೆ ಅಥವಾ ಹೆಚ್ಚು ತೀವ್ರವಾಗಿ ಹಿಂದೆ ಪ್ರಚೋದಿತವಾಗಿದ್ದರೆ ಆ ಅನಪೇಕ್ಷಿತವಾದ ಭಾವಪ್ರಕಾರವೇ ನೆನಪಿಗೆ ಬರಬಹುದು. ಈ ರೀತಿ ಸ್ಮೃತಿಗಳು ಅಡ್ಡಿಗೆ ಒಳಪಟ್ಟಾಗ ನಾವು ಒದ್ದಾಡುವುದು ವ್ಯರ್ಥ. ಇಂಥ ಸಮಯದಲ್ಲಿ ಎಲ್ಲವನ್ನೂ ತಲೆಯಿಂದ ಆಚೆಗೆ ನೂಕಿ ಕದಡಿದ ಮಿದುಳಿಗೆ ಶಾಂತವಾಗಲು ಸಮಯ ಕೊಡುವುದು ಒಳ್ಳೆಯದು. ಆಗ ಅತ್ಯಂತ ಅನಿರೀಕ್ಷಿತವಾಗಿ ಅಪೇಕ್ಷಿತವಾದ ವಿಷಯವು ಮೆಲ್ಲಗೆ ನಮ್ಮ ನೆನಪಿಗೆ ಬರಬಹುದು.

ಅಪಘಾಯಕ ಅಂತರ್‌ಗ್ರಹ: ಕಲಿಯುವುದಾದ ಕೂಡಲೆ ಮತ್ತೇನಾದರೂ ಮಾನಸಿಕ ಚಟುವಟಿಕೆ ನಡೆದರೆ—ಅದರಲ್ಲೂ ಆ ಚಟುವಟಿಕೆ ಮೊದಲನೆಯದನ್ನೇ ಹೋಲುತ್ತಿದ್ದರೆ — ಸ್ಮೃತಿಗೆ ಅದು ಅಡ್ಡಿಯಾಗುವ ಸಂಭವ ಹೆಚ್ಚು. ಮೇಣದ ಮೈಮೇಲೆ ಮುದ್ರೆಗಳು ಬೀಳುವಂತೆ ಮಿದುಳಿನ ಮೇಲೆ ಲಾಂಛನಗಳು ಕ್ರಮೇಣ ಬೀಳುತ್ತವೆ. ಅಂಥ ಒಂದು ಮುದ್ರೆಯ ಮೇಲೆ ಮತ್ತೊಂದು ಮುದ್ರೆ ಬಿದ್ದರೆ ಮೊದಲನೆಯದು ಮಸುಕಾಗುವುದು ಸ್ವಾಭಾವಿಕ ಎಂದು ಊಹಿಸಲಾಗಿದೆ. ಆದರೆ ಈ ಮಾತಿಗೆ ವುಡ್‌ವರ್ತನ ಪ್ರಯೋಗವು ಪೋಷಕವಾಗಿದೆ. ಒಬ್ಬನು ಒಮ್ಮೆ ಮರದ ಮೇಲಿಂದ ಬಿದ್ದು ಮೂರ್ಛೆಯನ್ನು ಹೊಂದಿದನು. ಸ್ವಲ್ಪ ಕಾಲದಲ್ಲಿಯೇ ಅವನು ಸುಧಾರಿಸಿಕೊಂಡು ಮನೆಗೆ ಹೋಗಲು ಶಕ್ತನಾದನು. ಹೋಗುವಾಗ ಅವನು ಒಂದು ತರದ ಅರಳು ಮರಳು ಸ್ಥಿತಿಯಲ್ಲಿ ಇದ್ದರೂ ಅನಂತರ ಅವನಿಗೆ ಸರಿಯಾಗಿ ಜ್ಞಾನ ಬಂದಿತು. ಆದರೆ ಅವನು ಸಂಪೂರ್ಣ ಸುಧಾರಿಸಿದಾಗ ಅವನಿಗೆ ಬಿದ್ದದ್ದಾಗಲಿ ಮನೆಗೆ ಹೋದದ್ದಾಗಲಿ ಬೀಳುವುದಕ್ಕೆ ಮುಂಚೆ ೧೫ ನಿಮಿಷಗಳವರೆಗೆ ನಡೆದ ಯಾವ ಘಟನೆಯಾಗಲಿ ನೆನಪಾಗಲಿಲ್ಲ. ಅವನ ಮರೆವಿಗೆ ಮಿದುಳಿನ ವಿಷಮಾವಸ್ಥೆಗಳೇ ಕಾರಣವೆಂದು ವುಡ್‌ವರ್ತನ ಮತ.

ಸ್ಮೃತಿ ಬಾಧೆಗೆ ಇರುವ ಭಾವನಾತ್ಮಕ ಕಾರಣಗಳು: ಸ್ಮೃತಿಬಾಧೆಗೆ ಅನೇಕ ಸಲ ಕಾರಣವಾಗುವುದು ಅಭಿಜ್ಞೆಯಲ್ಲ, ಭಾವನೆಯೇ. ಹೆದರಿಕೆ, ಧೃತಿಗೇಡು ಅಥವಾ ಕ್ಷೋಭೆ ಜ್ಞಾಪಿಸಿಕೊಳ್ಳುವುದಕ್ಕೆ ಅಡ್ಡಿಯಾಗಬಹುದು. ಕೆಲವು ಸ್ಮೃತಿಬಾಧೆಗಳಿಗೆ ದಮನವೂ ಕಾರಣವಾಗುತ್ತದೆ. ದಮನವೆಂದರೆ

ಬೇಡವಾದ ಕಲ್ಪನೆಯನ್ನು ಅಥವಾ ಸ್ಮೃತಿಯನ್ನು ನಮ್ಮ ಪ್ರಜ್ಞೆಯಿಂದ ಹೊರದೂಡುವುದು. ಇದು ಸಂಭವಿಸಿದಾಗ ದಮನಶಕ್ತಿಗಳು ಬೇಡವಾದ ಕಲ್ಪನೆಯ ಮೇಲೆ ಅಷ್ಟೇ ಅಲ್ಲದೆ ಅದನ್ನು ಸಂಪರ್ಕಬಲದಿಂದ ನೆನಪಿಗೆ ತಂದುಕೊಡಬಹುದಾದ ಇತರ ಎಲ್ಲ ವಸ್ತುಗಳನ್ನೂ ಆದುಮುತ್ತವೆ. ಈ ಪ್ರಕಾರ ಯಾವುದಾದರೂ ಒಂದು ವಿಷಯವನ್ನು ನಮಗೆ ಚೆನ್ನಾಗಿ ಸ್ಮೃತಿಪಥಕ್ಕೆ ತಂದುಕೊಳ್ಳಲು ಸಾಧ್ಯವಾಗದೆ ಆಶ್ಚರ್ಯವಾದಾಗ ಅಂಥ ಮರೆವಿಗೆ ನಮಗೆ ಮರೆತುಬಿಡಬೇಕೆನ್ನಿಸಿದ ಯಾವುದೋ ಒಂದು ಆ ವಿಷಯಕ್ಕೆ ಸಂಬಂಧಿಸಿರುವುದೇ ಕಾರಣ.

ಅಧ್ಯಾಯ ಒಂಭತ್ತು

ಮೂಲಪ್ರವೃತ್ತಿಗಳು

ಕ್ಷೇಪ ಮತ್ತು ಮೂಲ ಪ್ರವೃತ್ತಿ

ಹೋಲಿಕೆ: ಎರಡೂ ಆನುವಂಶಿಕ ಮತ್ತು ಅಶಿಕ್ಷಿತ; ಅನುಭವದಿಂದ ತಿದ್ದಿಕೊಳ್ಳಲು ಬರುವಂಥವು. ಕ್ಷೇಪವನ್ನು ಹೇಗೆ ಅಂತರ್ಗ್ರಹಣಮಾಡಿ ಕೊಳ್ಳಲು ಅಥವಾ ಅನುಕೂಲಿಸಿಕೊಳ್ಳಲು ಸಾಧ್ಯವೋ ಹಾಗೇ ಮೂಲ ಪ್ರವೃತ್ತಿಯನ್ನಾದರೂ ಅದು ತನ್ನ ಮೂಲ ಸ್ವರೂಪದಲ್ಲಿ ಒಬ್ಬನ ಹಿತಕ್ಕೆ ಅನಾನುಕೂಲವಾಗಿದ್ದರೆ, ಅವನು ಅದನ್ನು ಬದಲಾಯಿಸಿಕೊಳ್ಳಬಹುದು ಇಲ್ಲವೆ ತಾತ್ಕಾಲಿಕವಾಗಿ ತಡೆಗಟ್ಟಿ ಹಿಡಿದಿಟ್ಟುಕೊಳ್ಳಬಹುದು.

ವ್ಯತ್ಯಾಸ: ಕ್ಷೇಪಕ್ರಿಯೆಯು ಸಾಮಾನ್ಯವಾಗಿ ಬಹುಬೇಗ ನಡೆಯುವಂಥದು; ಕಣ್ಣು ಮಿಟುಕಿಸುವುದರ ಹಾಗೆ ಕ್ಷಣಿಕವಾದರೂ ಆದೀತು. ಆದರೆ ಒಂದು ಮೂಲಪ್ರವೃತ್ತಿಯು ಉಂಟುಮಾಡಿದ ಕಾರ್ಯಸಂತಾನವು ಮುಗಿಯಲು ಗಂಟೆಗಳಾದರೂ ಬೇಕಾದಾವು; ಉದಾ: ಪ್ರಾಣಿಗಳಲ್ಲಿ ಕಂಡು ಬರುವ ಆಹಾರ ಹುಡುಕುವ ಚೋದನೆ ತಣಿಯಲು ಗಂಟೆಗಳು ಬೇಕು. ಮೂಲಪ್ರವೃತ್ತಿ ಉಂಟುಮಾಡುವ ಕಾರ್ಯವು ಸಂಪೂರ್ಣ ಜಾಗ್ರದವಸ್ಥೆಯದು; ಕ್ಷೇಪಕ್ರಿಯೆಯು ಅನಿಚ್ಛಾಕೃತವಾಗಿ ನಡೆಯುತ್ತದೆ—ಪ್ರಜ್ಞೆಗೆ ಗೊತ್ತಾಗುವ ಮೊದಲೇ ಅದು ಮುಗಿದು ಹೋಗಬಹುದು. ಕ್ಷೇಪಶಕ್ತಿಯು ನಮ್ಮ ಹುಟ್ಟುಗುಣ. ಆದರೆ ಮೂಲಪ್ರವೃತ್ತಿಯ ಕಾರ್ಯವು ನರಮಂಡಲದ ಬೆಳವಣಿಗೆಯನ್ನು ಅವಲಂಬಿಸಿರುವುದರಿಂದ, ಕಾಮದಂತಹ ಮೂಲಪ್ರವೃತ್ತಿಯು ನಮ್ಮ ಜೀವನದಲ್ಲಿ ತಕ್ಕಮಟ್ಟಿಗೆ ತಡವಾಗಿ ಉದಯಿಸುತ್ತದೆ.

ಮೂಲಪ್ರವೃತ್ತಿಯ ಲಕ್ಷಣ

ಲಾಯಡ್ ಮಾರ್ಗನ್ನನ ಪ್ರಕಾರ ಮೂಲಪ್ರವೃತ್ತಿಯ ವರ್ತನೆಗೆ ನಾಲ್ಕು

ಸಹಜ ಲಕ್ಷಣಗಳಿವೆ: ಇಡಿ ಅವಯವಿಯನ್ನೇ ಮಗ್ನಗೊಳಿಸುವ ಜಟಿಲ ಕಾರ್ಯಸಂತಾನವನ್ನು ಮಾಡುವುದು; ಅಂಥ ಕಾರ್ಯ ಸಂತಾನವು ಅವಯವಿಯ ಜೀವಕ್ಕೆ ಪೋಷಕವಾಗುವಂತಿರುವುದು; ಒಂದೇ ಜಾತಿಗೆ ಸೇರಿದ ಎಲ್ಲವೂ ಅಂಥ ಕಾರ್ಯಸಂತಾನಗಳನ್ನು ಎಸಗುವುದು; ಅವನ್ನು ಕಲಿಯಬೇಕಾಗಿಲ್ಲ—ಮೊದಲಿನ ಸಲವೇ ಅವನ್ನು ಸಮರ್ಪಕವಾಗಿ ಎಲ್ಲವೂ ಮಾಡಲು ಬರುವಂತಿರುವುದು. ಮೂಲಪ್ರವೃತ್ತಿಯ ಈ ಲಕ್ಷಣವನ್ನು ಲಾಯಡ್ ಮಾರ್ಗನ್ ಹೇಳಿದ್ದು ೧೮೯೬ರಲ್ಲಿ. ಆದರೆ ಅದು ಇಂದಿಗೂ ಗ್ರಾಹ್ಯವಾಗಿದೆ. ಆ ಲಕ್ಷಣವು ಮನುಷ್ಯನಿಗಿಂತ ಹೆಚ್ಚಾಗಿ ಪ್ರಾಣಿ, ಹಕ್ಕಿ ಮತ್ತು ಹುಳುಗಳ ಮೂಲಪ್ರವೃತ್ತಿಯ ವರ್ತನೆಗೆ ಅನ್ವಯಿಸುತ್ತದೆ.

ಮೆಕ್‌ಡೂಗಲ್ಲನು ಕೊಟ್ಟ ಲಕ್ಷಣ: ಮೂಲಪ್ರವೃತ್ತಿಗಳೆಂದರೆ ಆಗರ್ಭ ಪ್ರವೃತ್ತಿಗಳು. ಅವು ಒಂದು ಜಾತಿಗೆ ಸಾಧಾರಣ. ಅವು ನಮ್ಮ ಲಕ್ಷ್ಯವನ್ನು ಸೆಳೆದು ಕೆಲ ಬಗೆಯ ವಸ್ತು ಅಥವಾ ಸನ್ನಿವೇಶಗಳಲ್ಲಿ ನಮ್ಮನ್ನು ಆಸಕ್ತರನ್ನಾಗಿ ಮಾಡುವುವು. ಇದು ಮೂಲಪ್ರವೃತ್ತಿಗಳ ಅಭಿಜ್ಞಾಮುಖ. ಅವು ಈ ವಸ್ತುಗಳ ಕಡೆಗೆ ನಾವು ಏನಾದರೊಂದು ಭಾವನೆಯನ್ನು ತಾಳುವಂತೆ ಮಾಡುತ್ತವೆ. ಇದು ಅವುಗಳ ಭಾವನಾಮುಖ. ಅಲ್ಲದೆ ಅವು ಅಂಥ ವಸ್ತುಗಳ ಕಡೆಗೆ ಒಂದು ಬಗೆಯಿಂದ ವರ್ತಿಸುವಂತೆ ಇಲ್ಲವೆ ವರ್ತಿಸಬೇಕೆಂಬ ಚೋದನೆ ನಮ್ಮಲ್ಲಿ ಉಂಟಾಗುವಂತೆ ಮಾಡುತ್ತವೆ. ಇದು ಅವುಗಳ ಸಂಕಲ್ಪಮುಖ. ಅವನ ಪ್ರಕಾರ ಈ ಮುಖತ್ರಯದಲ್ಲಿ ಭಾವನಾಮುಖಕ್ಕೆ ಹೆಚ್ಚು ಪ್ರಾಧಾನ್ಯ. ಹೆದರಿಕೆ, ಹಸಿವು ಮತ್ತು ಕಾಮ ಮುಂತಾದ ಅಶುದ್ಧ ಮಾನುಷ ಭಾವನೆಗಳು ಜೀವ ಪೋಷಕವಾದ ಚಟುವಟಿಕೆಯತ್ತಣ ಪ್ರವೃತ್ತಿಗಳೊಡನೆ ಸಂಬಂಧಿಸಿವೆ. ಮೂಲ ಪ್ರವೃತ್ತಿಯ ಈ ಲಕ್ಷಣವು ಮಾರ್ಗನ್ನನ ಲಕ್ಷಣಕ್ಕೆ ವಿರುದ್ಧವಾಗಿಲ್ಲ. ಎರಡರ ನಡುವಿನ ವ್ಯತ್ಯಾಸವು ಹೆಚ್ಚಾಗಿ ಅರ್ಥಪ್ರಾಧಾನ್ಯಕ್ಕೆ ಸಂಬಂಧಿಸಿದ್ದು. ಮಾರ್ಗನ್ನನು ಪ್ರಾಣಿಗಳ ಮೂಲಪ್ರವೃತ್ತಿಯನ್ನು ಲಕ್ಷ್ಯವಾಗಿಟ್ಟುಕೊಂಡಿದ್ದರೆ, ಮೆಕ್‌ಡೂಗಲ್ಲನು ಮನುಷ್ಯರ ಮೂಲಪ್ರವೃತ್ತಿಯನ್ನು ಮುಖ್ಯವಾಗಿ ಲಕ್ಷ್ಯದಲ್ಲಿಟ್ಟುಕೊಂಡು ಲಕ್ಷಣಿಸಿದ್ದಾನೆ.

ಮೂಲಾಕ್ಷೇಪ ಸಿದ್ಧಾಂತ: ಪ್ರಾಣಿಗಳ ಮೂಲಪ್ರವೃತ್ತಿಯ ವರ್ತನೆಗೆ ದೂರದ ಗುರಿಯಷ್ಟೇ ಅಲ್ಲ, ಹತ್ತಿರದ ಗುರಿ ಕೂಡ ಇಲ್ಲ ಎಂದು ಕೆಲ

ಲೇಖಕರು ಹೇಳುತ್ತಾರೆ. ಅರ್ಥಾತ್ ಅದು ಸಂಕಲ್ಪಾತ್ಮಕವಲ್ಲ ಎಂಬುದು ಅವರ ಅಭಿಪ್ರಾಯ. ಅವರ ಪ್ರಕಾರ ಪ್ರಾಣಿಗಳ ಮೂಲಪ್ರವೃತ್ತಿಯ ವರ್ತನೆಯು ಹೊಂದಿಕೊಂಡ ಕ್ಷೇಪಗಳ ಮಾಲೆ — ಆ ಮಾಲೆಯಲ್ಲಿಯ ಪ್ರತಿಯೊಂದು ಅನುಕ್ರಿಯೆಯೂ ಅದರ ಮುಂದಿನ ಅನುಕ್ರಿಯೆಗೆ ಪ್ರೇರಣೆಯಾಗುತ್ತದೆ; ಅದರಿಂದ ಒಂದೇ ಒಂದು ಪ್ರೇರಣೆಯು ಒಂದು ಇಡಿ ಅನುಕ್ರಿಯಾಸಂತಾನಕ್ಕೆ ಕಾರಣವಾಗಬಲ್ಲದು. ಈ ಅಭಿಪ್ರಾಯವು ಸರಿಯಲ್ಲ. ನಿಷ್ಕೃಷ್ಟವಾದ ಅರ್ಥದಲ್ಲಿ ಕ್ಷೇಪವೆಂದರೆ ಮಿದುಳಿನ ಸಹಾಯವಿಲ್ಲದೆಯೇ ಅನಿಚ್ಛಾಕೃತವಾಗಿ ಉಂಟಾಗುವ ಅನುಕ್ರಿಯೆ. ಇನ್ನು ಕ್ಷೇಪಕ್ಕೆ ವಿಶಾಲಾರ್ಥವನ್ನು ಕೊಟ್ಟು ಆಂತರಿಕ ಅಥವಾ ಬಾಹ್ಯರೂಪದ ಮತ್ತು ನರಮಂಡಲದ ಯಾವುದಾದರೂ ಮಟ್ಟದಿಂದ ಉಂಟಾಗುವ ಒಂದು ಅನುಕ್ರಿಯೆ ಎಂದು ಹೇಳುವುದಾದರೆ ಅದರಲ್ಲಿ ವಿಶೇಷವೇನೂ ಇಲ್ಲ; ಮೂಲಪ್ರವೃತ್ತಿಯ ವರ್ತನೆಯು ಶರೀರಾಧೀನ ಎಂಬುದಷ್ಟೇ ಅದರಿಂದ ಸಿದ್ಧವಾಗುತ್ತದೆ. ಆದರೆ ಮಾಲಾಕ್ಷೇಪ ಸಿದ್ಧಾಂತಿಗಳು ನಿರ್ದೇಶಿಸಬೇಕೆಂದಿರುವುದು ಮೂಲಪ್ರವೃತ್ತಿಯ ಚಟುವಟಿಕೆಯು ಮಿದುಳಿಗೆ ಸಂಬಂಧಿಸಿದರೂ ಸಂಕಲ್ಪಕ್ಕೆ ಸಂಬಂಧಿಸಿಲ್ಲ ಎಂಬುದಾಗಿ. ಈ ಅಭಿಪ್ರಾಯವು ಅಸಮಂಜಸ. ತನ್ನ ಮೊಟ್ಟೆಯಿಂದ ಮರಿ ಹೊರಗೆ ಬರುತ್ತದೆ ಎಂಬುದರ ಮುನ್ನೋಟ ಅದರ ಮೇಲೆ ಕುಳಿತುಕೊಳ್ಳುವ ಕೋಳಿಗಿಲ್ಲ ಎಂಬ ಮಾತೇ ಒಂದು; ಮೊಟ್ಟೆಯ ಮೇಲೆ ಕಾವಿಗೆ ಕೂತುಕೊಳ್ಳಲು ಅದಕ್ಕೆ ಇಷ್ಟವೇ ಇಲ್ಲ. ಎಂಬ ಮಾತು ಇನ್ನೊಂದು. ಮೂಲಪ್ರವೃತ್ತಿಯ ಚಟುವಟಿಕೆಯಲ್ಲಿ ವೈವಿಧ್ಯವಿಲ್ಲದ ಚಲನಸಂತಾನಗಳ ಪುನರಾವೃತ್ತಿ ಇದ್ದಿದ್ದರೆ ನಾವು ಮಾಲಾಕ್ಷೇಪ ಸಿದ್ಧಾಂತವನ್ನು ಒಪ್ಪಬಹುದಾಗಿತ್ತು. ಆದರೆ ವೈವಿಧ್ಯಪೂರ್ಣ ಪ್ರಯತ್ನದಿಂದ ಮುಂದೊತ್ತಿಕೊಂಡು ಹೋಗುವುದು ಅಂಥ ಚಟುವಟಿಕೆಯ ಮುಖ್ಯ ಲಕ್ಷಣವೆಂದು ಬಹಳ ಹಿಂದೆಯೇ ಲಾಯಡ್ ಮಾರ್ಗನ್ ತೋರಿಸಿಕೊಟ್ಟಿದ್ದಾನೆ. ಅತ್ಯಂತ ಕೆಳಮಟ್ಟದ ಜೀವಿಗಳಲ್ಲಿಯೂ ಮೂಲಪ್ರವೃತ್ತಿಯ ವರ್ತನೆಯು ಮೂಲತಃ ಶಿಥಿಲ. ಕುರುಡಿ ಅಥವಾ ಕಡಿಜೀರಂಗಿ ಹುಳು (Mason Wasp) ತನ್ನ ನಿಶ್ಚೇಷ್ಟ ಬಲಿಯನ್ನು ಹೋಗುವಾಗ ಗೂಡಿನೊಳಗೆ ಎಳೆದುಕೊಂಡು ನಿರ್ದಿಷ್ಟ ಚಲನಸಂತಾನವನ್ನು ಮಾಡುವುದಿಲ್ಲ. ಅದು ಮಾಡುವುದು ಹೊತ್ತುಕೊಂಡು ಹೋಗುವ ಕೆಲಸ. ಅಂದರೆ ಇಂದ್ರಿಯಪ್ರತ್ಯಕ್ಷದಿಂದ ನಿರ್ದಿಷ್ಟವಾದ

ಸಂಕಲ್ಪಾತ್ಮಕ ಚಟುವಟಿಕೆಯನ್ನು ಅದು ನಡೆಸುತ್ತದೆ. ಅದು ಸಾಕ್ಷಾತ್ತಾಗಿ ಮಾಡುವ ಚಲನವಲನಗಳು ಪರಿಸ್ಥಿತಿಗೆ ತಕ್ಕಂತೆ ಭಿನ್ನವಾಗಬಹುದು. ತನ್ನ ಮರಿಗಳ ಆಹಾರಕ್ಕಾಗಿ ಎಳೆದುಕೊಂಡು ಬಂಧ ಹುಳುವನ್ನು ಒಂದು ಎತ್ತರದ ಜಾಗದ ಮೇಲಿಂದ ತೆಗೆದುಕೊಂಡು ಹೋಗಬೇಕಾಗಿದ್ದರೆ ಇಲ್ಲವೆ ಅಡ್ಡ ಬಂದ ಯಾವುದಾದರೂ ಒಂದು ದೊಡ್ಡ ವಸ್ತುವನ್ನು ಸುತ್ತುವರಿದು ತೆಗೆದುಕೊಂಡು ಹೋಗಬೇಕಾಗಿದ್ದರೆ ಅದು ಮಾಡುವ ಪ್ರಯತ್ನವೇ ಬೇರೆ. ಗೂಡಿನಬಾಯಿ ಚಿಕ್ಕದಾಗಿದ್ದು ತಾನು ತಂದ ಹುಳುವೇ ದೊಡ್ಡದಾಗಿದ್ದರೆ ಗೂಡಿನ ಬಾಯಿಯನ್ನು ಅಗಲ ಮಾಡುವ ಅದರ ಪ್ರಯತ್ನವೇ ಬೇರೆ. ಎರಡನೆಯ ಪ್ರಯತ್ನಮಾಡುವಾಗ ಅದರ ಚಲನಗಳ ಅಭ್ಯಸ್ತಾನುಕ್ರಮದಲ್ಲಿ ಸಂಪೂರ್ಣ ಬದಲಾವಣೆ ಆಗಿರುತ್ತದೆ. ಅದು ಹೀಗೆ ಸಂದರ್ಭಾನುಸಾರ ಭಿನ್ನ ಪ್ರಯತ್ನ ಮಾಡಲು ತನ್ನ ಬಲಿಯನ್ನು ಗೂಡಿನೊಳಗೆ ಎಳೆದುಕೊಳ್ಳುವ ಸಂಕಲ್ಪ ಅದಕ್ಕೆ ಇರುವುದೇ ಕಾರಣ.

ಮೇಲು ಮಟ್ಟದ ಜೀವಿಗಳಲ್ಲಿಯ ಮೂಲಪ್ರವೃತ್ತೀಯ ವರ್ತನೆಯಲ್ಲಿ ಇನ್ನೂ ಹೆಚ್ಚು ಶೈಥಿಲ್ಯ ಕಂಡುಬರುತ್ತದೆ. ಒಂದು ಹಕ್ಕಿಯು ಗೂಡು ಕಟ್ಟಲು ಹೊರಟಾಗ ಪರಿಸ್ಥಿತಿಗನುಗುಣವಾಗಿ ತನ್ನ ಕಾರ್ಯವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ — ತಾನು ಗೂಡು ಕಟ್ಟಲು ಬಯಸಿದ ಪೊಟ್ಟರೆಯ ಆಕೃತಿ, ತನಗೆ ಸಿಕ್ಕಿದ ಕಟ್ಟುವ ಸಾಮಾನು, ಗೂಡಿನ ಪೂರ್ಣ ಸ್ವರೂಪ ಮುಂತಾದವುಗಳನ್ನು ನೋಡಿಕೊಂಡು ಅದು ಕೆಲಸ ಮಾಡಬೇಕಾಗುತ್ತದೆ. ಅಂಥ ವೈವಿಧ್ಯಪೂರ್ಣ ಚಟುವಟಿಕೆಯನ್ನು ನಿರ್ದಿಷ್ಟ ಅನಿಚ್ಛಾಕೃತ ಪ್ರೇರಣಾನುಕ್ರಿಯೆಗಳ ಸೂತ್ರದಿಂದ ವಿವರಿಸಲು ಶಕ್ಯವಿಲ್ಲ. ಈ ಮಟ್ಟದಲ್ಲಿಯ ಮೂಲಪ್ರವೃತ್ತೀಯ ವರ್ತನೆಗೆ ದೂರದ ಉದ್ದೇಶವಿಲ್ಲದೆ ವಿವರಣೆ ಕೊಡುವುದು ಕಷ್ಟ. ಒಂದು ಕಡ್ಡಿ ಇಟ್ಟು ಮತ್ತೊಂದು ಕಡ್ಡಿಯನ್ನಿಡಬೇಕೆಂಬುದಕ್ಕಿಂತ ಹೆಚ್ಚಿನ ಮುನ್ನೋಟವಿಲ್ಲದೆ — ತಾನು ಕಟ್ಟಲಿರುವ ಗೂಡಿನ ಕಲ್ಪನೆ ಅಥವಾ ಪ್ರತಿಮೆ ಅದರ ತಲೆಯಲ್ಲಿ ಇಲ್ಲದೆ — ಅದು ಗೂಡು ಕಟ್ಟಲು ಹೊರಡುತ್ತದೆ ಎಂಬುದು ಅತ್ಯಂತ ಅಸಂಭವ. ಹೀಗಿದ್ದರೂ ತದ್ವಿರುದ್ಧವಾಗಿ ಬೇರೆ ಯಾವ ವಿವರಣೆ ಕೊಡಹೋದರೂ ಅನೇಕ ತೊಂದರೆಗಳು ಅಡ್ಡ ಬರುತ್ತವೆ. ಹೇಗೆಂದರೆ ತಾನು ಕಟ್ಟುವ ಗೂಡಿನ ಕಲ್ಪನೆ ಹಕ್ಕಿಗೆ ಮೊದಲೇ ಇತ್ತೆಂದು ಭಾವಿಸಿದರೆ, ಮೊದಲನೆಯ ಬಾರಿಗೆ ಗೂಡು ಕಟ್ಟಹೋದ ಅಂಥ ಹಕ್ಕಿಗೆ ಅದು

ಎಲ್ಲಿಂದ ಬಂತು ಎಂದು ಯಾರಾದರೂ ಕೇಳಬಹುದು. ಅವರ ತಾಯಿಯ ಗೂಡನ್ನು ನೋಡಿದ ನೆನಪು ಅದಕ್ಕೆ ಇದೆ ಎಂದು ಉತ್ತರ ಕೊಟ್ಟರೆ ಕಾಗೆಯ ಗೂಡಿನಲ್ಲಿ ಹುಟ್ಟಿದ ಕೋಗಿಲೆಯಂತಹ ಹಕ್ಕಿಗೆ ತನ್ನ ಜಾತಿಗೆ ಸಹಜವಾದ ಗೂಡಿನ ಕಲ್ಪನೆ ಎಲ್ಲಿಂದ ಬರಬೇಕು? ಎಂದು ಮತ್ತೆ ಪ್ರಶ್ನೆ ಎದ್ದೀತು. ಏಕೆಂದರೆ, ಕೋಗಿಲೆಯಂಥ ಪರಪುಷ್ಟ ಹಕ್ಕಿಯು ಎಂದೂ ಕಾಗೆಯ ಗೂಡಿನಂಥ ಗೂಡನ್ನು ಕಟ್ಟುವುದಿಲ್ಲ. ಇದಕ್ಕಿರುವ ಒಂದೇ ಒಂದು ಉತ್ತರವೆಂದರೆ ಗೂಡಿನ ಕಲ್ಪನೆಯು ಅಂಥ ಪರಪುಷ್ಟ ಮರಿಗೆ ಆನುವಂಶಿಕವಾಗಿ ಬಂದಿದೆ ಎಂಬುದೇ. ಇದು ಕುಲಸ್ಮೃತಿವಾದಿಗಳ ಮತ. ಆದರೆ ವರ್ತನೆಯ ಮಾದರಿಗಳಿಂದ ಭಿನ್ನವಾದ ಸ್ಮೃತಿಗಳೂ ಪ್ರತಿಮೆಗಳೂ ಆನುವಂಶಿಕವಾಗಿ ಬರುವುದಿಲ್ಲ ಎಂಬ ಈ ವರೆಗಿನ ಅನುಭವವು ಮೇಲಿನ ಮತಕ್ಕೆ ಮಾರಕವಾಗಿದೆ. ಹೀಗಿದ್ದರೂ ಹಕ್ಕಿಯ ಮರಿಯು ಭಿನ್ನ ಜಾತಿಯ ಹಕ್ಕಿಯ ಗೂಡಿನಲ್ಲಿ ಹುಟ್ಟಿ ಹೊರಬಿದ್ದು ತನ್ನ ಜಾತಿಯ ಹಕ್ಕಿಗಳು ಕಟ್ಟುವ ಗೂಡಿನ ಮಾದರಿಯನ್ನು ಕಾಣುವ ಮೊದಲೇ ಗೂಡು ಕಟ್ಟಲು ಹೋಗಿ, ಸ್ವಜಾತಿಗೆ ಸಹಜವಾದ ಮಾದರಿಯ ಗೂಡನ್ನು ಯಶಸ್ವಿಯಾಗಿ ಕಟ್ಟುವ ಉದಾಹರಣೆಯಿಂದ ಅದಕ್ಕೆ ಸ್ವಜಾತಿಗೆ ಸಹಜವಾದ ಗೂಡಿನ ಮಾದರಿಯ ಅಸ್ಪಷ್ಟ ಅಥವಾ ಅತ್ಯಂತ ಸ್ಥೂಲರೂಪದ ಕಲ್ಪನೆಯಾದರೂ ಆನುವಂಶಿಕವಾಗಿ ಬಂದಿರುತ್ತದೆ ಎಂಬುದು ಅಬಾಧಿತವಾಗುತ್ತದೆ. ಇದರಿಂದ ಸಿದ್ಧವಾಗುವುದೇನೆಂದರೆ, "ಪ್ರತಿಮೆ ಅಥವಾ ಕಲ್ಪನೆಯು ಆನುವಂಶಿಕವಾಗಿ ಬರುವುದಿಲ್ಲ" ಎಂಬ ಸಿದ್ಧಾಂತವು ಪುನರ್ವಿಮರ್ಶನೀಯ ಎಂಬುದು. ಆದುದರಿಂದ ದೂರೋದ್ದೇಶದ ಪ್ರಶ್ನೆಯನ್ನು ದೂರವಿಟ್ಟರೂ ಮೂಲಪ್ರವೃತ್ತೀಯ ವರ್ತನೆಯು ಸದ್ಯದ ಅನುಭವಗಮ್ಯ ಉದ್ದೇಶವನ್ನೀಡೇರಿಸುವ ಸಂಕಲ್ಪದಿಂದ ಪ್ರಾರಂಭವಾಗುತ್ತದೆ ಎಂಬುದು ನಿರ್ವಿವಾದವೆನಿಸಿದೆ.

ಕ್ಷೇಪಕ್ರಿಯೆಗೂ ಮೂಲಪ್ರವೃತ್ತೀಯ ವರ್ತನೆಗೂ ನಡುವೆ ಇರುವ ವ್ಯತ್ಯಾಸವನ್ನು ಹೀಗೆ ಸಂಕ್ಷೇಪಿಸಬಹುದು: ಕ್ಷೇಪಕ್ರಿಯೆಯು ವಿಶಿಷ್ಟ ಚಲನ ಸಂತಾನಕ್ಕೆ ಪರಿಮಿತ; ಮೂಲಪ್ರವೃತ್ತೀಯ ವರ್ತನೆಯಲ್ಲಿ ಅನುಭವಕ್ಕೆ ಬರುವ ಒಂದು ಸನ್ನಿವೇಶವನ್ನು ನಿರ್ದಿಷ್ಟ ರೀತಿಯಿಂದ ಬದಲಾಯಿಸುವ ಚೋದನೆ ಇದೆ. ಈ ಬದಲಾವಣೆ ತರಲು ಬಳಸುವ ಚಲನಗಳು ಬಹುಮಟ್ಟಿಗೆ ಯಾಂತ್ರಿಕವಾಗಿರಬಹುದು. ಆದರೆ ಅವುಗಳಲ್ಲಿ ಯಾವಾಗಲೂ ಕೆಲಮಟ್ಟಿನ

ಬದಲಾವಣೆಗೆ ಅವಕಾಶವಿದೆ.

ಮನುಷ್ಯನ ಮೂಲಪ್ರವೃತ್ತಿಗಳು: ಮನುಷ್ಯನ ಮೂಲಭೂತ ಪ್ರವೃತ್ತಿಗಳು ಇಂತಿವೆ: ಆಹಾರಾನ್ವೇಷಣೆ, ಕುತೂಹಲ, ಪಲಾಯನ, ಆಕ್ರಮಣ, ಸ್ವಾವಧಾರಣ, ಕಾಮ ಮತ್ತು ಸಂರಕ್ಷಣೆ ಇವು ಮನಃಶಾಸ್ತ್ರದ ಎಲ್ಲ ಪ್ರಸ್ಥಾನಗಳಿಗೂ ಸಾಧಾರಣವೆನ್ನಬಹುದು. ಅನಂತರ ಸಮಷ್ಟಿಜೀವನ, ಸರ್ಜನೆ ಮತ್ತು ಆರ್ಜನೆ ಎಂಬುವನ್ನೂ ಕೆಲವರು ಸೇರಿಸುತ್ತಾರೆ. ಮೊದಲಿನ ಏಳು ಲಾಯಡ್ ಮಾರ್ಗನ್ನನ ಪ್ರಕಾರ ಜೀವಿಗಳಿಗೆ ಆಜನ್ಮ; ಅವು ಒಂದು ಜಾತಿಯ ಅಥವಾ ಲಿಂಗದ ಎಲ್ಲ ವ್ಯಕ್ತಿಗಳಿಗೂ ಸಾಧಾರಣ. ಅವು ನಮ್ಮ ಬದುಕಿಗೆ ಸಹಕಾರಿಗಳು. ಅಲ್ಲದೆ ಅವು ಕಲಿಯುವಿಕೆ ಅಥವಾ ಪೂರ್ವಾನುಭವದ ಹಂಗಿಲ್ಲದೆ ಸ್ವತಂತ್ರವಾಗಿ ಗೋಚರವಾಗುತ್ತವೆ.

ಅಧ್ಯಾಯ ಹತ್ತು

ಭಾವನೆಗಳೂ ರಸಗಳೂ

ಭಾವನೆಯ ಸಾಮಾನ್ಯ ಲಕ್ಷಣಗಳು : ಭಯ, ಕ್ರೋಧ, ಪ್ರತ್ಯಾಶೆ ಶಂಕೆ, ಮತ್ಸರ ಮುಂತಾದ ಭಾವನೆಗಳು ಎಲ್ಲರಿಗೂ ಪರಿಚಿತ. ಶಾರೀರಿಕವಾದ ಸಾಮಾನ್ಯ ಕ್ಷೋಭೆಯಿಂದ ಉಂಟಾಗುವ ಒಂದು ವಿಧದ ಸಂವೇದನೆಯನ್ನು ಭಾವನೆ ಎನ್ನುತ್ತಾರೆ ಕೆಲವರು. ಮತ್ತೆ ಕೆಲವರು ಭಾವನೆಯಲ್ಲಿ ಇರುವುದು ಗತಕಾಲದ ಸುಖ ದುಃಖಗಳ ಸಂಪರ್ಕಜನ್ಯವಾದ ಪುನರುತ್ಥಾನ ಎನ್ನುವರು. ಇನ್ನೂ ಕೆಲವರು ವಿಶಿಷ್ಟ ರೀತಿಯಲ್ಲಿ ವರ್ತಿಸುವ ಪ್ರವೃತ್ತಿಯೇ ಭಾವನೆ— ಅದೊಂದು ಸಾಂಕಲ್ಪಿಕ ಪ್ರಜ್ಞೆ ಎನ್ನುತ್ತಾರೆ. ಇಂಥ ಭಿನ್ನಾಭಿಪ್ರಾಯಗಳ ನಡುವೆ ಸಿಕ್ಕಿದ ನಾವು ಮೊದಲು ಮಾಡತಕ್ಕ ಕೆಲಸವೆಂದರೆ ಕೆಲ ಪ್ರಾತಿನಿಧಿಕ ಭಾವನೆಗಳನ್ನು ತೆಗೆದುಕೊಂಡು ಅವುಗಳ ಪ್ರಕಟನೆಯಲ್ಲಿ ಜಾತೀಯ ಹಾಗೂ ವಿಶಿಷ್ಟ ಲಕ್ಷಣಗಳನ್ನು ನಿರ್ಧರಿಸಲು ತೊಡಗುವುದು.

ಭಾವನೆಯ ಮೊದಲ ಲಕ್ಷಣ ವಿಶಾಲತೆ. ಇಂದ್ರಿಯಾನುಭವದ ಕೆಳಮಟ್ಟದಿಂದ ಮನಸ್ಸಿನ ಭಾವಿಕ ಹಾಗೂ ಕಲ್ಪಕ ಚಟುವಟಿಕೆಗಳ ವರೆಗೂ ನಿರ್ದಿಷ್ಟ ಜಾತಿಗಳಿಗೆ ಸೇರಿದ ಭಾವನೆಗಳು ಕಂಡುಬರುತ್ತವೆ. ಮರಿಯ ಸುದ್ದಿಗೆ ಹೋದರೆ ಬೆಕ್ಕಿಗೆ ಕೋಪ ಬರುತ್ತದೆ, ಆಟಿಗೆಗಳನ್ನು ಕಸಿದುಕೊಂಡರೆ ಮಗುವಿಗೆ ಸಿಟ್ಟು ಬರುತ್ತದೆ, ಒಬ್ಬನ ಪುಸ್ತಕವನ್ನು ಕಟುವಾಗಿ ಟೀಕಿಸಿದರೆ ಅವನು ಉರಿದೇಳುತ್ತಾನೆ. ಈ ನಿದರ್ಶನಗಳಿಂದ ಕ್ರೋಧವೆಂಬ ಭಾವನೆಯ ಹರಹು ಎಷ್ಟೆಂಬುದು ತಿಳಿದು ಬರುತ್ತದೆ.

ಭಾವನೆಗಳ ಉದ್ಬೋಧನೆಗೆ ಕಾರಣವಾದ ಸನ್ನಿವೇಶಗಳ ವೈವಿಧ್ಯವು ಎರಡನೆಯ ಲಕ್ಷಣ. ಭಂಗ ಅಥವಾ ವಿರೋಧವು ಸಿಟ್ಟಿಗೆ ಕಾರಣವಾಗಬಹುದು. ಯಾವುದಾದರೂ ಒಂದು ಅಪಾಯ ನಮಗೆ ಹೆದರಿಕೆ ಬರಿಸೀತು. ಏನನ್ನಾದರೂ ತಿನ್ನುತ್ತಿರುವಾಗ ಗಲಾಟೆ ಮಾಡಿ ಅಥವಾ ಅದರ ಮರಿಯನ್ನು ಕೆಣಕಲು ಹೋಗಿ ಅಥವಾ ಅದರ ಬಾಲ ಎಳೆದು ನಾಯಿಗೆ ಸಿಟ್ಟು ಬರಿಸಬಹುದು.

ಇದರಿಂದ ಯಾವುದಾದರೊಂದು ಭಾವನೆಯನ್ನು ಉದ್ರೇಕಿಸಲು ಸಾಮಾನ್ಯ ರೀತಿಯು ಒಂದು ಸನ್ನಿವೇಶ ಕಾರಣವಾದೀತಲ್ಲದೆ ವಸ್ತುಗಳ ನಿರ್ದಿಷ್ಟ ವರ್ಗ ವಲ್ಲ. ಸಾಮಾನ್ಯ ಭಾವನೆಯನ್ನು ವ್ಯಕ್ತ ಮಾಡುವ ವರ್ತನೆಯಾದರೂ ಸಾಮಾನ್ಯ ಲಕ್ಷಣವುಳ್ಳದ್ದು. ಅದು ಆ ಈ ವಸ್ತುಗಳ ವಿಶಿಷ್ಟ ಬಗೆಗೆ ಹೊಂದಿ ಕೊಳ್ಳುವ ಪ್ರಯತ್ನವಲ್ಲ; ಒಂದು ನಿರ್ದಿಷ್ಟ ಪ್ರಕಾರದ ಸನ್ನಿವೇಶಕ್ಕೆ ಸಲ್ಲುವ ಸಾಮಾನ್ಯವಾದ ಕಾರ್ಯವಿಧಾನ. ಎಷ್ಟು ಜೋರು ಸಿಟ್ಟುಬಂದರೂ ನಾಯಿಯ ಸಿಟ್ಟಿನ ಸಾಮಾನ್ಯ ಲಕ್ಷಣ ಒಂದೇ; ಹಲ್ಲು ಕಿಸಿದು, ಗುರುಗುಟ್ಟಿ, ಕಚ್ಚಲು ಯತ್ನಿಸಿ ಮಾಡುವ ಅದರ ಶಾರೀರಿಕ ಚಟುವಟಿಕೆ ಯಾವಾಗಲೂ ಒಂದೇ ಬಗೆಯದಾಗಿರುತ್ತದೆ.

ಭಾವನೆಯ ಎರಡು ಅವಸ್ಥೆಗಳನ್ನು ಪ್ರತ್ಯೇಕಿಸಿ ತಿಳಿದುಕೊಳ್ಳುವುದಗತ್ಯ. ನಿಶ್ಚಿತ ಇಂದ್ರಿಯಾನುಭವ ಅಥವಾ ಕಲ್ಪನೆಗಳಿಂದ ಭಾವನೆಗಳು ಉದ್ಬುದ್ಧ ವಾಗಬಹುದು: ಒಳ್ಳೆಯ ಸುದ್ದಿ ಕೇಳಿದಾಗ ಸಂತೋಷವಾಗುವುದು ಇದಕ್ಕೆ ನಿದರ್ಶನ. ಎರಡನೆಯದಾಗಿ, ಶಾರೀರಿಕ ಪರಿಸ್ಥಿತಿಯಿಂದ ಭಾವನೆಗಳು ನಮ್ಮಲ್ಲಿ ಏಳಬಹುದು: ಹೆಂಡ ಕುಡಿದಾಗ ನಮ್ಮ ಅನುಭವಕ್ಕೆ ಬರುವ ಭಾವನೆಗಳು ಈ ಬಗೆಗೆ ನಿದರ್ಶನಗಳು. ಈ ವಿಧವಾಗಿ ಹೇತುಭೇದದ ಮೇಲಿಂದ ಭಾವನೆಗಳನ್ನು ವರ್ಗೀಕರಿಸಬಹುದು.

ಮನುಷ್ಯನ ಭಾವನಾವಸ್ಥೆಯು ಅವನ ಆರೋಗ್ಯವನ್ನವಲಂಬಿಸಿರುತ್ತದೆ. ದೇಹಸ್ಥಿತಿಯು ಒಂದೆರಡು ರೀತಿಗಳಿಂದ ಕಾರ್ಯಪರವಾಗಬಹುದು. ಅದು ನರಮಂಡಲದ ಸ್ಥಿತಿಯನ್ನು ನೇರವಾಗಿ ವ್ಯತ್ಯಾಸಗೊಳಿಸಬಹುದು; ಇಲ್ಲವೆ ದೇಹದ ಸಾಮಾನ್ಯಾವಸ್ಥೆಯನ್ನು ಬದಲಾಯಿಸುವುದರ ಮೂಲಕ ಆಂತರಿಕ ಅವಯವಗಳಿಂದ ಬಂದ ಹಾಗೂ ಕೇಂದ್ರ ನರಮಂಡಲ ಗ್ರಹಿಸಿದ ಚೋದನೆಗಳ ಬಗೆಯನ್ನೇ ಬದಲಾಯಿಸಬಹುದು. ಶಾರೀರಿಕ ಸಂವೇದನೆಗಳ ಎಲ್ಲೆಲ್ಲೂ ಹರಡಿಕೊಳ್ಳುವ ಸ್ವಭಾವದ ಮೂಲಕ ನರಮಂಡಲದಲ್ಲಿ ಒಂದು ಸಾಮಾನ್ಯ ಬದಲಾವಣೆಯಾಗುತ್ತದೆ. ಅಂಥ ಬದಲಾವಣೆಯು ಮಾನಸಿಕ ಕ್ಷೇತ್ರದಲ್ಲಿ ಉದ್ರಿಕ್ತಾವಸ್ಥೆ (Emotional Mood) ಎಂಬ ರೂಪದಲ್ಲಿ ನಮ್ಮ ಅನುಭವಕ್ಕೆ ಬರುತ್ತದೆ.

ಯಾವ ಕಾರಣದಿಂದ ಉದ್ಭವಿಸಿದ್ದರೂ ಒಮ್ಮೆ ಎಬ್ಬಿಸಿದ ನಂತರ ಉದ್ರಿಕ್ತ

ಅವಸ್ಥೆಯು ಎದುರಿಗೆ ಸಿಕ್ಕ ವಸ್ತುವನ್ನು ಹಿಡಿದುಕೊಳ್ಳುತ್ತದೆ. ಯಾವುದಾದರೂ ಮದ್ದು ಕುಡಿದಾಗ ತಲೆ ಕೆಟ್ಟುಹೋಗಬಹುದು ಇಲ್ಲವೆ ಮನಸ್ಸು ಇಳಿದು ಹೋಗಬಹುದು ಅಥವಾ ಹಿಗ್ಗಿ ಕುಣಿದಾಡಬಹುದು. ಆದರೆ ಒಮ್ಮೆ ಇಂಥ ಉದ್ರಿಕ್ತಾವಸ್ಥೆ ಹುಟ್ಟಿತೆಂದರೆ ಸಾಕು — ಅದು ಎದುರಿಗೆ ಸಿಕ್ಕಿದ್ದಕ್ಕೆ ಅಂಟಿಕೊಳ್ಳುತ್ತದೆ. ನಿದ್ದೆಗೆಟ್ಟ ಒಬ್ಬನು ಬೆಳಿಗ್ಗೆ ಎದ್ದಾಗ ಕಂಡದ್ದರ ಮೇಲೆಲ್ಲ ಕಿಡಿಕಿಡಿಯಾಗಬಹುದು. ಅದೇ ವಸ್ತು ಅಥವಾ ಸನ್ನಿವೇಶವು ಮತ್ತೊಂದು ಭಾವನಾವಸ್ಥೆಯಲ್ಲಿ ಎದುರಾದರೆ ಇದರಿಂದ ಅವನು ಎಳ್ಳಷ್ಟೂ ಉದ್ರೇಕಹೊಂದದಿರಬಹುದು. ಒಂದು ಭಾವನಾವಸ್ಥೆಗೆ ಚಟುವಟಿಕೆಯ ಸಾಮಾನ್ಯ ದಿಕ್ಕೊಂದಿದೆ; ಅದು ಪರಿಸ್ಥಿತಿಗೆ ಅನುಗುಣವಾಗಿ ಶಕ್ಯಾನುಸಾರ ವಿಶೇಷ ರೂಪವನ್ನು ತಾಳುತ್ತದೆ.

ಪರೋಪಜೀವನವು ಭಾವನೆಯ ಐದನೆಯ ಲಕ್ಷಣ. ಕೇವಲ ಶಾರೀರಿಕ ವ್ಯತ್ಯಾಸಗಳಿಂದಲ್ಲದೆ ಸಾಮಾನ್ಯ ಸನ್ನಿವೇಶಗಳಿಂದ ಉದ್ರೇಕ ಹೊಂದಿದ ಭಾವನೆಗಳು ಗೌಣ ಘಟನೆಗಳೆನಿಸುತ್ತವೆ. ಅವುಗಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಪ್ರವೃತ್ತಿಗಳಿರುತ್ತವೆ. ಅತ್ಯಂತ ಸರಳ ಹಾಗೂ ಮೂಲಭೂತ ಭಾವನೆಗಳನ್ನು ಬಿಟ್ಟರೆ ಮಿಕ್ಕ ಎಲ್ಲವಕ್ಕೂ ಈ ಮಾತು ಅನ್ವಯಿಸುತ್ತದೆ. ಎಲುಬಿನ ಚೂರನ್ನು ಕಸಿದುಕೊಂಡಾಗ ಉಂಟಾಗುವ ನಾಯಿಯ ಸಿಟ್ಟಿಗೆ ಆಹಾರ ಬೇಕೆಂಬ ವಿಶಿಷ್ಟವಾದ ಹಸಿವೇ ಹಿನ್ನೆಲೆ. ಅದರ ಮರಿಯನ್ನು ಕೆಣಕಲು ಹೋದಾಗ ಅದಕ್ಕೆ ಉಂಟಾಗುವ ಸಿಟ್ಟಿಗೆ ಅದರಲ್ಲಿರುವ ಸಾಕುವ ಪ್ರವೃತ್ತಿಯೇ ಹಿನ್ನೆಲೆ.

ಭಾವನೆಯ ತೀವ್ರ ಮುಖಗಳಲ್ಲೆಲ್ಲ ಶಾರೀರಿಕ ಸಂವೇದನೆಗಳು ಅದರ ಪ್ರಜ್ಞಾವಸ್ಥೆಯ ಮುಖ್ಯಾಂಗವಾಗುತ್ತವೆ. ಮೂಲತಃ ಶಾರೀರಿಕ ಬದಲಾವಣೆಯಿಂದ ಉಂಟಾಗಿರಲಿ ಇಲ್ಲವೆ ನಿಶ್ಚಿತ ಅನುಭವ ಅಥವಾ ಕಲ್ಪನೆಗಳಿಂದ ಮೊಟ್ಟಮೊದಲಿಗೆ ಉದ್ಭವಿಸಿರಲಿ—ಯಾವ ಭಾವನೆಗೂ ಈ ಮಾತು ಅನ್ವಯವಾಗತಕ್ಕದ್ದೇ. ಮೇಲಿನ ವಿಚಾರಗಳಿಂದ ಸ್ಪಷ್ಟವಾಗುವುದೆಂದರೆ ಒಳ ಅವಯವ ಹಾಗೂ ಮಾಂಸಖಂಡದಲ್ಲಿ ಉಂಟಾದ ಬದಲಾವಣೆಯಿಂದ ಉದ್ಭವಿಸುವ ಸಂವೇದನೆಗಳು ಭಾವನಾಪ್ರಜ್ಞೆಯ ಮುಖ್ಯಸ್ವರೂಪವನ್ನು ನಿರೂಪಿಸುತ್ತವೆ ಎಂಬುದೇ ಆಗಿದೆ. ಇದು ಜೇಮ್ಸ್ ಹಾಗೂ ಲ್ಯಾಂಗ್ ಎಂಬಿಬ್ಬರ "ಪರಿಧಿ ಸಿದ್ಧಾಂತ" ಎನಿಸಿಕೊಳ್ಳುತ್ತದೆ.

ಪರಿಧಿಸಿದ್ಧಾಂತದ ಪ್ರಕಾರ ಶರೀರದ ಮಾಂಸಖಂಡಗಳ ಹಾಗೂ ಒಳ ಅವಯವಗಳ (Vital Organs) ಚಟುವಟಿಕೆಗಳ ಪರಿಣಾಮವೇ ಭಾವನೆ. ಎದೆ ಒಡಿತ, ಅಳ್ಳೆ ಹೊಡೆದುಕೊಳ್ಳುವುದು, ಕೈಕಾಲು ನಡುಗುವುದು, ಗಂಟಲೊಣಗುವುದು ಮೊದಲಾದ ಶಾರೀರಿಕ ಕ್ರಿಯೆಗಳನ್ನು ತೆಗೆದೊಗೆದರೆ ಹೆದರಿಕೆ ಎಂಬುದಕ್ಕೆ ಅರ್ಥವೇ ಇಲ್ಲ. ಒಂದು ಕರಡಿಯನ್ನು ಕಂಡಾಗ ನಾವು ಓಡುತ್ತೇವೆ; ಅನಂತರ ಹೆದರುತ್ತೇವೆ ಎಂಬುದು ಪರಿಧಿಸಿದ್ಧಾಂತ. ಅಂದರೆ ಕರಡಿಯನ್ನು ಕಂಡು ನಮ್ಮ ದೇಹದಲ್ಲಿ ಉಂಟಾದ ಬದಲಾವಣೆಯ ಪರಿಣಾಮವಾಗಿ ನಮ್ಮಲ್ಲಿ ಹೆದರಿಕೆ ಎಂಬ ಭಾವನೆ ಪ್ರಜ್ಞಾಗತವಾಗುವುದು. ತದ್ವಿರುದ್ಧವಾಗಿ ಕರಡಿಯನ್ನು ಕಂಡು ಹೆದರಿದ ಮೇಲೆ ನಾವು ಓಡುವ ಮುಂತಾದ ಶಾರೀರಿಕ ಚಟುವಟಿಕೆಗಳನ್ನು ಮಾಡುತ್ತೇವೆ ಎಂಬುದು ನಮ್ಮೆಲ್ಲರ ಸಾಮಾನ್ಯ ಅನುಭವ. ಇಂದ್ರಿಯಪ್ರತ್ಯಕ್ಷ → ಶಾರೀರಿಕ ಅನುಕ್ರಿಯೆ → ಭಾವನೆ ಎಂಬುದು ಪರಿಧಿಸಿದ್ಧಾಂತದ ಸೂತ್ರವಾದರೆ—
ಇಂದ್ರಿಯಪ್ರತ್ಯಕ್ಷ → ಭಾವನೆ → ಶಾರೀರಿಕ ಅನುಕ್ರಿಯೆ ಎಂಬುದು ಅನುಭವ ಸೂತ್ರ.

ಅತಿ ಹೆದರಿಕೆಯಾದಾಗ ಓಡುವ ಶಕ್ತಿಯೂ ಉಡುಗಿ ಹೋಗುತ್ತದೆ. ಆಗ ಓಡುವ ಶಾರೀರಿಕ ಅನುಕ್ರಿಯೆ ಇಲ್ಲದೆಯೇ ಮನುಷ್ಯನಿಗೆ ಹೆದರಿಕೆ ಹೇಗೆ ಹುಟ್ಟುತ್ತದೆ? ಎಂದು ಅನುಭವಿಗಳು ಕೇಳಿದರೆ ಜೇಮ್ಸ್ ಹೇಳುತ್ತಾನೆ: ಆಗ ಓಡುವ ಅನುಕ್ರಿಯೆ ಇಲ್ಲದಿದ್ದರೂ ಅದಕ್ಕೂ ತೀವ್ರವಾದ ಅನುಕ್ರಿಯೆ ಶರೀರದ ಒಳಗಿನ ಅಂಗಗಳಲ್ಲಿ ಉಂಟಾಗಿ, ಆ ಮೂಲಕ ಅವನಿಗೆ ಹೆದರಿಕೆಯ ಜ್ಞಾನವಾಗುತ್ತದೆ—ಎಂದು. ಆದರೆ ಮುಂದೆ ಕೊಡುವ ಸಾಕ್ಷಿಗಳಿಂದ ಪರಿಧಿಸಿದ್ಧಾಂತದ ಪ್ರಾಧಾನ್ಯವು ಸಂಪೂರ್ಣವಾಗಿ ಬಿದ್ದು ಹೋಗುತ್ತದೆ.

ತೇಜೋರಸವನ್ನು ಒಬ್ಬನ ರಕ್ತಕ್ಕೆ ಚುಚ್ಚಿದಾಗ ಅವನಲ್ಲಿ ಅಸ್ಪಷ್ಟವಾದ ಒಂದು ಭಾವನೆ ಉಂಟಾದದ್ದು ಕಂಡು ಬಂದಿತು. ಜೇಮ್ಸ್‌ವಾದಿಗಳು ಇದನ್ನಾಧರಿಸಿ ತೇಜೋರಸದಿಂದ ಉಂಟಾದ ಆಂತರಿಕ ಅವಯವಗಳ ಅನುಕ್ರಿಯೆಗಳು ಅಂಥ ಭಾವನೆಯನ್ನು ಉಂಟುಮಾಡಿದವು ಎಂದು ಹೇಳಿ ತಮ್ಮ ಸಿದ್ಧಾಂತದಲ್ಲಿ ಪಾಕ್ಷಿಕ ಸತ್ಯವಾದರೂ ಇದೆ ಎಂದು ಪ್ರತಿಪಾದಿಸಿದ್ದಾರೆ. ಆದರೆ ಈ ಪ್ರಕರಣದಲ್ಲಿ ಆಂತರಿಕ ಅವಯವಗಳು ಚುಚ್ಚುಮದ್ದಿನ ಬಾಹ್ಯಪ್ರೇರಣೆಯಿಂದ

ಅನುಕ್ರಿಯೆಯಲ್ಲಿ ತೊಡಗುವ ಮಾಧ್ಯಮವಾದವೇ ಹೊರತು, ಉಕ್ತ ಅಸ್ಪಷ್ಟ ಭಾವನೆಯನ್ನು ಉಂಟು ಮಾಡುವಲ್ಲಿ ನೇರವಾದ ಕರ್ತೃಗಳೆನಿಸಲಿಲ್ಲ. ಕರಡಿಯು ಕಾಣ್ಕೆ ಮೊದಲು ಮನುಷ್ಯನಲ್ಲಿ ಹೆದರಿಕೆಯನ್ನು ಹುಟ್ಟಿಸಿದ ಹಾಗೆಯೇ ಇಲ್ಲಿಯೂ ಚುಚ್ಚು ಮದ್ದು ಒಳಗಿನ ವಿವಿಧ ಅವಯವಗಳಲ್ಲಿ ಸಂವೇದನೆಯ ಸಂತಾನವನ್ನೆಬ್ಬಿಸಿ ಮಿದುಳಿಗೆ ಆ ಸಂತಾನ ತಲುಪಿದಾಗ ಭಾವನಾಪೀಠದಲ್ಲಿ ಒಂದುವಿಧದ ಭಾವನೆ ಉಂಟಾದ್ದು ಸ್ಪಷ್ಟ. ಆದುದರಿಂದ ಹಿಂದೆ ಕೊಟ್ಟ ಅನುಭವ ಸೂತ್ರವೇ ಪ್ರಾಮಾಣಿಕವೆಂದು ಸಿದ್ಧವಾಗುತ್ತದೆ. ಪರಿಧಿ ಸಿದ್ಧಾಂತದ ಪಾಕ್ಷಿಕ ಸತ್ಯತೆಯು ಅಂತರವಯವಗಳಿಗೆ ಪರೋಕ್ಷವೂ ನಿವಾರ್ಯವೂ ಆದ ಕರ್ತೃತ್ವವನ್ನು ಆರೋಪಿಸಿದಾಗ ಮಾತ್ರ ಗ್ರಾಹ್ಯವಾಗುತ್ತದೆ.

ಭಾವನಾಪೀಠವೇ ಭಾವನೆ ಹುಟ್ಟುವ ಕೇಂದ್ರ. ಸಂವೇದನೆಗಳು ಭಾವನೆಗಳಿಂದ ಭಿನ್ನ. ಕೇವಲ ಸಂವೇದನೆಗಳು ಭಾವನೆಗಳನ್ನು ಹುಟ್ಟಿಸಲಾರವು; ಅವಕ್ಕೆ ಸಂಕಲ್ಪಾತ್ಮಕ ಹಿನ್ನೆಲೆಯಿರಬೇಕು. ಆಂತರಿಕ ಅವಯವಗಳೂ ಮಾಂಸಖಂಡಗಳೂ ಭಾವನೆಯ ಉತ್ಪತ್ತಿಗೆ ಅನಿವಾರ್ಯ ಕಾರಣಗಳಲ್ಲ. ಭಾವನಾಪೀಠಕ್ಕೆ ಜ್ಞಾನವಾಹಿ—ಕ್ರಿಯಾವಾಹಿ ನರಗಳ ಸಂಪರ್ಕವಿರುವುದು ಅನಿವಾರ್ಯ. ಆಂತರಿಕ ಅವಯವ ಹಾಗೂ ಮಾಂಸಖಂಡಗಳ ಚೋದನೆಗಳು ಸಹಕಾರಿ ಕಾರಣಗಳಾದಾವು ಎಂಬಷ್ಟರಮಟ್ಟಿಗೆ ಜೇಮ್ಸನ ಮತ ಗ್ರಾಹ್ಯ. ಸಂಕಲ್ಪಾತ್ಮಕ ಪ್ರವೃತ್ತಿಯ ಹಿನ್ನೆಲೆಯಿಲ್ಲದ 'ಭಾವನೆ'ಗೆ ಅರ್ಥವಿಲ್ಲ ಎಂದು ಸ್ಟೌಟ್ ಸ್ಪಷ್ಟಪಡಿಸುತ್ತಾನೆ. ಸ್ಮೃತಿಯ ಪ್ರೇರಣೆಯಿಂದ ಭಾವನಾಪೀಠದಲ್ಲಿ ಭಾವನೆಯೇಳುವ ಅಂಶ ಪ್ರತ್ಯೇಕ; ಅಲ್ಲಿ ವರ್ತಮಾನ ಸಂವೇದನೆಗಳಿಗೆ ಪ್ರಧಾನಕಾರಕದ ಸ್ಥಾನವಿಲ್ಲ.

ಜೇಮ್ಸ್‌ಲ್ಯಾಂಗ್ ಸಿದ್ಧಾಂತದಲ್ಲಿ ಅಲ್ಪಾಂಶ ಮಾತ್ರ ಸತ್ಯವಿದೆ, ಪೂರ್ಣ ಸತ್ಯವಿಲ್ಲ ಎಂಬುದು ಮುಂದೆ ಕೊಡುವ ಪ್ರಯೋಗದಿಂದ ಸಿದ್ಧವಾಗುತ್ತದೆ: ಪ್ರಾಣಿಗಳ ಅವಯವಗಳಲ್ಲಿ ಎರಡು ವಿಧ: ತಲೆಬುರಡೆಯ ಮೂಲಕ ಮಿದುಳಿನ ಕೆಳಭಾಗಕ್ಕೆ ನೇರವಾಗಿ ಹೋಗುವ ಅವಯವಗಳು ಒಂದು ಬಗೆ, ಹಾಗಲ್ಲದೆ ಬೆನ್ನುಹುರಿಯಲ್ಲಿ ಮೊದಲು ಹೊಕ್ಕು ಮಿದುಳಿಗೆ ಎರಡನೆಯ ಬಿತ್ತರದಲ್ಲಿ ಹೊಗುವಂಥವು ಎರಡನೆಯ ಬಗೆ. ಈ ಎರಡೂ ಬಗೆಯ ಮಾರ್ಗಗಳನ್ನು—ಒಂದು ಸಮುಸ್ಥಿತಿಯಲ್ಲಿರುವ ನಾಯಿಯಲ್ಲಿ—ಕತ್ತರಿಸಲಾಯಿತು. ಮುಂದ

ದಿಂದ ಯಾವ ತರದ ಅಂತರವಯವ ಸಂವೇದನೆಯೂ (ಕರುಳುಗಳು) ಮಿದುಳಿಗೆ ತಲುಪುವುದಿಲ್ಲವೆಂದು ಆ ಮೂಲಕ ಭಾವಿಸಲಾಯಿತು. ಹೀಗಿದ್ದರೂ ಆ ನಾಯಿಯು ಮೊದಲಿನಷ್ಟೇ ಭಾವನಾತ್ಮಕ ಅನುಕ್ರಿಯೆಯನ್ನು ತೋರಿಸುತ್ತ ಹೋಯಿತು. ಈ ಸಂದರ್ಭದಲ್ಲಿ ನಾಯಿಗೆ ನಿಜವಾಗಿಯೂ ಬಾಹ್ಯಪ್ರೇರಣೆಯ ಫಲವಾಗಿ ಸಿಟ್ಟು ಬಂದಿತ್ತೋ ಇಲ್ಲವೋ ಎಂಬುದು ವಿವಾದಾಸ್ಪದ. ಅಂತೂ ಅದು ಸಿಟ್ಟು ಬಂದಂತೆ ಜೋರಾಗಿ ಬೊಗಳಿ ಸಿಟ್ಟಿಗೆ ಸಹಜವಾದ ಇತರ ಎಲ್ಲ ರೀತಿಯನ್ನೂ ತನ್ನ ವರ್ತನೆಯಲ್ಲಿ ತೋರಿಸಿತು. ಇನ್ನೊಂದು ಪ್ರಯೋಗದಲ್ಲಿ ಬೆನ್ನು ಹುರಿಯನ್ನೂ ಆಂತರಿಕ ಅವಯವಗಳನ್ನು ಸಂಬಂಧಿಸುವ ನರಗಳನ್ನೂ ಕತ್ತರಿಸಲಾಯಿತು. ಆಂತರಿಕ ಅವಯವಗಳ ಮೇಲೆ ಪರಿಣಾಮ ಮಾಡದಂತೆ ಅನುಕಂಪಕ ನರಮಂಡಲವನ್ನು ಸಂಪೂರ್ಣವಾಗಿ ಕಿತ್ತೊಗೆಯಲಾಗಿತ್ತು. ಹೀಗಿದ್ದರೂ ನಾಯಿಯ ಭಾವನೆ ಮೊದಲಿನಷ್ಟೇ ಬಲಿಷ್ಠವಾಗಿ ಉಳಿಯಿತು. ಈ ಸಂಕಟ ಸಮಯಗಳಲ್ಲಿ (ಅರ್ಥಾತ್ ನಾಯಿಯನ್ನು ಕೆಣಕಿದಾಗ) ಆಂತರಿಕ ಅವಯವಗಳು ಹೆಚ್ಚು ಬಲವಾಗಿ ಅನುಕ್ರಿಯೆಯನ್ನು ತೋರಿಸುವಂತೆ ಮಾಡಲು ಯಾವ ಸಾಧನವೂ ಇಲ್ಲವೆಂದಾದರೆ ಈ ಅಂತರವಯವಗಳು ಗ್ರಹಿಸಿದ ಸಂವೇದನೆಗಳನ್ನು ಭಾವನೆ ಅವಲಂಬಿಸುತ್ತದೆ ಎಂದು ಹೇಳುವುದು ಸ್ವಲ್ಪ ಅವಾಸ್ತವವೆನಿಸೀತು. ಇಷ್ಟೇ ಅಲ್ಲದೆ ಹೆದರಿಕೆ, ಸಿಟ್ಟು ಮತ್ತು ತೀವ್ರವಾದ ನೋವುಗಳನ್ನು ಪ್ರತ್ಯೇಕಿಸಿ ತಿಳಿದುಕೊಳ್ಳಲು ಭಾವನಾಪೀಠದ ಸಹಾಯವಿಲ್ಲದಿದ್ದರೆ ಸಾಧ್ಯವಿಲ್ಲ ಎಂಬ ಅಂಶವೂ ಜೇಮ್ಸ್ ಲ್ಯಾಂಗ್ ಸಿದ್ಧಾಂತಕ್ಕೆ ವಿರುದ್ಧವಾಗಿ ನಿಲ್ಲುತ್ತದೆ. ಭಾವನೆಯ ಉತ್ಪತ್ತಿಯು ಕೇವಲ ಕೆಳಕೋಷ್ಠದ ಅಂತರವಯವಗಳನ್ನು ಅವಲಂಬಿಸಿದೆ ಎಂದು ಭಾವಿಸಿದರೆ ಮೇಲೆ ಹೇಳಿದ ಮೂರು ವಿವಿಧ ಭಾವನೆಗಳ ಪ್ರತ್ಯೇಕತೆಯನ್ನು ನಾವು ಹೇಗೆ ಗ್ರಹಿಸಬಲ್ಲೆವು? ಎಂಬುದು ಹೇಳಲು ಬರದಂತಾಗುವುದು.

ದೇಹದ ಇತರ ಭಾಗಗಳೊಡನೆ ಮುಮ್ಮಿದುಳಿಗಿರುವ ಸಂಬಂಧವನ್ನು ತಪ್ಪಿಸಲಾದ ನಾಯಿಯು ಬಾಹ್ಯಪ್ರೇರಣೆಗೆ ಪ್ರತಿಯಾಗಿ ಗುರ್ ಎನ್ನುವುದನ್ನು, ಬೊಗಳುವುದನ್ನು, ಹಲ್ಲುಕಿಸಿಯುವುದನ್ನು ಬಿಡುವುದಿಲ್ಲ. ಈ ಉದಾಹರಣೆಯಿಂದ ಮುಮ್ಮಿದುಳಿನ ಗೋಲಾರ್ಧಗಳ ಕೆಳಗೆ ಭಾವನೆಗಳಿಗೆ ಮೂಲಭೂತ ಸಂಬಂಧ ಇಟ್ಟುಕೊಂಡಿರುವ ಒಂದು ಪ್ರದೇಶವಿದೆ ಎಂಬುದು ಸ್ಪಷ್ಟವಾಗುತ್ತದೆ.

ಈ ಪ್ರದೇಶಕ್ಕೆ ಯಾವುದಾದರೂ ರೋಗ ತಗುಲಿದಾಗ ಅನುಕೂಲ ಅಥವಾ ಪ್ರತಿಕೂಲ ಸಂವೇದನೆಗಳಿಂದ ಉಂಟಾಗುವ ಭಾವನೆಯು ಉದ್ರೇಕವು ಸಮಸ್ಥಿತಿಯ ಮಟ್ಟಕ್ಕಿಂತ ಹೆಚ್ಚಿನದಾಗಿರುತ್ತದೆ ಎಂಬುದು ವೈದ್ಯಕೀಯ ಸಾಕ್ಷಿಗಳಿಂದ ತಿಳಿದು ಬರುತ್ತದೆ. ಇಂಥ ಉದಾಹರಣೆಗಳಿಂದ ಮಿದುಳಿನ ಕಾಂಡದಲ್ಲಿ ಭಾವನೆಗಳಿಗೆ ಕೇಂದ್ರ ಪ್ರದೇಶವೆನಿಸಿದ ಭಾವನಾಪೀಠ ಇದೆ ಎಂಬುದು ಸಿದ್ಧವಾಗುತ್ತದೆ. ಈ ವಿಷಯವನ್ನು ನಾಯಿಯ ಮುಮ್ಮಿದುಳಿನ ಒಂದೊಂದೇ ಭಾಗವನ್ನು ವಿಸಂಗತಗೊಳಿಸುತ್ತ ಹೋದ ಪ್ರಯೋಗಗಳಿಂದ ಸ್ಥಿರಪಡಿಸಲಾಗಿದೆ. ಮುಮ್ಮಿದುಳಿನ ಗೋಲಾರ್ಧಗಳನ್ನು ವಿಸಂಗತಗೊಳಿಸಿದಾಗಲೂ ನಾಯಿಯಲ್ಲಿ ಭಾವನೋತ್ಪತ್ತಿ ನಿಲ್ಲಲಿಲ್ಲ; ತದ್ವಿರುದ್ಧವಾಗಿ ಅದು ಹೆಚ್ಚಾದಂತೆ ತೋರಿತು. ಭಾವನೆಯ ಅಸ್ತಿತ್ವ ಅಥವಾ ಸಮುತ್ಥಿತಿ ಮುಮ್ಮಿದುಳಿನ ಗೋಲಾರ್ಧಗಳನ್ನು ಅವಲಂಬಿಸಿಲ್ಲ ಎಂಬುದು ಸಿದ್ಧವಾಗುತ್ತದೆ. ಆದುದರಿಂದ ಕ್ಯಾನನ್ ಮತ್ತು ಅವನ ಸಹಕಾರಿಗಳು ಭಾವನೆ ಎಂಬುದು ಮಿದುಳಿನ ಕಾಂಡದ ಒಂದು ನಿರ್ದಿಷ್ಟ ಭಾಗದ ಕೃತ್ಯವಲ್ಲದೆ, ಅಂತರವಯವ ಹಾಗೂ ಮಾಂಸಗಳ ಸಂವೇದನೆಯನ್ನು ಅವಲಂಬಿಸಿಲ್ಲ ಎಂದು ನಿರ್ಣಯಿಸಿದ್ದಾರೆ. ಇದರಿಂದ ಜೇಮ್ಸ್ ಮತ್ತು ಲ್ಯಾಂಗರ ಪರಿಧಿಸಿದ್ಧಾಂತದ ಪ್ರಾಧಾನ್ಯವು ಕ್ಯಾನನ್ ಮೊದಲಾದವರ ಕೇಂದ್ರಸಿದ್ಧಾಂತದಿಂದ ಖಂಡಿಸಲ್ಪಟ್ಟಂತಾಗುತ್ತದೆ.

ರಸಗಳು

ಮನಃಪ್ರವೃತ್ತಿ : ಪ್ರಜ್ಞೆಯುಳ್ಳ ವ್ಯಕ್ತಿಯ ಎಲ್ಲ ಬಗೆಯ ಮಾನಸ ಅನುಭವದ ಅವಸ್ಥೆಯನ್ನೂ ಜ್ಞಾತಪ್ರಜ್ಞಾವಸ್ಥೆ ಎಂದು ಹೇಳುತ್ತಾರೆ. ಜ್ಞಾತ ಪ್ರಜ್ಞೆ ಎಂದರೆ ಜಾಗರಿತ ಮನಃಸ್ಥಿತಿ. ಕೆಲವು ಸನ್ನಿವೇಶಗಳಲ್ಲಿ ನಿರ್ದಿಷ್ಟ ಬಗೆಯ ಅನುಭವವನ್ನು ಪಡೆಯುವ ಪ್ರವೃತ್ತಿಯನ್ನು ಮನಃಪ್ರವೃತ್ತಿ ಎಂದು ಕರೆಯುತ್ತಾರೆ. ಹೆದರಿಕೆ ಅಥವಾ ಸಿಟ್ಟು ಭಾವನಾತ್ಮಕ ಪ್ರಜ್ಞಾವಸ್ಥೆಗಳು; ಅಂಜುಬರುಕತನವೂ ಮುಂಗೋಪಿತನವೂ ಭಾವನಾತ್ಮಕ ಮನಃಪ್ರವೃತ್ತಿಗಳೇ. ಮನಃಪ್ರವೃತ್ತಿಗಳನ್ನು ಸ್ಪಷ್ಟವಾಗಿ ಒಂದು ಅಂತಃಶಕ್ತಿ ಎಂದು ತಿಳಿದುಕೊಳ್ಳಲಾಗುವುದಿಲ್ಲ — ಸ್ಮೃತಿ, ಕಲ್ಪನೆಗಳಿದ್ದ ಹಾಗೆ. ಒಬ್ಬನನ್ನು ಅಂಜುಬರುಕನೆಂದು ಹೇಳಿದರೆ ಅವನು ಮಿಕ್ಕವರಿಗಿಂತ ಹೆಚ್ಚಾಗಿ ಹೆದರುವ ಪ್ರವೃತ್ತಿ ಉಳ್ಳವನು ಎಂದಿಷ್ಟೇ ಅರ್ಥ. ಮನಃಪ್ರವೃತ್ತಿಗಳು ವಸ್ತುಗಳಿಗೆ ಗುಣಗಳಿದ್ದಂತೆ

ಮನಸ್ಸಿಗೆ ಇರುವ ಗುಣಗಳು ಎನ್ನಬಹುದು. ವ್ಯಕ್ತಿಯಲ್ಲಿರುವ ಮೂಲ ಪ್ರವೃತ್ತಿಯೊಂದರ ಚೋದನೆಯ ತೀವ್ರತೆಯ ಅಂಶವನ್ನು ನಾವು ಮನಃಪ್ರವೃತ್ತಿ ಎಂದು ಗುರುತಿಸುತ್ತೇವೆ. ಲೋಕದಲ್ಲಿ ನಾವು ಒಬ್ಬನನ್ನು ಅತಿ ಕಾಮಿ, ಹೊಟ್ಟೆಬಾಕ, ಮುಂದಿಯನ್ನು ಹೆಚ್ಚಾಗಿ ಹಚ್ಚಿಕೊಂಬವನು ಅಥವಾ ಅತಿ ಕುತೂಹಲಿ ಎಂದು ಮುಂತಾಗಿ ಕರೆಯುವುದು ಇದಕ್ಕೆ ಉದಾಹರಣೆ. ಒಬ್ಬನಿಗೆ ಅಂಜುಬುರುಕಪ್ರವೃತ್ತಿ ಇದ್ದರೆ ಅವನು ಸ್ವಲ್ಪ ಕೆಡಕಿಪ ಕೂಡಲೆ ಅಂಜುತ್ತಾನೆ. ಅದು ಅವನ ಸ್ವಭಾವಾಂಶವೆಂದೇ ನಮಗೆ ಎನಿಸುತ್ತದೆ. ಎಲ್ಲ ವಿಧದ ಮೂಲಪ್ರವೃತ್ತಿಗಳೂ ಎಲ್ಲರಲ್ಲೂ ಇವೆ. ಆದರೆ ಕೆಲವರಲ್ಲಿ ಕೆಲ ಮೂಲ ಪ್ರವೃತ್ತಿಗಳು ಪ್ರಧಾನವಾಗಿರುತ್ತವೆ. ಅಂಥ ಪ್ರಧಾನಪ್ರವೃತ್ತಿಯೇ ಅವರ ಮನಃಪ್ರವೃತ್ತಿ. ಅಂಜುಬುರುಕನಲ್ಲಿ ಅಂಜುಬುರುಕತನವು ಪ್ರಧಾನಪ್ರವೃತ್ತಿಯಾಗಿರುವುದರಿಂದ ಅವನನ್ನು ಅಂಜುಬುರುಕ ಮನಃಪ್ರವೃತ್ತಿಯವನೆಂದು ಹೇಳುತ್ತೇವೆ. ಕೆಲವರಲ್ಲಿ ಯಾವ ಒಂದು ಮನಃಪ್ರವೃತ್ತಿಯೂ ಪ್ರಧಾನವಾಗಿ ಕಾಣಿಸದಿರಬಹುದು. ಅದರ ಅರ್ಥ ಅವರಿಗೆ ಯಾವ ಮನಃಪ್ರವೃತ್ತಿಯೂ ಇಲ್ಲವೆಂದಲ್ಲ; ಅವರು ಸಮತೋಲಚಿತ್ತರು ಎಂದು ಇಷ್ಟೇ ಅರ್ಥ. ಮನಃಪ್ರವೃತ್ತಿಯ ಶಕ್ತಿಯು ಎಲ್ಲರಿಗೂ ಜನ್ಮಸಿದ್ಧ. ಆದರೆ ಆವರಣಬಲದಿಂದ ಒಬ್ಬನಲ್ಲಿ ಒಂದು ಮನಃಪ್ರವೃತ್ತಿ ದುರ್ಬಲವಾಗುತ್ತ ಹೋಗಬಹುದು, ಇನ್ನೊಂದು ಪ್ರಬಲವಾಗುತ್ತ ಹೋಗಬಹುದು.

ಯಾವುದಾದರೂ ಒಂದು ವಸ್ತುವಿಗೆ ಸಂಬಂಧಿಸಿದಂತೆ ಕೆಲ ಭಾವನೆ ಮತ್ತು ಬಯಕೆಗಳನ್ನು ಅನುಭವಿಸುವ ವ್ಯಕ್ತಿ-ಪ್ರವೃತ್ತಿಯು ರಸವಲ್ಲಿ ಕಂಡುಬರುತ್ತದೆ. ನಿರ್ದಿಷ್ಟ ಪದಾರ್ಥ ಒಂದರ ಅನುಭವವು ಅದರ ಬಗ್ಗೆ ಪ್ರೇರಿಸಿದ ಚಿರಸ್ಥಾಯಿಯಾದ ಸಂಕಲ್ಪಾತ್ಮಕ ಮನಃಪ್ರಣಾಲಿಯನ್ನು ರಸವೆನ್ನಬಹುದು. ಒಬ್ಬ ತುಂಟ ಹುಡುಗನು ಒಂದು ನಾಯಿ ಮರಿಯನ್ನು ಪದೇ ಪದೇ ಕೆಣಕುತ್ತ, ಪೀಡಿಸುತ್ತ ಹೋದಾಗ ಅದು ಬಹುಬೇಗ, ದೂರದಲ್ಲಿ ಅವನ ಸದ್ದು ಕೇಳಿಸಿದ ಕೂಡಲೆ ಅಥವಾ ಅವನನ್ನು ಕಂಡಕೂಡಲೆ ಹೆದರಿ ಓಡಿಹೋಗುವ ಪ್ರವೃತ್ತಿಯನ್ನು ಪಡೆದುಕೊಳ್ಳುತ್ತದೆ. ಆ ಹುಡುಗನನ್ನು ನೋಡಿ ಹೆದರಿಕೊಳ್ಳುವ ರಸ ನಾಯಿಯಲ್ಲಿ ಉಂಟಾಯಿತು ಎಂದರೆ ಭಾಷಾವ್ಯವಹಾರದಲ್ಲೇನೋ ಸ್ವಲ್ಪ ವಿಲಕ್ಷಣವಾಗಿ ಕಂಡೀತು. ಅದೊಂದು ಭಾವನಾಭ್ಯಾಸ; ಆದರೆ ಅದು ನಿಜವಾಗಿಯೂ ಒಂದು ರಸದ ಬೀಜಾವಸ್ಥೆಯೇ.

ನಾಯಿಮರಿಯು ಆ ಹುಡುಗನನ್ನು ಕಂಡಾಗ ಮಾತ್ರವಲ್ಲದೆ ಯಾವಾಗಲೂ ಹೆದರಿಕೆಯ ವರ್ತನೆಯನ್ನೂ ಚಿಹ್ನಗಳನ್ನೂ ತೋರಿಸುವುದಿಲ್ಲ. ಇದೇ ರೀತಿ ಒಂದು ಮಗುವು ಅದನ್ನು ಪೀಡಿಸುವ ದೊಡ್ಡವನ ಬಗ್ಗೆ ಭಯದ ಭಾವನಾಭ್ಯಾಸವನ್ನು ಅಥವಾ ರಸವನ್ನು ತಾಳಬಹುದು. ನಾಯಿಮರಿಗೂ ಮಗುವಿಗೂ ಇರುವ ಒಂದೇ ಒಂದು ವ್ಯತ್ಯಾಸವೆಂದರೆ ಮಗುವಿಗೆ ನಾಯಿಮರಿಗಿಂತ ಹೆಚ್ಚಿನ ಕಲ್ಪನಾಶಕ್ತಿ ಇದೆ, ನೆನಪಿನ ಬಲವಿದೆ. ಅದರಿಂದ ಅದು ಮಾತುಕತೆಯ ಮೂಲಕ ಅಥವಾ ಇನ್ನಾವುದಾದರೂ ಸಂಗತಿಯ ಮೂಲಕ ಪೀಡಿಸುವ ಮನುಷ್ಯನು ಇಲ್ಲದಾಗಲೂ ಭಯದ ಮನಃಪ್ರಣಾಲಿಯನ್ನು ವ್ಯಕ್ತಪಡಿಸಬಹುದು. ಅದಕ್ಕೆ ಈ ರಸ ಉಂಟಾದ್ದರಿಂದ ಪೀಡಕನನ್ನು ಅದು ಕಲ್ಪನಾಪ್ರಪಂಚದಲ್ಲಿ ಕಾಣಬಲ್ಲುದು. ಹಾಗೆ ಕಲ್ಪಿಸಿಕೊಂಡಾಗ ಅದು ಕೆಲಮಟ್ಟಿನ ಭಯಾಂಶವನ್ನು ತಾಳಬಹುದು. ಆ ಭಯಾಂಶವು ಕೊಡುವ ಚೋದನೆಯಿಂದ ಅದು ತನ್ನ ಕಲ್ಪನಾಶಕ್ತಿಯನ್ನು ಉಪಯೋಗಿಸಿ,ಪೀಡಕನಿಂದ ದೂರವಿರುವ ಉಪಾಯ ಮಾಡಬಹುದು. ಅಂಥ ಸರಳ ರಸವು ಯಾವುದಾದರೊಂದು ಮೂಲಪ್ರವೃತ್ತಿಯ ಪ್ರೇರಣೆಯು ಯಾವುದಾದರೂ ವಸ್ತುವಿನಿಂದ ಸಂಭವಿಸಿದಾಗ ಉಂಟಾಗುತ್ತದೆ. ಅದನ್ನು ಒಂದೇ ಒಂದಾದ ತಪ್ಪಿಸಿಕೊಳ್ಳುವ ಮೂಲಪ್ರವೃತ್ತಿರೂಪದ ಭಾವನಾಸಂಕಲ್ಪಾತ್ಮಕ ಮನಃಪ್ರವೃತ್ತಿಯೊಡನೆ ಕೃತ್ಯತಃ ಸಂಬಂಧಿಸಿದ ಅಭಿಜ್ಞಾಮನಃಪ್ರವೃತ್ತಿ ಎನ್ನಬಹುದು.

ಸಾಮಾನ್ಯರು ರಸ–ಭಾವನೆಗಳಲ್ಲಿ ಒಂದನ್ನು ಇನ್ನೊಂದನ್ನಾಗಿ ತಿಳಿಯುವುದು ಹೆಚ್ಚು. ಆದರೆ ಅಲ್ಲಿಯೂ ಅವೆರಡರಲ್ಲಿಯ ವ್ಯತ್ಯಾಸವು ಸೂಚಿತವಾಗುತ್ತದೆ. ಪ್ರಾಣಿಗಳು ಬಲಿಷ್ಠ ಭಾವನೆಗಳನ್ನು ಪ್ರದರ್ಶಿಸುತ್ತವೆ. ಒಂದು ನಾಯಿಯು ಅಪರಿಚಿತನನ್ನು ಕಂಡಾಗ ಜೋರಾಗಿ ಬೊಗಳುತ್ತದೆ. ಆಗ ನಾವು ಅದರಲ್ಲಿ ಭಾವನೆ ಇದೆ ಎಂದು ಭಾವಿಸಿದರೂ ಅದು ಒಂದು ರಸವನ್ನು ವ್ಯಕ್ತಗೊಳಿಸುತ್ತದೆ ಎಂದು ಹೇಳುವುದಿಲ್ಲ. ಆದರೆ ಅದು ತನ್ನ ಯಜಮಾನನಿಗೆ ಹೆಚ್ಚಾಗಿ ಅಂಟಿಕೊಂಡಿದ್ದರೆ, ಅವನನ್ನು ಇನ್ನೊಬ್ಬರು ಎದುರಿಸಿದಾಗ ರಕ್ಷಿಸುತ್ತಿದ್ದರೆ, ಅವನಿಲ್ಲದಾಗ ಅವನ ಬಗ್ಗಾಗಿ ಯಾತನೆಯನ್ನು ಅನುಭವಿಸಿದರೆ, ಅವನು ಮರಳಿದಾಗ ಹೆಚ್ಚಿನ ಹಿಗ್ಗನ್ನು ಪ್ರದರ್ಶಿಸಿದರೆ ಅದಕ್ಕೆ ಯಜಮಾನನಲ್ಲಿ ಭಕ್ತಿರಸವಿದೆ, ಪ್ರೇಮವಿದೆ ಎಂದು ಹೇಳಲು ನಾವು ಹಿಂದೆ

ಮುಂದೆ ನೋಡುವುದಿಲ್ಲ. ಅದು ಯಜಮಾನನ ಕೈಗಳನ್ನು ನೆಕ್ಕಿ ಅವನ ಮುಖವನ್ನು ನೋಡುತ್ತ ನಿಂತರೆ ಆಗ ನಾವು ಅದು ಪ್ರೇಮಭಾವನೆಯನ್ನು ತಾಳಿ, ವ್ಯಕ್ತಪಡಿಸುತ್ತಿದೆ ಮತ್ತು ಪ್ರೇಮರಸವನ್ನು ವ್ಯಕ್ತಪಡಿಸುತ್ತಿದೆ ಎಂದು ಹೇಳೋಣ ಎನ್ನಿಸಬಹುದು. ತನ್ನ ಯಜಮಾನನನ್ನು ಹೊಡೆದವನ ಮೇಲೆ ಅದು ಉಗ್ರವಾಗಿ ಹರಿಹಾಯ್ದರೆ ಆಗಲೂ ನಾವು ಅದು ಯಜಮಾನನ ಬಗ್ಗೆ ಭಕ್ತಿರಸವನ್ನು ವ್ಯಕ್ತಪಡಿಸುತ್ತದೆ ಎನ್ನಬಹುದು. ಆದರೆ ಆ ಕಾಲದಲ್ಲಿ ಅದು ಅನುಭವಿಸುತ್ತಿರುವುದು ಪ್ರೇಮಭಾವನೆ ಎಂದು ಮಾತ್ರ ನಾವು ಭಾವಿಸ ಕೂಡದು. ರಸ–ಭಾವನೆಗಳಲ್ಲಿಯ ವ್ಯತ್ಯಾಸವನ್ನದು ಸೂಚಿಸುತ್ತದೆ. ಭಾವನೆ ಎಂಬುದು ಒಂದು ತಾತ್ಕಾಲಿಕ ಅನುಭವ. ರಸವೆಂಬುದು ಪಡೆದು ಬರುವ ಮನಃಪ್ರವೃತ್ತಿ. ಅನೇಕ ಭಾವನಾನುಭವಗಳಿಂದ ಅದು ಕ್ರಮೇಣ ರೂಢವಾಗುತ್ತದೆ. ಅದೊಂದು ಭಾವನಾ ಸಂಘಟನೆ. ಒಮ್ಮೆ ಅದು ರೂಢವಾದರೆ ಬಹಳ ಕಾಲ ಉಳಿಯುತ್ತದೆ. ಅನಂತರ ಕ್ಷಯಿಸಲಿ ಅಥವಾ ವೃದ್ಧಿ ಹೊಂದಲಿ — ಅದು ಒಮ್ಮೆ ಮರಣಪರ್ಯಂತವೂ ಉಳಿದೀತು. ತನಗೆ ಸಹಜವಾದ ಭಾವ ನೋದ್ರೇಕದೊಡನೆ ನಿರ್ದಿಷ್ಟ ಪ್ರವೃತ್ತಿಯೊಂದನ್ನು ನಮ್ಮಲ್ಲಿ ಹುಟ್ಟಿಸುವ ಯಾವ ವಸ್ತುವಾದರೂ ಅದಕ್ಕೆ ಯುಕ್ತವಾದ ಸರಳ ರಸ ವಸ್ತುವಾಗುತ್ತದೆ. ತನ್ನ ಒರಟು ನಡತೆಯಿಂದ ಒಬ್ಬನು ನಮ್ಮನ್ನು ಪದೇ ಪದೇ ಬೇಸರಗೊಳಿಸಿದರೆ ಅನಂತರ ಅವನ ವಿಚಾರ ಮನಸ್ಸಿಗೆ ಬಂದ ಕೂಡಲೆ ಅಥವಾ ಅವನನ್ನು ಕಂಡ ಕೂಡಲೆ — ಅವನು ಅತ್ಯುತ್ತಮ ರೀತಿಯಲ್ಲಿ ವರ್ತಿಸುತ್ತಿದ್ದಾಗಲೂ — ನಮಗೆ ಜುಗುಪ್ಸೆಯ ಅನುಭವವಾಗುತ್ತದೆ. ಹಾಗಲ್ಲದೆ ಒಬ್ಬನು ಪದೇ ಪದೇ ನಮ್ಮಲ್ಲಿ ತನ್ನ ಆರ್ದ್ರವೂ ಉದಾರವೂ ಆದ ವರ್ತನೆಯನ್ನು ತೋರಿದರೆ ಅವನ ಬಗ್ಗೆ ನಮ್ಮಲ್ಲಿ ಕೃತಜ್ಞತಾರಸ ಉಂಟಾಗುತ್ತದೆ. ಅವನನ್ನು ನೆನಸಿಕೊಂಡಾಗಲೆಲ್ಲ ಈ ರಸಸ್ಪರ್ಶವಿಲ್ಲದೆ ಅವನ ಬಗ್ಗೆ ವಿಚಾರ ಮಾಡಲು ಸಾಧ್ಯವೇ ಇಲ್ಲದಂತಾಗುವುದು. ರಸವೆಂಬ ಈ ಹೊಸ ರಚನೆ ನಮ್ಮಲ್ಲಿ ಉಂಟಾದುದಕ್ಕೆ ಅಪರೋಕ್ಷ ಪ್ರಮಾಣ: ಒಬ್ಬ ಮನುಷ್ಯನು ಮೇಲಿಂದ ಮೇಲೆ ನಮ್ಮಲ್ಲಿ ಭಯ–ಕ್ರೋಧಗಳನ್ನು ಉದ್ದೀಪಿಸಿದರೆ ಯಾವಾಗಲೂ ಅವನ ಬಗ್ಗೆ ನಮ್ಮಲ್ಲಿ ಭಯ-ಕ್ರೋಧಗಳ ಸಮ್ಮಿಶ್ರವಾದ ರಸ ಉಂಟಾಗುತ್ತದೆ. ಈ ಪ್ರತಿಯೊಂದು ಪ್ರಕರಣದಲ್ಲೂ ಭಾವನಾತ್ಮಕ ಪ್ರತಿಕ್ರಿಯೆಯು ಒಂದು ಅಭ್ಯಾಸವಾಗಿ ಬಿಡುತ್ತದೆ. ಆದುದರಿಂದ

ಆಯಾ ಮೂಲಪ್ರವೃತ್ತಿಗಳು ಸಂಘಟಿತವಾಗಿ ಆ ವ್ಯಕ್ತಿಯ ಬಗ್ಗೆ ವಿಚಾರ ಮಾಡುವ ಇಲ್ಲವೆ ಅವನನ್ನು ಗುರುತಿಸುವ ಶಕ್ತಿಯೊಡನೆ ಸಂಬದ್ಧವಾಗುತ್ತವೆ.

ಒಂದು ಭಾವನೆಯನ್ನೂ ಅದು ಉದ್ಬೋಧಿಸುವ ರಸವನ್ನೂ ಒಂದೇ ಹೆಸರಿನಿಂದ ಕರೆಯುವುದರಿಂದ ಭಾವನೆ ಮತ್ತು ರಸಗಳಲ್ಲಿ ಗಲಿಬಿಲಿಯುಂಟಾಗುತ್ತದೆ. ಇದು ಪ್ರೇಮ-ದ್ವೇಷಗಳ ವಿಷಯದಲ್ಲಿ ಇನ್ನಷ್ಟು ಹೆಚ್ಚು. ಸರಿಯಾಗಿ ಹೇಳುವುದಾದರೆ ಇವು ರಸಗಳು. ಸಂರಕ್ಷಣಪ್ರವೃತ್ತಿಯು ತನ್ನ ವಾತ್ಸಲ್ಯದ ಚೋದನೆ ಮತ್ತು ಭಾವನೆಗಳೊಡನೆ ಸಂಘಟಿತವಾಗದ ಪ್ರತಿಯೊಂದು ರಸವನ್ನೂ ಪ್ರೇಮವೆನ್ನಬಹುದು. ಅದು ಎಷ್ಟೇ ಜಟಿಲವಾಗಿರಲಿ, ಅದೇ ಮಂಡಲದಲ್ಲಿ ಇತರ ಎಷ್ಟು ಪ್ರವೃತ್ತಿಗಳು ಬೇಕಾದರೂ ಸಂಘಟಿತವಾಗಿರಲಿ ಅದು ಪ್ರೇಮರಸವೇ. ಅಂಜಿಕೆ ಮತ್ತು ಸಿಟ್ಟು ಎಂಬ ಭಾವನೆಗಳು ಸಂಘಟಿತವಾದಾಗ ದ್ವೇಷರಸ ಉತ್ಪನ್ನವಾಗುತ್ತದೆ. ಜುಗುಪ್ಸೆಯು ಮುಖ್ಯವಾದ ಭಾವನೋದ್ದೀಪಕ ಅಂಗವಾದಾಗ ಉಂಟಾಗುವ ರಸಕ್ಕೆ ದ್ವೇಷವೆಂಬುದು ಅಷ್ಟು ಸರಿಯಾದುದಲ್ಲ.

ಒಂದು ರಸದ ಸಾರ, ಯೋಜನೆ ಅಥವಾ ರಚನೆ ಇರುವುದು ಹೀಗೆ: ಒಬ್ಬ ವ್ಯಕ್ತಿಯ ಅನುಭವದ ಮೂಲಕ ಒಂದು ಅಭಿಜ್ಞಾಶಕ್ತಿಯು ಕೃತ್ಯತಃ ಒಂದು ಅಥವಾ ಹೆಚ್ಚು ಮೂಲ ಪ್ರವೃತ್ತಿಗಳೊಡನೆ ಸಂಬದ್ಧವಾಗುತ್ತದೆ. ಆ ಅಭಿಜ್ಞಾ ಶಕ್ತಿಯು ಕಾರ್ಯ ಮಾಡತೊಡಗಿದಾಗ (ಅರ್ಥಾತ್ ಅದಕ್ಕೆ ಅನುಗುಣವಾದ ವಸ್ತುವನ್ನು ಇಂದ್ರಿಯಪ್ರತ್ಯಕ್ಷ ಮಾಡಿಕೊಂಡಾಗ ಇಲ್ಲವೆ ಅದರ ಬಗ್ಗೆ ವಿಚಾರ ಮಾಡಿದಾಗ) ಮೂಲ ಪ್ರವೃತ್ತಿ ಕೂಡ ಕಾರ್ಯದಲ್ಲಿ ನಿಯುಕ್ತವಾಗಿ ವಸ್ತುಮುಖವಾದ ತನ್ನ ವಿಶಿಷ್ಟ ಭಾವನಾತ್ಮಕ ಪ್ರವೃತ್ತಿಯನ್ನು ಉಂಟುಮಾಡುತ್ತದೆ. ಈ ರಚನೆ ಎಂಬುದು ಮಾನಸ ಮಂಡಲ.

ರಸಗಳು ಮತ್ತು ಚಾರಿತ್ರ: ನಮ್ಮ ಭಾವನೋದ್ದೀಪಕ ಮತ್ತು ಸಂಕಲ್ಪಾತ್ಮಕ ಜೀವನದ ಮುಖ್ಯ ಸಂಘಟಕಗಳು ರಸಗಳೇ ಎಂಬುದನ್ನು ಹಿಂದೆ ವಿವರಿಸಲಾಯಿತಷ್ಟೆ. ಚಿರಸ್ಥಾಯಿಯಾದ ರಸಗಳಿಲ್ಲದೆ ಹೋಗಿದ್ದರೆ ನಾವು ಪ್ರತಿಯೊಂದು ತಾತ್ಕಾಲಿಕ ಚೋದನೆಗೂ ಬಲಿಯಾಗುತ್ತ ಹೋಗಬೇಕಾಗಿತ್ತು. ರೂಢಮೂಲವಾಗಿ ಬೆಳೆದು ನೆಲೆಸಿಂತ ಆಸಕ್ತಿಗಳು, ವ್ಯಾಮೋಹಗಳು ಮತ್ತು ಶ್ರದ್ಧೆಗಳು ಎಷ್ಟೋವೇಳೆ ದೀರ್ಘಕಾಲಿಕ ತೃಪ್ತಿಗಳಿಗೋಸ್ಕರ ನಾವು ಮೂಲಪ್ರವೃತ್ತಿಯ ಸದ್ಯದ ಚೋದನೆಗಳನ್ನು ತಡೆಯುವಂತೆ ಮಾಡುತ್ತವೆ.

ವೈಯಕ್ತಿಕವಾದ ಚಾರಿತ್ರ್ಯಭೇದಕ್ಕೆ ರಸಗಳೇ ಕಾರಣ. ಮೂಲ ಪ್ರವೃತ್ತಿಯ ಮಟ್ಟದಲ್ಲಿ ಹೆಚ್ಚುಕಡಿಮೆ ನಾವೆಲ್ಲರೂ ಒಂದೇ. ವ್ಯಕ್ತಿತ್ವದ ಬೆಳವಣಿಗೆಯು ಬಹಳಮಟ್ಟಿಗೆ ಇರುವುದು ಪ್ರಧಾನರಸಗಳ ಬೆಳವಣಿಗೆಯಲ್ಲೇ. ಪ್ರತಿಯೊಬ್ಬನಲ್ಲೂ ವಿವಿಧ ರಸಗಳಿರುತ್ತವೆ. ಅಂಥ ರಸಗಳ ಕೇಂದ್ರದ ಸುತ್ತ ಗೌಣ ರಸಗಳು ಸಂಘಟಿತವಾಗುತ್ತವೆ. ಒಬ್ಬನಲ್ಲಿ ವೈಯಕ್ತಿಕ ಮಹತ್ವಾಕಾಂಕ್ಷೆಯು ಪ್ರಧಾನರಸವಾಗಿರಬಹುದು; ಇನ್ನೊಬ್ಬನಲ್ಲಿ ಮನೆ, ಮಠ, ಹೆಂಡತಿ, ಮಕ್ಕಳ ಮೇಲಿನ ಪ್ರೇಮವು ಪ್ರಧಾನವಾಗಿರಬಹುದು; ಮಗುದೊಬ್ಬನಲ್ಲಿ ವೈಜ್ಞಾನಿಕ ಸಂಶೋಧನೆಯಲ್ಲಿಯ ಆಸಕ್ತಿಯು ಗಣ್ಯವಾಗಿರಬಹುದು; ಮತ್ತೊಬ್ಬನಲ್ಲಿ ಸಾಮಾಜಿಕ ನ್ಯಾಯಸಾಧನೆ ಮುಖ್ಯ ಶಕ್ತಿಯಾಗಿರಬಹುದು;ಇನ್ನೂ ಒಬ್ಬನಲ್ಲಿ ಹಳ್ಳಿಯ ಜೀವನದಲ್ಲಿ ಮತ್ತು ಆಟ ಪಾಟಗಳಲ್ಲಿ ವಿಶೇಷ ರತಿ ಇರಬಹುದು. ಹೀಗೆ ಪಟ್ಟಿಯನ್ನು ಎಷ್ಟು ಉದ್ದವಾದರೂ ಬೆಳೆಸುತ್ತ ಹೋಗಬಹುದು. ಒಬ್ಬನ ಪ್ರಧಾನರಸಗಳು ಗೊತ್ತಾದರೆ ಅವನ ಚಾರಿತ್ರ್ಯದ ಬಗ್ಗೆ ನಮಗೆ ಹೆಚ್ಚು ಅರಿವು ಉಂಟಾಗುತ್ತದೆ. ಒಬ್ಬ ಮನುಷ್ಯನು ಯಾರ ಬಗ್ಗೆ ಭಯ ಭಕ್ತಿಯನ್ನು ತೋರಿಸುತ್ತಾನೆ, ಯಾರನ್ನು ಅಥವಾ ಏನನ್ನು ದ್ವೇಷಿಸುತ್ತಾನೆ, ಪ್ರೀತಿಸುತ್ತಾನೆ ಮತ್ತು ತುಚ್ಛವೆಂದು ಕಾಣುತ್ತಾನೆ ಮತ್ತು ಯಾವುದನ್ನು ಮೆಚ್ಚುತ್ತಾನೆ ಎಂಬುದು ಗೊತ್ತಾದರೆ ಅವನ ಶೀಲವನ್ನು ಕೆಲಮಟ್ಟಿಗೆ ಊಹಿಸಲು ಸಾಧ್ಯವಾಗುತ್ತದೆ.

ರಸಗಳು ಮತ್ತು ನೈತಿಕ ಬೆಳವಣಿಗೆ: ಆಗಲೇ ಹೇಳಿದಂತೆ ರಸಗಳು ಜನ್ಮಜಾತವಲ್ಲ. ಮಗು ಸರಸವಾಗಿ ಹುಟ್ಟುವುದಿಲ್ಲ. ಆದರೆ ಅದು ತನ್ನ ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ ಮತ್ತು ತನ್ನ ಆವರಣದಲ್ಲಿಯ ಇತರರ ಬಗ್ಗೆ ಬಹು ಬೇಗ ಮೂರ್ತವಾದ ರಸಗಳನ್ನು ಬೆಳೆಸಿಕೊಳ್ಳುತ್ತದೆ. ಈ ಮಟ್ಟ ಮುಟ್ಟಿದ ಕೂಡಲೆ ಅದರ ಶೀಲವನ್ನು ಕೇವಲ ಸುಖಾನುಸಂಧಾನ ಮತ್ತು ದುಃಖದೂರೀಕರಣಗಳಿಂದ ನಿರ್ಧರಿಸಲು ಬರುವುದಿಲ್ಲ. ಆದರೆ ಈ ಮಟ್ಟದಲ್ಲಿ ನಾಯಿ ಮರಿಯಂತೆ ಮಗುವಿಗೂ ನಿಜವಾದ ನೀತಿಜ್ಞಾನವಿರುವುದಿಲ್ಲ. ಅದಕ್ಕೆ ಸರಿ–ತಪ್ಪುಗಳ ಸ್ಥೂಲ ಕಲ್ಪನೆ ಮಾತ್ರ ಇರುತ್ತದೆ. ಎಷ್ಟೋ ವೇಳೆ ತನ್ನ ಸದ್ಯದ ಮೂಲಪ್ರವೃತ್ತಿಯ ಚೋದನೆಗಳನ್ನು ಅದು ಈ ಯುಕ್ತಾಯುಕ್ತ ವಿವೇಕದಿಂದ ಗೆಲ್ಲಲು ಶಕ್ತವಾಗುತ್ತದೆ ಆದರೆ ಈ ಸ್ಥೂಲವಿವೇಕವು

ನೈತಿಕ ತತ್ವವನ್ನು ಆಧರಿಸಿದ್ದಲ್ಲ. ದೊಡ್ಡವರಿಗೆ ಸಂತೋಷ ಉಂಟಾಗುವುದೆಲ್ಲ ಸರಿ, ಅವರಿಗೆ ಸಿಟ್ಟು ಬರುವುದೆಲ್ಲ ತಪ್ಪು ಎಂಬುದಷ್ಟೇ ಅದರ ವಿವೇಕ. ಅಮೂರ್ತ ರಸಗಳು ರೂಢಿಗೊಳ್ಳುವ ವರೆಗೆ ಯಾವ ವ್ಯಕ್ತಿಗೂ ನೀತಿಪುಟ್ಟವೆಂಬುದು ಇಲ್ಲವೇ ಇಲ್ಲ.

ಸಾಂಪ್ರದಾಯಿಕವಲ್ಲದಿರುವಾಗ ಪ್ರೌಢರ ನೀತಿಸಂಹಿತೆ ಅವರ ಬಾಲ್ಯ ಮತ್ತು ಯೌವನಗಳಲ್ಲಿ ಬೆಳೆದು ಬಂದ ರಸಗಳನ್ನು ಅವಲಂಬಿಸುತ್ತದೆ. ಮೊಟ್ಟ ಮೊದಲಿನ ಅಮೂರ್ತರಸಗಳಲ್ಲಿ ನ್ಯಾಯಪ್ರಿಯತೆ ಒಂದು. ಸುಮಾರು ಆರು ಏಳು ವರ್ಷಗಳ ಹೊತ್ತಿಗೆ ಮಗು ತನ್ನ ಸರಿಜೋಡಿಯವರಲ್ಲಿ ನಿಜವಾಗಿ ಆಸಕ್ತಿಯನ್ನು ವಹಿಸುತ್ತದೆ. ಆಗ ಈ ನ್ಯಾಯಪ್ರಿಯತೆ ಅದರಲ್ಲಿ ವ್ಯಕ್ತವಾಗುತ್ತದೆ. ಅನಂತರ ಮುಂದೆ ಮಕ್ಕಳು ವ್ಯವಹಾರದಲ್ಲಿ ಎಷ್ಟು ಕೊರತೆ ಕಂಡು ಬಂದರೂ ಯೋಗ್ಯ (Fairness) ವಾದುದನ್ನು ಆದರ್ಶವೆಂದು ಗ್ರಹಿಸಿ ಮೆಚ್ಚಿ ಕೊಂಡಾಡದಿರರು. ಇದು ಸ್ವಲ್ಪ ಮುಖ್ಯವಾದ ವಿಷಯ. ಏಕೆಂದರೆ ದಾಕ್ಷಿಣ್ಯ, ಸೌಮ್ಯವಿವೇಚನೆ, ತಾಳ್ಮೆ ಮತ್ತು ಅಂಥ ಇತರ ಗುಣಗಳು ಪ್ರೌಢರಿಗೆ ಬೇಸರ ಬರಿಸುವ ಕಲ್ಪನಾವಿಲಾಸಗಳೆನಿಸುವ ಕಾಲದಲ್ಲಿ ಮಗು ಸಾಮಾನ್ಯವಾಗಿ 'ಇದು ಯೋಗ್ಯ' ಎಂದು ಹೇಳುವ ಮಾತಿಗೆ ಸಹಾನುಭೂತಿಯಿಂದ ವರ್ತಿಸುತ್ತದೆ.

ಹೆಚ್ಚುಕಡಿಮೆ ಪ್ರಾರಂಭದಲ್ಲೇ ರೂಪಗೊಳ್ಳುವ ರಸವೆಂದರೆ ಸ್ವಾಭಿಮಾನ. ಇದನ್ನು ಅಮೂರ್ತರಸವೆಂದು ವರ್ಗೀಕರಿಸಿದರೆ ವಿಪರೀತವಾಗಿ ಕಾಣಬಹುದು. ಆದರೆ ಅದು ಅಮೂರ್ತವೆನಿಸಿದ್ದು ಆಯಾ ವ್ಯಕ್ತಿಯು ತನ್ನನ್ನು ತನ್ನ ತನದ ಆದರ್ಶಸ್ವರೂಪಕ್ಕೆ ಅನ್ವಯಿಸುವುದರಿಂದ—ಅಲ್ಲಿ ತಾನು ವಾಸ್ತವಿಕವಾಗಿ ಹೇಗಿದ್ದೇನೆ ಎಂಬುದಕ್ಕೆ ಅವನು ಆ ಅಭಿಮಾನವನ್ನು ಅನ್ವಯಿಸಿಕೊಳ್ಳುವುದಿಲ್ಲ. ಇವೆಲ್ಲ ಅನಪೇಕ್ಷಣೀಯ ಪ್ರವೃತ್ತಿಗಳು. ಆದರೆ ಬಹಳ ಜನರು ಅದನ್ನು ನೀತಿಯ ನೆಲಗಟ್ಟೆನ್ನುತ್ತಾರೆ. ಏಕೆಂದರೆ ಅದು ವ್ಯಕ್ತಿಯು ಕಾರ್ಯಗಳನ್ನು ನಿರ್ಣಯಿಸುವ ಆದರ್ಶ ಮಾನದಂಡವನ್ನು ಸೂಚಿಸುತ್ತದೆ.

ಇನ್ನು ಯಾವ ಯಾವ ರಸಗಳನ್ನು ಮಗು ಬೆಳೆಸಿಕೊಳ್ಳುತ್ತದೆ ಎಂಬುದು ಹೆಚ್ಚಾಗಿ ಆವರಣವನ್ನು ಅವಲಂಬಿಸಿರುತ್ತದೆ — ಅವರಲ್ಲೂ ಅದು ಸಂಪರ್ಕ ಪಡೆಯುವ ಪ್ರೌಢರ ಮೇಲೆ. ಅಮೂರ್ತ, ಅರ್ಧಮೂರ್ತ ರಸಗಳ ಹುಟ್ಟು

ಹಾಗೂ ಬೆಳವಣಿಗೆಗಳ ಪರಿಶೀಲನದಿಂದ ಅವು ಸಾಮಾನ್ಯವಾಗಿ ಮೂರ್ತರಸಗಳಿಂದ ಉದ್ಭವಿಸುತ್ತವೆ—ವಿಶೇಷತಃ ವ್ಯಕ್ತಿಗಳ ಬಗ್ಗೆ ಇರುವ ರಸಗಳಿಂದ — ಎಂದು ತಿಳಿದುಬರುತ್ತದೆ. ಒಂದು ಮಗು ಒಬ್ಬ ಪ್ರೌಢನ ಬಗ್ಗೆ ಮೆಚ್ಚಿಗೆಯನ್ನು ಬೆಳೆಸಿಕೊಂಡಾಗ ಇಲ್ಲವೆ ಇತಿಹಾಸ ಅಥವಾ ಕಥೆಕಾದಂಬರಿಗಳಲ್ಲಿ ಇರುವ ಪಾತ್ರದ ಬಗ್ಗೆ ಅಭಿಮಾನ ತಾಳಿದಾಗ ಆ ವ್ಯಕ್ತಿ ಅಥವಾ ಪಾತ್ರಪ್ರದರ್ಶಿಸುವ ಅಮೂರ್ತ ರಸಗಳನ್ನು ಸ್ವೀಕರಿಸುವ ಸಂಭವವಿರುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ವಾಚ್ಯವಾದ ನೀತಿಬೋಧೆಗಿಂತಲೂ ಹೆಚ್ಚಾಗಿ ವೈಯಕ್ತಿಕ ಉದಾಹರಣೆ ಮತ್ತು ಪ್ರಭಾವಗಳಿಂದಲೇ ನೈತಿಕ ರಸಗಳು ರೂಪಿತವಾಗುತ್ತವೆ.

ಕೆಲವೊಮ್ಮೆ ಮೂರ್ತರಸಗಳು ಅಮೂರ್ತರಸಗಳಿಂದ ಉದ್ಭವಿಸುವುದೂ ಉಂಟು. ಆದರೆ ಅಂಥ ಸಂದರ್ಭ ಕಡಿಮೆ — ಹಿಂದೂ ಧರ್ಮ ಅಥವಾ ಕಾಂಗ್ರೆಸ್ ಪಕ್ಷದ ಮೇಲೆ ವ್ಯಾಮೋಹವಿದ್ದವನು ತನ್ನ ಅಭಿಪ್ರಾಯವನ್ನು ಇಟ್ಟುಕೊಂಡ ಇತರರ ಬಗ್ಗೆ ಅನುಕೂಲವಾದ ಮೂರ್ತರಸಗಳನ್ನು ರೂಢಿಸಿಕೊಳ್ಳುವ ಪೂರ್ವಪ್ರವೃತ್ತಿ ಇಟ್ಟುಕೊಂಡಿರುವುದು ಇದಕ್ಕೊಂದು ಉದಾಹರಣೆ.

ಹೀಗೆ ರಸಗಳನ್ನು ಒಂದು ದೃಷ್ಟಿಯಿಂದ ಮಾನಸರುಚಿಗಳೆನ್ನಬಹುದು. ಆ ದಿಶೆಯಲ್ಲಿ ಮನುಷ್ಯನ ಬಂಧ-ಮೋಕ್ಷಗಳಿಗೆ ಮನಸ್ಸು ಕಾರಣವೆಂದೆವು. ಅಂಥ ಕೃತ್ಯ ರೂಪದ ಮನಸ್ಸಿನ ಚಿರಸ್ಥಾಯಿಯಾದ ಬಲಿಷ್ಠ ಪ್ರೇರಣೆ ರಸಾತ್ಮಕ. ಸುಸಂಸ್ಕೃತ ಅಥವಾ ಕುಸಂಸ್ಕೃತ ಮಾನವನ ಅಭಿಜ್ಞೆ, ಸಂಕಲ್ಪ ಮತ್ತು ಭಾವನೆಗಳ ನೆಲಗಟ್ಟಾಗಿರುವುದು ರಸ. ಪ್ರಾಣಿಗಳಿಗಿಂತ ಹೆಚ್ಚಿನ ಚೋದನಾಗ್ರಹಣದ ಕಾರ್ಯವು ಮನುಷ್ಯನ ಷಟ್ಕರಣಗಳಲ್ಲಿ ಜ್ಞಾತಾಜ್ಞಾತವಾಗಿ ನಿರಂತರವೂ ನಡೆಯುತ್ತಿರುವುದರಿಂದ ಅವನು ಸಂಸ್ಕಾರರೂಪದಲ್ಲಿ ಪರಿಣಮಿಸುವ ಮನೋಮುದ್ರೆಗಳ ಪ್ರಭಾವದಿಂದ ಎಂದೂ ಮುಕ್ತನಾಗಿರಲಾರ. ಅವನ ಮನಸ್ಸು ಸಂಪೂರ್ಣ ಖಾಲಿಯಾಗಿರುವ ಅವಸ್ಥೆ ಅಕಲ್ಪನೀಯ. ಆದುದರಿಂದ ಮಾನವನು ಆಜನ್ಮ ವಿದ್ಯಾರ್ಥಿ. ಅವನ ರಸರೂಪಣ-ರೂಪದ ವಿದ್ಯಾರ್ಜನೆ ಸಾಯುವವರೆಗೂ ನಡೆದೇ ಇರುತ್ತದೆ. ಅವನ ಅಭಿಪ್ರಾಯ-ಅಭಿರುಚಿ, ಅನುಕೂಲ-ಪ್ರತಿಕೂಲಪ್ರವೃತ್ತಿಗಳು ಸಾಮಾನ್ಯವಾಗಿ ಜೀವನದ ಆದ್ಯಂತವೂ ರಸಪ್ರೇರಿತ. ಅದರಿಂದಲೇ ಶಿಕ್ಷಣದಲ್ಲಿ ಕೇವಲ ಜ್ಞಾನಾರ್ಜನೆ ಮುಖ್ಯವಲ್ಲ, ವಿದ್ಯಾರ್ಥಿಯ

ಶೀಲರೂಪಣ ಮುಖ್ಯ ಎಂದು ಶಿಕ್ಷಣತಜ್ಞರನೇಕರು ಸಿದ್ಧಾಂತಿಸಿದ್ದು. 'ಮನೋದಾರ್ಢ್ಯವಂತನು ತನಗುಂಟಾದ ಭಾವನಾಂಶವನ್ನು ಅಡಗಿಸಿಕೊಂಡಾಗ ಅದು ರಸವೆನಿಸುತ್ತದೆ. ಕಲ್ಪನಾಶಕ್ತಿಯು ಸುಂದರವಾದ ಹರಳುಗಳನ್ನಾಗಿ ಮಾಡಿದಂತಿರುವ ಒಮ್ಮೊಂದೊಮ್ಮೆ ಆವಿರ್ಭವಿಸಿದ ಭಾವನೆಯೇ ರಸ. ಬೌದ್ಧಿಕ ರೂಪಕ್ಕೆ ಪರಿವರ್ತಿಸಲಾದ ಭಾವನೆಯೇ ರಸ. ರಸವೆಂಬುದು ಕಲ್ಪನಾಶಕ್ತಿಯ ಪದ್ಯಕಾವ್ಯ. ಅದು ಕಲ್ಪನಾಶಕ್ತಿಯ ಪಕ್ವಫಲ, ಹೆಂಗಸಿನ ಸಾಕ್ಷಿಪ್ರಜ್ಞೆ'—ಎಂದು ಮುಂತಾಗಿ ವಿದ್ವಾಂಸರು ರಸಪ್ರಶಂಸೆ ಮಾಡಿದ್ದು ತಪ್ಪಲ್ಲ. ಆದರೆ ಈ ಲೌಕಿಕ ಮುಖದ ರಸವು ಕಾವ್ಯಪ್ರೇರಿತವಾದ ರಸಾತ್ಮಕ ಮನಃಸ್ಥಿತಿಯ ಕಾರಣ ಸಾಮಗ್ರಿಗಳಲ್ಲಿ ಅಡಕವಾಗಿದ್ದರೂ ಆ ರಸಪ್ರಜ್ಞೆಯಿಂದ ಭಿನ್ನ. ಮನಃಶಾಸ್ತ್ರದ ವ್ಯಾವಹಾರಿಕ ದೃಷ್ಟಿಯ ವಿವರಣೆಗಳ ಮೂಲಕ ಈ ವರೆಗೆ ವಿವೇಚಿಸಿದ್ದು ಲೋಕರಸವನ್ನು, ಕಾವ್ಯರಸವನ್ನಲ್ಲ ಎಂಬುದು ನೆನಪಿಟ್ಟುಕೊಳ್ಳಬೇಕಾದ ಅಂಶ.

ಅನುಬಂಧ

ಆಯುರ್ವೇದೀಯ ಮನೋವಿಜ್ಞಾನ

ಮನಸ್ಸು: ಸುಖ-ದುಃಖ ಮೊದಲಾದ ಅನುಭವಗಳನ್ನು ಪ್ರತ್ಯಕ್ಷಕ್ಕೆ ತಂದುಕೊಡುವ ಪರಮಾಣು ರೂಪವುಳ್ಳ (ದ್ರವ್ಯಜಾತಿಗೆ ಸೇರಿದ) ಹೃದಯದಲ್ಲಿರುವ ಒಂದು ಇಂದ್ರಿಯಾತ್ಮಕ ಸಾಧನ. ಅದು ಅತೀಂದ್ರಿಯ ಅಥವಾ ಅನುಮಾನಗಮ್ಯ (Inferable); ಸತ್ವ (ಸಾರ, ಮುಖ್ಯ) ಸಂಜ್ಞೆಯುಳ್ಳ ಚೇತಸ್ಸು. ಸುಖ-ದುಃಖ, ಚಿಂತ್ಯ-ಚಿಂತನಾದಿಗಳ ಭೋಕ್ತ ಮತ್ತು ಕರ್ತ ಎನಿಸಿದ್ದು ಆತ್ಮತತ್ವ. ಅದು ಚೇತನಾಸ್ವರೂಪವುಳ್ಳದ್ದು. ಮನಸ್ಸು ತನ್ನ ಪಂಚೇಂದ್ರಿಯಗಳ ಸಹಕಾರದಿಂದ ಆತ್ಮಕ್ಕೆ ಪ್ರಪಂಚಾನುಭವ ಮಾಡಿಸಿಕೊಡತಕ್ಕ ಕರಣ. ಚಕ್ಷುರಾದಿ ಪಂಚೇಂದ್ರಿಯ ಗ್ರಾಹ್ಯವಾದ ರೂಪಾದಿ ಗುಣ ಅಥವಾ ಸಂವೇದನೆಗಳನ್ನು ಆ ಇಂದ್ರಿಯಗಳು ಗ್ರಹಿಸುವಲ್ಲಿ ಮನಸ್ಸು ಪ್ರತ್ಯಯ ರೂಪದ ಕಾರಣವಾಗುತ್ತದೆ — ಅರ್ಥಾತ್ ನಿಷ್ಕೃಷ್ಟಜ್ಞಾನಕಾರಕವಾಗುತ್ತದೆ.

ಸುಖ, ಚಿಂತ್ಯ ಮುಂತಾದವು ವಿಷಯಗಳಾದಾಗ ಆತ್ಮವು ತನ್ನ ಪ್ರಯತ್ನಶೀಲವನ್ನು ವ್ಯಕ್ತಮಾಡುತ್ತದೆ. ಆಗ ಮನಸ್ಸು ಆಯಾ ವಿಷಯಗಳಲ್ಲಿ ಪ್ರವರ್ತಿಸುತ್ತದೆ; ಪಂಚೇಂದ್ರಿಯಗಳನ್ನು ಆಶ್ರಯಿಸುತ್ತದೆ. ಅನಂತರ ಆ ಇಂದ್ರಿಯಗಳು ಆಯಾ ವಿಷಯಗಳ ಜ್ಞಾನಗಳನ್ನು ಮನಸ್ಸಿನ ಮೂಲಕ ಆತ್ಮಕ್ಕೆ ಮಾಡಿಕೊಡುತ್ತವೆ. ಅಂಥ ಜ್ಞಾನವು ಪ್ರಪಂಚಕ್ಕೆ ಸಂಬಂಧಿಸಿದ ವಿಚಾರ, ಭಾವನೆ ಅಥವಾ ಬಯಕೆಯ ರೂಪದ್ದಾಗಿರುತ್ತದೆ.

ಉಪಾಧಿ ಅಥವಾ ಆಶ್ರಯದ ಭೇದದಿಂದ ಒಂದೇ ಆಗಿರುವ ಮನಸ್ತತ್ವವು ಅನೇಕವಾಗಿ ಕಂಡುಬರುತ್ತದೆ. ಅಂದರೆ, ಮನಸ್ಸು ತಾನು ಗ್ರಹಿಸಿರುವ ಒಂದು ವಸ್ತುವನ್ನು ಬಿಟ್ಟು ಮತ್ತೊಂದನ್ನು ಗ್ರಹಿಸುವುದರಿಂದ ಅಥವಾ ತನ್ನ ಒಂದು ಸಂಕಲ್ಪವನ್ನು ತ್ಯಜಿಸಿ ಮತ್ತೊಂದನ್ನು ಹಿಡಿಯುವುದರಿಂದ ಒಬ್ಬನಲ್ಲೇ

ಅನೇಕ ಮನಸ್ಸುಗಳಿರಬಹುದೆಂದು ತೋರುವುದು. ಇದು ಬರಿಯ ಭ್ರಮೆ. ಒಂದೇ ಒಂದಾದ ಮನಸ್ಸು ಸತ್ವಗುಣವನ್ನಾಶ್ರಯಿಸಿದಾಗ ಸಾತ್ವಿಕ, ರಜೋಗುಣವನ್ನಾಶ್ರಯಿಸಿದಾಗ ರಾಜಸ ಮತ್ತು ತಮೋಗುಣವನ್ನು ಆಶ್ರಯಿಸಿದಾಗ ತಾಮಸ ಎನಿಸುತ್ತದೆ. ಒಂದೇ ಒಂದಾದ ಆ ಮನಸ್ಸು ಒಬ್ಬನಲ್ಲಿರುವಾಗ ಅನೇಕ ವಿಷಯಗಳಲ್ಲಿ ಏಕಕಾಲದಲ್ಲಿ ಪ್ರವರ್ತಿಸುವುದಿಲ್ಲ. ಆದುದರಿಂದ ಅನೇಕ ಇಂದ್ರಿಯಗಳ ಕಾರ್ಯಗಳು ಅಕ್ಷರಶಃ (ಶುದ್ಧ ತರ್ಕಾನುಸಾರ) ಏಕಕ್ಷಣದಲ್ಲಿ ಮನಸ್ಸಿಗೆ ಅವಗತವಾಗಲಾರವು. ಸೂಕ್ಷ್ಮವಾದ ಕಾಲಿಕ ಅನುಕ್ರಮ ಅವುಗಳ ಜ್ಞಾನವು ಮನಸ್ಸಿಗಾಗುವುದರಲ್ಲಿ ಇದ್ದೇ ಇರಬೇಕು; ಏಕಕಾಲಾವಧಿಯಲ್ಲಿ ಮನಸ್ಸು ಪಂಚೇಂದ್ರಿಯಗಳೆಲ್ಲವೂ ಅವವುಗಳ ವಿಷಯವನ್ನು ಗ್ರಹಿಸುವಂತೆ ಪ್ರೇರಿಸಲಾರದು. ಪಂಚೇಂದ್ರಿಯಗಳೆಲ್ಲವುಗಳಿಂದಲೂ ಬರುವ ಒಂದು ವಸ್ತುವಿನ ಜ್ಞಾನಗಳನ್ನು ಮನಸ್ಸು ಗ್ರಹಿಸಲಾರದುದರಿಂದಲೇ ಅದು ಪರಮಾಣುರೂಪವುಳ್ಳದ್ದೆಂದು ಸಿದ್ಧಾಂತಿಸಲಾಗಿದೆ.

ಮನೋವಿಷಯಗಳು: ಮೊದಲನೆಯದು ಚಿಂತ್ಯ. ಕಾರ್ಯತಃ ಆಗಲಿ, ಕೇವಲ ಸಂಕಲ್ಪದಿಂದಾಗಲಿ ಚಿಂತಿಸಲ್ಪಡುವುದು ಚಿಂತ್ಯ. ಎರಡನೆಯದು ವಿಚಾರ್ಯ. ಯುಕ್ತಾಯುಕ್ತ, ಪ್ರಾಪ್ಯಾಪ್ರಾಪ್ಯಗಳ ದೃಷ್ಟಿಯಿಂದ ವಿಮರ್ಶಿಸಲ್ಪಡುವುದು ವಿಚಾರ್ಯ. ಮೂರನೆಯದು ಊಹ್ಯ. ಸಂಭಾವನಾದೃಷ್ಟಿಯಿಂದ ಊಹಿಸಲ್ಪಡುವುದು ಊಹ್ಯ. ನಾಲ್ಕನೆಯದಾದ ಧ್ಯೇಯವು ಭಾವನೆಯಲ್ಲಿರುವ ಜ್ಞಾನಕ್ಕೆ ವಿಷಯವಾಗಿದೆ. ಆರನೆಯದಾದ ಸಂಕಲ್ಪವು ಗುಣ ಅಥವಾ ದೋಷದಿಂದ ಮುಂದೆ ನಿಶ್ಚಯವಾಗುವ ವಿಷಯ. ಅದೇ ವಿಶಾಲಾರ್ಥದಲ್ಲಿ ಮನಸ್ಸಿನ ಎಲ್ಲ ಕರ್ಮ, ಕಾರ್ಯ, ಕ್ರಿಯೆ. ಅದು ನಿರ್ಧಾರ್ಯ. ಯಾವುದಾದರೊಂದು ಮನೋವಿಷಯ ಎಂದರೆ ಮನಸ್ಸು ತಿಳಿಯತಕ್ಕದ್ದೆನಿಸಿರುವ ಅಂಶ ಅಥವಾ ಅರ್ಥ.

ಇಷ್ಟೇ ಅಲ್ಲದೆ, ಪಂಚೇದ್ರಿಯಗಳ ಸಹಾಯವಿಲ್ಲದೆಯೂ ಮನಸ್ಸು ಕೆಲ ಅಂಶಗಳನ್ನು ತಿಳಿದುಕೊಳ್ಳಬಲ್ಲುದಾಗಿದೆ. ಆದುದರಿಂದ ಮನಃಪದಾರ್ಥವು ಸ್ವತಂತ್ರ. ಅದು ಅವಿನಾಶಿ; ಒಬ್ಬೊಬ್ಬರಿಗೊಂದೊಂದರಂತಿರುವುದರಿಂದ ಅನಂತ ಪಂಚೇಂದ್ರಿಯಗಳಲ್ಲಿ ಒಂದೊಂದಕ್ಕೂ ವಿಷಯಗ್ರಹಣಕ್ಕೆ ಸಹಾಯಕವಾದುದರಿಂದ ಅವೆಲ್ಲವಕ್ಕೂ ಅದು ಅಧಿಷ್ಠಾನ ಅಥವಾ ಆಶ್ರಯ.

ಬುದ್ಧಿ : ಐಂದ್ರಿಯಿಕ ವಿಷಯಗಳ ಗ್ರಹಣ, ಆತ್ಮನಿಗ್ರಹ, ಊಹನ, ವಿಚಾರಣ, ಮತ್ತು ಸಂಕಲ್ಪಗಳು ಮನಸ್ಸಿನ ಕರ್ಮಗಳು. ಸಂಶಯದ ಅವಸ್ಥೆಯಲ್ಲೇ ಇರುವುದು ಮನಸ್ಸು; ಅದು ನಿಶ್ಚಯರೂಪ ತಾಳಿದೊಡನೆಯೇ ಬುದ್ಧಿ ಎನಿಸುತ್ತದೆ. ಸಂಕಲ್ಪ-ವಿಕಲ್ಪಾತ್ಮಕವಾದ ಮನಸ್ಸಿನಿಂದ ಪ್ರವರ್ತನೆಯಾದಮೇಲೆ ಅಧ್ಯವಸಾಯ, ಬುದ್ಧಿ, ನಿಷ್ಕೃಷ್ಟಜ್ಞಾನ ಎಂಬುದು ಫಲಿಸಿ, ಅದು ಮನುಷ್ಯನನ್ನು ಕಾರ್ಯಕ್ಕೆ ಪ್ರಚೋದಿಸುತ್ತದೆ. ಮನಸ್ಸು ಸಂಕಲ್ಪಪ್ರಧಾನವಾದ ಅವಸ್ಥೆ, ಬುದ್ಧಿಯು ನಿಶ್ಚಯಪ್ರಧಾನವಾದ ಅವಸ್ಥೆ. ಮನಸ್ಸು, ಇಂದ್ರಿಯ, ಬುದ್ಧಿಗಳ ಗುಣವೈಲಕ್ಷಣ್ಯವನ್ನು ದೀಪದ ಬತ್ತಿ, ಎಣ್ಣೆ, ಬೆಂಕಿಗಳ ಗುಣವೈಲಕ್ಷಣ್ಯಕ್ಕೆ ಹೋಲಿಸಲಾಗಿದೆ. ದೀಪದ ಜ್ವಾಲೆಯ ಸ್ಥಾನ ಜೀವಾತ್ಮಕ್ಕೆ. ಅಹಂಕಾರಯುಕ್ತವಾದ ಷಟ್ಕರಣಗಳು ಜೀವಾತ್ಮಾನುವರ್ತಿಗಳು. ನಾನು ಅನುಭವಿಸುತ್ತೇನೆ, ಮಾಡುತ್ತೇನೆ ಎಂಬುದು ಜೀವಾತ್ಮದ ಅಹಂಕಾರ; ಆದರೆ ಜಡವಾದುದರಿಂದ ದೀಪಜ್ವಾಲೆ ಮಾತ್ರ ನಾನು ಪ್ರಕಾಶಿಸುತ್ತೇನೆ, ವಸ್ತುಜ್ಞಾನ ಮಾಡಿಕೊಡುತ್ತೇನೆ ಎನ್ನುವುದಿಲ್ಲ—ಅಷ್ಟೆ.

ಐದು ಜ್ಞಾನೇಂದ್ರಿಯಗಳ ಮೂಲಕ ಬೇರೆಬೇರೆಯಾದ ಐದು ಇಂದ್ರಿಯ ಪ್ರತ್ಯಕ್ಷಗಳಾಗುತ್ತವೆ. ಅಂಥ ಇಂದ್ರಿಯಪ್ರತ್ಯಕ್ಷಕ್ಕೆ ಕಾರಣವಾಗಿ ಆಯಾ ಇಂದ್ರಿಯಕ್ಕೆ ಸಹಕಾರಿಯಾದ ಬುದ್ಧಿ ಇದೆ. ಈ ಪ್ರಕಾರ ಐದು ಇಂದ್ರಿಯಗಳಿಗೆ ಐದು ಬುದ್ಧಿ (ಪ್ರದೇಶ)ಗಳಿವೆ. ಇಷ್ಟರ ಮೇಲೆ ಕೇವಲ ಮನಸ್ಸಿಗೆ ಸಹಕಾರಿಯಾದ 'ಮನೋಬುದ್ಧಿ' ಎಂಬ ಶಕ್ತಿಯನ್ನೂ ನಿರ್ದೇಶಿಸಲಾಗಿದೆ. ಮನೋಬುದ್ಧಿಯು ಇಂದ್ರಿಯ ಹಾಗೂ ಅರ್ಥಗಳ ಸನ್ನಿಕರ್ಷವಿಲ್ಲದೆಯೇ ಉತ್ಪನ್ನವಾಗಬಲ್ಲುದು. ಅದರ ಸಹಾಯದಿಂದ ಮನಸ್ಸು ಇಂದ್ರಿಯಗಳ ಸಹಾಯವಿಲ್ಲದೆ ಕೂಡ ಚಿಂತ್ಯ ಮುಂತಾದ ಅರ್ಥ ಅಥವಾ ವಿಷಯಗಳನ್ನು ನಿರ್ಣಯಿಸಬಲ್ಲುದು. ಮನಸ್ಸಿನ ಸ್ವಾತಂತ್ರ್ಯ ಈ ಬುದ್ಧಿಯ ಅಸ್ತಿತ್ವದಿಂದಲೇ ಸಿದ್ಧ; ಅದು ಇಂದ್ರಿಯ-ಅರ್ಥಗಳಿಲ್ಲದೆ ಸಹ ವಿಷಯಗ್ರಹಣ ಮಾಡಲು ಸಮರ್ಥವಾಗಿ ಅತೀಂದ್ರಿಯವೆನಿಸಿದ್ದಾದರೂ ಇದರಿಂದಲೇ. ಮನಸ್ಸು ಮನೋಬುದ್ಧಿಗಳೊಡನೆ ಮನೋಽರ್ಥ ಅಥವಾ ಮನೋವಿಷಯದ ಸಮಯೋಗವಿದ್ದಾಗ ಮನುಷ್ಯನು ಸಮಸ್ಥಿತಿಯಲ್ಲಿರುತ್ತಾನೆ. ಅಂಥ ಸಮಯೋಗವಿಲ್ಲದೆ ಹೋದಾಗ ಪ್ರಕೃತಿಯು ವಿಕೃತವಾಗುತ್ತದೆ, ವಿಷಮವಾಗುತ್ತದೆ. ಇಂಥ ವಿಷಮಸ್ಥಿತಿಗೆ

ವಿಷಯದ ಅತಿಯೋಗ, ಅಯೋಗ, ಹೀನಯೋಗ ಮತ್ತು ಮಿಥ್ಯಾಯೋಗಗಳು ಕಾರಣಗಳು. ವಿಷಯದ ಅತಿಭೋಗವೇ ಅತಿಯೋಗ, ಅಭೋಗವೇ ಅಯೋಗ, ಅಲ್ಪಭೋಗವೇ ಹೀನಯೋಗ ಮತ್ತು ವಿಕಟಭೋಗವೇ ಮಿಥ್ಯಾಯೋಗ.

ಮನೋರೋಗ: ಮನಸ್ಸನ್ನು ಆಶ್ರಯಿಸಿ ಉತ್ಪನ್ನವಾಗುವ ರೋಗಗಳಿಗೆ ಮಾನಸರೋಗಗಳೆಂದು ಹೇಳಲಾಗಿದೆ. ಅಂಥ ರೋಗಗಳಿಗೆ ಪದೇ ಪದೇ ಅತಿಯಾಗಿ ಉದ್ರಿಕ್ತವಾಗುವ ಕಾಮಕ್ರೋಧಾದಿಗಳು ಮುಖ್ಯ ಕಾರಣಗಳು. ಅವುಗಳಿಂದ ಮನಸ್ಸು ಅಪಘಾತ ಹೊಂದಿದರೆ, ಅದರ ಆಶ್ರಯವಾದ ಹೃದಯವು ರೋಗಗ್ರಸ್ತವಾಗುತ್ತದೆ. ಅಯುಕ್ತಪ್ರಮಾಣದಲ್ಲಿ ಕಾಮಾದಿ ಭಾವನೆಗಳ ಉದ್ಬೋಧವಾಗಲು ಹಿಂದೆ ಹೇಳಿದಂತೆ ಮನಸ್ಸು – ಮನೋಬುದ್ಧಿಗಳೊಡನೆ ಇಂದ್ರಿಯಾರ್ಥದ ಯೋಗವು ವಿಷಮರೀತಿಯಿಂದ ಉಂಟಾಗುವ ಸನ್ನಿವೇಶದಲ್ಲಿ ಮನುಷ್ಯನು ಸಿಕ್ಕಿಬೀಳುವುದೇ ಕಾರಣ. ವಿಷಮ ಬುದ್ಧಿಸ್ಥಿತಿಗಳಿಗೂ ಅದೇ ಕಾರಣವಾಗುತ್ತದೆ.

ಜೀವಾತ್ಮನ ಚೇತನಾಯೋಗವಿಲ್ಲದ ವಿಸಂಗತ ಮನಸ್ಸು ಜಡ, ಆದರೆ ಕ್ರಿಯಾಯುಕ್ತ. ಆತ್ಮವು ಚೇತನಾಮಯ. ಅದು ಮನಸ್ಸನ್ನು ಪ್ರೇರಿಸುವುದೆಂದರೆ ಚೇತನೆಯನ್ನುಂಟುಮಾಡುವುದು. ಚೇತನಾಯುಕ್ತವಾದ ಕೂಡಲೇ ಮನಸ್ಸು ಕ್ರಿಯೆಯನ್ನು ಆರಂಭಿಸುತ್ತದೆ. ಆದರೆ ಜಡ ಮನಸ್ಸಿನ ಕ್ರಿಯಾವಂತಿಕೆಯನ್ನು ಅದರ ಸ್ವಯಂಕರ್ತೃತ್ವವೆಂದು ತಿಳಿಯಬಾರದು. ಆತ್ಮಕ್ಕೆ ಕ್ರಿಯೆಯನ್ನು ಆರೋಪಿಸಿರುವುದು ಔಪಚಾರಿಕ. ವಸ್ತುತಃ ಆತ್ಮವು ಕ್ರಿಯಾಕಾರಕ, ಕ್ರಿಯಾವಂತವಲ್ಲ. ಚೇತನಾವಂತಿಕೆಯಿಂದ ಮಾತ್ರ ಜೀವಾತ್ಮವು ಕರ್ತ, ಭೋಕ್ತ ಎನಿಸುತ್ತದೆ.

ಜೀವಾತ್ಮ: ಆತ್ಮ ಅಥವಾ ಜೀವಾತ್ಮ ಎಂಬುದು ಸರ್ವಕ್ರಿಯಾಸಾಧಕ. ಜೀವನವೆಂದರೆ ಜೀವಾತ್ಮದೊಡನೆ ಮನಸ್ಸು, ಬುದ್ಧಿ, ದೇಹಗಳ ಒಂದು ಸಂಯುಕ್ತಾವಸ್ಥೆ. ಅವು ವಿಯುಕ್ತವಾದಾಗ ಮರಣ. ಮರಣದ ಅವಸ್ಥೆಯಲ್ಲಿ ಕ್ರಿಯೆಯೂ ಇಲ್ಲ, ಚೇತನೆಯೂ ಇಲ್ಲ; ಅದರಲ್ಲಿರುವ ಪದಾರ್ಥಗಳೆಲ್ಲವೂ ಭೂತಾತ್ಮಕ. ಭೌತಿಕ ಪದಾರ್ಥವರ್ಗದಿಂದ ಭಿನ್ನವಾದವುಗಳೆಲ್ಲವೂ ಆತ್ಮಾದಿಗಳಿಗೆ ಸಂಬಂಧಿಸಿದಂಥವು. ಜೀವಾತ್ಮ ನೇರವಾಗಿ ಮಾಡಿಸುವ ಕೆಲಸಗಳೆಂದರೆ– ಪ್ರಾಣಾಪಾನಗಳು, ಶ್ವಾಸೋಚ್ಛ್ವಾಸಗಳು, ನಿಮೇಷೋನ್ಮೇಷಗಳು, ಜೀವಿಸಿರುವಂತೆ ಎಸಗುವುದು ಮತ್ತು ಮನಸ್ಸಿಗೆ ಚೇತನೆ ಕೊಡುವುದು.

ಮನಸ್ಸಿನ ಕರ್ಮವಾದ ಕಣ್ಣು ಮುಂತಾದ ಇಂದ್ರಿಯಗಳಲ್ಲಿ ಸಂಚರಿಸು ವುದು ಪ್ರೇರಣೆ–ಧಾರಣೆಗಳು, ಸ್ವಪ್ನದಲ್ಲಿಯ ದೇಶಾಂತರಗತಿ ಮತ್ತು ಮೃತ ವಾದ ಲಕ್ಷಣವನ್ನು ತಿಳಿಯುವುದು ಆತ್ಮಾಶ್ರಯ ಮನೋವ್ಯಾಪಾರಗಳು.

ಆತ್ಮದಲ್ಲಿ ಇಚ್ಛೆ, ದ್ವೇಷ, ಸುಖ, ದುಃಖ, ಪ್ರಯತ್ನ, ಬುದ್ಧಿಗಳೂ ಬುದ್ಧಿ ಯಲ್ಲಿ ಪ್ರಕಾಶವಾಗುವ ಚೇತನೆ, ಧೃತಿ, ಸ್ಮೃತಿ ಮತ್ತು ಅಹಂಕಾರಗಳೂ ಲಕ್ಷಣಗಳಾಗಿ ನಿಂತಿವೆ. ಪಂಚಭೂತಾತ್ಮಕವಾದ ಮೃತದೇಹದಲ್ಲಿ ಈ ಯಾವುದೂ ಇಲ್ಲ.

ವಿಶೇಷ ವಿವರಗಳು

ಆಯುರ್ವೇದವು ಪ್ರಥಮತಃ ಸಾಂಖ್ಯದರ್ಶನವನ್ನು ಆಧರಿಸಿದ್ದು. ಆ ದರ್ಶ ನದ ಪ್ರಕಾರ ಜೀವಗಳೆಲ್ಲ ಪುರುಷಗಳು. ಮಿಕ್ಕವೆಲ್ಲ ಪ್ರಕೃತಿ ಎಂಬ ಪದಾರ್ಥದ ವಿಕಾರಗಳು. 'ಬುದ್ಧಿಯು' ಅಂಥ ಮೊದಲನೆಯ ವಿಕಾರ. ಅದು ಜೀವವಿಲ್ಲದ್ದು. ಆದರೆ ಸ್ಪಷ್ಟಾರ್ಥದಲ್ಲಿ ಜಡವಲ್ಲ. ಅದು ಜಡಕ್ಕೂ ಜೀವಕ್ಕೂ ನಡುವೆ ಬರುತ್ತದೆ. ಅದು ಜಡಶಕ್ತಿಯ ಹೆಚ್ಚು ನಯವೂ ಸೂಕ್ಷ್ಮವೂ ಆದ ರೂಪ ಗಳನ್ನು ಪುರುಷ ಅಥವಾ ಜೀವಾತ್ಮನ ನೇರವಾದ ಸದ್ಯಃ ಪ್ರತ್ಯಕ್ಷಕ್ಕೆ ವಸ್ತು ಗಳಾಗುವಂತೆ ರೂಪಾಂತರಗೊಳಿಸಿ ಮಾಡಿದ್ದು. ಬುದ್ಧಿಯ ಮೂಲಕ ಪುರು ಷನು ಹೊರಜಗತ್ತಿನೊಡನೆ ಸಂಪರ್ಕ ಹೊಂದುತ್ತಾನೆ. ಆಗ ಅವಿವೇಕದ ಫಲವಾಗಿ ಅವನಲ್ಲಿ ಮಮತ್ವ ಅಥವಾ ಅಹಂಕಾರ ಉದಯವಾಗುತ್ತದೆ. ಈ ಅವಸ್ಥಾಂತರಗಳಾವುವೂ ಕಾಲದ ಆವರಣದಲ್ಲಿ ಸಂಭವಿಸುವಂಥವಲ್ಲ. ಇವೆಲ್ಲ ಆದರ್ಶಲೋಕಕ್ಕೆ ಸೇರಿದಂಥವು.

ಇಡಿ ವಿಶ್ವವೂ ಪ್ರಕೃತಿಯಿಂದ ಹುಟ್ಟಿದ್ದು. ವ್ಯಕ್ತಿ (ಪುರುಷ) ಅದರಲ್ಲಿ ಇದ್ದಾನೆ. ಅದು ಅವನಲ್ಲಿ ಸಂಸಾರದ ಸುಖ–ದುಃಖ–ಮೋಹರೂಪದ ಅನು ಭವವನ್ನು ಉಂಟುಮಾಡುತ್ತದೆ. ವ್ಯಕ್ತಿಯ ಮನಸ್ಸಿನ ಹಾಗೂ ಬುದ್ಧಿ ಮುಂತಾದವುಗಳ ಮಾನಸಿಕ ಯಂತ್ರದಿಂದೊಡಗೂಡಿದ ಶರೀರವು ಆಧ್ಯಾತ್ಮಿಕ ಭೇದಗಳಲ್ಲಿ ಅಡಕವಾಗುತ್ತದೆ. ಶರೀರವೂ ನಾನಾ ವಿಧದ ಸುಖ–ದುಃಖ– ಮೋಹರೂಪದ ಅನುಭವಗಳ ಆಗರ.

ಪಂಚ ಜ್ಞಾನೇಂದ್ರಿಯಗಳಿಗೂ ಅವುಗಳ ವಿಷಯಗಳುಳ್ಳ ಪದಾರ್ಥಗಳಿಗೂ ಸನ್ನಿಕರ್ಷ, ಸಂಬಂಧ ಅಥವಾ ಸಾಮೀಪ್ಯ ಉಂಟಾದಾಗ ಪ್ರತ್ಯಕ್ಷಾನುಭವ ಉಂಟಾಗುತ್ತದೆ. ನ್ಯಾಯ-ವೈಶೇಷಿಕರ ಪ್ರಕಾರ ಆತ್ಮ-ಮನಸ್ಸುಗಳು ಮೊದಲು ಕೂಡಬೇಕು. ಅನಂತರ ಹಾಗೆ ಆತ್ಮದಿಂದೊಡಗೂಡಿದ ಮನಸ್ಸು ಇಂದ್ರಿಯ ಸಂಪರ್ಕಪಡೆಯುತ್ತದೆ. ಆ ಪ್ರಕಾರದ ಮನಸ್ಸಿಂದೊಡಗೂಡಿದ ಇಂದ್ರಿಯವು ವಸ್ತು ಸಂಪರ್ಕ ಹೊಂದಿದಾಗ ವಸ್ತುಸ್ವರೂಪಜ್ಞಾನವು ಇಂದ್ರಿಯದ್ವಾರಾ, ಮನಸ್ಸಿನ ಮೂಲಕ ಜೀವಾತ್ಮಕ್ಕಾಗುವುದು.

ಕಣ್ಣಿನ ಇಂದ್ರಿಯ ಶಕ್ತಿಯು ಕೃಷ್ಣತಾರೆಯ ತುದಿಯಲ್ಲಿರುತ್ತದೆ. ವಸ್ತುವೊಂದು ಎದುರಾದಾಗ ಈ ಇಂದ್ರಿಯಶಕ್ತಿಯು ಅದನ್ನು ಆವರಿಸಿ, ಅದರ ಸ್ವರೂಪವನ್ನು ಗ್ರಹಿಸಿ ಹಿಂದಿರುಗಿ ಮನಸ್ಸಿಗೆ ಮುಟ್ಟಿಸಿದಾಗ ನಮಗೆ ಚಾಕ್ಷುಷ ಪ್ರತ್ಯಕ್ಷವಾಗುತ್ತದೆ. ಇತರ ಇಂದ್ರಿಯಶಕ್ತಿಗಳಾದರೂ ಹಾಗೇ ವಸ್ತುವಿನಲ್ಲಿರುವ ತಮ್ಮ ತಮ್ಮ ವಿಷಯಗಳನ್ನು ಅರ್ಥಾತ್ ಗುಣಗಳನ್ನು ಗ್ರಹಿಸುತ್ತವೆ.

ಪ್ರತ್ಯಕ್ಷ ಜ್ಞಾನದಲ್ಲಿ ನಿರ್ವಿಕಲ್ಪಕ ಹಾಗೂ ಸವಿಕಲ್ಪಕ ಎಂಬ ಎರಡು ಭೇದಗಳಿವೆ. ಗುಣರಹಿತವಾಗಿ ಕೇವಲ ವಸ್ತುವನ್ನು ಗ್ರಹಿಸುವುದು ಮೊದಲಿನ ಲಕ್ಷಣದಲ್ಲುಂಟಾಗುವ ನಿರ್ವಿಕಲ್ಪಕ ಜ್ಞಾನ. ವಿಕಲ್ಪ ಅಥವಾ ಗುಣಸಹಿತವಾಗಿ ವಸ್ತುವನ್ನು ತಿಳಿಯುವ ಎರಡನೆಯ ಜ್ಞಾನವೇ ಸವಿಕಲ್ಪಕ. ನಿರ್ವಿಕಲ್ಪಕದಲ್ಲಿ ವಿಶೇಷ್ಯ—ವಿಶೇಷಣಗಳ ಮತ್ತು ಅವುಗಳ ಸಂಬಂಧದ ಜ್ಞಾನವಾಗುವುದಿಲ್ಲ; ಸವಿಕಲ್ಪಕದಲ್ಲಿ ಆಗುತ್ತದೆ.

ಬುದ್ಧಿಯೆಂದರೆ ಜ್ಞಾನ. ಅದು ಎಲ್ಲ ವ್ಯವಹಾರಕ್ಕೂ ಕಾರಣ. ಅದರಲ್ಲಿ ಸ್ಮೃತಿ ಮತ್ತು ಅನುಭವ ಎಂದು ಎರಡು ಭಾಗಗಳಿವೆ. ಸ್ಮೃತಿಯು ಸಂಸ್ಕಾರದಿಂದ ಹುಟ್ಟುತ್ತದೆ. ಅದರಿಂದ ಪ್ರತ್ಯೇಕವಾದದ್ದು ಅನುಭವ. ಅನುಭವ ಎರಡು ಬಗೆಯದು: ಯಥಾರ್ಥ ಅಯಥಾರ್ಥ ಎಂದು. ಯಥಾರ್ಥವು ಸತ್ಯಾನುಭವ, ಅಯಥಾರ್ಥವು ಮಿಥ್ಯಾನುಭವ. ಯಥಾರ್ಥಾನುಭವ ನಾಲ್ಕು ವಿಧ: ಪ್ರತ್ಯಕ್ಷ (Perception), ಅನುಮಿತಿ (Inference), ಉಪಮಿತಿ (Analogy) ಮತ್ತು ಶಾಬ್ದ (Testimony) ಎಂದು.

ಸತ್ಯಾನುಭವವು ಪ್ರಮೆ, ಮಿಥ್ಯಾನುಭವವು ಭ್ರಮೆ. ಮೊದಲನೆಯದರಲ್ಲಿ ವಸ್ತುವಿನ ಜ್ಞಾನ ಇದ್ದ ಹಾಗೇ ಆದರೆ, ಎರಡನೆಯದರಲ್ಲಿ ವಸ್ತುವಿನ ನಿಜ

ಜ್ಞಾನದಿಂದ ಭಿನ್ನವಾದ ಅವಾಸ್ತವ ಜ್ಞಾನವಾಗುವುದು.

ಜೀವಶಕ್ತಿ (Life) ಮತ್ತು ಮನಸ್ಸುಗಳು ರೋಗದ ಕಾರಕಗಳಾಗಬಲ್ಲ ವೆಂಬುದು ಹಳೆಯ ಸಿದ್ಧಾಂತ. ಮಾನಸಿಕ ರೋಗಗಳಿಗೆ ರಜೋಗುಣ ಹಾಗೂ ತಮೋಗುಣಗಳು ಕಾರಣಗಳೆಂದು ಆಯುರ್ವೇದದ ಹೇಳಿಕೆ. ಈ ಮಾತನ್ನು ಆಧುನಿಕ ರೀತಿಯಲ್ಲಿ ಹೇಳುವುದಾದರೆ, ಮನುಷ್ಯನ ಅಪಪ್ರಜ್ಞೆಯಲ್ಲಿ ಸ್ಥಿತ್ಯಂ ತರಗಳುಂಟಾಗುವುದೇ ಮಾನಸಿಕ ರೋಗಗಳ ಉತ್ಪತ್ತಿಗೆ ಕಾರಣ.

ಸತ್ವವು ಮನಸ್ಸಿನ ಸಮಸ್ಥಿತಿಗೆ ಕಾರಣವಾದ ಗುಣವು. ರೋಗನಿದಾನದ ಐದು ತತ್ವಗಳಲ್ಲಿ ಮೊದಲನೆಯದು ನಿದಾನ. ನಿದಾನದ ಅಥವಾ ರೋಗದ ಮೂಲಕಾರಣದ ಮೂರು ಉಪವಿಭಾಗಗಳಲ್ಲಿ ಪ್ರಜ್ಞಾಪರಾಧವೆಂಬುದೂ ಒಂದು. ಪ್ರಜ್ಞಾಪರಾಧವೆಂದರೆ ವರ್ತನೆಯಲ್ಲಿ ಅವಿವೇಕ ತಾಳುವುದು ಮತ್ತು ಜೀವನದಲ್ಲಿ ಅನಿಯಮದಿಂದ ವರ್ತಿಸುವುದು.

ಬುದ್ಧಿಯು ಸತ್ವ, ರಜ, ತಮ ಎಂಬ ಮೂರು ತರಹದ ಸ್ವಭಾವವುಳ್ಳದ್ದು. ಈ ಮೂರು ಗುಣಗಳಿಂದ ಕೂಡಿದ ಬುದ್ಧಿಯೇ ಅಹಂಕಾರದ ತಂದೆ. ಅಹಂ ಕಾರ ಕೂಡ ಅದೇ ಪ್ರಕಾರ ಮೂರು ಬಗೆಯದು. ಇಂದ್ರಿಯಗಳೂ ಮನಸ್ಸೂ ವಿಕಾರಗಳು. ಜೀವಾತ್ಮನಿಗೆ ಮನಸ್ಸು ದೂತ.

ಹಿತಾಹಿತ ವಿವೇಕರೂಪದ ಬುದ್ಧಿ, ಮನಸ್ಸನ್ನು ದೃಢಪಡಿಸುವ ಧೈರ್ಯ ಮತ್ತು ಶಾಸ್ತ್ರಜ್ಞಾನಗಳು ಮನಸ್ಸಿನ ದೋಷಗಳೆನಿಸುವ ರಜಸ್ತಮ-ಕಾಮ ಕ್ರೋಧಾದಿಗಳಿಂದ ಉಂಟಾಗುವ ಚಿಂತೆ, ಭಯ ಮೊದಲಾದ ರೋಗಗಳಿಗೆ ಮದ್ದು.

ಮಸ್ತಿಷ್ಕ ಅಥವಾ ಮಿದುಳು ಜ್ಞಾನದ ಕಾರ್ಯಗಳಿಗೆ ಸಾಧನ, ಜ್ಞಾನೇಂ ದ್ರಿಯಗಳ ಆಶ್ರಯಸ್ಥಾನ. ಇಂದ್ರಿಯ ಮತ್ತು ಮನಸ್ಸುಗಳ ಸಮ್ಯಗ್ಯೋಗ ದಿಂದ ಜೀವಾತ್ಮನಿಗೆ ಜ್ಞಾನವಾಗುವುದು. ಇಂದ್ರಿಯಗಳ ಯೋಗವಿಲ್ಲದಾ ಗಲೂ ಇಂದ್ರಿಯಗಳು ವಿಷಮಸ್ಥಿತಿಯಲ್ಲಿದ್ದಾಗಲೂ ಜೀವಾತ್ಮನಿಗೆ ಬಾಹ್ಯ ವಸ್ತುಗಳ ಯಥಾರ್ಥಜ್ಞಾನವಾಗುವುದಿಲ್ಲ.

ಚೇತನಾಸ್ಥಾನವಾದ ಹೃದಯದಲ್ಲಿ ತಮಸ್ಸು ಆವರಿಸಿದರೆ ನಿದ್ರೆ ಬರುತ್ತದೆ, ಸತ್ವ ಆವರಿಸಿದರೆ ಎಚ್ಚರವಾಗುತ್ತದೆ. ರಜೋಗುಣ ಹೃದಯವನ್ನಾವರಿಸಿದರೆ

ಸ್ವಪ್ನದರ್ಶನವಾಗುತ್ತದೆ. ಸ್ವಪ್ನದಲ್ಲಿ ಕಾಣುವುದೆಲ್ಲವೂ ಪೂರ್ವದಲ್ಲಿ ಅನುಭವಿಸಿದ ವಿಷಯಜ್ಞಾನದಿಂದಲೇ.

ಆಧಾರ ಗ್ರಂಥಗಳು

1. Introduction to Psychology
   by Boring, Longfeld & Weld
2. Experimental Psychology
   by Robert S. Woodworth
3. Psychology — The Fundamentals of Human Adjustment *by Normal L. Munn*
4. Readings in General Psychology *by Wayne Dennis*
5. Psychology— A Study of Mental Life
   by Robert S. Woodworth & Donald G. Marquis
6. The Energies of Men *by William McDougall*
7. A Manual of Psychology *by G. F. Stout*
8. A Modern Introduction to Psychology
   by Rex & Margaret Knight
9. The Psychology of Every Day Life *by Drever*
10. An Outline of Psychology *by William McDougall*
11. Experimental Psychology
    by Mary Collins & James Drever
12. A Briefer Course to General Psychology
    by Gardner Murphy
13. The Principles of Psychology *by William James*
14. The Human Mind
    by Prof. S. P. Adinarayan

15. General Psychology *by Guilford*

16. Tarka Sangrahah *by Annambhatta*

17. Notes on the Brahma Sutras of Badarayana *by S. K. Belvalkar*

18. ಶಾರೀರ ವಿಜ್ಞಾನ *by* ವಿ. ಎನ್. ಜೋಶಿ

19. ಶಾರ್ಙ್ಗಧರ ಸಂಹಿತ *by* ಪಾ. ಅ. ಪಲಸೀಕರ

20. A Hand Book of Ayrvedic Materia Medica *by Dr. H. V. Savanur*

ಪದಾರ್ಥಕೋಶ

ಅಕಶೇರುಕ	Invertebrate
ಅಂಗ	Organ
ಅಜ್ಞಾತಪ್ರಜ್ಞೆ	The Unconscious Mind
ಅತಿನೇರಿಳೆ	Ultra-violet
ಅತಿಭೌತಶಾಸ್ತ್ರ	Metaphysics
ಅಂತರ್ಗ್ರಹ	Inhibition
ಅಂತರ್ನಿರೀಕ್ಷಣೆ	Introspection
ಅಂತರವಯವ	Viscera, Interior organs (brain, heart, liver, intestines)
ಅಂತರಿತ ಕಲಿಯುವಿಕೆ	Spaced Learning
ಅಂತಃಶಕ್ತಿ	Faculty
ಅನ್ವಯ	Application
ಅನ್ವಿತ	Applied
ಅನಿಚ್ಛಾಕೃತ	Involuntary
ಅನಂತರಿತ ಕಲಿಯುವಿಕೆ	Unspaced Learning
ಅನುಕ್ರಿಯೆ	Response
ಅನುಕಂಪಕ	Sympathetic
ಅನುಕ್ರಮ	Succession
ಅಪಧಾಯಕ ಅಂತರ್ಗ್ರಹ	Retroactive Inhibition
ಅಪರೋಕ್ಷ	Direct
ಅಪಸಂಯೋಜನೆಗಳು	Erroneous Bonds
ಅಭಿಜ್ಞೆ	Cognition
ಅಭಿಜ್ಞಾಮನಃಶಾಸ್ತ್ರ	Psychology of Cognition
ಅಭ್ಯಾಸ	Habit, Study
ಅಮೂರ್ತ	Abstrct
ಅಯಥಾರ್ಥ	Unreal
ಅರೆಬೂದಿ	Light Grey, Medium Grey
ಅವಕೆಂಪು	Infra-red

ಅವಕ್ಷೀಣ	Subliminal
ಅವಯವ, ಅವಯವಿ	Organ; Organism
ಅವಧಾನ	Attention
ಅವಪ್ರಜ್ಞೆ	The Pre-conscious Mind
ಅವಭಾವನಾಪೀಠ	Hypothalamus
ಅವರೋಧ	Resistance; Proof
ಅವಸ್ಥೆ	Stage; State
ಆಗರ್ಭ	Inborn
ಆಜನ್ಮ	Innate
ಆತ್ಮಪ್ರಜ್ಞೆ	Self-consiousness
ಆದೇಶ	Compensatory; Substitute
ಆನುವಂಶಿಕ	Hereditary
ಆರ್ಜನೆ	Acquisition
ಆವರ್ತ	Curcuit
ಆವೃತ್ತಿ	Frequency
ಆಸಕ್ತಿ	Interest
ಆಹಾರಾನ್ವೇಷಣೆಯ ಪ್ರವೃತ್ತಿ	Instinct of Nutrition
ಇಂದ್ರಿಯಾವಯವ, ಇಂದ್ರಿಯಾಂಗ	Sense Organ
ಇಂದ್ರಿಯಪ್ರತ್ಯಕ್ಷ	Perception
ಇನ್‌ಸುಲಿನ್	Insulin
ಇಳಿಗಡು	Lower Limit
ಉತ್ಕ್ರಿಯಾತ್ಮಕ	Dynamic
ಉತ್ಕ್ಷೇಪ	Shock
ಉತ್ತರ ಪ್ರತಿಮೆ	After-image
ಉದ್ರಿಕ್ತಾವಸ್ಥೆ	Emotional Mood
ಉನ್ಮುಖತೆ	Attention
ಉಪಾಧಿ	Condition
ಉಪಾಧಾನ	Conditioning
ಉಪಾಹಿತ	Conditioned
ಉಪಾನುಕಂಪಕ	Parasympathetic
ಉಳಿಗಾಲ	Duration
ಎದುರುಪೊರೆ	Cornea

ಏರುಗಡು	Upper Limit
ಒತ್ತಡ	Pressure
ಒಳಪೊಟ್ಟರೆ	Ventricles
ಓಜೋಗ್ರಂಥಿ	Thyroid Gland
ಓಜೋರಸ	Thyroxin
ಔದ್ಯಮಿಕ	Industrial
ಔಷಧ ಶಾಸ್ತ್ರ	Science of Medicine
ಔದ್ಯೋಗಿಕ	Vocational
ಕಂಠಕರ್ಣ ನಾಳ	Eustachian Tube
ಕಥನಕ್ರಮ	Anecdotal Method
ಕನೀನಿಕೆ	Pupil
ಕಪ್ಪುಪೊರೆ	Iris
ಕಂಪ	Vibration
ಕಂಪನೋಪಕರಣ	Tuning Fork
ಕರ್ಮೇಂದ್ರಿಯ ಸ್ಥಳ	Motor Area
ಕಲ್ಪನೆ	Idea
ಕಲ್ಪಕ	Imaginative
ಕಲ್ಪನಾಶಕ್ತಿ	Imagination
ಕಶೇರುಕ	Vertebra
ಕಾಮ, ಕಾಮಗ್ರಂಥಿ	Sex; Gonads
ಕಾಲಮಾಪಕ	Chronometer
ಕಾಲಲೋಲಕ	Metronome
ಕೃತ್ಯ	Function
ಕೆಳಕೋಷ್ಠ	Abdomen
ಕೇಂದ್ರ	Centre
ಕ್ರಮ	Method
ಕ್ರಿಯಾವಾಹಿ ನರ	Motor Nerve
ಕ್ಷೇತ್ರಾವೇಕ್ಷಣ ಕ್ರಮ	Field Survey Method
ಕ್ಷೇಪ, ಕ್ಷೇಪಚಾಪ	Reflex; Reflex Arc
ಕ್ಷೇಪಕ್ರಿಯೆ	Reflex Action
ಗುರುತಿಸು	Recognise

ಗ್ರಹಣ	Reception
ಗ್ರಹಣಧಾರಣ ಕ್ರಮ	Learning and Saving Method
ಗ್ರಹಿಕೆ	The Received Knowledge
ಗ್ರಾಹಕ	Recipient; Receptacle
ಘಟನೆ	Phenomenon
ಘ್ರಾಣೇಂದ್ರಿಯ	Nose
ಚರ್ಮದ ಸಂವೇದನೆ	Skin Sensation
ಚಾಕ್ಷುಷ, ಚಾಕ್ಷುಷರು	Visual; Visile
ಚಾಕ್ಷುಷ ಸಂವೇದನೆ	Visual Sensation
ಚಾಕ್ಷುಷಪ್ರದೇಶ	Visual Area
ಚೋದನೆ	Impulse
ಜಡ	Mechanical; Automatic
ಜಡಸ್ಮೃತಿ	Rote Memory
ಜನನಶಾಸ್ತ್ರೀಯ ಕ್ರಮ	Genetic Method
ಜನನಾವಯವ	Genital Organ
ಜಾತಿ	Species
ಜೀವರಸ	Protoplasm
ಜೀವರಸೀಕರಣ	Metabolism
ಜೋರು	Loud
ಜ್ಞಾತಪ್ರಜ್ಞೆ	The Conscious Mind
ಜ್ಞಾನ	Sense; Knowledge
ಜ್ಞಾನಾರ್ಜನೆ	Learning
ಜ್ಞಾನೇಂದ್ರಿಯ ಸ್ಥಳ	Sensory Area
ಜ್ಞಾನವಾಹಿ ನರ	Sensory Nerve
ಜ್ಞಾಪನೆ	Recalling
ತಲೆಬುರುಡೆ	Skull, cranium
ತಾತ್ವಿಕ ಮನಃಶಾಸ್ತ್ರ	Philosophical Psychology
ತಿರುಳುರಸ (ತೇಜೋಗ್ರಂಥಿಯ)	Adrenin
ತೀವ್ರತೆ	Intensity
ತೇಜೋಗ್ರಂಥಿ	Adrenal Gland
ತೊಗಟೆರಸ (ತೇಜೋಗ್ರಂಥಿಯ)	Cortin

ಧ್ವನಿ	Sound
ಧ್ವನಿಗುಣ	Timbre
ನಡುಮಿದುಳು	Cerebellum
ನಡುದಲೆ	Parietal Lobe
ನರ	Nerve
ನರಕುಡಿ	Dendrites
ನರಗಂಟು	Corpus Callosum
ನರಪುಟ	Nerve-cell
ನರಮಂಡಲ	Nervous System
ನರರವೆ	Cell-body
ನರವಿಸಂಧಿ	Synapse
ನರಸೇತು	Pons
ನರ ಹುರಿ	Axon
ನಿರ್ನಾಳಗ್ರಂಥಿ	Ductless Gland
ನಿರೀಕ್ಷಣೆ	Observation
ನೈಷೇಧಿಕ	Negative
ಪದ	Word
ಪದಪ್ರತಿಮೆ	Verbal Image
ಪರ್ಯಾಪ್ತಿ	Completeness
ಪರತಃಪ್ರಾಮಾಣ್ಯದೃಷ್ಟಿ	Objective Point of View
ಪರಿನರಮಂಡಲ	Peripheral Nervous System
ಪರಿಧಿಸಿದ್ಧಾಂತ	Peripheral Theory
ಪರಿಮಾಣ	Measure
ಪರೋಕ್ಷ	Indirect
ಪಿಂಡ	Organism
ಪುಟ	Cell
ಪುನರಾವೃತ್ತಿ .	Repetition
ಪೂರಕ	Complementary
ಪೃಷ್ಠತ್ರಿಕಾಸ್ಥಿ	Sacral Bones
ಪೇಶಿ	Tissue
ಪೊರೆ	Membrane

ಪ್ರಕರಣೇತಿಹಾಸ ಕ್ರಮ	Case-history Method
ಪ್ರಕಾರ	Pattern; Type
ಪ್ರಕಾಶಘ್ನಪೊರೆ	Choroid
ಪ್ರಕ್ರಿಯೆ	Process
ಪ್ರಚೋದನೆ	Motivation; Motive
ಪ್ರಜ್ಞೆ	Consciousness
ಪ್ರತ್ಯಭಿಜ್ಞಾನ	Recognition
ಪ್ರತಿಕ್ರಿಯೆ	Reactation
ಪ್ರತಿಮೆ	Image
ಪ್ರತಿಮಾಸಂಪುಟ	Imagery
ಪ್ರತೀಕ್ಷೆ	Expectation
ಪ್ರಭಾವಿತ	Induced
ಪ್ರಮಾಣ	Proof (Evidence)
ಪ್ರಯೋಗ	Experiment
ಪ್ರಯೋಜಕ	Experimenter
ಪ್ರವೃತ್ತಿ	Tendency
ಪ್ರೇರಣೆ	Stimulus
ಪ್ರೇರಣಾಸಮುದಯ	Summation of Stimuli
ಪ್ರೇರ್ಯ	Respondent
ಪ್ರೇರಿತ	Stimulated
ಬದಿದಲೆ	Temporal Lobe
ಬಲೆಪೊರೆ	Retina
ಬಹಿರ್ನಿರೀಕ್ಷಣೆ	Objective Observation
ಬೀಜ	Nucleus; Basic Theory
ಬುದ್ಧಿಪರೀಕ್ಷೆ	Intelligence Test
ಬುದ್ಧಿಪೂರ್ವಕ	Deliberate
ಬುದ್ಧಿಮಾಪನ	Measurement of Intelligence
ಬೂದಿಬಣ್ಣ	Grey Colour
ಬೆನ್ನುಹುರಿ	Spinal Cord
ಬೆನ್ನೆಲುಬು	Vertebrae
ಬೆಳ್ಪೊರೆ	Sclerotic

ಭಾವ	Mental State
ಭಾವನೆ	Emotion
ಭಾವನಾಂಶ	Feeling
ಭಾವಪ್ರಕಾರ	Brain-pattern
ಭಾವಿಕಸ್ಮೃತಿ	Ideational Memory
ಭಾವನೋದ್ರೇಕ	Excitement
ಭ್ರಾಜೋಗ್ರಂಥಿ	Putuitary
ಮಂಡಲ	System
ಮನಃಪ್ರವೃತ್ತಿ	Disposition
ಮನಃಪ್ರಣಾಲಿ	Attitude
ಮನಃಶಾಸ್ತ್ರೀಯ, ಮಾನಸಶಾಸ್ತ್ರೀಯ	Psychotherapy
ಮನೋವಶೀಕರಣ	Hypnosis
ಮನೋರೋಗನಿದಾನ	Psycho-pathology
ಮಾನಸಚಿಕಿತ್ಸಾಶಾಸ್ತ್ರ	Psychotherapy
ಮಾನಸ-ಮಾನಶಾಸ್ತ್ರ	Psycho-metry
ಮಾಯೆ	Illusion
ಮಾಯಾಪ್ರತಿಮೆ	Ilusory Image
ಮಾಂಸಲಸಂವೇದನೆ	Muscle-sensation
ಮಿದುಳು	Brain
ಮುಮ್ಮಿದುಳು	Cerebrum
ಮಿದುಳುದೊಗಟೆ	Cortex
ಮಿದುಳಿನ ಲಾಂಛನ	Brain-trace
ಮುಂಡ	Trunk of the Body
ಮುಂದಲೆ	Frontal Lobe
ಮೂರ್ತ	Concrete
ಮೂಲಪ್ರವೃತ್ತಿ	Instinct
ಮೇಲುಕೋಷ್ಠ	Thorax
ಯಥಾರ್ಥ	Real
ಯಾಂತ್ರಿಕ	Mechanical
ಯುಗಪದ್ವ್ಯತ್ಯಾಸ	Simultaneous Contrast
ಯೋಜ್ಯ	Subject of Experiment

ರಂಜಿತ	Coloured
ರಜಃಕಾಲಚಕ್ರ	Menstrual Cycle
ರಸ	Sentiment; Glandular Secretion; Flavour
ರಾಗ	Note; Tune
ರುಚಿ	Taste
ರುಚಿಮೊಗ್ಗೆ	Taste-bud
ರೋಗನಿದಾನ	Pathology
ರೋಮಪುಟ	Hair-cell
ಲಂಬಕ	Lobe
ಲಾಲಾರಸ	Saliva
ಲೋಲಕ	Pendulum
ವಪೆ	Diaphragm
ವರ್ಣಚಕ್ರ	Colour-Disc
ವರ್ಣಾಂಧ	Colour-blind
ವರ್ತನೆ	Behaviour
ವ್ಯತಿರೇಕ ಶೀತಸಂವೇದನೆ	Paradoxical Cold Sensation
ವ್ಯತಿರೇಕ ಉಷ್ಣಸಂವೇದನೆ	Paradoxical Warmth Sensation
ವಸ್ತುನಿಷ್ಠಕಾರಕ	Objective Factor
ವ್ಯಕ್ತಿನಿಷ್ಠಕಾರಕ	Subjective Factor
ವ್ಯತ್ಯಾಸ	Difference
ವರ್ಣವ್ಯತ್ಯಾಸ	Colour Contrast
ವ್ಯಭಿಚಾರ	Change
ವಿಚಾರ	Thought
ವಿಭಜನೆ	Division
ವಿಂಗಡಣೆ	Differentiation
ವಿಶಿಷ್ಟಶಕ್ತಿಗಳು	Special Abilities
ವಿಸಂಧಿ	Gap
ವಿಷಮಮನಃಶಾಸ್ತ್ರ	Abnormal Psychology
ವಿಷಮಸ್ಥಿತಿ, ವಿಷಮಾವಸ್ಥೆ	Abnormal State
ವೈಧಿಕ	Positive

ಶರೀರಶಾಸ್ತ್ರ	Physiology
ಶರೀರರಚನಾಶಾಸ್ತ್ರ	Anatomy
ಶಾರೀರಿಕ ಮನಃಶಾಸ್ತ್ರ	Physiological Psychology
ಶುಕ್ಲಕೋಶ	Testis
ಶೋಣಿತಕೋಶ	Ovary
ಶೋಣಿತಾಣೂತ್ಪತ್ತಿಯ ಕಾಲಚಕ್ರ	Ovulation Cycle
ಶ್ರಾವಣ, ಶ್ರಾವಣರು	Auditory; Audiles
ಶ್ರಾವಣಪ್ರದೇಶ	Auditory Area
ಶ್ರಾವಣಸಂವೇದನೆ	Auditory Sensation
ಸಕಶೇರುಕ	Vertebrate
ಸಂಕಲ್ಪಶಕ್ತಿ	Conation; Will Power
ಸಂಕಲ್ಪಾತ್ಮಕ	Conative
ಸಮಗ್ರ	Integral
ಸಮನ್ವಿತ, ಸಮನ್ವಯ	Integrated; Integration
ಸಮಸ್ಥಿತಿ, ಸಮಾವಸ್ಥೆ	Normality
ಸಮಪಾರ್ಶ್ವತೆ, ಸಮಾಂಗತೆ	Symmetry
ಸಮಷ್ಟಿಜೀವನಪ್ರವೃತ್ತಿ	Herd Instinct
ಸಂಖ್ಯಾಽಕೃತಿ	Number-form
ಸಂಖ್ಯಾಶಾಸ್ತ್ರೀಯ	Statistical
ಸಂಚಾರಿಭಾವ	Passing Mood
ಸನ್ನಿಕರ್ಷ, ಸಾಮೀಪ್ಯ	Proximity
ಸನ್ನಿಕೃಷ್ಟಪ್ರತಿಮೆ	Eidetic Image
ಸಂಪರ್ಕನರ	Association Nerve
ಸಂಮರ್ದ	Pressure
ಸಂರಕ್ಷಣಪ್ರವೃತ್ತಿ	Maternal Instinct
ಸಂಯೋಗ	Combination
ಸಂವೇದನೆ	Sensation
ಸಂಹಿತೆ	Code
ಸರ್ಜನೆ	Creation
ಸಾತತ್ಯ	Continuity
ಸಾದೃಶ್ಯ	Similarity

ಸುಪ್ತಿಕಾಲ	Latency Period
ಸುರುಳಿನಾಳ	Cochlea
ಸ್ಮೃತಿ	Memory
ಸ್ಮೃತಿಪ್ರತಿಮೆ	Memory Image
ಸ್ಮೃತಿಸಮನ್ವಯ	Remembering
ಸ್ಥಳನಿರ್ದೇಶನ	Localization
ಸ್ವತಃಪ್ರಾಮಾಣ್ಯದೃಷ್ಟಿ	Subjective Point of View
ಸ್ವಯಂಸೂಚನೆ	Auto-suggestion
ಸ್ವರತಂತು	Vocal Cord
ಸ್ವರೋತ್ಥಾನ	Pitch
ಸ್ವಾಯತ್ತ	Autonomic
ಸ್ವಾವಧಾರಣ	Self-assertion
ಸ್ವೇಚ್ಛಾಕೃತ	Voluntary
ಸೌತೆ	Cone
ಹತ್ತುಗಡೆ	Stirrup
ಹರಳು	Lens; Crystal
ಹಳಮಿದುಳು	Old Brain
ಹಿಂದಲೆ	Occipital Lobe
ಹಿಮ್ಮಿದುಳು	Medulla Oblongata
ಹೀರೆ	Rod

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೩	೨೦	ಮಾನಸಿಕ ಜೀವನದಲ್ಲಿ	.... ಜೀವನದ
೨೦	೧೪	ಮನಃಶಾಸ್ತ್ರಿಯ	.... ಶಾಸ್ತ್ರೀಯ
೨೭	೨೦	೧೨ನೆಯ	೧೦ನೆಯ
೩೨	೧೯	ಕೆಳೆದು	ಕಳೆದು
೪೬	೧೮	ಪ್ರತಿಕ್ರಿಯೆ	ಪ್ರಕ್ರಿಯೆ
೫೦	೧೮	ಶ್ರವ್ಯಾವೃತ್ತಿ	ಶ್ರವ್ಯಾವೃತ್ತಿ
೫೭	೨೭	ಗವನವನ್ನು	ಗಮನವನ್ನು
೫೮	೨೪	·೦೧	·೧
೭೪	೨೦	ಭಾಗಗಳು	ಭಂಗಗಳು
೭೭	೨೦	ಅವನ್ನು	ಅದನ್ನು
೯೦	೧೨	ನೂಲೆಗೆ	ಮೂಲೆಗೆ
೧೧೪	೨೭	ಆ ಮಕ್ಕಳ	ಮಕ್ಕಳ
೧೧೬	೨೭	ಗಳಿಗೆಯ	ಗಳಿಕೆಯ
೧೨೩	೨೬	ಸಿದ್ಧಾತ	ಸಿದ್ಧಾಂತ
೧೨೪	೨೫	ಹೋಗುವಾಗ ಗೂಡಿನೊಳಗೆ ಎಳೆದುಕೊಂಡು	ಗೂಡಿನೊಳಗೆ ಎಳೆದುಕೊಂಡು ಹೋಗುವಾಗ
೧೩೬	೯	ಪೀಡಕವನ್ನು	ಪೀಡಕನನ್ನು
೧೫೯	೧೧	Psychotherapy	Psychological

ಶ್ರೀಧರಕೃತಿಗಳು

೧. ಮೇಘನಾದ (ಕವನಸಂಗ್ರಹ)

೨. ಅಮೃತಬಿಂದು (ಕವನಸಂಗ್ರಹ)

೩. ಪಂಚಮುಖಿ (ವಿಚಾರ ಪ್ರಬಂಧ ಸಂಗ್ರಹ)

೪. ಬೇತಾಳಗಳ ಕುಣಿತ (ವಿಡಂಬನೆಯ ಚುಟಕಗಳು)

೫. ಭಾರತೀಯ ರಾಜ್ಯಧರ್ಮ (ಅನುವಾದ)

೬. ಬೇಂದ್ರೆ (ಗ್ರಂಥಪರಿಚಯ)

೭. ಟೀ. ಎಸ್. ಈಲಿಯಟ್ (ಅನುವಾದ)

೮. ಭಾರತೀಯ ವಾಙ್ಮಯ (ಅನುವಾದ)

೯. ಹೊಸಗನ್ನಡ ಸಾಹಿತ್ಯಶೈಲಿ (ವಿಮರ್ಶೆ)

೧೦. ಮಂಜುಗೀತ (ಕವನಸಂಗ್ರಹ)

೧೧. ಇಂದಿನ ಕಾವ್ಯದ ಸಾಂಸ್ಕೃತಿಕ ಸಂದೇಶ (ಅಚ್ಚಿನಲ್ಲಿ)